ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ. ಫಿಲ್ ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು
ಜೆ. ಬಿ. ಸಿದ್ದನಗೌಡ

ಮಾರ್ಗದರ್ಶಕರು
ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಹಿ. ಶ್ರೇ. ಅಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೨

ತುಂಗಭದ್ರಾ ನದಿ ಪರಿಸರದ

ಧಾರ್ಮಿಕ ಕ್ಷೇತ್ರಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ಜೆ.ಬಿ. ಸಿದ್ಧನಗೌಡ

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಹಿ.ಶ್ರೇ. ಅಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೭

ಪ್ರಮಾಣ ಪತ್ರ

'ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೨೧.೦೭.೨೦೦೭

Goud. J.B.

ಜೆ.ಬಿ. ಸಿದ್ಧನಗೌಡ
ಸಂಶೋಧಕ
ಚರಿತ್ರೆ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದೃಢೀಕರಣ ಪತ್ರ

ಜೆ.ಬಿ. ಸಿದ್ಧನಗೌಡ ಇವರು 'ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಳಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : .೦೭.೨೦೦೭

ಡಾ.ವಿರೂಪಾಕ್ಷಿ ಪೂಜಾರಹಳ್ಳಿ
ಮಾರ್ಗದರ್ಶಕರು
ಚರಿತ್ರೆ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ನಿವೇದನೆ

ಎಂ.ಫಿಲ್. ಪ್ರಬಂಧವು ಸಂಶೋಧನೆಯ ಸುದೀರ್ಘ ದಾರಿಯನ್ನು ಅರಿತುಕೊಳ್ಳಲು ಒಂದು ಪ್ರವೇಶಿಕೆಯಾಗಿದೆ. ಈ ಅರ್ಥದಲ್ಲಿ ಇದನ್ನು ಸಂಶೋಧನೆಯ ಮಹಾವಿನ್ಯಾಸದ ಅಸ್ತಿಭಾರವೆಂದು ಗಂಭೀರವಾಗಿ ಪರಿಗಣಿಸಿದ ನಾನು ಪ್ರಸ್ತುತ ಸಂಪ್ರಬಂಧ ರಚನೆಗೆ ಸಾಕಷ್ಟು ಶ್ರಮವಹಿಸಿ, ಸೂಕ್ತವಾದ ಸಲಹೆ, ಸೂಚನೆಗಳನ್ನು ಅಂಗೀಕರಿಸಿ ಅದಕ್ಕನುಗುಣವಾಗಿ ಸಂಗ್ರಹಿತವಾದ ಸಾಮಗ್ರಿಗೆ ವ್ಯವಸ್ಥಿತವಾಗಿ ರೂಪಕೊಡಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ.

ಕನ್ನಡ ವಿಶ್ವವಿದ್ಯಾಲಯ ಕರ್ನಾಟಕದ ಆಲೋಚನಾ ವಿನ್ಯಾಸಗಳನ್ನು ಮುರಿದು ಕಟ್ಟುತ್ತಿದೆ. ಇಂತಹ ವಿಶ್ವವಿದ್ಯಾಲಯ ನಮ್ಮದೇ ಜಿಲ್ಲೆಯಲ್ಲಿರುವುದು ನಮ್ಮೆಲ್ಲರ ಹೆಮ್ಮೆ. ಈ ಬಗೆಯ ಬೌದ್ಧಿಕ ವಾತಾವರಣವಿರುವ ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನಕ್ಕೆ ಅವಕಾಶ ಕೊಡಮಾಡಿದ ಮಾನ್ಯಕುಲಪತಿಗಳಾದ ಹಿಂದಿನ ಬಿ.ಎ. ವಿವೇಕ್ ರೈ ಅವರನ್ನು ಮೊದಲಿಗೆ ನೆನೆಯುತ್ತೇನೆ. ಅಂತೆಯೇ ಪ್ರಭಾರಿ ಕುಲಪತಿಗಳಾದ ಡಾ.ಕೆ.ವಿ. ನಾರಾಯಣ ಅವರನ್ನೂ, ಕುಲಸಚಿವರಾದ ವಿ. ಶಂಕರ್ ಅವರನ್ನೂ, ಅಧ್ಯಯನಾಂಗದ ನಿರ್ದೇಶಕರಾದ ಡಾ.ಟಿ.ಆರ್. ಚಂದ್ರಶೇಖರ್ ಅವರಿಗೆ ಹೃತ್ಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಅಧ್ಯಯನ ಸಾಧ್ಯವಾದದ್ದು ಇತಿಹಾಸ ವಿಭಾಗದಲ್ಲಿ ಸಂಶೋಧನೆಯ ಆಲೋಚನಾ ಮಾದರಿಗಳನ್ನು ಕಲಿಸಿ, ಈ ಸಂಪ್ರಬಂಧದ ರಚನೆ, ಬರವಣಿಗೆಯುದ್ದಕ್ಕೂ ಮಾರ್ಗದರ್ಶನ ನೀಡಿದ ಗುರುಗಳಾದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಇವರನ್ನು ನೆನೆಯುವುದು ನನ್ನ ಆದ್ಯ ಕರ್ತವ್ಯವಾಗಿದೆ. ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರು ಸದಾ ಮಾರ್ಗದರ್ಶನ ನೀಡುತ್ತಾ ನನ್ನನ್ನು ತಮ್ಮ ಸಹೋದರನಂತೆ ಆತ್ಮೀಯತೆಯಿಂದ ಆದರಿಸಿದ ಅವರನ್ನು ಎಷ್ಟು ನೆನೆದರೂ ಅಲ್ಪವೇ ಆಗಿದೆ.

ಅಧ್ಯಯನದ ಸಂದರ್ಭದಲ್ಲಿ ಪ್ರೋತ್ಸಾಹ ನೀಡಿ ನಮ್ಮಂಥ ಕಿರಿಯರನ್ನು ಹಾರ್ದಿಕವಾಗಿ ಆಶೀರ್ವಾದಿಸಿದ ಕನ್ನಡ ವಿಶ್ವವಿದ್ಯಾಲಯದ ಗುರುಗಳಾದ ಡಾ.ದೇವರಕೊಂಡಾರೆಡ್ಡಿ, ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ.ಮೋಹನಕೃಷ್ಣ ರೈ, ಡಾ. ತಂಬಂಡ ವಿಜಯಪೂಣಚ್ಚ, ಡಾ.ಸಿ.ಆರ್. ಗೋವಿಂದರಾಜು, ಡಾ. ಚಿನ್ನಸ್ವಾಮಿ ಸೋಸಲೆ, ಡಾ.ಕೆ. ರವೀಂದ್ರನಾಥ ಮುಂತಾದ ವಿದ್ವಾಂಸರನ್ನು ಕೃತಜ್ಞತೆಯಿಂದ ನಾನು ನೆನೆಯುತ್ತೇನೆ.

ಸಂಶೋಧನಾ ಅಧ್ಯಯನದಲ್ಲಿ ಅವಶ್ಯಕವಾದ ಸಹಾಯ ಹಾಗೂ ಸಹಕಾರಗಳನ್ನು ನೀಡುತ್ತಾ, ನನ್ನ ಬೆಳವಣಿಗೆಗೆ ಕಾರಣವಾದ ಕೊಟ್ಟೂರಿನ ಕೊಟ್ಟೂರೇಶ್ವರ ಮಹಾವಿದ್ಯಾಲಯದ ಅಧ್ಯಕ್ಷರುಗಳಾದ

ಶ್ರೀ ಅರವಿ ಬಸವನಗೌಡ್ರು, ಗುಡೇಕೋಟೆ ಶ್ರೀ ಸಿದ್ದಬಸವನಗೌಡ್ರು, ಶ್ರೀ ಸೊನ್ನದ ಈಶಣ್ಣ, ಅಧ್ಯಕ್ಷರು, ಜಿ.ಬಿ.ಆರ್. ಕಾಲೇಜು, ಹಡಗಲಿ ಇವರುಗಳನ್ನು ಈ ಸಂದರ್ಭದಲ್ಲಿ ಪ್ರೀತಿಯಿಂದ ಸ್ಮರಿಸುತ್ತೇನೆ. ಅಂತೆಯೇ ಕಾಲಕಾಲಕ್ಕೆ ಪ್ರೋತ್ಸಾಹಿಸಿ ಸಹಕಾರ ನೀಡಿದ ಕೊಟ್ಟೂರಿನ ಶ್ರೀ ಕೆ.ಎಸ್. ವೀರಣ್ಣನವರಿಗೂ ನನ್ನ ಅನಂತ ಕೃತಜ್ಞತೆಗಳು.

ತುಂಗಭದ್ರಾ ನದಿ ಪರಿಸರದಲ್ಲಿಯ ಧಾರ್ಮಿಕ ಕ್ಷೇತ್ರಗಳ ಬಗ್ಗೆ ಕ್ಷೇತ್ರಕಾರ್ಯಕ್ಕೆ ಹೋದಾಗ ನನ್ನ ಜೊತೆಗೂಡಿ ಸಂಪೂರ್ಣ ಸಹಕಾರ ನೀಡಿ ಸಹಕರಿಸಿದ ಉಪನ್ಯಾಸಕರುಗಳಾದ ಡಾ.ಕೆ.ಎಸ್. ಶಿವಪ್ರಕಾಶ ಹಾಗೂ ಶ್ರೀ ಸಿ. ಬಸವರಾಜ್ ಇವರಿಗೆ ಸದಾ ಋಣಿ. ತಾಂತ್ರಿಕವಾಗಿ ಸಹಕಾರ ಮತ್ತು ಬೆಂಬಲವನ್ನು ನೀಡಿದ ಕೊಟ್ಟೂರಿನ ಕೊಟ್ಟೂರೇಶ್ವರ ಮಹಾವಿದ್ಯಾಲಯದ ಪ್ರಾಚಾರ್ಯರುಗಳಾದ ಶ್ರೀ ಹೆಚ್. ಬಸವಣ್ಣಪ್ಪ (ನಿವೃತ್ತ), ಶ್ರೀ ಎಸ್.ಎಸ್. ಹಿರೇಮಠ ಹಾಗೂ ಶ್ರೀ ಸಕ್ರಾರೆಡ್ಡಿ ಇವರಿಗೆ ನನ್ನ ನೆನಕೆಗಳು.

ಸಹದ್ಯೋಗಿ ಮಿತ್ರರೂ, ಹಿರಿಯರಾದ ಶ್ರೀ ಜಿ. ತ್ರಿಲೋಕಿಕರ, ಶ್ರೀ ಕೆ.ಹೆಚ್. ಸಿದ್ದೇಶ್ವರಪ್ಪ, ಶ್ರೀ ಟಿ. ರೇವಣ್ಣ, ಶ್ರೀ ಎ. ರಾಮಚಂದ್ರಪ್ಪ, ಶ್ರೀ ಪಿ. ಕೊಟ್ರಪ್ಪ, ಶ್ರೀ ದುರ್ಗದ ಕೊಟ್ರೇಶ, ಶ್ರೀ ಜಿ. ಮಲ್ಲನಗೌಡ, ಶ್ರೀ ಎಂ.ಕೆ. ಗವಿಗೇಶ, ಶ್ರೀ ನಂದಿ ವೀರಭದ್ರಪ್ಪ, ಶ್ರೀ ಜಿ.ಕೆ. ಲಿಂಗರಾಜ ಹಾಗೂ ಶ್ರೀ ಎಂ.ಕೆ. ಜಲಪುರ ಇವರುಗಳನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ನನ್ನನ್ನು ಪ್ರೀತಿಯಿಂದ ಅಧ್ಯಯನಕ್ಕೆ ಪ್ರೇರೇಪಿಸಿ ಕಳುಹಿಸಿದ ನನ್ನ ತಾಯಿಯಾದ ಶ್ರೀಮತಿ ಜೆ. ಸಿದ್ದಲಿಂಗಮ್ಮ, ಸಹೋದರರಾದ ಜೆ. ಮಂಜುನಾಥ ಪಾಟೇಲ್ ಹಾಗೂ ಜ್ಯೋತಿಗೌಡ ಇವರುಗಳಿಗೆ ಹೃತ್ಪೂರ್ವಕ ನಮನಗಳು. ನನ್ನ ಪ್ರತಿಯೊಂದು ಹೆಜ್ಜೆಯೂ ಯಶಸ್ವಿನಿಂದ ಕೂಡಿರಲೆಂದು ಪ್ರೀತಿಯಿಂದ ಸಹಕಾರ ನೀಡಿದ ಶ್ರೀಮತಿ ಜೆ.ಬಿ. ಅನುಪ, ಸಿದ್ದನಗೌಡ ಇವರನ್ನು ಎಷ್ಟು ನೆನೆದರೂ ಸಾಲದು.

ಗ್ರಂಥಾಲಯ ಕ.ವಿ.ವಿ. ಹಂಪಿ ಹಾಗೂ ಕೊಟ್ಟೂರೇಶ್ವರ ಮಹಾವಿದ್ಯಾಲಯದ ಗ್ರಂಥಾಲಯ ಸಿಬ್ಬಂದಿಯವರನ್ನು ಸದಾ ಸ್ಮರಿಸುತ್ತೇನೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂಶೋಧಕ ಮಿತ್ರರಾದ ಅರುಣ ಜೋಳದ ಕೂಡ್ಲಿಗಿ, ಶ್ರೀ ವಾಗೀಶ, ಎಂ.ಎಸ್. ದುರ್ಗಾಪ್ರವೀಣ್ ಮೊದಲಾದವರಿಗೆ ನನ್ನ ನೆನೆಕೆಗಳು.

ಪ್ರಸ್ತುತ ಪ್ರಬಂಧವನ್ನು ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಶ್ರೀಮತಿ ಎ. ನಾಗವೇಣಿ ಇವರಿಗೂ ನನ್ನ ಕೃತಜ್ಞತೆಗಳು. ಈ ಪ್ರಬಂಧ ರಚಿಸುವಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮನಸ್ಸುಗಳಿಗೂ ಶರಣು.

ಜೆ.ಜಿ. ಸಿದ್ದನಗೌಡ
ಸಂಶೋಧಕರು

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಚರಿತ್ರೆಯನ್ನು ಅಧ್ಯಯನ ಮಾಡುವ ಮತ್ತು ನೋಡುವ ಕ್ರಮ ಇಂದು ಬದಲಾಗುತ್ತಿದೆ. ರಾಜರ ಚರಿತ್ರೆ ಎನ್ನುವ ಹಂತದ ಮೂಲಕ ಜನಸಾಮಾನ್ಯರ ಚರಿತ್ರೆ ಎನ್ನುವ ಹಂತ ತಲುಪಿದ್ದೇವೆ. ಕಾರ್ಲ್‌ಮಾರ್ಕ್ಸ್ ಎಂಬ ತತ್ವಜ್ಞಾನಿ ಜಗತ್ತಿಗೆ ಚರಿತ್ರೆಯನ್ನು ಅಧ್ಯಯನ ಮಾಡುವ ಹೊಸ ಮಾದರಿಯನ್ನು ತೋರಿಸಿದ್ದಾರೆ. ಈ ಮಾದರಿಯೇ ಈಗಿನ ಅಧ್ಯಯನ-ಸಂಶೋಧನೆಗಳನ್ನು ಪ್ರಭಾವಿಸುತ್ತಿದೆ. ಭಾರತದಲ್ಲಿನ ಚಾರಿತ್ರಿಕ ಅಧ್ಯಯನಗಳು ಜಾಗತಿಕ ಅಧ್ಯಯನಗಳಿಗಿಂತ ಮುಂದೆ ಚಲಿಸಿಲ್ಲ. ಅಂದರೆ ಭಾರತದ ಚರಿತ್ರೆಕಾರರು ಇನ್ನೂ ಕ್ಲಾಸಿಕಲ್ ಚರಿತ್ರೆಯ ವಿಧಾನಗಳಿಂದಲೇ ಸಂಪೂರ್ಣ ಹೊರಬಂದಿಲ್ಲ. ಹೀಗಾಗಿ ಈ ಮಾತು ಕರ್ನಾಟಕದ ಚರಿತ್ರೆಯ ಅಧ್ಯಯನಗಳಿಗೂ ಅನ್ವಯಿಸುತ್ತದೆ. ಚರಿತ್ರೆ ಒಂದು ಪ್ರತ್ಯೇಕ ಶಿಸ್ತು ಎನ್ನುವ ಕ್ರಮವೇ ಇಂದು ಬದಲಾಗಿದೆ. ಕರ್ನಾಟಕದಲ್ಲಿ ಅದರ ಅಧ್ಯಯನ ಕ್ರಮಗಳು ಏಕಮುಖಿವಾಗಲು ಕಾರಣಗಳು ಹಲವು. ಈ ಕಾರಣದಿಂದ ಈಗಿನ ಅಧ್ಯಯನಗಳು ಚರಿತ್ರೆಯನ್ನು ಬಹುಮುಖಿ ಶಿಸ್ತು ಎನ್ನುವ ನೆಲೆಯಲ್ಲಿ ಚರ್ಚಿಸಲಾಗುತ್ತಿದೆ. ಹಾಗೆ ನೋಡಿದರೆ ಕನ್ನಡ ವಿಶ್ವವಿದ್ಯಾಲಯ ಪ್ರಾರಂಭವಾದಂದಿನಿಂದ ಇಲ್ಲಿಯ ಚಿಂತನಾವಲಯ ಚರಿತ್ರೆಯನ್ನು ಭಿನ್ನವಾಗಿ ಅರ್ಥೈಸುತ್ತಿದೆ. ಅದರ ಭಾಗವಾಗಿ ಮೌಖಿಕ ಚರಿತ್ರೆ - ಸ್ಥಳೀಯ ಚರಿತ್ರೆಯನ್ನು ಕುರಿತಾದ ಅಧ್ಯಯನಗಳು ನಡೆಯುತ್ತಿವೆ. ಸ್ಥಳೀಯ ಚರಿತ್ರೆಯನ್ನು ಕಟ್ಟುವ ಪ್ರಯತ್ನವಾಗಿ ಪ್ರಸ್ತುತ 'ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು' ಎಂಬ ವಿಷಯ ಕುರಿತು ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಪಂಚಭೂತಗಳಲ್ಲಿ ನೀರು ಅಥವಾ ಜಲವು ಒಂದಾಗಿದೆ. ಜಲ ಎಂದರೆ ಜೀವನ ಎಂದರ್ಥ. ಹರಿಯುವ ಹಳ್ಳಕೊಳ್ಳ ಸೇರಿ ದೊಡ್ಡ ಪ್ರಮಾಣದಲ್ಲಿರುವ ಕಾಲುವೆಗೆ ಮೀರಿದ್ದು ನದಿ. ಇಂಗ್ಲೀಷ್‌ನ ರಿವರ್‌ಗೆ ಕನ್ನಡದಲ್ಲಿ ನದಿ ಎನ್ನುತ್ತಾರೆ. 'ನದಿ' (River)ಯನ್ನು ಕುರಿತ ಚರಿತ್ರೆಯನ್ನು ಬರೆಯುವುದಕ್ಕೆ ಒಂದು ಸಾಂಪ್ರದಾಯಿಕ ವಿಧಾನವೊಂದಿದೆ. ನದಿಯ ಪುರಾಣ, ಕಥೆ, ಪ್ರಾಚೀನ ಗ್ರಂಥಗಳ ಉಲ್ಲೇಖ, ಶಾಸನ, ಹಸ್ತಪ್ರತಿಯಲ್ಲಿನ ಉಲ್ಲೇಖಗಳನ್ನು ಪರಿಗಣಿಸುವ ಮೂಲಕ ನದಿಯ ಚರಿತ್ರೆಯನ್ನು ನೋಡುವುದು. ಅಂತೆಯೇ ನದಿಯ ಚರಿತ್ರೆಯನ್ನು ಜನಸಮುದಾಯಗಳ ಮೂಲಕ ಕಟ್ಟುವ ಇನ್ನೊಂದು ಕ್ರಮವಿದೆ. ಅದು ನದಿಯೊಂದಿಗಿನ ತಮ್ಮ ಸಾಂಸ್ಕೃತಿಕ ಸಂದರ್ಭಗಳನ್ನು ಬೆಳೆಸಿಕೊಂಡು ಬಂದಿರುವ ಜನರ

ಸ್ಮೃತಿಪಟಲದಲ್ಲಿರುತ್ತದೆ. ಹೀಗೆ ಮೌಖಿಕ ಚರಿತ್ರೆಯನ್ನು ಕಟ್ಟುವ ನೆಲೆಯಲ್ಲಿ ಈ ಅಧ್ಯಯನ ನಡೆದಿದೆ. 'ನದಿ' ಕುರಿತ ಅಧ್ಯಯನಗಳನ್ನು ಚಾರಿತ್ರಿಕ, ಸಾಮಾಜಿಕ, ಭೌಗೋಳಿಕ ಅಧ್ಯಯನಗಳೆಂದು ವಿಭಾಗಿಸಿದಲ್ಲಿ ಅದರ ಒಂದು ಮಗ್ಗುಲನ್ನು ಮಾತ್ರ ನೋಡಲು ಸಾಧ್ಯ. ಈ ಜಗತ್ತಿನಲ್ಲಿ ನದಿಗಳು ಮಹಾಪರಿವರ್ತನೆಗೆ ನಾಂದಿ ಹಾಡಿವೆ. ನೈಲ್, ಅಮೆಜಾನ್, ಮಿಸಿಸಿಪಿ, ಮಿಸ್ಸೂರಿ, ಪನಾಮಾ ಕಾಲುವೆ, ಸೂಯೆಜ್ ಕಾಲುವೆ, ಝಿಲಂ, ಸಟ್ಲೆಜ್, ಗಂಗಾ, ಯಮುನಾ, ಬ್ರಹ್ಮಪುತ್ರಾ, ನರ್ಮದಾ, ಸರಸ್ವತಿ, ಕೃಷ್ಣಾ, ಕಾವೇರಿ, ತುಂಗಭದ್ರಾ, ಕಾರಾಂಜಾ, ವರದಾ, ಕಪಿಲಾ, ಹೇಮಾವತಿ ಮೊದಲಾದ ನದಿಯ ಪರಿಸರದಲ್ಲಿ ಚಾರಿತ್ರಿಕ ಘಟನೆಗಳು ಸಂಭವಿಸಿವೆ. ಮಹಾನ್ ತಪಸ್ವಿಗಳು ತಪಸ್ಸು ಮಾಡಿದ್ದು ನದಿಯ ಇಕ್ಕೆಲಗಳಲ್ಲಿ. ಆದರೆ ಭಾರತದಲ್ಲಿ ಗಂಗಾ-ಯಮುನಾ ನದಿಗಳನ್ನು ಕುರಿತು ನಡೆದ ಅಧ್ಯಯನಗಳಲ್ಲಿ ಈ ಬಗೆಯ ದೋಷವಿದೆ. ಅದು ಭಕ್ತಿಯ ಜೊತೆ ಸಮೀಕರಣಗೊಂಡಿದೆ. ಹಾಗಾಗಿ ಈ ಹೊತ್ತಿನಲ್ಲಿ 'ನದಿ' ಕುರಿತ ಅಧ್ಯಯನ ಮಾಡುವುದೆಂದರೆ ವರ್ತಮಾನದ ಬಿಕ್ಕಟ್ಟುಗಳ ಜೊತೆ ಇಟ್ಟು ಪರಿಶೀಲಿಸಬೇಕಿದೆ. ಬಹುಮುಖಿ ಆಯಾಮಗಳನ್ನು ನೋಡಲು ಈಗಿನ ಅಧ್ಯಯನಗಳಿಗೆ ಸಾಧ್ಯವಾಗಬೇಕು. ಅಂತಹ ಪ್ರಾಥಮಿಕ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಯನದ ಉದ್ದೇಶ

ಯಾವುದೇ ಅಧ್ಯಯನ ಹಾಗೂ ಸಂಶೋಧನೆಗೆ ಅದರದ್ದೇ ಆದ ಉದ್ದೇಶವಿರುತ್ತದೆ. ಕರ್ನಾಟಕದಲ್ಲಿ 'ಕಾವೇರಿ' ನದಿ ಕುರಿತಂತೆ ನಡೆದಷ್ಟು ಅಧ್ಯಯನಗಳು ತುಂಗಭದ್ರ ನದಿ ಕುರಿತು ನಡೆದಿಲ್ಲ. ನಡೆದರೂ ಅವುಗಳು ಸರ್ಕಾರಿ ವರದಿ ರೂಪದಲ್ಲಿವೆ. ಹಾಗಾಗಿ ತುಂಗಭದ್ರ ನದಿಯ ಚರಿತ್ರೆಯನ್ನು ಒದಗಿಸುವ ಮೂಲಕ ಅದರಲ್ಲಿ ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಮಹತ್ವವನ್ನು ಪರಿಶೀಲಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶ. ಇಲ್ಲಿನ ಸಂಶೋಧನಾ ವಿಷಯ 'ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು'. ಈ ಧಾರ್ಮಿಕ ಕ್ಷೇತ್ರಗಳು ನದಿಯ ದಡದಲ್ಲಿ ಪಡೆಯುವ ಭಿನ್ನ ಆಯಾಮ ಯಾವುದು? ನದಿ ಪರಿಸರದ ಸಾಂಸ್ಕೃತಿಕ ಸ್ಥಿತ್ಯಂತರಗಳು ಯಾವುವು? ಎಂಬುದನ್ನು ಪರಿಶೀಲಿಸುವುದು ಈ ಅಧ್ಯಯನದ ಇನ್ನೊಂದು ಉದ್ದೇಶವಾಗಿದೆ. ಚಾರಿತ್ರಿಕವಾಗಿ ನಾಗರಿಕತೆಗಳ ಉಗಮ ಆಗಿರುವುದೇ ನದಿ ಬಯಲುಪ್ರದೇಶಗಳಲ್ಲಿ. ಹಾಗೆಯೇ 'ನದಿ'ಯನ್ನು ನಂಬಿಯೇ ಬದುಕುವ ಜನಸಮುದಾಯ ಈ ನದಿಯೊಂದಿಗೆ ಒಂದು ಬಗೆಯಾದ ಸಾಂಸ್ಕೃತಿಕ ಸಂಬಂಧವನ್ನು ಬೆಳೆಸಿಕೊಂಡಿರುತ್ತಾರೆ. ಇದು 'ಧಾರ್ಮಿಕತೆ' ಎನ್ನುವ ಹಂತವನ್ನು ಮೀರಿದ ಮಾನವೀಯ 'ಸಂಬಂಧ'ವೆಂಬ ವಿಶಾಲ ವ್ಯಾಪ್ತಿಯನ್ನು ಪಡೆಯುತ್ತದೆ. ಅಂತೆಯೇ ಈ ಅಧ್ಯಯನದ ಹಿಂದಿರುವ ಒತ್ತಾಸೆಯೆಂದರೆ, ಬಳ್ಳಾರಿ ಜಿಲ್ಲೆಯ ಜನಸಮುದಾಯ ಈ ನದಿಯೊಂದಿಗೆ ಯಾವ ಬಗೆಯಾಗಿ ತಮ್ಮ ಬದುಕಿನ ಚರಿತ್ರೆಯನ್ನು ಹೊಂದಿಸಿಕೊಂಡಿದ್ದಾರೆ ಎಂಬುದನ್ನು ಪರಿಶೀಲಿಸುವುದಾಗಿದೆ. ತುಂಗಭದ್ರಾ ನದಿಯು ರಾಜಕೀಯವಾಗಿ ಮಾಡಿದ ಪರಿಣಾಮಗಳೇನು, ಆರ್ಥಿಕವಾಗಿ ಅದು ಸೃಷ್ಟಿಸಿದ ಪರಿಣಾಮ

ಎಂಥದು, ಸಾಂಸ್ಕೃತಿಕವಾಗಿ ಒಂದು ನದಿಯು ಜನಮಾನಸದಲ್ಲಿ ಹೇಗೆ ಬೇರುಬಿಟ್ಟಿದೆ. ಜನರ ಸಾಮಾಜಿಕ ಬದುಕಿನ ಮೇಲೆ ತುಂಗಭದ್ರ ನದಿ ಬೀರಿರುವ ಪ್ರಭಾವ ಯಾವ ಬಗೆಯದು. ಇಂತಹ ಪ್ರಮುಖ ಉದ್ದೇಶಗಳನ್ನಿಟ್ಟುಕೊಂಡು ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ

ಯಾವುದೇ ಅಧ್ಯಯನವು ತನ್ನ ವೈಶಾಲ್ಯತೆಯ ವ್ಯಾಪ್ತಿಯನ್ನು ಇಂತಿಷ್ಟು ಎಂದು ಗೊತ್ತುಗುರಿಯಾಗಿ ಹೊಂದಿರುತ್ತದೆ. ಆಗ ಮಾತ್ರ ಖಚಿತ ನಿರ್ಧಾರಕ್ಕೆ ಬರಲು ಒಂದು ಸೀಮಾರೇಖೆಯನ್ನು ಗುರುತಿಸಿ ಕೊಂಡಂತಾಗುತ್ತದೆ. ಹಾಗಾಗಿ ಯಾವುದೇ ಸಂಶೋಧನೆಗೂ ತನ್ನದೇ ಆದ ಪರಿಮಿತಿಗಳು ಇರುತ್ತವೆ. ಇಲ್ಲಿ 'ತುಂಗಭದ್ರಾ' ನದಿ ಎಂದಾಕ್ಷಣ ಅದು ಮಲೆನಾಡಿನಿಂದ ಹರಿದು ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕದ ಬಹುಭಾಗಗಳನ್ನು ಆವರಿಸಿದೆ. ಇಷ್ಟು ವ್ಯಾಪ್ತಿಯನ್ನು ಇಟ್ಟುಕೊಂಡು ಅಧ್ಯಯನ ಮಾಡುವುದು ಒಂದು ಕ್ರಮವಾದರೆ, ಒಂದು ಜಿಲ್ಲೆಯಲ್ಲಿ ನದಿ ಹರಿಯುವ ಪ್ರದೇಶವನ್ನಿಟ್ಟುಕೊಂಡು ಅಧ್ಯಯನ ಮಾಡುವುದು ಇನ್ನೊಂದು ಕ್ರಮವಾಗಿದೆ. ಒಂದು ಜಿಲ್ಲೆಯ ಅಧ್ಯಯನದ ಫಲಿತವನ್ನು ಇಡಿಯಾದ ನದಿ ಪರಿಸರದ ಜೊತೆ ಇಟ್ಟು ಪರಿಶೀಲಿಸಬಹುದು. ಹಾಗಾಗಿ ಅಧ್ಯಯನದ ಸಮಯ ಮತ್ತು ಅದರ ಹರವು ಈ ಎರಡರ ಕಾರಣಕ್ಕಾಗಿ ಪ್ರಸ್ತುತ ಅಧ್ಯಯನವನ್ನು ಬಳ್ಳಾರಿ ಜಿಲ್ಲೆಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಕಾಲಾನುಕ್ರಮವಾಗಿ ಪ್ರಾಚೀನ ಕಾಲ, ಮಧ್ಯಕಾಲ ಮತ್ತು ಆಧುನಿಕ ಕಾಲಘಟ್ಟಗಳೆಂದು ಈ ಚಾರಿತ್ರಿಕ ಅಧ್ಯಯನದಲ್ಲಿ ವಿಂಗಡಿಸಿಕೊಳ್ಳಲಾಗಿದೆ.

'ಧಾರ್ಮಿಕ ಕ್ಷೇತ್ರಗಳು' ಎಂದಿರುವುದರಿಂದ ಈ ಅಧ್ಯಯನ ಧಾರ್ಮಿಕ ಕ್ಷೇತ್ರಗಳ ಮೂಲಕ ಸಮಾಜ ಮತ್ತು ಸಂಸ್ಕೃತಿಯನ್ನು ನೋಡಲು ಪ್ರಯತ್ನಿಸಿದೆ. ಅಂತೆಯೇ 'ಧಾರ್ಮಿಕ ಕ್ಷೇತ್ರ' ಎಂದಾಗಲೂ ಶೈವ, ವೈಷ್ಣವ, ಶಾಕ್ತ, ಜೈನ, ಬೌದ್ಧ, ಕ್ರೈಸ್ತ ಈ ಬಗೆಯ ಈಗಾಗಲೇ ದೃಢಪಟ್ಟ ಧಾರ್ಮಿಕ ಪಂಥಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ವಿಶೇಷವಾಗಿ ತುಂಗಭದ್ರಾ ನದಿಯು ಶಿವಮೊಗ್ಗ ಜಿಲ್ಲೆಯಿಂದ ಪ್ರಾರಂಭವಾದರೂ ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಲಾಗಿದೆ. ಈವರೆಗೆ ಧಾರ್ಮಿಕ ಪಂಥಗಳ ಬಗ್ಗೆ ನಡೆದ ಅಧ್ಯಯನ ಸಂಶೋಧನೆಗಳನ್ನು ಬಳಸಿಕೊಂಡು, ನದಿ ಪರಿಸರದ ಜೊತೆ ಇಟ್ಟು ಪರಿಶೀಲಿಸುವ ಕ್ರಮ ಮತ್ತು ಮಿತಿ ಈ ಅಧ್ಯಯನಕ್ಕಿದೆ. 'ಚರಿತ್ರೆ' ಕ್ಷೇತ್ರದ ಸಂಶೋಧನೆ ಆದರೂ ಇಲ್ಲಿ ಚರಿತ್ರೆಯ ಸಂಶೋಧನಾ ವಿಧಾನಗಳಿಗೆ ಮಾತ್ರ ಕಟ್ಟುಬಿದ್ದಿಲ್ಲ. ಸಾಂಸ್ಕೃತಿಕ ಶೋಧದ ನೆಲೆಯಲ್ಲಿ ಇತರ ಅಧ್ಯಯನ ಮಾದರಿಗಳನ್ನು ಅನುಸರಿಸಲಾಗಿದೆ. ಇಲ್ಲಿ ನದಿ, ಉಪನದಿ, ನದಿದಂಡೆ ಮೇಲಿರುವ ನೆಲೆಗಳು ಚಾರಿತ್ರಿಕ, ಧಾರ್ಮಿಕ ಯಾತ್ರಾಸ್ಥಳಗಳು, ಸಾಂಸ್ಕೃತಿಕ ನೆಲೆಗಳು ಹೀಗೆ ಹತ್ತು ಹಲವು ಪ್ರಾಮುಖ್ಯತೆ ಪಡೆದ ಸ್ಥಳಗಳಿಗೆ ಆದ್ಯತೆ ಕೊಡಲಾಗಿದೆ. ನದಿ ಪರಿಸರದ ಚರಿತ್ರೆ ಮತ್ತು ಸಂಸ್ಕೃತಿಯನ್ನು ಅಲ್ಲಿನ ಜನರು ಕಟ್ಟಿಕೊಡುವ ಬಗೆಯನ್ನು ವಿಶ್ಲೇಷಿಸಲಾಗಿದೆ.

ಅಧ್ಯಯನ ವಿಧಾನ

ದಾಖಲೆಗಳನ್ನು ಮಾತ್ರ ಐತಿಹಾಸಿಕ ತಿಳುವಳಿಕೆ ಎಂಬ 'ಆಧಾರವಾದಿ' ಚರಿತ್ರೆಯ ಅಧ್ಯಯನ ವಿಧಾನವಿದೆ. ಇದು ಸಾಂಪ್ರದಾಯಿಕವಾಗಿ ಚರಿತ್ರೆಯನ್ನು ನೋಡುವ ವಿಧಾನ. ಇತಿಹಾಸವೆಂಬುದು ವೈಯಕ್ತಿಕ ವ್ಯಾಖ್ಯಾನಗಳ ವ್ಯಕ್ತಿನಿಷ್ಠ, ಕಲ್ಪನಾ ಪ್ರತಿಭೆ ಮತ್ತು ವಾಸ್ತವಾಂಶಗಳು ಬೆರೆತುಕೊಂಡ ಕಥನ ಕಲೆ, ಇದೊಂದು ಭಾಷಿಕ ಸಂಕಥನ ಎನ್ನುವುದನ್ನು ಈ ಅಧ್ಯಯನ ತಾತ್ವಿಕ ಬಿತ್ತಿಯಾಗಿಸಿಕೊಳ್ಳಲಾಗಿದೆ. ಜನಸಮುದಾಯಗಳ ಮಾನಸ ಲೋಕದ ಪಟ್ಟಿಗಳ ಮೂಲಕ ಚರಿತ್ರೆಯನ್ನು ಕಟ್ಟುವ ದೇಶಿ ಸಂಶೋಧನಾ ವಿಧಾನ ಈಗ ಗರಿಗಟ್ಟುತ್ತಿದೆ. ಈ ವಿಧಾನಕ್ಕೆ ಚರಿತ್ರೆ, ಭಾಷೆ, ಸಾಹಿತ್ಯ ಎನ್ನುವ ಗಡಿಗಳಿಲ್ಲ. ಈ ಎಲ್ಲವನ್ನು ಒಳಗುಮಾಡಿಕೊಳ್ಳುವ ಧಾರಣಶಕ್ತಿ ಈ ವಿಧಾನಕ್ಕಿದೆ. ಹಾಗಾಗಿ ದೇಶಿ ಸಂಶೋಧನಾ ವಿಧಾನವನ್ನು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಚರಿತ್ರೆಯನ್ನು ಪರಿಶೀಲಿಸುವುದರ ಜೊತೆಗೆ ಅದರ ಭಾಗವಾಗಿ ತುಂಗಭದ್ರಾ ನದಿಯನ್ನು ನೋಡುವ ವಿಧಾನ ಈ ಅಧ್ಯಯನಕ್ಕಿದೆ. ತಾಂತ್ರಿಕವಾಗಿ ಆನುಷಂಗಿಕ ಆಕರಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಈವರೆಗೆ ನಡೆದ ಅಧ್ಯಯನಗಳನ್ನು ಅವಲೋಕಿಸಿದರೆ, ಆ ಮೂಲಕ ಕೆಲವು ಸಂಗತಿಗಳನ್ನು ಟಿಪ್ಪಣಿ ಮಾಡಿಕೊಳ್ಳಲಾಗಿದೆ. ಈ ಮಾಹಿತಿಗೆ ನದಿ ಪರಿಸರದ ಜೊತೆ ಹೊಸ ಬಗೆಯ ಅರ್ಥವನ್ನು ಕೊಡಲು ಪ್ರಯತ್ನಿಸಿದೆ. ಹಾಗಾಗಿ ಬಹುಶಿಸ್ತೀಯ ಅಧ್ಯಯನ ವಿಧಾನ ಇದಾಗಿದೆ. ಇಲ್ಲಿ ಜಾನಪದ ಅಧ್ಯಯನದ ಪ್ರೇರಣೆಯಿದೆ. ಪುರಾತತ್ವ ಅಧ್ಯಯನ ವಿಧಾನದ ಬೆಂಬಲವಿದೆ. ಅಭಿವೃದ್ಧಿ ಅಧ್ಯಯನದ ದೃಷ್ಟಿಧೋರಣೆಗಳಿವೆ. ಹೀಗೆ ಚರಿತ್ರೆಯ ವಿಧಾನದೊಂದಿಗೆ ಇತರ ಶಿಸ್ತುಗಳ ಶೋಧದ ಭಿನ್ನ ನೆಲೆಗಳನ್ನು ಇಲ್ಲಿ ಬೆರೆಸಲಾಗಿದೆ. ಆದರೂ ಚಾರಿತ್ರಿಕ ಅಧ್ಯಯನ ಕ್ರಮಕ್ಕೆ ಎಲ್ಲೂ ಧಕ್ಕೆಯಾಗದಂತೆ ಈ ಅಧ್ಯಯನದಲ್ಲಿ ನಿರೂಪಿಸಲಾಗಿದೆ.

ಅಧ್ಯಯನದ ಸ್ವರೂಪ

ಅಧ್ಯಯನವನ್ನು ಒಟ್ಟು ಹತ್ತು ಭಾಗಗಳಲ್ಲಿ ವಿಭಾಗಿಸಲಾಗಿದೆ. ಇದು ಅಧ್ಯಯನದ ಸಾರವನ್ನು ಹಿಡಿಯಲು ಮಾಡಿದ ಪ್ರಯತ್ನ. ಈ ಹತ್ತು ಭಾಗಗಳು ಒಳಗೊಂಡ ವಿಷಯ ಮತ್ತು ಅದರ ತಾತ್ವಿಕ ಸ್ವರೂಪ ಹೀಗಿದೆ.

ಒಂದು : ಅಧ್ಯಯನದ ಉದ್ದೇಶ ವ್ಯಾಪ್ತಿ, ವಿಧಾನವನ್ನು ವಿವರಿಸಲಾಗಿದೆ. ಇಲ್ಲಿ ಈ ಅಧ್ಯಯನದ ಅಗತ್ಯ ಮತ್ತು ಚರಿತ್ರೆಯ ಅಧ್ಯಯನ ವಿಧಾನಗಳ ವಿಮರ್ಶಾತ್ಮಕ ಟೀಕೆಗಳ ಜೊತೆ ಅದನ್ನು ಮೀರುವ ಹೊಸ ವಿಧಾನಗಳ ಚರ್ಚೆ ಇದೆ.

ಎರಡು : ಈ ಭಾಗದಲ್ಲಿ ತುಂಗಭದ್ರಾ ನದಿಯ ಭೌಗೋಳಿಕ ಪರಿಚಯವನ್ನು ಮಾಡಲಾಗಿದೆ. ಧಾರ್ಮಿಕ ಕ್ಷೇತ್ರಗಳನ್ನು ಗಮನದಲ್ಲಿರಿಸಿಕೊಂಡು, ಇದಕ್ಕೆ ಪೂರಕವಾಗಿ ಇಲ್ಲಿನ ಭೌಗೋಳಿಕ ಪರಿಚಯವಿದೆ.

ಮೂರು : ತುಂಗಭದ್ರಾ ನದಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಶೀಲಿಸಲಾಗಿದೆ. ಹಾಗೆಯೇ ನದಿಯ ಚರಿತ್ರೆಯನ್ನು ಒಂದೆಡೆ ದಾಖಲಿಸಲು ಪ್ರಯತ್ನಿಸಲಾಗಿದೆ.

ನಾಲ್ಕು : ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳನ್ನು ಪರಿಚಯಿಸಲಾಗಿದೆ. ಧಾರ್ಮಿಕ ಕ್ಷೇತ್ರದ ವಿವಿಧ ಪಂಥಗಳನ್ನು ಸ್ಥೂಲವಾಗಿ ಪರಿಶೀಲಿಸಲಾಗಿದೆ.

ಐದು : ಈ ಭಾಗದಲ್ಲಿ ಶೈವ ಧರ್ಮದ ಕ್ಷೇತ್ರಗಳ ಬಗೆಗೆ ಚರ್ಚಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿ ಶೈವ ಧರ್ಮದ ಉಗಮ, ಬೆಳವಣಿಗೆ ಹಾಗೂ ಸ್ಥಿತ್ಯಂತರಗಳನ್ನು ಚರ್ಚಿಸಲಾಗಿದೆ.

ಆರು : ಈ ಭಾಗದಲ್ಲಿ ವೈಷ್ಣವ ಧರ್ಮದ ಧಾರ್ಮಿಕ ಕ್ಷೇತ್ರಗಳ ಬಗೆಗೆ ಅಧ್ಯಯನ ನಡೆಸಲಾಗಿದೆ. ಅಂತೆಯೇ ಇತರ ಪಂಥಗಳ ಜೊತೆಗಿನ ಸಾಂಸ್ಕೃತಿಕ ಸಂಘರ್ಷಗಳನ್ನು ದಾಖಲಿಸಲಾಗಿದೆ.

ಏಳು : ಈ ಭಾಗದಲ್ಲಿ ಶಾಕ್ತೇಯ ಧಾರ್ಮಿಕ ಕ್ಷೇತ್ರಗಳನ್ನು ಅಧ್ಯಯನ ಮಾಡಲಾಗಿದೆ. ಮಾತೃಪ್ರಧಾನ ಸಂಸ್ಕೃತಿಯ ಪಲ್ಲಟಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಎಂಟು ಮತ್ತು ಒಂಬತ್ತು : ಈ ಅಧ್ಯಾಯಗಳಲ್ಲಿ ಧಾರ್ಮಿಕ ಕ್ಷೇತ್ರದ ಕೊಡುಗೆ ಮತ್ತು ಸಮಕಾಲೀನತೆಯ ಚರ್ಚೆಯನ್ನು ಮಾಡಲಾಗಿದೆ. ಅಧ್ಯಾಯ ಹತ್ತು ಸಮಾರೋಪದಲ್ಲಿ ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ.

* * * * *

ಅಧ್ಯಾಯ ೨

ತುಂಗಭದ್ರಾ ನದಿಯ ಭೌಗೋಳಿಕ ಪರಿಚಯ

ಅಧ್ಯಾಯ ಎರಡು

ತುಂಗಭದ್ರಾ ನದಿಯ ಭೌಗೋಳಿಕ ಪರಿಚಯ

ಕರ್ನಾಟಕ ರಾಜ್ಯದ ನೆಲ, ಜಲ ಪ್ರಾಕೃತಿಕ ಸಂಪತ್ತು ಹೇರಳವಾಗಿದೆ. ಸುಮಾರು ೬೦ ಕ್ಕೂ ಹೆಚ್ಚು ನದಿಗಳು ಈ ನಾಡಿನಲ್ಲಿ ಹರಿಯುತ್ತವೆ. ಕನ್ನಡ ನಾಡಿನ ಅತೀ ಪ್ರಮುಖವಾದ ನದಿಗಳ 'ತುಂಗಭದ್ರಾ' ನದಿಯೂ ಒಂದು. ಈ ನದಿಯು ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿ ಅಗ್ರಸ್ಥಾನವನ್ನು ಪಡೆದುಕೊಂಡಿದೆ. ಈ ನದಿಯ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ 'ಗಂಗಾ ಸ್ನಾನಂ ತುಂಗಾ ಪಾನಂ' ಎಂಬ ಜನಪದ ನಾಣ್ಣುಡಿಯು ಕನ್ನಡ ನಾಡಿನಾದ್ಯಂತ ಜನಜನಿತವಾಗಿದೆ. ಪ್ರಸ್ತುತ ಈ ಭಾಗದಲ್ಲಿ ತುಂಗಭದ್ರಾ ನದಿಯ ಭೌಗೋಳಿಕ ಪರಿಚಯವನ್ನು ಮಾಡಲಾಗಿದೆ.

ತುಂಗಭದ್ರಾ ನದಿಯು ಪಶ್ಚಿಮ ಘಟ್ಟಗಳ ವರಹ ಪರ್ವತದ ತುತ್ತ ತುದಿಯ ಗಂಗಾ ಮೂಲದಲ್ಲಿ ತುಂಗ ನದಿ ಹುಟ್ಟುವುದು. ಈ ಸ್ಥಳ ಶೃಂಗೇರಿ ತಾಲ್ಲೂಕಿನಲ್ಲಿದ್ದು, ೧,೯೮.೦ ಮೀಟರ್ ಎತ್ತರದಿಂದ ನೀರು ಹರಿದು ಬಂದು ನದಿಯಾಗಿ ಹರಿಯುತ್ತದೆ. ಮೊದಲಿಗೆ ಈಶಾನ್ಯಕ್ಕೆ ಹರಿದು ಶೃಂಗೇರಿ ಮೂಲಕ ಹಾಗೂ ವಾಯುವ್ಯಕ್ಕೆ ಬಾಗುಂಜಿಗೆ ತಿರುಗಿ ಹರಿಹರಪುರದ ಹತ್ತಿರ ದಿಕ್ಕನ್ನು ಬದಲಿಸಿದ ನಂತರ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. "ಶಿವಮೊಗ್ಗ ಜಿಲ್ಲೆಯಲ್ಲಿ ೫೦ ರಿಂದ ೫೫ ಕಿ.ಮೀ ಈ ನದಿಯು ಉದ್ದವಿದ್ದು, ಗಾಜನೂರು ಬಳಿ ತುಂಗಾ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಭದ್ರಾ ನದಿಯು ಸಹ ಪಶ್ಚಿಮ ಘಟ್ಟಗಳ ವರಹಾ ಪರ್ವತದ ಗಂಗಾ ಮೂಲದಲ್ಲಿ ಜನಿಸುತ್ತದೆ. ಇದರ ಉದ್ದ ೧,೯೮.೦ ಮೀಟರ್‌ಗಳು. ಮೊದಲು ಪೂರ್ವಾಭಿಮುಖವಾಗಿ ಹರಿದು ನಂತರ ಕಳಸದ ಹತ್ತಿರ ಈಶಾನ್ಯಕ್ಕೆ ತಿರುಗಿ ಬಾಳೆಹೊನ್ನೂರು ಸಮೀಪ ಹರಿದು ನಂತರ 'ಹೆಬ್ಬೆ' ಹತ್ತಿರ ಸೋಮವಾಹಿನಿಯಿಂದ ಜಗರ ಕಣಿವೆ ಸೇರುತ್ತದೆ." ಅನಂತರ ಲಕ್ಕವಳ್ಳಿ ಸಮೀಪವಿರುವ ಭದ್ರಾ ಆಣೆಕಟ್ಟನ್ನು ತಲುಪುತ್ತದೆ. ಈ ರೀತಿಯಾಗಿ ಎರಡೂ ಸಹೋದರ ನದಿಗಳು ತುಂಗ ಮತ್ತು ಭದ್ರಾ (ಶಿವಮೊಗ್ಗದಿಂದ ಈಶಾನ್ಯದಲ್ಲಿ ಸುಮಾರು ೧೬ ಕಿ.ಮೀ. ದೂರದಲ್ಲಿರುವ ಕೂಡಲಿ) ತುಂಗಭದ್ರೆ ಎಂದು ಕರೆಯಿಸಿಕೊಳ್ಳುತ್ತದೆ.

ತುಂಗಭದ್ರೆಯು ಕರ್ನಾಟಕದ ಮಧ್ಯಭಾಗದಲ್ಲಿ ಈಶಾನ್ಯಾಭಿಮುಖವಾಗಿ ಹರಿಯುವ ದೊಡ್ಡ ನದಿ. ಶಿವಮೊಗ್ಗದ ಈಶಾನ್ಯದ ಕೂಡಲಿಯಲ್ಲಿ ಪ್ರಾರಂಭವಾಗುವ ತುಂಗಭದ್ರಾ ನದಿಯು ಶಿವಮೊಗ್ಗ ಜಿಲ್ಲೆಯನ್ನು ಬಿಡುವವರೆಗೂ ಉತ್ತರಗಾಮಿನಿಯಾಗಿದೆ. ಕೂಡಲಿ ಮತ್ತು ಹೊನ್ನಾಳಿಯ ಮಧ್ಯೆ ಮಾತ್ರ ಮೂರು ಸುತ್ತು

ಬಳಸುಗಳಿವೆ. ಇಲ್ಲಿಂದ ಮುಂದೆ ಕರ್ನಾಟಕ ರಾಜ್ಯವನ್ನು ಬಿಡುವವರೆಗೂ ಎಡಭಾಗದಲ್ಲಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕು, ಹಾವೇರಿ, ಗದಗ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಿವೆ. ಬಲಭಾಗದಲ್ಲಿ ದಾವಣಗೆರೆ, ಬಳ್ಳಾರಿ ಜಿಲ್ಲೆಗಳು ಹಾಗೂ ಸ್ವಲ್ಪ ದೂರ ಆಂಧ್ರಪ್ರದೇಶ ಇವುಗಳ ಮಧ್ಯದ ಗಡಿರೇಖೆಯಾಗಿ ಈ ನದಿ ಹರಿಯುತ್ತದೆ. ಶಿವಮೊಗ್ಗ, ದಾವಣಗೆರೆ ಜಿಲ್ಲೆಯಿಂದ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಕೋಡಿಯಾಲದವರೆಗೆ ಈಶಾನ್ಯಗಮನ, ಅಲ್ಲಿಂದ ಕೋಣನತುಂಬಿಗೆಯವರೆಗೆ ಉತ್ತರಾಭಿಮುಖವಾಗಿ, ಮುಂದೆ ಸ್ವಲ್ಪ ಪಶ್ಚಿಮಕ್ಕೆ ತಿರುಗಿ ಹಾವನೂರಿನಿಂದ ಸ್ವಲ್ಪ ಉತ್ತರದವರೆಗೆ ಉತ್ತರಕ್ಕೆ ಸಾಗಿ ಮತ್ತೆ ಹಾವೇರಿ ಜಿಲ್ಲೆಯ ಅಂಚನ್ನು ಬಿಡುವವರೆಗೆ ಈಶಾನ್ಯಕ್ಕೆ ಹರಿಯುತ್ತದೆ.' ಅಲ್ಲಿಂದ ಸುಮಾರು ೨೦ ಕಿ.ಮೀ. ದೂರದವರೆಗೆ ಪೂರ್ವಾಭಿಮುಖವಾಗಿ ಮತ್ತೆ ಬಳ್ಳಾರಿ ಜಿಲ್ಲೆಯ ಅಂಚಿನವರೆಗೂ ಮತ್ತು ಮುಂದೆ ೧೫ ಕಿ.ಮೀ. ದೂರದವರೆಗೆ ಈಶಾನ್ಯಕ್ಕೆ ಸಾಗಿ ರಾಜ್ಯದ ಎಲ್ಲೆಯನ್ನು ಬಿಡುವತನಕ ಪೂರ್ವಕ್ಕೆ ಹರಿಯುತ್ತದೆ. ಅಲ್ಲಿಂದ ಆಂಧ್ರಪ್ರದೇಶ ಕರ್ನೂಲ ಜಿಲ್ಲೆಯಲ್ಲಿ ಸಾಗಿ ಕರ್ನೂಲ ಪಟ್ಟಣದಿಂದ ಸ್ವಲ್ಪ ಮುಂದೆ ಕೃಷ್ಣಾ ನದಿಯಲ್ಲಿ ಸಂಗಮವಾಗುತ್ತದೆ.

ತುಂಗಭದ್ರಾ ನದಿಯು ಕೂಡಲಿಯಿಂದ ಬಳ್ಳಾರಿ ಜಿಲ್ಲೆ ಅಂಚನ್ನು ತಲುಪುವರೆಗೂ ಕಡಿದಾದ ಎತ್ತರ ದಂಡೆಗಳ ಮಧ್ಯೆ ಹರಿದುಬರುತ್ತದೆ. ``ಈ ನದಿಯ ಪಾತ್ರವು ಸುಮಾರು ೧೦೦ ರಿಂದ ೨೦೦ ಮೀಟರ್‌ಗಳಷ್ಟು ಅಗಲವಾಗಿದ್ದು ಇಲ್ಲಿ ಹಾಗೂ ಇನ್ನೂ ಮುಂದೆಯೂ ಸಹ ಬಹುತೇಕ ಬಂಡೆಗಳಿಂದ ಕೂಡಿದೆ. ಅಲ್ಲಲ್ಲಿ ಮಡುವುಗಳು, ಸುಳಿಗಳು ಸಾಮಾನ್ಯವಾಗಿವೆ. ಬಳ್ಳಾರಿ ಜಿಲ್ಲೆಯ ಹಿಂದಿನ ವಲ್ಲಭಾಪುರಿ, ಅಣೆಕಟ್ಟಿನ ಹತ್ತಿರದವರೆಗೂ ಈ ನದಿಯ ಇಳಿವು ಸಾಮಾನ್ಯವಾಗಿ ೧ ಕಿ.ಮೀ. ದೂರಕ್ಕೆ ೪೦ ಸೆ.ಮೀ. ಮಾತ್ರ ಇಲ್ಲಿಂದ ಮುಂದೆ ಕಂಪ್ಲಿಯವರೆಗೆ ಈ ನದಿಯು ಇಳಿಜಾರಿನಲ್ಲಿ ವೇಗವಾಗಿ ಹರಿಯುತ್ತಾ ಸು. ೧೧೫ ಮೀಟರ್‌ಗಳಷ್ಟು ಕೆಳಗಿಳಿಯುತ್ತದೆ. ಅಂದರೆ ಸರಾಸರಿ ಮಟ್ಟದ ಇಳಿತ ಕಿ.ಮೀ.ಗೆ ೨೮೦ ಸೆ.ಮೀ. ಆಗಿದೆ. ಇಲ್ಲಿಂದ ಮುಂದೆ ಈ ನದಿಯ ಮಟ್ಟದ ಇಳಿತ ಪುನಃ ಸಾಧಾರಣವಾಗಿ ಇರುತ್ತದೆ.''[೨] ಬಳ್ಳಾರಿ ಜಿಲ್ಲೆಯ ಕೆಲವೆಡೆ ಈ ನದಿಯ ದಂಡೆಗಳಲ್ಲಿ ಗುಂಡುಕಲ್ಲಿನ ಹರವುಗಳು ಇರುವುದುಂಟು. ಮತ್ತೆ ಕೆಲವೆಡೆಗಳಲ್ಲಿ ಇಂಥ ಹರವುಗಳು ಈಗಿನ ನದಿಯ ಮಟ್ಟಕ್ಕಿಂತ ಸುಮಾರು ೨೦-೩೦ ಮೀಟರ್‌ಗಳಷ್ಟು ಮೇಲಿದ್ದು ಇವು ಹಿಂದೆ ನದಿ ಎತ್ತರದಲ್ಲಿ ಹರಿಯುತ್ತಿದ್ದುದಕ್ಕೆ ಸೂಚಕವಾಗಿವೆ.

ಈ ನದಿಯು ವಿಶೇಷವಾಗಿ ಬಂಡೆಗಲ್ಲಿನ ಪಾತ್ರದಲ್ಲಿ ಹರಿಯುವುದರಿಂದ ಅಲ್ಲಲ್ಲಿ ಅನೇಕ ಕಡೆ ಸೀಳುಗಳಾಗಿ ಒಡೆದು ದ್ವೀಪಗಳನ್ನು ನಿರ್ಮಿಸುವುದುಂಟು. ಹೊಸಪೇಟೆಯಿಂದ ಸ್ವಲ್ಪ ಮುಂದೆ ರೈಲು ಹಳಿ ಹಾದು ಹೋಗುವ ಬಳಿ ಇರುವ ದ್ವೀಪವು ದೊಡ್ಡದು. ಶಿರುಗುಪ್ಪ ತಾಲ್ಲೂಕಿನ ಕೆಂಚನಗುಡ್ಡದ ಬಳಿ ೩ ದೊಡ್ಡ ದ್ವೀಪಗಳಿವೆ. ಇವುಗಳಲ್ಲಿ ಕೊನೆಯದಾದ ದೇಶನೂರು ಗ್ರಾಮವಿರುವ ದ್ವೀಪವು ಸುಮಾರು ೧೦ ಕಿ.ಮೀ. ಗಳಷ್ಟು ಉದ್ದವಾಗಿದೆ. ತುಂಗಭದ್ರಾ ನದಿಯ ಬಲದಂಡೆಯ ಉಪನದಿಗಳಲ್ಲಿ ಚಿಕ್ಕಹಗರಿ ಮತ್ತು ಹಗರಿ ಮುಖ್ಯವಾದವು. ಚಿಕ್ಕಹಗರಿ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಬಳ್ಳಾರಿ

ಜಿಲ್ಲೆಯ ಕೂಡ್ಲಿಗಿ ತಾಲ್ಲೂಕುಗಳಲ್ಲಿ ಹರಿದು ಹಗರಿಬೊಮ್ಮನಹಳ್ಳಿಯಿಂದ ಸ್ವಲ್ಪ ದೂರದಲ್ಲಿ ತುಂಗಭದ್ರಾ ಅಣೆಕಟ್ಟಿನ ಹಿನ್ನೀರನ್ನು ಸೇರುತ್ತದೆ. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಚಿಕ್ಕಮಗಳೂರು, ದಾವಣಗೆರೆ ಜಿಲ್ಲೆಯನ್ನು ಹಾದು ಬರುವ ಹಗರಿ ಬಳ್ಳಾರಿ ಜಿಲ್ಲೆಯ ಶಿರುಗುಪ್ಪದಿಂದ ಈಶಾನ್ಯಕ್ಕೆ ಹಳೇಕೋಟೆ ಬಳಿ ತುಂಗಭದ್ರಾ ನದಿಯನ್ನು ಸೇರುತ್ತದೆ. ಬಲದಂಡೆಯ ಹಳ್ಳಗಳಲ್ಲಿ ಹರಿಹರದ ಬಳಿ ಸೇರುವ ಸ್ವಾಗತಹಳ್ಳ (ಹಾರಿದ್ರ, ಸೂಳೆಕೆರೆಹಳ್ಳ) ಹಗರಿಬೊಮ್ಮನಹಳ್ಳಿಯಿಂದ ಸ್ವಲ್ಪ ಈಶಾನ್ಯದಲ್ಲಿ ಸೇರುವ ಹಂಪಾಪಟ್ಟಣ ಹಳ್ಳ, ಕಂಪ್ಲಿಯಿಂದ ಸ್ವಲ್ಪ ಪೂರ್ವದಲ್ಲಿ ಕೂಡುವ ರಾಮಪ್ಪವಂಕ ಇವುಗಳನ್ನು ಹೆಸರಿಸಬಹುದಾಗಿದೆ.

"ಕರ್ನಾಟಕ ರಾಜ್ಯದ ಪೂರ್ವಭಾಗದ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿದ ಬಳ್ಳಾರಿ ಜಿಲ್ಲೆಯ ೧೪-೧೩ ಮತ್ತು ೧೫-೫೦ ಉತ್ತರ ಅಕ್ಷಾಂಶ ಹಾಗೂ ೭೫-೪೦ ಮತ್ತು ೭೭-೧೧ ಪೂರ್ವರೇಖಾಂಶಗಳ ಮಧ್ಯದಲ್ಲಿದೆ." ಈ ಜಿಲ್ಲೆಯು ಉತ್ತರದಲ್ಲಿ ರಾಯಚೂರು, ಪಶ್ಚಿಮದಲ್ಲಿ ಹಾವೇರಿ, ದಕ್ಷಿಣದಲ್ಲಿ ದಾವಣಗೆರೆ ಜಿಲ್ಲೆಗಳನ್ನು ಹೊಂದಿ ಪೂರ್ವದಲ್ಲಿ ಆಂಧ್ರಪ್ರದೇಶದ ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಿಂದ ಸುತ್ತುವರಿದಿದೆ. ತುಂಗಭದ್ರಾ ನದಿಯು ಜಿಲ್ಲೆಯ ಜೀವನಾಡಿಯಾಗಿದ್ದು, ಪಶ್ಚಿಮ ಮತ್ತು ಉತ್ತರ ಮೇರೆಯಾಗಿ ಹರಿಯುತ್ತದೆ. ವರ್ಷವಿಡೀ ಸದಾ ನೀರಿನಿಂದ ಕೂಡಿರುವ ತುಂಗಭದ್ರಾ ನದಿಯು ವರ್ಷದ ಎಲ್ಲಾ ಕಾಲದಲ್ಲಿಯೂ ನೀರು ಹರಿಯುವುದಾದರೂ ಬೇಸಿಗೆಯಲ್ಲಿ ಹರಿಯುವ ನೀರಿನ ಪ್ರಮಾಣ ಬಹಳ ಕಡಿಮೆ. ತುಂಗಭದ್ರಾ ನದಿಯ ಬೇಸಿಗೆಯಲ್ಲಿ ಹರಿಯುವ ನೀರಿನ ಪ್ರಮಾಣ ಕಡಿಮೆಯಿರುವುದರಿಂದ ಈ ನದಿ ಪಾತ್ರದಲ್ಲಿ ಹಲವು ಸೀಳುಗಳಾಗಿ ಒಡೆದು ಹರಿಯುವುದು ಸಾಮಾನ್ಯ ದೃಶ್ಯವಾಗಿದೆ. ಆಗ ಹಲವು ಕಡೆಗಳಲ್ಲಿ ಸುಲಭವಾಗಿ ನದಿಯನ್ನು ದಾಟಬಹುದು. ಮಳೆಗಾಲದಲ್ಲಿ ಈ ನದಿಯು ಪ್ರಪ್ರವಾಹವಾಗಿ ತುಂಬಿ ಹರಿಯುತ್ತದೆ. ಆಗ ನದಿಯಲ್ಲಿ ಸರಾಸರಿ ಸುಮಾರು ೬೦ ಸಾವಿರ ಕ್ಯೂಸೆಕ್ಸ್‌ಗಳಷ್ಟು ನೀರು ಹರಿಯುವುದೆಂದು ಅಂದಾಜು ಮಾಡಲಾಗಿದೆ. ಬಂಡೆಗಳಿಂದ ಕೂಡಿರುವ ಈ ನದಿಯು ಜಲಯಾನಕ್ಕೆ ಉಪಯುಕ್ತವಾಗಿಲ್ಲ. ಮೀನುಗಾರಿಕೆ, ದೋಣಿ ಸಾರಿಗೆ ಸಂಪರ್ಕ ಮುಂತಾದ ಜಲಸಂಬಂಧಿ ಉದ್ಯೋಗವನ್ನು ನಂಬಿ ಬದುಕುವವರ ಸಂಖ್ಯೆಯು ಅಧಿಕವಾಗಿದೆ.

ತುಂಗಭದ್ರಾ ನದಿಯ ಮುಖ್ಯ ಉಪನದಿಗಳಲ್ಲಿ ಮೊದಲು ಸೇರುವುದು ಕುಮುದ್ವತಿ, ಶಿಕಾರಿಪುರ, ಹಿರೇಕೆರೂರು ತಾಲ್ಲೂಕುಗಳಲ್ಲಿ ಹರಿದು ಬರುವ ಈ ನದಿ ಹರಿಹರದಿಂದ ಸ್ವಲ್ಪ ಮೇಲೆ ರಾಣೆಬೆನ್ನೂರು ತಾಲ್ಲೂಕಿನ ಮುದೇನೂರು ಬಳಿಯಲ್ಲಿ ತುಂಗಭದ್ರಾ ನದಿಯನ್ನು ಎಡಭಾಗದಿಂದ ಬಂದು ಕೂಡುತ್ತದೆ. ಮುಂದೆ ಸೇರುವ ವರದಾ ಸಹ ಎಡಭಾಗದ ಉಪನದಿಯಾಗಿದೆ. ಶಿರಸಿ, ಹಾನಗಲ್ಲು ತಾಲ್ಲೂಕುಗಳಲ್ಲಿ ಹರಿದು ಬರುವ ಈ ನದಿ ಕರಜಗಿ ತಾಲ್ಲೂಕಿನ ಗಳಗನಾಥದ ಬಳಿ ಸಂಗಮವಾಗುತ್ತದೆ. ಇಲ್ಲಿಂದ ಮುಂದೆ ಎಡ ಭಾಗದಿಂದ ಬಂದು ಸೇರುವವುಗಳೆಲ್ಲಾ ಸಣ್ಣಪುಟ್ಟ ಹಳ್ಳಿಗಳು ಇವುಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಲಿಂಗಸೂರು, ಸಿಂಧನೂರು ತಾಲ್ಲೂಕುಗಳಲ್ಲಿ ಮಾನ್ವಿಯಿಂದ ಸುಮಾರು ೧೨ ಕಿ.ಮೀ. ದಕ್ಷಿಣದಲ್ಲಿ ತುಂಗಭದ್ರಾ ನದಿಯನ್ನು ಸೇರುವ ಹಿರೇಹಳ್ಳ ಮತ್ತು ಮಸ್ಕಿನಾಲಾ ಹಡಗಲಿ ತಾಲ್ಲೂಕಿನ

ಕುರುವತ್ತಿ ಗ್ರಾಮದಲ್ಲಿ ಬಳ್ಳಾರಿ ಜಿಲ್ಲೆಯನ್ನು ತುಂಗಭದ್ರಾ ನದಿಯು ಪ್ರವೇಶಿಸುತ್ತದೆ. ಅನಂತರ ಮೈಲಾರ ಮತ್ತು ಹಂಪಿಯನ್ನು ಸುತ್ತುವರಿದಿದೆ. ಇದರ ಉಪನದಿಗಳಾದ ಚಿಕ್ಕಹಗರಿ ಮತ್ತು ದೊಡ್ಡ ಹಗರಿ ನದಿಗಳಲ್ಲಿ ವರ್ಷದ ಕೆಲಕಾಲ ಮಾತ್ರ ನೀರಿರುತ್ತದೆ.

ನಾರಿಹಳ್ಳ ಜಲಾಶಯವು ಸಂಡೂರು ತಾಲ್ಲೂಕಿನಲ್ಲಿದ್ದು ತಾರಾನಗರ ಗ್ರಾಮದ ಸಮೀಪ ಒಡ್ಡು ಹಾಕಿ ನೀರಾವರಿ ಸೌಲಭ್ಯವನ್ನು ಒದಗಿಸಿದೆ. ಇದೇ ರೀತಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲವಿ ಗ್ರಾಮದ ಬಳಿ ಚಿಕ್ಕಹಗರಿ ನದಿಗೆ ಅಣೆಕಟ್ಟು ಕಟ್ಟಿ ನೀರಾವರಿ ಸೌಲಭ್ಯವನ್ನು ಒದಗಿಸಿದೆ.' ಹೊಸಪೇಟೆಯ ಮಲ್ಲಾಪುರ ಗ್ರಾಮದಲ್ಲಿ ನಿರ್ಮಿತವಾದ ಬೃಹತ್ ತುಂಗಭದ್ರಾ ಜಲಾಶಯವು ಬಹೋಪಯೋಗಿ ಯೋಜನೆಯಾಗಿದೆ. ಹೀಗೆ ತುಂಗಭದ್ರಾ ನದಿಯು ತನ್ನದೇ ಆದ ಭೌಗೋಳಿಕವಾದ ವಿಸ್ತಾರವನ್ನು ಹೊಂದಿದ್ದು, ಬಳ್ಳಾರಿ ಜಿಲ್ಲೆಯ ನೈಸರ್ಗಿಕ ಮೇರೆಯಾಗಿದೆ.

ಟಿಪ್ಪಣಿಗಳು

೧. ಲೇ.ಡಾ.ವಿರೂಪಾಕ್ಷಿ ಪೂಜಾರಹಳ್ಳಿ, **ಜಲಸಂಬಂಧಿ ಚಳುವಳಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪು. ೨೦.

೨. ಪ್ರ.ಸಂ. ಹಾ.ಮಾ.ನಾಯಕ, **ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ**, ಪ್ರಸಾರಾಂಗ, ಕ.ಅ.ಸಂ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯, ಪು. ೭೩೮.

೩. ......ಅದೇ..... ಪು. ೯೮೫.

* * * * *

ಅಧ್ಯಾಯ ೩

ತುಂಗಭದ್ರಾ ನದಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ

ಅಧ್ಯಾಯ ಮೂರು

ತುಂಗಭದ್ರಾ ನದಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ

ತುಂಗಭದ್ರಾ ನದಿಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಅತ್ಯಂತ ಹಿರಿದಾದುದು. ಈ ನದಿಯು ರಾಜ್ಯದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದೆ. ತುಂಗಭದ್ರಾ ನದಿಯು ಪ್ರಾಗೈತಿಹಾಸ ಕಾಲದಿಂದಲೂ ಜನೋಪಯೋಗಿಯಾಗಿದ್ದು, ಈ ನದಿ ಪರಿಸರವು ನಾಗರೀಕತೆ ಮತ್ತು ಸಂಸ್ಕೃತಿ ಹುಟ್ಟಿ ಬೆಳೆಯಲು ಕಾರಣವಾಗಿದೆ. ಈ ನದಿಯ ದಂಡೆಯಲ್ಲಿರುವ ನಿಟ್ಟೂರು, ಹಂಪಸಾಗರ ಮೊದಲಾದ ಐತಿಹಾಸಿಕ ನೆಲೆಗಳೇ ಈ ಮೇಲಿನ ಮಾತಿಗೆ ಸಾಕ್ಷಿಯಾಗಿವೆ. ಇತಿಹಾಸ ಯುಗದಿಂದಲೂ ಈ ನದಿಯು ಕರ್ನಾಟಕ ರಾಜ್ಯದ ರಾಜಕೀಯ-ಭೌಗೋಳಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಈ ನದಿಯು ಹಲವು ರಾಜ್ಯ-ಸಾಮ್ರಾಜ್ಯಗಳ ಗಡಿಯಾಗಿತ್ತಲ್ಲದೆ, ಇದರ ದಂಡೆಯಲ್ಲಿ 'ಹಂಪೆ' 'ಕಂಪಿಲಿ'ಯಂತಹ ರಾಜಧಾನಿಗಳು, 'ಮಂಗಳ' ಮೊದಲಾದ ಕೋಟೆಗಳು ರಚಿತವಾಗಿದ್ದವು.

ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ, ದಾವಣಗೆರೆ ಜಿಲ್ಲೆಯ ಹರಿಹರ, ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕಂಪ್ಲಿ ಮತ್ತು ಶಿರುಗುಪ್ಪ, ಕೊಪ್ಪಳ ಜಿಲ್ಲೆಯ ಗಂಗಾವತಿ, ತುಂಗಭದ್ರಾ ನದಿಯ ದಡದಲ್ಲಿರುವ ದೊಡ್ಡ (ನಗರ, ಪಟ್ಟಣ) ಊರುಗಳಾಗಿವೆ. ಹಂಪೆಯು ಐತಿಹಾಸಿಕವಾಗಿ ಧಾರ್ಮಿಕವಾಗಿ ಪವಿತ್ರ ಕ್ಷೇತ್ರವೂ ಆಗಿದೆ. ಶಿವಮೊಗ್ಗ ಜಿಲ್ಲೆಯ ಕೂಡಲಿ, ದಾವಣಗೆರೆ ಜಿಲ್ಲೆಯ ಹರಿಹರ, ಬಳ್ಳಾರಿ ಜಿಲ್ಲೆಯ ಕುರುವತ್ತಿ ಮತ್ತು ಮೈಲಾರ, ಹಾವೇರಿ ಜಿಲ್ಲೆಯ ಗಳಗನಾಥ, ಕೊಪ್ಪಳ ಜಿಲ್ಲೆಯ ಆನೆಗೊಂದಿ (ನವ ಬೃಂದಾವನ), ಮುಕ್ಕುಂದ ಇತ್ಯಾದಿ ಈ ನದಿಯ ದಂಡೆಯಲ್ಲಿರುವ ಪವಿತ್ರ ಕ್ಷೇತ್ರಗಳಾಗಿವೆ. ಪುರಾಣಗಳಲ್ಲಿ ತುಂಗಭದ್ರಾ ನದಿಯ ಬಗ್ಗೆ ಅನೇಕ ಉಲ್ಲೇಖಗಳು ಇದ್ದು, ರಾಮಾಯಣದಲ್ಲಿ ಇದು 'ಪಂಪಾ' ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ. ಇಂದಿಗೂ ಕರ್ನಾಟಕದ ಭಾಗವತದಲ್ಲೂ ಈ ನದಿಯ ಉಲ್ಲೇಖ ಕಂಡುಬರುತ್ತದೆ. ಬ್ರಹ್ಮಾಂಡ ಪುರಾಣದ ತುಂಗಭದ್ರಾ ಮಹಾತ್ಮೆಯಲ್ಲಿ ಈ ನದಿಯ ಮೂಲವನ್ನು ಹೀಗೆ ಹೇಳಿದೆ. "ಹಿಂದೆ ಹಿರಣ್ಯಾಕ್ಷ ಭೂದೇವಿಯನ್ನು ಅಪಹರಿಸಿಕೊಂಡು ಸಮುದ್ರದಲ್ಲಿ ಬಚ್ಚಿಟ್ಟುಕೊಂಡಿದ್ದಾಗ ದೇವತೆಗಳು ವಿಷ್ಣುವನ್ನು ಪ್ರಾರ್ಥಿಸಿದರು. ಆಗ ವಿಷ್ಣು ವರಹಾ ಅವತಾರ ತಾಳಿ ಹಿರಣ್ಯಾಕ್ಷನನ್ನು ಕೊಂದು ಭೂದೇವಿಯನ್ನು ಕಾಪಾಡಿ ವಿಶ್ರಾಂತಿಗಾಗಿ ಪಶ್ಚಿಮ ಘಟ್ಟದ ಮೇಲೆ ಕುಳಿತುಕೊಂಡು ಅದೇ ವರಹಾ ಪರ್ವತವಾಯಿತು."[೧]

“ವರಾಹನ ಬಲಕೊಂಬಿನಿಂದ ಸುರಿದ ಬೆವರೇ ‘ಭದ್ರಾ’ನದಿ. ಎಡಕೊಂಬಿನಿಂದ ಸುರಿದ ಬೆವರೇ ‘ತುಂಗಾ’ ನದಿಯಾಗಿದೆ. ‘ಮತ್ಸ್ಯಪುರಾಣ’ದಲ್ಲಿ ಭದ್ರಾ ನದಿಯನ್ನು ಪವಿತ್ರ ನದಿಯೆಂದು ಕರೆದಿದೆ. ‘ಮಹಾಭಾರತ’ದಲ್ಲಿ ಗಂಗಾ, ಕೃಷ್ಣಾ ನದಿಗಳ ಜೊತೆಗೆ ‘ತುಂಗಭದ್ರಾ’ ನದಿಯನ್ನು ಸೇರಿಸಿ ಈ ಮೂರು ಪವಿತ್ರ ನದಿಗಳೆಂದು ಹೇಳಿದೆ.”[೩]

ಪ್ರಾಗೈತಿಹಾಸ ಕಾಲದ ನೆಲೆಗಳ ಶೋಧ ಮತ್ತು ಉತ್ಖನನಗಳಿಂದ ದೊರೆತ ಪುರಾತತ್ತ್ವ ವಸ್ತುಗಳ ಆಧಾರದಿಂದ ಕರ್ನಾಟಕದ ಭೂಭಾಗದಲ್ಲಿ ಸುಮಾರು ೫೦ ಲಕ್ಷ ವರ್ಷಗಳಿಂದಲೂ ಜನವಸತಿ ಇದೆ ಎಂದು ತಿಳಿದುಬಂದಿದೆ. ಕೃಷ್ಣಾ, ಮಲಪ್ರಭಾ, ಘಟಪ್ರಭಾ, ಭೀಮಾ, ತುಂಗಭದ್ರಾ ಮತ್ತು ಕಾವೇರಿ ನದಿಗಳ ಮೈದಾನ ಪ್ರದೇಶಗಳಲ್ಲಿ ಪ್ರಾಗೈತಿಹಾಸ ಕಾಲದ ಜನರ ನೆಲೆಗಳು ಅಧಿಕವಾಗಿ ಪತ್ತೆಯಾಗಿವೆ. ನಿಟ್ಟೂರು, ಹಂಪಸಾಗರ ಮೊದಲಾದ ನೆಲೆಗಳು ಪ್ರಾಗೈತಿಹಾಸ ಕಾಲದಿಂದಲೂ ತುಂಗಭದ್ರಾ ನದಿಯ ದಡದ ಮೇಲೆ ಅನೇಕ ಸಂಸ್ಕೃತಿಗಳು ಬೆಳೆದಿವೆ ಎನ್ನಲು ಸಾಕ್ಷಿಯಾಗಿದೆ.

ಹಂಪಿಯ ತುಂಗಭದ್ರಾ ನದಿಯ ಪರಿಸರದಲ್ಲಿ ಸೂಕ್ಷ್ಮ ಶಿಲಾಯುಗ ಕಾಲದ ಆಯುಧೋಪಕರಣಗಳು ಕಂಡುಬಂದಿವೆ. ನವಶಿಲಾಯುಗ ಕಾಲಕ್ಕೆ ಸೇರಿದ ವರ್ಣಚಿತ್ರಗಳು ಬಂಡೆಯಾಸರೆಯಲ್ಲಿವೆ. ಉತ್ಖನನಗಳಿಂದ ವಸತಿ ನೆಲೆ, ಸಮಾಧಿಗಳು ಪತ್ತೆಯಾಗಿವೆ. ಕಬ್ಬಿಣಯುಗಕ್ಕೆ ಸೇರಿದ ಕಪ್ಪು-ಕೆಂಪು ಮಡಿಕೆ ಚೂರುಗಳು ದೊರಕಿವೆ. ಹೀಗೆ ತುಂಗಭದ್ರಾ ನದಿ ತಟದಲ್ಲಿ ಪ್ರಾಗೈತಿಹಾಸ ಕಾಲದಿಂದಲೂ ಮಾನವನ ಚಟುವಟಿಕೆಯಿರುವುದನ್ನು ಕಾಣಬಹುದಾಗಿದೆ.

ತುಂಗಭದ್ರಾ ನದಿಯ ದಂಡೆಯ ಮೇಲಿರುವ ಶಿರುಗುಪ್ಪ ತಾಲ್ಲೂಕಿನ ನಿಟ್ಟೂರಿನಲ್ಲಿ ಅನಿರೀಕ್ಷಿತವಾಗಿ ಹಾಗೂ ಅಪರೂಪವಾಗಿ ಮೊದಲ ಬಾರಿಗೆ ಉಂಡೆಕಲ್ಲಿನಿಂದ ಮಾಡಿದ ಮಚ್ಚಿನಂತಹ (ಚಾಪರ್) ಆಯುಧಗಳು ದೊರೆತಿವೆ. ಇವು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬಂದ ಕೈಕೊಡಲಿ, ಸೀಳುಗತ್ತಿ ಸಂಪ್ರದಾಯಕ್ಕೆ ಸೇರದೆ, ಪಾಕಿಸ್ತಾನ ಪ್ರದೇಶದ ಸೋಹನ ನದಿ ಬಯಲಿನಲ್ಲಿ ಹೆಚ್ಚಾಗಿ ದೊರೆತ ಮಚ್ಚುಗತ್ತಿಯಂತಹ ಶಿಲಾಯುಗದ ಸಂಪ್ರದಾಯಕ್ಕೆ ಸೇರಿದೆ. ಈ ತಾಂತ್ರಿಕ ಪದ್ಧತಿ ದಕ್ಷಿಣ ಚೀನಾ, ಬರ್ಮಾ, ಇಂಡೋನೇಷಿಯಾ, ಜಾವಾಗಳಲ್ಲಿ ಪ್ರಚಲಿತದಲ್ಲಿದೆ. ಆದಿ ಹಳೆಶಿಲಾಯುಗದ ಈ ಸಾಂಸ್ಕೃತಿಕ ಸಮುದಾಯಗಳ ನೆಲೆಯು ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ ಇಲ್ಲಿ ಕಂಡುಬಂದಿದೆ.

ತುಂಗಭದ್ರಾ ನದಿಯು ಜನಜೀವನದಲ್ಲಿ ಹಾಸುಹೊಕ್ಕಾಗಿ ಬಂದಿರುವುದು ಕವಿ ಮನಸ್ಸು ಹೀಗೆ ದಾಖಲಿಸಿದೆ. ಹಂಪೆಯ ಶೈವ ಕವಿ ಹರಿಹರ (ಕ್ರಿ.ಶ. ಸುಮಾರು ೧೨೦೦) ಒಂದೆಡೆ ತುಂಗಭದ್ರಾ ನದಿಯನ್ನು ‘ಮಹಾನದೀಶ್ವರೀ’ ಎಂದು ಕರೆದರೆ ಇನ್ನೊಂದೆಡೆ ಪಂಪಾಪುರದರಸನನ್ನು ‘ತುಂಗಭದ್ರಾಯೋಗಾನಿಶಾಯನೆ ಜಯ’ ಎಂದು ಕರೆದಿದ್ದಾನೆ.

"ಮತ್ತಂ ಮಹಾನದೀಶ್ವರಿ ತುಂಗಭದ್ರೆಯೋಳು
ಉತ್ತಮ ವಿಶಿಷ್ಟನಾಶ್ರಮ ವಿರ್ಪುದೊಲುಮೆಯೊಳು"[3]

ಲಕ್ಕಣ ದಂಡೇಶ (ಕ್ರಿ.ಶ. ಸುಮಾರು ೧೪೨೫) ಸಕಲ ಪುರುಷಾರ್ಥ ಸಿದ್ಧಿಗಳನ್ನು ನೀಡುವ ನದಿಯದು, ತುಂಗೆಯೂ ಹೌದು, ಭದ್ರೆಯೂ ಹೌದು ಎಂದು ವರ್ಣಿಸಿದ್ದಾನೆ.

"ಕಂಗೊಳಿಪ ಸಕಲ ತೀರ್ಥದ ಮಹಿಮೆಯಂ ತನ್ನೊಳಂಗೀಕರಿಸಿ ಧರಾತಳದ
ಜೀವಗಳೆಲ್ಲ ಮಂಗಳಪದ ನಿಖಿಳಪುರುಷಾರ್ಥ ಸಿದ್ಧಿಗಳ ನೀವತಿಕೃಪಾ
ರಸದೊಳು ತುಂಗೆಯಂದೆನಿಸುತಂ ಭದ್ರಾ ಲಕ್ಷಣವಿಡಿದು ತುಂಗಭದ್ರಾ
ನಾಮಮಂ ಧರಿಸಿದತಿನಿರ್ಮಳಾಂಗಿ ಗಂಗೆಯ ತೀರದ ತುಳ ಪಂಪಾಪತಿಯ
ಚರಣಾಂಬುಜಕೆ ಶರಣು"[4] ಎಂದಿದ್ದಾನೆ.

ಕೆಳದಿಯ ಶಾಸನಗಳಲ್ಲಿ (ಕೆ.ಅ.ಶಾ.ಸ. ೮೬,೧೨೩,೯) ದಾನವನ್ನು ಕಾಪಾಡಿಕೊಂಡು ಬಂದವನಿಗೆ ರಾಜಪದವಿ ದೊರೆಯುವುದು, ಅದನ್ನು ಹಾಳುಗೆಡಪಿದವನಿಗೆ ಗೋ, ಸ್ತ್ರೀ, ಬ್ರಹ್ಮಹತ್ಯೆಗಳೆಂಬ ಪಂಚಮಹಾಪಾಪಗಳೂ, ತಂದೆ-ತಾಯಿಯರನ್ನು ತುಂಗಾತೀರದಲ್ಲಿ ವಧಿಸಿದ ಪಾಪ ಬರುವುದು ಎಂಬ ಉಲ್ಲೇಖವಿರುವುದು ಗಮನಾರ್ಹ. ಇಲ್ಲಿ ಗಂಗಾನದಿಯ ಪಾವಿತ್ರ್ಯತೆಯನ್ನು ಹೇಳಿದ ಬಗೆಯನ್ನು ಮನಗಾಣಬಹುದು.

ಹಂಪೆಯ ಕೃಷ್ಣಸ್ವಾಮಿ ದೇಗುಲದ ಬಳಿಯಲ್ಲಿರುವ ಮಧುರಕವಿಯ ಶಾಸನ (ಕ್ರಿ.ಶ. ೧೪೧೦) ದಲ್ಲಿ ತುಂಗಭದ್ರಾವನ್ನು ಹೀಗೆ ವರ್ಣಿಸಲಾಗಿದೆ.

"ಎಡದ ಮಡದಿಗೆ ಬಿಗುರ್ತಾ
ಗಡೆವರೆಗೊಂಡವರ ನದಿಯದೇ ಸೊಬಗನೇ
ರ್ಪಡೆ ತುಂಗಭದ್ರಾ ದೇವನ
ಬಿಡದಡಿಸಿದ ವಾಮಭಾಗದೊಳ್ ಸೊಗಯಿಸುಗುಂ
ಜಲಮಮೃತಯಂ ಸೊಗಯಿಪ
ಜಲವಿಹಗಂ ಪರಮ ಹಂಸಮಯ ವಂದುಂತ
ಜ್ವಲ ಚರಮ ನಿಮಿಷಮಯ ಮನ
ತೆಳೆ ಬಣ್ಣಿಪನಾವನದರ ತೀರದ ಸಿರಿಯಂ"[5]

ಆಧುನಿಕ ಸಂದರ್ಭದಲ್ಲಿ ಬಿ.ಎಂ.ಶ್ರೀ., ದ.ರಾ. ಬೇಂದ್ರೆ, ಜೋಳದರಾಶಿ ದೊಡ್ಡನಗೌಡ, ಸಿದ್ದಯ್ಯ ಪುರಾಣಿಕ (ಕಾವ್ಯಾನಂದ), ಚೆನ್ನವೀರ ಕಣವಿ, ಕೆ.ಎಸ್. ನಿಸಾರ್ ಅಹಮದ್ ಹೀಗೆ ಹಲವಾರು ಕವಿಗಳು

ತುಂಗಭದ್ರಾ ನದಿಯನ್ನು ಮನದುಂಬಿ ವರ್ಣಿಸಿದ್ದಾರೆ. ಹೀಗೆ ತುಂಗಭದ್ರಾ ನದಿಯ ಪ್ರಾಮುಖ್ಯತೆಯನ್ನು ಗುರುತಿಸಿದ್ದನ್ನು ಚರಿತ್ರೆಯಲ್ಲಿ ಕಾಣುತ್ತೇವೆ. ರಾಬರ್ಟ್ ಸಿವಿಲ್ ತುಂಗಭದ್ರೆಯನ್ನು ಗುರುತಿಸುವ ಬಗೆ ಹೀಗಿದೆ.

> "ಭಾರತದ ಭೂಪಟದ ಮೇಲೆ ಮುಂಬಯಿಯಿಂದ ಮದ್ರಾಸಿನವರೆಗೂ ಒಂದು ನೇರ ರೇಖೆ ಎಳೆದುದಾದರೆ ಸುಮಾರು ಮಧ್ಯದೂರದಲ್ಲಿ ತುಂಗಭದ್ರಾ ನದಿ ಸಿಗುತ್ತದೆ. ಮೈಸೂರಿನಿಂದ ಉತ್ತರಕ್ಕೆ ಹರಿಯುವ ಎರಡು ನದಿಗಳು ಕೂಡಿ ಆಗಿರುವ ಅದು ಉತ್ತರಕ್ಕೆ ಮತ್ತು ಪೂರ್ವಕ್ಕೆ ವಿಶಾಲವಾದ ಆವರ್ತವಾಗಿ ಹರಿಯುತ್ತಾ ಕರ್ನೂಲಿನಿಂದ ಅನತಿ ದೂರದಲ್ಲಿ ಕೃಷ್ಣಾವನ್ನು ಸೇರುತ್ತದೆ. ತನ್ನ ಮಾರ್ಗಮಧ್ಯದಲ್ಲಿ ತುಂಗಭದ್ರಾ ಬಳ್ಳಾರಿಯ ವಾಯುವ್ಯದಲ್ಲಿ ಸುಮಾರು ನಲವತ್ತು ಮೈಲು ದೂರವಿರುವ ಹಾಗೂ ಧಾರವಾಡದಿಂದ ಬಳ್ಳಾರಿಗಿರುವ ರೈಲು ಮಾರ್ಗದ ಉತ್ತರಕ್ಕಿರುವ ದುರ್ಗಮ ಗುಡ್ಡಗಾಡು ಪ್ರದೇಶವನ್ನು ಬೇಧಿಸುತ್ತದೆ. ಈ ಪ್ರದೇಶದಲ್ಲಿ ನದಿಯ ಉತ್ತರ ತೀರದ ಮೇಲೆ ಆನೆಗೊಂದಿ ಎಂಬ ಕೋಟೆಗಳಿಂದ ಸುತ್ತುವರಿದ ಪಟ್ಟಣ ಸುಮಾರು ೧೩೩೦ ರಲ್ಲಿ ಅಸ್ತಿತ್ವದಲ್ಲಿತ್ತು. ಅದನ್ನು ನಮ್ಮ ಚರಿತ್ರೆಗಾರರು ನಾಗುಂಡಿಮ್ ಎಂದು ಕರೆದರು. ಅದು ಸಮೀಪದಲ್ಲಿದ್ದ ಚಿಕ್ಕರಾಜ್ಯದ ದೊರೆಗಳ ಮನೆತನದ ಆವಾಸ ಸ್ಥಾನವಾಗಿತ್ತು. ಅವರು ಮುಂದಿನ ವರ್ಷಗಳಲ್ಲಿ ಆ ಪ್ರದೇಶವನ್ನು ಏರಿಸಿದ ಬೆಣಚುಗಲ್ಲಿನ ಉತ್ತುಂಗ ಗುಡ್ಡಗಳ ಪ್ರಯೋಜನ ಪಡೆದು ನದಿಯನ್ನು ನೆಲೆಯಾಗಿಸಿ ಕೊಂಡು ದುರ್ಗವನ್ನು ಕಟ್ಟಿದರು. ಅನೇಕ ಮೈಲುಗಳವರೆಗೆ ಎಲ್ಲಿಯೂ ದಾಟಲಸಾಧ್ಯವಾದ ನದಿ, ವರ್ಷದ ಎಲ್ಲಾ ಋತುಗಳಲ್ಲಿಯೂ ತುಂಬಿ ಹರಿಯುತ್ತಿತ್ತು ಮತ್ತು ನೆರಗಾಲದಲ್ಲಿ ತನ್ನ ಸುತ್ತುವರೆದ ಹಾಸಿನಲ್ಲಿ ಹಲವಾರು ಸ್ಥಳಗಳಲ್ಲಿ ಗಂಡಾಂತರಕಾರಿ ಜಲಪಾತಗಳುಳ್ಳ ಪ್ರಕ್ಷುಬ್ಧವಾಗಿ ನುಗ್ಗುವ ರಭಸದ ಪ್ರವಾಹಗಳನ್ನು ನಿರ್ಮಿಸಿತು."[೬]

ಬ್ರಿಟನ್ನಿನ ಫ್ರಾನ್ಸಿಸ್ ಬುಕಾನನ್ ಕ್ರಿ.ಶ. ೧೮೦೧ ರಲ್ಲಿ ಕರ್ನಾಟಕದ ಕರಾವಳಿ, ಮಲೆನಾಡು, ಬಯಲುಸೀಮೆಗಳಲ್ಲಿ ಸಂಚರಿಸಿದ ಪ್ರವಾಸಿಯಾಗಿದ್ದು ತುಂಗಭದ್ರಾ ನದಿಯ ಬಗ್ಗೆ ಆಸಕ್ತಿದಾಯಕ ವಿವರಗಳನ್ನು ದಾಖಲಿಸಿದ್ದಾನೆ. ಬುಕಾನನ್ "ತುಂಗಭದ್ರಾ ನದಿಗಳು ಕೂಡಲಿಯಲ್ಲಿ ಸಂಗಮವಾಗಿ ಮುಂದೆ ಸಾಸುವೆಹಳ್ಳಿ ತಲುಪುವ ವೇಳೆಗೆ ಬೇಸಿಗೆಯಲ್ಲಿ ಅತಿ ಕಡಿಮೆ ನೀರು ಇರುತ್ತದೆ. ಹಾಗೂ ಈ ನದಿಗೆ ಅಣೆಕಟ್ಟು ನಿರ್ಮಾಣ ದುಸ್ತರ ಹಾಗೂ ವೆಚ್ಚದಾಯಕವಾಗಿರುತ್ತದೆ ಎಂದು ಗುರುತಿಸುತ್ತಾನೆ"[೭] ಇಲ್ಲಿ ಒಣಬೇಸಾಯ ಕ್ರಮ ಪ್ರಚಲಿತದಲ್ಲಿದೆ. ರಾಗಿ, ಜೋಳ ಪ್ರಧಾನ ಬೆಳೆಗಳಾಗಿವೆ. ಹತ್ತಿ, ನವಣೆ, ತೊಗರಿ, ಹೆಸರು ಇತ್ಯಾದಿಗಳನ್ನು ಬೆಳೆಸಲಾಗುತ್ತದೆ. ಇಂತಹ ಬೆಳೆಗಳಿಗೆ ಅತಿ ಕಡಿಮೆ ಮಳೆ ಹಾಗೂ ತೇವಾಂಶ ಸಾಕಾಗುತ್ತದೆ. ಈ ಪ್ರದೇಶಗಳು ಕೃತಕ ನೀರಾವರಿ ವ್ಯವಸ್ಥೆಯಲ್ಲಿಯೂ ಹಿಂದೆಯಿದೆ. ತುಂಗಭದ್ರಾ ನದಿಗೆ

ಯಾವುದೇ ಅಣೆಕಟ್ಟು ನಿರ್ಮಿಸಲಾಗಿಲ್ಲ. ಅತೀ ಕಡಿಮೆ ಪ್ರಮಾಣದಲ್ಲಿ ಭತ್ತದ ಬೆಳೆ ಬೆಳೆಯಲಾಗುತ್ತಿತ್ತು. ಇದೇ ಜಿಲ್ಲೆಯಲ್ಲಿ ವಾರ್ಷಿಕ ೧೫,೦೦೦ ಕ್ವಾಂಟರ್ ರಾಮಪಗೋಡಗಳ ಉತ್ಪಾದನೆಯಿದ್ದರೂ ಆ ಸರೋವರಗಳನ್ನು ಬಿಟ್ಟರೆ ಇನ್ನಾವುದೇ ಅಣೆಕಟ್ಟು ಹಾಗೂ ನೀರಾವರಿ ಭೂಮಿ ಇರುವುದಿಲ್ಲ. ಮಳೆಯ ಪ್ರಮಾಣವು ಸಹ ಕಡಿಮೆಯಾಗಿತ್ತು ಎಂದು ನೀಡುವ ಮಾಹಿತಿಗಳು ಈ ನದಿ ಜನಜೀವನದ ಬಗ್ಗೆ ಸಂಬಂಧದ ಬಗೆಗೆ ಸ್ಥೂಲ ನೋಟವೊಂದನ್ನು ನೀಡುತ್ತವೆ.

``ಆನೆಗೊಂದಿ ಪ್ರದೇಶದಲ್ಲಿ ತುಂಗಭದ್ರಾ ನದಿಗೆ ಅಣೆಕಟ್ಟು ನಿರ್ಮಾಣವಾದರೆ ವರ್ಷಕ್ಕೆ ೧ ಲಕ್ಷ ಪಗೋಡ ಆದಾಯ ಬರುವ ಭತ್ತ ಹಾಗೂ ಕಬ್ಬು ಬೆಳೆಯಬಹುದಾಗಿದೆ ಎಂಬ ಸ್ಥಳೀಯ ಅಮಲ್ದಾರರ ವರದಿಯನ್ನು ಬುಕನಾನ್ (ಪು.ನಂ. ಬುಕನಾನ್ ೩೨೭) ಉಲ್ಲೇಖಿಸಿರುವುದು ಗಮನಾರ್ಹವೆನಿಸುತ್ತದೆ.''[೮]

'ತುಂಗ' ಮತ್ತು 'ಭದ್ರಾ' ಎಂಬ ಎರಡು ಹೆಸರು ಕೂಡಿ 'ತುಂಗಭದ್ರಾ' ಎಂದಾಗಿದ್ದು, ಈ ಬಗೆಯ ಜೋಡಿ ಹೆಸರಿನ ನದಿಯು ಈ ಪ್ರದೇಶದಲ್ಲಿಯೇ ಅಪರೂಪದ್ದೆನಿಸುತ್ತದೆ. ತುಂಗಭದ್ರಾ ತೀರದಲ್ಲಿ ಪ್ರಾಗೈತಿಹಾಸ ಕಾಲದಿಂದಲೂ ಜನವಸತಿಯಿದ್ದ ಬಗೆಗೆ ಕುರುಹುಗಳು ಲಭ್ಯವಾಗಿವೆ. ತುಂಗಭದ್ರಾ ಪೌರಾಣಿಕವಾಗಿಯೂ ಪ್ರಸಿದ್ಧಿ ಪಡೆದಿದೆ. ಇದು ರಾಮಾಯಣ ಕಾಲದಲ್ಲಿ 'ಪಂಪಾ' ಎಂಬ ಹೆಸರು ಹೊಂದಿದೆ. ಹಂಪೆಯ ವಿರೂಪಾಕ್ಷ ದೇವಾಲಯದ ಸಮೀಪದಲ್ಲಿ ಈ ನದಿಯ ಸೀಳು ಪೂರ್ವಾಭಿಮುಖವಾಗಿ ಹರಿದು ನಂತರ ಉತ್ತರಕ್ಕೆ ತಿರುಗುತ್ತದೆ. ಹೀಗೆ ತಿರುಗುವ ಸ್ಥಳಗಳನ್ನು ಸಾಮಾನ್ಯವಾಗಿ ತೀರ್ಥಗಳೆಂದು ಕರೆಯಲಾಗುತ್ತಿದ್ದು, ಇಲ್ಲಿ ಇದನ್ನು ``ಚಕ್ರತೀರ್ಥ'' ಎಂದು ಕರೆಯುತ್ತಾರೆ. ಇದುವೇ ಕಾವ್ಯ ಶಾಸನಗಳಲ್ಲಿ ಉಲ್ಲೇಖವಾಗಿರುವ 'ಪಂಪಾತೀರ್ಥ' ಎನ್ನಲಾಗಿದೆ. ಹಂಪಿಯ ವಿರೂಪಾಕ್ಷ ದೇವಾಲಯದ ಬಳಿ ಉತ್ತರಕ್ಕಿರುವ ನದಿಯ ಸ್ನಾನಘಟ್ಟಕ್ಕಿಂತ ಚಕ್ರತೀರ್ಥ ಪ್ರದೇಶವು ಶ್ರೀವಿರೂಪಾಕ್ಷ ದೇವರಿಗೆ ಪವಿತ್ರವೆನಿಸಿದ್ದು ಇಲ್ಲಿಯೇ 'ಫಲಪೂಜೆ' ಆಚರಣೆ ನಡೆಯುತ್ತದೆ. ಈ ಸುತ್ತಮುತ್ತಲಿನ ಪ್ರದೇಶದಲ್ಲಿ ಅನೇಕ ಪ್ರಾಗೈತಿಹಾಸಿಕ ಕುರುಹುಗಳು ಕಾಣಸಿಗುತ್ತವೆ.

ತುಂಗಭದ್ರಾ ನದಿಯನ್ನು ಹಡಗಲಿಯಿಂದ ಕಂಪ್ಲಿಯವರೆಗೆ ``ಹಂಪಿ ಹೊಳೆ'' ಎಂದು ಕರೆಯಲಾಗುತ್ತದೆ. ಹಂಪಿ ಹೊಳೆ ಎಂಬುದು ಇಲ್ಲಿನ ಜನಮಾನಸದಲ್ಲಿ ತುಂಗಭದ್ರಾ ನದಿಯ ಪರ್ಯಾಯ ನಾಮವಾಗಿದೆ. ಈ ಪ್ರದೇಶದಲ್ಲಿ ನದಿಯು ಪದೇ ಪದೇ ಸೀಳಾಗಿ ಹರಿಯುವುದು, ಮತ್ತೆ ಒಂದಾಗುವುದು. ಸೀಳಾಗಿ ಹರಿಯುವುದನ್ನು ಕಾಣುತ್ತೇವೆ. ಈ ಲಕ್ಷಣಗಳನ್ನು ಗಮನಿಸಿ ಜನರು 'ಪಂಪಾ' 'ಪಂಪಾತೀರ್ಥ'ವೆಂದು ಕರೆದು ಮುಂದೆ 'ಹಂಪಿ ಹೊಳೆ' ಎಂದು ಆಗಿರಬಹುದು ಎಂಬ ಉಲ್ಲೇಖವಿದೆ. ಹಂಪಿಯಲ್ಲಿ ರಾಮಾಯಣ ಸಂಬಂಧಿ ಐತಿಹ್ಯಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಐತಿಹಾಸಿಕವಾಗಿ ತುಂಗಭದ್ರೆಯು ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಗಡಿಯಾಗಿ ನಿರ್ಣಾಯಕ ಸ್ಥಳವಾಗಿ ಕಂಡುಬರುತ್ತದೆ. ಅದು ಕರ್ನಾಟಕದ ಗಡಿರೇಖೆಯಾಗಿ ನಿರ್ವಚನಗೊಂಡಿರುವುದು ಕುತೂಹಲಕರವೆನಿಸುತ್ತದೆ.

'ತುಂಗಭದ್ರಾ' ನದಿಗೆ 'ಪಂಪಾ ಸರೋವರ' ಎಂದು ಬರಲು 'ಶ್ರೀಪಂಪಾಮಹಾತ್ಮೆ' ಗ್ರಂಥಕರ್ತರು ಶ್ರೀಗುರು ಓಂಸಿದ್ದಲಿಂಗೇಶ್ವರ ಸ್ವಾಮಿಗಳು ಹೊಳಗುಂದಿ (ಪುಟ-೨೮) ಇವರು ತಮ್ಮ ಗ್ರಂಥದಲ್ಲಿ ಈ ರೀತಿಯಾಗಿ ಹೇಳಿದ್ದಾರೆ. "ಒಂದು ದಿನ ಶ್ರೀ ಪಂಪಾದೇವಿಯು ಪತಿಯೊಂದಿಗೆ ಏಕಾಂತದಲ್ಲಿದ್ದಾಗ ಹೇ ವಿರೂಪಾಕ್ಷ ಸ್ವಾಮಿಯೇ! ನೀನೇ ನನಗೆ ಪತಿಯಾಗಬೇಕೆಂದು ಹಗಲಿರುಳೂ ನಿರಾಹಾರದಿಂದಿದ್ದು, ಬಹುವರ್ಷಗಳ ಕಾಲ ಉಗ್ರ ತಪಸ್ಸನ್ನಾಚರಿಸಿದವಳು. ಅದರ ದೆಸೆಯಿಂದ ಈ ಕ್ಷೇತ್ರಕ್ಕೆ ನನ್ನ ಹೆಸರನ್ನು ಇಡಬೇಕೆಂದು ಪ್ರಾರ್ಥಿಸಲು ಆಗ ಶಿವನು ಪಂಪಾದೇವಿಯನ್ನು ಪದೇ ಪದೇ ಸಂತೋಷಪಡಿಸಿ ಆಕೆಯ ಮೇಲಿಟ್ಟ ಪ್ರೀತಿಯಿಂದ ವಿರೂಪಾಕ್ಷನು ಎಲೈ ಪ್ರಿಯಳೆ! ಇಂದಿನಿಂದ ಈ ಕ್ಷೇತ್ರಕ್ಕೆ 'ಪಂಪಾ ಕ್ಷೇತ್ರ' ಎಂದು ಹೆಸರಿಟ್ಟಿರುವೆನು. ನೀನು ನನ್ನ ಸಾಕ್ಷಾತ್ಕಾರಕ್ಕೋಸ್ಕರ ಯಾವ ಸರೋವರದಲ್ಲಿ ಸ್ನಾನ ಮಾಡಿ ಬಹುವರ್ಷಗಳ ಕಾಲ ಉಗ್ರ ತಪಸ್ಸನ್ನಾಚರಿಸಿದೆಯೋ ಆ ಸರೋವರವು ಇಂದಿನಿಂದ 'ಪಂಪಾಸರೋವರ'ವೆಂದೇ ಖ್ಯಾತಿಯಾಗಲಿ ಎಂದು ವರವನ್ನಿತ್ತನು."[೯] (ಪಂಪಾದೇವಿ-ಪಂಪಾಪತಿ-ಪಂಪಾಕ್ಷೇತ್ರ-ಪಂಪಾಸರೋವರ-ಪಂಪಾಪುರ-ಇವೇ ಪಂಪಾ ಪಂಚಕ).

ಕದಂಬ, ಗಂಗ, ಬಾದಾಮಿ, ಚಾಲುಕ್ಯರ ಆಳ್ವಿಕೆಯಲ್ಲಿಯೂ ತುಂಗಭದ್ರಾ ನದಿಯ ಬಗ್ಗೆ ಮಹತ್ವದ ಉಲ್ಲೇಖಗಳು ಗೋಚರವಾಗಿಲ್ಲ. ರಾಷ್ಟ್ರಕೂಟರ ಸಂದರ್ಭದಲ್ಲಿ 'ತುಂಗಭದ್ರಾ' ಶಾಸನೋಕ್ತವಾಗಿ ಕಾಣಿಸಿಕೊಳ್ಳುತ್ತದೆ. ಎರಡನೇಯ ಗೋವಿಂದನು ಪಾಂಡ್ಯ, ಚೋಳ, ಗಂಗರನ್ನು ಸೋಲಿಸಿ ಹಿಂತಿರುಗುವ ವೇಳೆಯಲ್ಲಿ ತುಂಗಭದ್ರಾ ನದಿಯ ತೀರದಲ್ಲಿ ತಂಗಿ ನೆರೆಯ ಕಾಡಿನಲ್ಲಿ ಹಂಪಿಯ ಬೇಟೆಯನ್ನಾಡಿದನೆಂಬ ಪ್ರಾಸಂಗಿಕ ಉಲ್ಲೇಖವಿದೆ. ಕಲ್ಯಾಣ ಚಾಲುಕ್ಯರು ಹಾಗೂ ಚೋಳರಿಗೆ ೧೧ನೇ ಶತಮಾನದುದ್ದಕ್ಕೂ ಯುದ್ಧಗಳು ನಡೆದಿವೆ. ಆ ವೇಳೆಗೆ ಚೋಳರು ತುಂಗಭದ್ರಾ, ಕೃಷ್ಣಾ ನಡುವಿನ ಫಲವತ್ತಾದ ಪ್ರದೇಶವನ್ನು ತಮ್ಮ ಆಳ್ವಿಕೆಯಲ್ಲಿ ತರಲು ಬಯಸಿದ್ದರು. ಚರಿತ್ರಕಾರರಾದ ಕೆ.ಎ. ನೀಲಕಂಠಶಾಸ್ತ್ರಿಗಳು ಈ ವಿವರಗಳನ್ನು ದಾಖಲಿಸುತ್ತಾ "These campaigns resulted in the annenation to the cola empire of nearly the whole of the modern districts of Bellary, so, that the Tungabhadra become the boundary between the two empires."[೧೦] ಎಂಬುದಾಗಿ ಗುರುತಿಸಿದ್ದಾರೆ. ಚಾಲುಕ್ಯ, ಚೋಳರ ನಡುವಿನ ಯುದ್ಧಗಳ ಸಂದರ್ಭದಲ್ಲಿ ತುಂಗಭದ್ರಾ ನದಿಯ ಗಡಿರೇಖೆಯು ನಿರ್ವಚನಗೊಂಡಿತು. ಇದರೊಂದಿಗೆ ತುಂಗಭದ್ರಾ ನದಿಯನ್ನು ದಾಟುವ ಅಥವಾ ಇದ್ದಲ್ಲಿಯೇ ಉಳಿಯುವ ಸನ್ನಿವೇಶಗಳು, ರಾಜವಂಶಗಳ ಸೋಲು-ಗೆಲುವಿನ ಸೂಚಕಗಳಾದವು.

"ವೀರರಾಜೇಂದ್ರನೊಂದಿಗೆ ಯುದ್ಧದಲ್ಲಿ ಸೋತ ಎರಡನೇ ಸೋಮೇಶ್ವರ (ಕ್ರಿ.ಶ. ೧೦೬೮ ರಲ್ಲಿ) ಮಹಾವ್ಯಾಧಿಯಿಂದ ಬಳಲಿ ಕುರುವತ್ತಿ ಬಳಿಯ ತುಂಗಭದ್ರಾ ನದಿಯಲ್ಲಿ ಜಲಸಮಾಧಿಯಾಗಿ ಪ್ರಾಣನೀಗಿದನು ಎಂಬ ಉಲ್ಲೇಖವು ಬಳ್ಳಾರಿ ಜಿಲ್ಲಾ ಗೆಜೆಟಿಯರ್‌ನಲ್ಲಿ ತಿಳಿಸಿದೆ."[೧೧] ಕುರುವತ್ತಿಯ ಬಳಿ ಈ ನದಿಯು ಬಾಗಿ ಸಾಗುತ್ತಿದ್ದು ಅಲ್ಲಿ ದೇವತಾ ಸನ್ನಿಧಾನವಿರುವುದೆಂಬ ನಂಬಿಕೆಯಿದೆ. ಅನಂತರ ಅಲ್ಲಿನ ಮಲ್ಲಿಕಾರ್ಜುನ

ದೇವಾಲಯಕ್ಕೆ 'ಅಹವ ಮಲ್ಲೇಶ್ವರ' ಎಂಬ ಹೆಸರಿಟ್ಟು ದತ್ತಿ ನೀಡಲಾಗಿದೆ. ೧೨೨೮ ರ ವೇಳೆಗೆ ಹೊಯ್ಸಳ- ಸೇವುಣರ ನಡುವೆ ತುಂಗಭದ್ರಾ ನದಿಯು ಗಡಿರೇಖೆಯಾಗಿದ್ದಿತು. ೧೨೩೫ ರ ವೇಳೆಗೆ ಸೇವುಣ-ಹೊಯ್ಸಳರ ಸುದೀರ್ಘ ಸೆಣಸಾಟದಲ್ಲಿ ಅದುವರೆಗೂ ಗಡಿರೇಖೆಯಾಗಿದ್ದ ತುಂಗಭದ್ರಾ ನದಿ ನಾಡಿನ ವಿಭಜನಾ ರೇಖೆಯಾಗಿ ಪರಿಣಮಿಸಿತು ಎಂಬುದಾಗಿ ಇತಿಹಾಸಕಾರರಾದ ಡಾ. ರಿತ್ತಿ ಹಾಗೂ ಡಾ.ಪಿ.ಬಿ. ದೇಸಾಯಿ ಗುರುತಿಸಿದ್ದಾರೆ. ಅಂದು ತುಂಗಭದ್ರಾ ನದಿಯುದ್ದಕ್ಕೂ ಒಡೆದ ಕರ್ನಾಟಕ ಗಡಿಯು ಬಹಳ ಕಾಲ ಹಾಗೆಯೇ ಉಳಿಯಿತು.

೧೪ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಹಾಗೂ ಆಳ್ವಿಕೆಯ ಕಾಲದಲ್ಲಿ ತುಂಗಭದ್ರಾ ನದಿಯು ವಹಿಸಿದ ಪಾತ್ರವು ಮಹತ್ವದ್ದಾಗಿದೆ. ವಿಜಯನಗರದ ಅರಸರು ಈ ನದಿ ನೀರಿನ ಸಮರ್ಪಕ ಬಳಕೆಗಾಗಿ ವಿವಿಧ ಮಾದರಿಯ ಚಿಕ್ಕಪುಟ್ಟ ಅಣೆಕಟ್ಟುಗಳನ್ನು ನಿರ್ಮಿಸಿ, ಹಳ್ಳಿಗಳಿಗೆ ನೀರುಣಿಸಿದ ಉಲ್ಲೇಖಗಳು ಇತಿಹಾಸ ಪುಟಗಳಲ್ಲಿ ದಾಖಲಾಗಿವೆ. ಹೊಸದಾಗಿ ಸ್ಥಾಪನೆಯಾದ ವಿಜಯನಗರಕ್ಕೆ ಕುಡಿಯುವ ನೀರಿನ ಪೂರೈಕೆ ಅತೀ ಅವಶ್ಯಕವಾಗಿತ್ತು. ಒಂದೆಡೆ ತುಂಗಭದ್ರಾ ನದಿ, ಇನ್ನೊಂದೆಡೆ ಕಡಿದಾದ ಗುಡ್ಡಗಳು. ಹೀಗೆ ಆಯಾಕಟ್ಟಿನ ಸ್ಥಳಗಳಲ್ಲಿ ನಿರ್ಮಾಣವಾದ ರಾಜಧಾನಿಗೆ ತುಂಗಭದ್ರಾ ನದಿಯು ಸಹಾಯಕವಾಗಿದೆ. ಎರಡನೇ ಬುಕ್ಕರಾಯ (೧೩೯೯-೧೪೦೬) ರಾಜಧಾನಿಗೆ ಅವಶ್ಯಕವಾಗಿದ್ದ ನೀರಿನ ಪೂರೈಕೆಗಾಗಿ ಅಡ್ಡಲಾಗಿ 'ತುರ್ತು ಅಣೆಕಟ್ಟ'ನ್ನು ನಿರ್ಮಿಸಿದ್ದಾನೆ. ವಿಜಯನಗರ ಕಾಲದಲ್ಲಿ ಆಗಾಗ ಸುಲ್ತಾನರೊಂದಿಗೆ ಯುದ್ಧಗಳಲ್ಲಿ ಪಲ್ಲಟಗೊಳ್ಳುತ್ತಿದ್ದರೂ ತುಂಗಭದ್ರಾ ನದಿಯು ರಾಜ್ಯದ ಗಡಿರೇಖೆಯಾಗಿಯೇ ಉಳಿಯಿತು. ಪೆನುಗೊಂಡೆಯ ಅರಸರು ಈ ನದಿತೀರದಲ್ಲಿ ಉದ್ಯಾನ ನಿರ್ಮಿಸಿ ದೇವಾಲಯಗಳಿಗೆ ಸಾಕಷ್ಟು ದತ್ತಿ ದಾನಗಳನ್ನು ನೀಡಿದ ಉಲ್ಲೇಖವಿದೆ.

೧೮ನೇ ಶತಮಾನದಲ್ಲಿ "ಹೈದ್ರಾಬಾದ್ ನಿಜಾಮ, ಟಿಪ್ಪುಸುಲ್ತಾನರು, ತುಂಗಭದ್ರಾ ನದಿಯಾಚೆಗಿನ ಬಂಕಾಪುರ, ಧಾರವಾಡಗಳನ್ನು ವಶಪಡಿಸಿಕೊಂಡು ತುಂಗಭದ್ರಾ ಸೀಮೆಗೆ ಲಗ್ಗೆಯಿಟ್ಟಿರುವುದನ್ನು ಕಾಣಬಹುದು. ೧೭೮೬ರ ತನ್ನ ದಂಡಯಾತ್ರೆಯ ವೇಳೆಗೆ ಟಿಪ್ಪುಸುಲ್ತಾನ ಜುಲೈ ತಿಂಗಳಲ್ಲಿ ತುಂಬಿ ಹರಿಯುವ ತುಂಗಭದ್ರಾ ನದಿಯಲ್ಲಿ ಸಾವಿರಾರು ಹರಿಗೋಲುಗಳನ್ನು ಬಳಸಿ ರಾತ್ರೋರಾತ್ರಿ ಸಮಸ್ತ ಸೈನಿಕರನ್ನು ದಾಟಿಸಿದ ಕುತೂಹಲಕರ ಸನ್ನಿವೇಶವಿದೆ. ೧೭೮೭ರ ಮಂಗಳೂರು ಒಪ್ಪಂದದ ಪ್ರಕಾರ ತುಂಗಭದ್ರಾ ನದಿಯನ್ನು ತನ್ನ ಉತ್ತರದ ಗಡಿಯೆಂದು ಟಿಪ್ಪುಸುಲ್ತಾನ ಒಪ್ಪಿಕೊಂಡಿದ್ದಾನೆ. ೧೭೯೯ರಲ್ಲಿ ಟಿಪ್ಪುವಿನ ಮರಣಾನಂತರ ಹೈದರಾಬಾದ್ ನಿಜಾಮ ಬಳ್ಳಾರಿ, ಅನಂತಪುರ, ಕರ್ನೂಲು, ಕಡಪ ಜಿಲ್ಲೆಗಳನ್ನು ಬ್ರಿಟೀಷರಿಗೆ ಒಪ್ಪಿಸಿದ್ದಾನೆ. ಅವು 'ದತ್ತ ಮಂಡಲ' ಎಂದು ಮದರಾಸು ಅಧಿಪತ್ಯದಲ್ಲಿ ಸೇರಿಕೊಂಡವು."[೨]

ತುಂಗಭದ್ರಾ ನದಿಯು ಹಡಗಲಿ ತಾಲ್ಲೂಕು 'ಕುರುವತ್ತಿ' ಎಂಬ ಗ್ರಾಮದ ಬಳಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ತುಂಗಭದ್ರಾ ನದಿತೀರದ ಈ ಕುರುವತ್ತಿಯಲ್ಲಿ "ಸೋಮೇಶ್ವರ ಲಿಂಗ

ಸ್ವಯಂಭೂವಾಗಿ ಉದ್ಭವವಾದಾಗ ಪುರದ ಜನ ಈ ಈಶ್ವರ ದರ್ಶನ ಪಡೆದು ಪುನೀತರಾದರು. ಹೀಗೆ ದೇವರು ಈಶ್ವರನ ರೂಪದಲ್ಲಿ ಕುರುಹು ತೋರಿದನೆಂದು, ನದಿತೀರದ ವರ್ತಿಯಲ್ಲಿ ಲಿಂಗೋದ್ಭವವಾದುದರಿಂದ 'ವರತಿ', ವರ್ತಿ, ಎಂದೂ ಕುರುಹಿನವರ್ತಿ, ಕುರುವರ್ತಿ, ಕುರುವತ್ತಿ ಎಂದು ಹೆಸರು ಬಂದಿದೆ ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಶಾಸನದಲ್ಲಿ 'ಕುರುವರ್ತಿ' ಎಂದು ಉಲ್ಲೇಖಿಸಿದೆ.'' ಈ ಕುರುವತ್ತಿಯು ಐತಿಹಾಸಿಕ ಧಾರ್ಮಿಕ ಕ್ಷೇತ್ರವಾಗಿದೆ. ಈ ಕ್ಷೇತ್ರದಲ್ಲಿಯೇ ತುಂಗಭದ್ರಾ ನದಿಯು ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿ ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ಹಾಗೂ ಶಿರುಗುಪ್ಪ ತಾಲ್ಲೂಕುಗಳ ಗಡಿಯುದ್ದಕ್ಕೂ ಹರಿಯುತ್ತದೆ. ತುಂಗಭದ್ರಾ ನದಿಯ ಎಡದಂಡೆಯು ದಾವಣಗೆರೆ ಜಿಲ್ಲೆ, ಕೊಪ್ಪಳ ಜಿಲ್ಲೆಗಳ ಗಡಿಯಾಗಿದ್ದು, ಬಲದಂಡೆ ಬಳ್ಳಾರಿ ಜಿಲ್ಲೆಯ ಗಡಿಯಾಗಿದೆ.

ಏಕೀಕರಣದ ಸಂದರ್ಭದಲ್ಲಿ ಉತ್ತರ ಕರ್ನಾಟಕ ಹಾಗೂ ಹಳೆಯ ಮೈಸೂರು ಪ್ರಾಂತ್ಯದವರಲ್ಲಿ ಏಕೀಕರಣದ ಬಗೆಗೆ ಭಿನ್ನಾಭಿಪ್ರಾಯಗಳಿದ್ದವು. ಈ ಸಂದರ್ಭದಲ್ಲಿ ಹಾವನೂರುರವರ ಹೇಳಿಕೆಯನ್ನು ಈ ರೀತಿ ಗುರುತಿಸಬಹುದಾಗಿದೆ. "ಉತ್ತರ ಕರ್ನಾಟಕದ ಏಕೀಕರಣವಾದಿಗಳು ಅದೆಷ್ಟೇ ಸಮಜಾಯಿಸಿದರೂ ಮೈಸೂರಿಗರು ಒಪ್ಪದಿದ್ದಾಗ ಅಲ್ಲಿನ ಕೆಲವು ಉಗ್ರ ಭಾವನೆಯುಳ್ಳವರು ನಾವು ಸೇರುವುದು ಬೇಡವಾದರೆ, ನಮಗೂ ಅವರು ಬೇಡ! ನಮ್ಮಗಳ ಪರಸ್ಪರ ಸಂಪರ್ಕದ ಕೊಂಡಿಯೆಂದರೆ ಹರಿಹರದ ಬಳಿಯಲ್ಲಿ ಹರಿಯುವ ತುಂಗಭದ್ರಾ ನದಿಯ ಸೇತುವೆ ತಾನೇ! ಅದನ್ನು ಒಂದು ರಾತ್ರಿ ಸಿಡಿಮದ್ದಿನ ಸ್ಫೋಟದಿಂದ ಕೆಡವಿ ಬಿಡೋಣ ಎಂಬುದಾಗಿ ಯೋಚಿಸಿದ್ದರು.'' ಆದರೆ ಇತರ ಹಿರಿಯ ನಾಯಕರು ಅದಕ್ಕೂ ಎಳ್ಳಷ್ಟೂ ಅವಕಾಶವನ್ನು ಕೊಡದೆ ಆ ಬಿಕ್ಕಟ್ಟಿನ ಸಂದರ್ಭವನ್ನು ಸಮತೋಲನಗೊಳಿಸಿ, ಶಾಂತಿಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿದ್ದಾರೆ.

ತುಂಗಭದ್ರಾ ನದಿಯು ನಾಡು, ನುಡಿಯ ಸಂದರ್ಭದಲ್ಲಿ ಪಡೆದುಕೊಂಡಿರುವ ಸ್ಥಾನವು ಮಹತ್ವವಾದುದ್ದಾಗಿದೆ. ಸ್ವಾತಂತ್ರ್ಯಾನಂತರ ಭಾರತದಲ್ಲಿನ ಭಾಷಾವಾರು ಪ್ರಾಂತ್ಯ ರಚನೆಯ ಸಂದರ್ಭದಲ್ಲಿ ಇದು ಕಂಡುಬರುತ್ತದೆ. ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ತುಂಗಭದ್ರಾ ನದಿಯು ಪ್ರಮುಖ ಪಾತ್ರ ವಹಿಸಿದೆ. ಭಾಷಾವಾರು ಪ್ರಾಂತ್ಯ ರಚನೆಗೆ ಸಂಬಂಧಿಸಿದ ಸಮಸ್ಯೆಗಳಲ್ಲಿ ಬಳ್ಳಾರಿ ತಾಲ್ಲೂಕಿನ ಸಮಸ್ಯೆ ಕೇವಲ ಭಾಷಾತ್ಮಕವಾಗಿರದೇ ತುಂಗಭದ್ರಾ ಅಣೆಕಟ್ಟಿಗೆ ಸಂಬಂಧಿಸಿದಂತೆಯೂ ಇತ್ತು ಎಂಬುದಾಗಿ ಚರಿತ್ರೆಕಾರರು ಹೇಳಿದ್ದಾರೆ.

೧೯೫೩ ಆಗಸ್ಟ್ ೧೩ರಂದು ಆಂಧ್ರ ಪ್ರಾಂತ್ಯ ಮಸೂದೆಯು ಪ್ರಸ್ತಾಪಿತವಾಯಿತು. ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರೂ ಬಳ್ಳಾರಿ ಪ್ರಶ್ನೆ ಬಗೆಹರಿದಿದೆ ಎಂದು ಲೋಕಸಭೆಯಲ್ಲಿ ಸ್ಪಷ್ಟಪಡಿಸಿದರು. ಆಂಧ್ರಪ್ರದೇಶದ ಗಡಿಯ ಬಗೆಗೆ ಸಮಸ್ಯೆಗಳಿದ್ದು, ಯಾವುದೇ ಭಾಷಾವಾರು ಪ್ರಾಂತ್ಯಗಳ ಗಡಿ ನಿರ್ಣಯಿಸಲು ಸಮಿತಿಯೊಂದನ್ನು ನೇಮಿಸುವ ಬಗ್ಗೆ ಗೃಹಮಂತ್ರಿ ಕೆ.ಎಸ್. ಕಾಟ್ಜೂ ಹೇಳಿಕೆ ನೀಡಿದರು.

ಆಗ ಆಂಧ್ರರಾಜ್ಯ ರಚನೆಗೆ ಸಮಸ್ಯಾತ್ಮಕವಾಗಿ ಕಾಡಿದ್ದು 'ತುಂಗಭದ್ರಾ ಯೋಜನೆ' ಆಗಿದೆ. ಮದರಾಸು ಮತ್ತು ಹೈದರಾಬಾದ್ ಸರ್ಕಾರಗಳು ಜಂಟಿಯಾಗಿ ಆರಂಭಿಸಿದ್ದ ಯೋಜನೆ ಆ ವೇಳೆಗೆ ಅಪೂರ್ಣವಾಗಿತ್ತು. ತುಂಗಭದ್ರಾ ಅಣೆಕಟ್ಟು ಬಳ್ಳಾರಿ ಜಿಲ್ಲೆಯಲ್ಲಿದ್ದು ಅದು ಮೈಸೂರಿಗೆ ಸೇರಿಹೋಯಿತು. ರಾಯಲಸೀಮೆಗೆ ಅನುಕೂಲವಾಗಬೇಕೆಂದು ಆರಂಭವಾದ ಯೋಜನೆಯ ಉಳಿದ ಕಾರ್ಯದ ಸಂಪೂರ್ಣಗೊಳಿಸುವಿಕೆಯ ಜವಾಬ್ದಾರಿ ಯಾವ ರಾಜ್ಯದೆನ್ನುವ ಪ್ರಶ್ನೆ ಎದುರಾಯಿತು. ''ತುಂಗಭದ್ರಾ ಅಣೆಕಟ್ಟಿನ ವ್ಯವಸ್ಥೆ ಅದರ ನೀರಾವರಿ ಸೌಲಭ್ಯದ ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮೈಸೂರು ಹಾಗೂ ಆಂಧ್ರರಾಜ್ಯಗಳು ಸೌಹಾರ್ದಯುತ ಒಪ್ಪಂದಕ್ಕೆ ಬರಲಾಗದಿದ್ದರೆ ಆ ಬಗ್ಗೆ ರಾಷ್ಟ್ರಪತಿಗಳೇ ಸೂಕ್ತ ತೀರ್ಮಾನ ಮಾಡುವರೆಂದು ಕೆ.ಎಸ್. ಕಾಡ್ಜು ಲೋಕಸಭೆಗೆ ತಿಳಿಸಿದ್ದಾರೆ. ಈ ಚರ್ಚೆಯಲ್ಲಿ ತೆಲುಗರ ಪರವಾಗಿ ಡಾ. ಲಂಕಾ ಸುಂದರಂ, ರಾಘವಾಚಾರಿ, ರಘುರಾಮಯ್ಯ ಮತ್ತಿತರರು, ಕನ್ನಡಿಗರ ಪರವಾಗಿ ಅಳವಂಡಿಯ ಶಿವಮೂರ್ತಿಸ್ವಾಮಿ, ಎಸ್. ನಿಜಲಿಂಗಪ್ಪ, ಟಿ. ಸುಬ್ರಹ್ಮಣ್ಯಂ ಸ್ವಾಮಿ, ರಾಮಾನಂದ ತೀರ್ಥ, ಎಂ.ಎಸ್. ಗುರುಪಾದ ಸ್ವಾಮಿ ಮೊದಲಾದವರು ಚರ್ಚಿಸಿದರು. ದಿನಾಂಕ ೦೧-೧೦-೧೯೫೩ರಂದು ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳು ಮೈಸೂರು ರಾಜ್ಯದೊಂದಿಗೆ ವಿಲೀನಗೊಂಡವು. ಫಜಲ್ ಅಲಿ ನೇತೃತ್ವದಲ್ಲಿಯ ರಾಜ್ಯ ಪುನರ್ವಿಂಗಡಣಾ ಆಯೋಗ ೧೦-೧೦-೧೯೫೫ ರಂದು ಕೇಂದ್ರಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಹಾಲಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಶಿರುಗುಪ್ಪ, ಹೊಸಪೇಟೆ ತಾಲ್ಲೂಕುಗಳು ಹಾಗೂ ತುಂಗಭದ್ರಾ ಅಣೆಕಟ್ಟು ಇರುವ ಮಲ್ಲಾಪುರ ಉಪ ತಾಲ್ಲೂಕಿನ ಸ್ವಲ್ಪ ಭಾಗಗಳು ಆಂಧ್ರಕ್ಕೆ ಸೇರ್ಪಡಿಸುವ ಶಿಫಾರಸ್ಸು ಕಂಡುಬಂದಿತು.''[೧೫]

ಈ ವರದಿಯ ವಿರುದ್ಧ ಜಾಗೃತಿಯ ಪ್ರಯತ್ನಗಳು ನಡೆಯಲು ಪ್ರಾರಂಭಿಸಿದವು. ಹರತಾಳ, ಸತ್ಯಾಗ್ರಹಗಳು ವಿವಿಧೆಡೆಗಳಲ್ಲಿ ನಡೆದವು. ೧೬-೧೦-೧೯೫೫ರ ಹುಬ್ಬಳ್ಳಿಯ ಅಖಂಡ ಕರ್ನಾಟಕ ರಾಜ್ಯನಿರ್ಮಾಣ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯು ಬಳ್ಳಾರಿಯ ಬಗೆಗೆ ಮಿಶ್ರ ವರದಿಯನ್ನೇ ಅಂತಿಮವೆಂದು ಸ್ವೀಕರಿಸುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಿತು.

ಬಳ್ಳಾರಿ ಜಿಲ್ಲಾ ಕ್ರಿಯಾ ಸಮಿತಿಯ ಅಧ್ಯಕ್ಷ ಜಿ. ಗಾದಿಲಿಂಗಪ್ಪ ವಿಲೀನಪೂರ್ವದ ಬಳ್ಳಾರಿ ಜಿಲ್ಲೆಯನ್ನು ಇಡಿಯಾಗಿ ಕರ್ನಾಟಕದಲ್ಲಿ ಉಳಿಸಲು ಬಳ್ಳಾರಿ ಜನ ಮಾತ್ರವಲ್ಲದೆ ಕನ್ನಡಿಗರೆಲ್ಲರೂ ಎಂಥ ತ್ಯಾಗಕ್ಕಾದರೂ ಸಿದ್ಧವಾಗುವಂತೆ ಕರೆ ನೀಡಿದರು. ಮೈಸೂರು ರಾಜ್ಯದ ಮುಖ್ಯಮಂತ್ರಿಗಳು ಬಳ್ಳಾರಿ ಜಿಲ್ಲೆಯು ಇಡಿಯಾಗಿ ಕರ್ನಾಟಕದಲ್ಲಿ ಉಳಿಯಬೇಕೆಂದು ಅಭಿಪ್ರಾಯಪಟ್ಟರು. ಕುವೆಂಪು, ಮಾಸ್ತಿ, ಅ.ನ.ಕೃ., ತ.ರಾ.ಸು. ಮೊದಲಾದ ಸಾಹಿತಿಗಳು ಆಯೋಗದ ವರದಿಯನ್ನು ತಿರಸ್ಕರಿಸಿರುವುದು ಗಮನಾರ್ಹ. ಇಲ್ಲಿ ಕೇವಲ ಭಾಷಾವಾರು ಪ್ರಾಂತ್ಯದ ಸಮಸ್ಯೆ ಅಡಗಿರದೆ ತುಂಗಭದ್ರಾ ನದಿಯೊಂದಿಗಿನ ಬಾಂಧವ್ಯದ ವಿವಿಧ ನೆಲೆಗಳು ಕೆಲಸ ಮಾಡಿದವು.

'ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು' ಬಳ್ಳಾರಿ ಜಿಲ್ಲೆಯ ಬಗೆಗೆ ಮಿಶ್ರ ತೀರ್ಪನ್ನು ಒಪ್ಪಿ ಆಶ್ವಾಸನೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ೧೬-೧೦-೧೯೫೫ ರವರೆಗೆ ಗಡುವು ನೀಡಿತ್ತು. ಈ

ಸಂಬಂಧವಾಗಿ ನವ್ಹೆಂಬರ್ ೧೦ನೇ ತಾರೀಖು ತುಂಗಭದ್ರಾ ತೀರದ ಹಂಪಿಯಲ್ಲಿ ಸಭೆ ಸೇರಿ ಚಳುವಳಿಯ ಮುಂದಿನ ಹೆಜ್ಜೆಯ ಬಗೆಗೆ ಚರ್ಚಿಸಿತು. ತುಂಗಭದ್ರಾ ನದಿಯು ಅಖಂಡ ಕರ್ನಾಟಕ ಸೃಷ್ಟಿಗೆ ಸಹಾಯಕವಾಗುವ ಬಗೆ ಕುತೂಹಲಕರವಾದುದು. ತುಂಗಭದ್ರಾ ಹೊಸ ಸ್ವರೂಪದ ಸತ್ಯಾಗ್ರಹಕ್ಕೆ ಕಾರಣವಾದ ಅಂಶವು ದಾಖಲಾರ್ಹವಾದುದು. ಈ ಸಭೆಯ ತೀರ್ಮಾನ ತುಂಗಭದ್ರಾ ನದಿ ಸಂಸ್ಕೃತಿಯೊಂದರಲ್ಲಿ ಪಡೆದುಕೊಂಡಿರುವ ಮಹತ್ವವನ್ನು ಸೂಚಿಸುತ್ತದೆ. ತುಂಗಭದ್ರಾ ಜಲಾಶಯವು ಹೊಸದಾಗಿ ಸೃಷ್ಟಿತವಾದ ಸಮಸ್ಯೆಗೆ ಕಾರಣವಾದ್ದರಿಂದ, ತುಂಗಭದ್ರಾ ಬೋರ್ಡಿಗೆ ಮೊದಲೇ ಸೂಚನೆ ನೀಡಿ ಮೈಸೂರು ರಾಜ್ಯದಲ್ಲಿ ಉಳಿಯುವ ಬಳ್ಳಾರಿ ಜಿಲ್ಲೆಯ ಜನರು ಆಜ್ಞೆಯ ಉಲ್ಲಂಘನೆ ಮಾಡಿ ತಮ್ಮ ಪ್ರದೇಶಕ್ಕೆ ನೀರನ್ನು ಬಳಸಿಕೊಳ್ಳುವ ಚಳುವಳಿ ಮಾಡಬೇಕು. ಕಾನೂನು ಭಂಗ, ಜೈಲ್‌ಭರೋ, ಕಾರ್ಯಕ್ರಮಗಳ ಅರಿವಿನೊಂದಿಗೆ ತೆಗೆದುಕೊಳ್ಳುವ ತೀರ್ಮಾನ ತುಂಗಭದ್ರೆಯ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಈ ಹೋರಾಟದಲ್ಲಿ ಮಹಿಳೆಯರೂ ಪಾಲ್ಗೊಂಡಿರುವುದೂ ಗಮನಾರ್ಹವಾಗಿದೆ.

೧೬-೧೧-೧೯೫೫ರ ಬೆಳಿಗ್ಗೆ ೯ ಗಂಟೆಗೆ ಶಿರುಗುಪ್ಪ ತಾಲ್ಲೂಕು ಕೊಂಚಗೇರಿಯಲ್ಲಿ ಈ ಐತಿಹಾಸಿಕ 'ನೀರಿನ ಸತ್ಯಾಗ್ರಹ' ಪ್ರಾರಂಭವಾಯಿತು. ಸುಮಾರು ೫೮ ಜನರ ತಂಡದ ನಾಯಕರಾಗಿ ಯರ್ರಿತಾತನವರು ಭಾಗವಹಿಸಿದ್ದರು. ಬ್ಯಾಂಡು, ಕೊಂಬು, ಕಹಳೆ ಮುಂತಾದ ವಾದ್ಯಗಳೊಡನೆ ತ್ರಿವರ್ಣ' ಧ್ವಜ ಹಿಡಿದು ಮೆರವಣಿಗೆಯಲ್ಲಿ ಬಂದ ಸತ್ಯಾಗ್ರಹಿಗಳನ್ನು ದಾರಿಯುದ್ದಕ್ಕೂ ಹೆಣ್ಣುಮಕ್ಕಳು ಆರತಿ ಎತ್ತಿ ಬೀಳ್ಕೊಡುತ್ತಿದ್ದರು. ಈ ಸತ್ಯಾಗ್ರಹದ ಸ್ವರೂಪವು ಗಮನಾರ್ಹವಾದುದು.

ಕೋ. ಚೆನ್ನಬಸಪ್ಪನವರು ಬಳ್ಳಾರಿಯನ್ನು ಕರ್ನಾಟಕದಲ್ಲಿಯೇ ಉಳಿಸಿಕೊಳ್ಳಲು ರೂಪುಗೊಂಡ ತುಂಗಭದ್ರಾ ಹೋರಾಟ ಸಮಿತಿಯಲ್ಲಿದ್ದರು. ಅವರು ಹೋರಾಟ ಸಮಿತಿಯ ಕಾರ್ಯವನ್ನು ಹೀಗೆ ವಿವರಿಸುತ್ತಾರೆ- "ಪ್ರತಿದಿನ ನೂರಾಒಂದು ಜನ ಸತ್ಯಾಗ್ರಹ ಮಾಡುವುದು. ಪ್ರತಿಯೊಬ್ಬರೂ ತುಂಗಭದ್ರಾ ಕಾಲುವೆಯಿಂದ ಒಂದೊಂದು ಬಿಂದಿಗೆ ನೀರನ್ನು ತುಂಬಿಕೊಂಡು ಕರ್ನಾಟಕದ ಜಮೀನಿಗೆ ಹಾಕುವುದು, ಸತ್ಯಾಗ್ರಹದಲ್ಲಿ ಪ್ರತಿದಿನ ಪಾಲ್ಗೊಳ್ಳುವ ನೂರಾಒಂದು ಜನರ ಹೆಸರನ್ನು ಹಿಂದಿನ ದಿನವೇ ಕಲೆಕ್ಟರಿಗೆ ಕಳುಹಿಸಲಾಗುತ್ತಿತ್ತು..."[೧೬] ಎನ್ನುತ್ತಾರೆ.

ತುಂಗಭದ್ರಾ ನದಿಯು ಜನಸಾಮಾನ್ಯರ ಸಾರಿಗೆ ಸಂಪರ್ಕಕ್ಕೆ ಅನುಕೂಲಕರವಾಗಿ ಪರಿಣಮಿಸಿರುವುದನ್ನು ನಾವು ಚರಿತ್ರೆಯಲ್ಲಿ ಕಾಣುತ್ತೇವೆ. ಸುಮಾರು ೬೦ ದಶಕಗಳವರೆಗೆ ಬಳ್ಳಾರಿ ಜಿಲ್ಲೆಯ ಪಶ್ಚಿಮ ಮತ್ತು ಉತ್ತರಕ್ಕೆ ಇರುವ ತುಂಗಭದ್ರಾ ನದಿಗೆ ಸೇತುವೆಗಳಿರಲಿಲ್ಲ, ಅಲ್ಲಲ್ಲಿ ಒಡ್ಡುಗಳನ್ನು ಕಟ್ಟಲಾಗಿದ್ದು, ಹರಿಗೋಲುಗಳ ಮೂಲಕ ನದಿಯನ್ನು ದಾಟಬೇಕಾಗಿತ್ತು. ಹರಿಹರದಲ್ಲಿ ಪೂನಾ-ಬೆಂಗಳೂರು ರಸ್ತೆಗೆ ಸೇತುವೆಯನ್ನು ನಿರ್ಮಿಸಲಾಯಿತು. ೧೯೪೫ರಲ್ಲಿ ತುಂಗಭದ್ರಾ ಯೋಜನೆಯ ಅಣೆಕಟ್ಟಿನ ಪ್ರದೇಶದಲ್ಲಿ ತಾತ್ಕಾಲಿಕ ಸೇತುವೆಯೊಂದನ್ನು ಕಟ್ಟಲಾಯಿತು. ಅದು ಆಗಿನ ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳ

ಒಳಗಿನ ಸಾರಿಗೆ ಸಂಪರ್ಕವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಯಿತು. ಕಂಪ್ಲಿಯಲ್ಲಿ ಸಕ್ಕರೆ ಕಾರ್ಖಾನೆ ಆರಂಭವಾದಾಗ ನದಿಯಾಚೆಗಿನ ಕಬ್ಬನ್ನು ಸಾಗಿಸಲು ಅನುಕೂಲವಾಗುವಂತೆ ಸೇತುವೆಯನ್ನು ನಿರ್ಮಿಸಲಾಯಿತು. ಕಂಪ್ಲಿಯಿಂದ ಮುಂದಕ್ಕೆ ಶಿರುಗುಪ್ಪದಲ್ಲಿ ತುಂಗಭದ್ರಾ ನದಿಗೆ ಸೇತುವೆಯನ್ನು ಕಟ್ಟಲಾಯಿತು. ೧೩ನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ತುಂಗಭದ್ರಾ ಅಣೆಕಟ್ಟಿನ ಕೆಳಗಡೆ ದೊಡ್ಡದಾದ ಸೇತುವೆಯೊಂದನ್ನು ನಿರ್ಮಿಸಲಾಗಿದೆ. ಇವುಗಳಲ್ಲದೆ ರಸ್ತೆಗಳಿಗೆ ಅಡ್ಡಲಾಗಿ ಕಾಲುವೆಗಳಿಗೆ ಮುಖ್ಯ ಮಾರ್ಗಗಳಲ್ಲಿ ಮೋರಿಗಳನ್ನು, ಸಣ್ಣಪುಟ್ಟ ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ. ನಾಡಿನ ಜೀವನಾಡಿಯಾದ ತುಂಗಭದ್ರೆಯ ಜೊತೆಗಿನ ಸಂಬಂಧವು ಸಾರಿಗೆ ಸಂಪರ್ಕದ ಬೆಳವಣಿಗೆಯಲ್ಲೂ ತನ್ನದೇ ಆದ ವಿಶಿಷ್ಟ ಪಾತ್ರವಹಿಸಿದೆ.

ತುಂಗಭದ್ರಾ ನದಿಯು ಮೀನುಗಾರರು ಹಾಗೂ ಉದ್ಯಮಕ್ಕೆ ಜೀವನಾಧಾರವಾಗಿದೆ. ತುಂಗಭದ್ರಾ ನದಿಯು ಇತಿಹಾಸದುದ್ದಕ್ಕೂ ಮಹತ್ವದ ಭೂಮಿಕೆ ನಿಭಾಯಿಸುತ್ತಾ ಬಂದಿದೆ. ಅದು ಜೀವನದಿಯಾಗಿ ಸಂಸ್ಕೃತಿಯ ವಿವಿಧ ಎಳೆಗಳ ಮೇಲೆ ಅದರಲ್ಲೂ ವಿಶೇಷವಾಗಿ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಜನಜೀವನದ ಅವಿನಾಭಾವ ಸಂಬಂಧಕ್ಕೂ ಈ ನದಿಯು ಸಾಕ್ಷಿಯಾಗಿದೆ. ಈ ನದಿ ಪರಿಸರದ ಉಪಯೋಗವನ್ನು ಬಳಕೆಯ ಮಾತಿನಲ್ಲಿರುವ "ಗಂಗಾಸ್ನಾನಂ ತುಂಗಾಸ್ನಾನಂ" ಎಂಬ ನಾಣ್ಣುಡಿಯು ರೂಪಾತ್ಮಕವಾಗಿ ಅಭಿವ್ಯಕ್ತಿಸುತ್ತದೆ.

ಟಿಪ್ಪಣಿಗಳು

೧. ಸಂ. ಹಾ.ಮಾ.ನಾಯಕ, **ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ**, ಪ್ರಸಾರಾಂಗ, ಕ.ಅ.ಸಂ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯, ಪು. ೭೩೯.

೨. ....ಅದೇ......

೩. **ತುಂಗ ಮತ್ತು ಭದ್ರಾ ನದಿಗಳ ಹುಟ್ಟು ಹಾಗೂ ಜಲಚರಗಳ ಕುರಿತ ಅಧ್ಯಯನ ವರದಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೮.

೪. ....ಅದೇ...... ಪು.೧೯

೫. ....ಅದೇ....... ಪು.೨೦

೬. ಮೂಲ : ರಾಬರ್ಟ್ ಸಿವೆಲ್, ಅನು: ಸದಾನಂದ ಕನವಳ್ಳಿ, **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨, ಪು. ೫.

೭. Buchanan, **Journey from Madras through Countries of Mysore, Canara and Malabar**, Asain Publication, Madras, Pp.395.

೮. .... do........., Pp.326.

೯. ಲೇ : ಶ್ರೀಗುರು ಓಂ ಸಿದ್ಧಲಿಂಗೇಶ್ವರ ಸ್ವಾಮಿಗಳು, **ಶ್ರೀ ಪಂಪಾಮಹಾತ್ಮೆ**, ಹೊಳಗುಂದಿ, ಪ್ರಭು ಪ್ರಿಂಟರ್ಸ್, ಗದಗ, ೧೯೮೩, ಪು.೨೮.

೧೦. **ತುಂಗ ಮತ್ತು ಭದ್ರಾ ನದಿಗಳ ಹುಟ್ಟು, ಪಾತ್ರ ಹಾಗೂ ಜಲಚರಗಳ ಕುರಿತ ಅಧ್ಯಯನ ವರದಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೪.

೧೧. ಲೇ : ಟಿ. ಗಿರಿಜಾ, **ಶ್ರೀ ಕುರುವತ್ತಿ** ಬಸವೇಶ್ವರ ಕ್ಷೇತ್ರದರ್ಶನ, ಬಸವಮಿತ್ರ ಬಳಗ, ದಾವಣಗೆರೆ, ೨೦೦೦, ಪು.೪೦.

೧೨. ಲೇ : ಹೆಚ್.ಎಸ್. ಗೋಪಾಲರಾವ್, **ಕರ್ನಾಟಕ ಏಕೀಕರಣ ಇತಿಹಾಸ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬, ಪು.೧೪೭.

೧೩. ಲೇ : ಟಿ. ಗಿರಿಜಾ, **ಶ್ರೀ ಕುರುವತ್ತಿ** ಬಸವೇಶ್ವರ ಕ್ಷೇತ್ರದರ್ಶನ, ಬಸವಮಿತ್ರ ಬಳಗ, ದಾವಣಗೆರೆ, ೨೦೦೦, ಪು.೬.

೧೪. ಲೇ : ಹಾವನೂರು ಶ್ರೀನಿವಾಸ, **ತುಂಗಭದ್ರೆ ವರವೋ, ಶಾಪವೋ**, ಇತಿಹಾಸ ದರ್ಶನ, ಸಂ.೧೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೮

೧೫. **ತುಂಗ ಮತ್ತು ಭದ್ರಾ ನದಿಗಳ ಹುಟ್ಟು, ಪಾತ್ರ ಹಾಗೂ ಜಲಚರಗಳ ಕುರಿತ ಅಧ್ಯಯನ ವರದಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೬.

೧೬. ಲೇ : ಹೆಚ್.ಎಸ್. ಗೋಪಾಲರಾವ್, **ಕರ್ನಾಟಕ ಏಕೀಕರಣ ಇತಿಹಾಸ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬, ಪು.೩೧೯.

* * * * *

ಅಧ್ಯಾಯ ೪

ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು

ಅಧ್ಯಾಯ ನಾಲ್ಕು

ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು

ನದಿ ಪ್ರದೇಶದಲ್ಲಿ ಧಾರ್ಮಿಕ ಕ್ಷೇತ್ರಗಳ ಉದಯ ಪವಾಡವೇನೂ ಅಲ್ಲ, ಸಹಜವಾದದ್ದು. ನಮ್ಮ ಪ್ರಾಚೀನ ನಾಗರಿಕತೆಗಳು ಉದಯವಾದದ್ದು ನದಿಬಯಲಿನಲ್ಲೆ. ಮುಖ್ಯವಾಗಿ ನದಿ ಬಯಲಲ್ಲಿ ಜನವಸತಿ ಪ್ರಾರಂಭವಾದ ನಂತರ ತಮ್ಮ ನಂಬಿಕೆಯ ದೈವವೂ ಪ್ರತಿಷ್ಠಾಪನೆ ಆಗುತ್ತದೆ. ನದಿ ಗಂಗಾಮಾತೆ ಎಂಬ ದೈವೀ ಭಾವವು ದೈವಗಳ ಉದಯಕ್ಕೆ ಕಾರಣವಾಗಲು ಸಾಧ್ಯವಿದೆ. ನದಿ ಬಯಲ ಧಾರ್ಮಿಕ ಕ್ಷೇತ್ರಗಳಿಗೆ ಚಾರಿತ್ರಿಕವಾದ ಮಹತ್ವವಿದೆ. ಅದು ಪಶುಪಾಲನ ಹಂತವನ್ನು, ಕೃಷಿ ಹಂತವನ್ನು ಜೊತೆಯಾಗಿಯೇ ಸಂಕೇತಿಸುತ್ತದೆ.

ತುಂಗಭದ್ರಾ ನದಿಯು ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಇಂದಿನವರೆಗೆ ವಿವಿಧ ನೆಲೆಗಳ ಮೂಲಕ ಜನಸಾಮಾನ್ಯರಿಗೆ ಬಳಕೆಯಾಗಿದೆ. ಈ ತುಂಗಭದ್ರಾ ನದಿಯ ದಂಡೆಯ ಮೇಲೆ ಅನೇಕ ಧಾರ್ಮಿಕ ಕ್ಷೇತ್ರಗಳಿವೆ. ಶೈವ, ವೈಷ್ಣವ, ಶಾಕ್ತೇಯ ಇತರ ಧರ್ಮಗಳ ಪ್ರಸಾರ ಕೇಂದ್ರಗಳಾಗಿವೆ. ಸಾಕಷ್ಟು ಜನ ಭಕ್ತರನ್ನು ಹಾಗೂ ಯಾತ್ರಿಕರನ್ನು ಹೊಂದಿ ಜನಪ್ರಿಯತೆಯನ್ನು ಪಡೆದಿದೆ.

ತುಂಗಾ-ಭದ್ರ ನದಿಗಳು ಪ್ರಾರಂಭದ ಗಂಗಾ ಮೂಲದಲ್ಲಿ ಹುಟ್ಟಿ 'ತುಂಗಭದ್ರಾ'ವಾಗಿದೆ. ಈ ಎರಡೂ ನದಿಗಳು 'ಕೂಡಲಿ'ಯಲ್ಲಿ ಸಮಾಗಮಗೊಂಡು ಮಾನವ ಸಂಸ್ಕೃತಿಯ ವಿಕಾಸದಲ್ಲಿ ಮಹತ್ವದ ಪಾತ್ರವಹಿಸಿದೆ. ಪ್ರಸ್ತುತ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಈ ನದಿ ಪರಿಸರದಲ್ಲಿ ಬರುವ ಶೈವ, ವೈಷ್ಣವ, ಶಾಕ್ತೇಯ, ಧಾರ್ಮಿಕ ಕ್ಷೇತ್ರಗಳನ್ನು ಅಧ್ಯಯನಕ್ಕೆ ತಕ್ಕಂತೆ ವರ್ಗೀಕರಿಸಿಕೊಳ್ಳಲಾಗಿದೆ.

ಧಾರ್ಮಿಕ ಕ್ಷೇತ್ರಗಳ ಸಂಕ್ಷಿಪ್ತ ಪರಿಚಯ

೧. ಶೈವ

ಅ. ಭಲ್ಲೇಶ್ವರ

ತುಂಗಭದ್ರಾ ನದಿ ಪರಿಸರದಲ್ಲಿ ಬರುವ ಶೈವ ಧಾರ್ಮಿಕ ಕ್ಷೇತ್ರಗಳಲ್ಲಿ ಬಲ್ಲೇಶ್ವರವೂ ಒಂದಾಗಿದೆ. ಈ ಕ್ಷೇತ್ರ ಶಿವಮೊಗ್ಗ ಜಿಲ್ಲೆ ಹೊನ್ನಾಳಿ ತಾಲ್ಲೂಕಿನಲ್ಲಿದೆ. 'ಭಲ್ಲಲಿಂಗೇಶ್ವರ' ಆರಾಧ್ಯ ದೈವವಾಗಿದ್ದು, ಪ್ರಾಚೀನ ದೇವಾಲಯವನ್ನು ಒಳಗೊಂಡಿದೆ. ಈ ದೇವಾಲಯದ ವಾಸ್ತುಶಿಲ್ಪ ಇತ್ಯಾದಿ ಅಂಶಗಳನ್ನು

ಗಮನಿಸಿದಾಗ ಹೊಯ್ಸಳರ ಶೈಲಿಯು ತಟ್ಟನೇ ಗೋಚರವಾಗುತ್ತದೆ. ಈ ಭಲ್ಲೇಶ್ವರ ಶೈವ ಧರ್ಮದ ಕೇಂದ್ರವಾಗಿದೆ.

ಅ. ಉಕ್ಕಡಗಾತ್ರಿ

ಉಕ್ಕಡಗಾತ್ರಿಯು ಹರಿಹರ ತಾಲ್ಲೂಕಿನ ಪ್ರಮುಖ ಶೈವ ಧಾರ್ಮಿಕ ಕೇಂದ್ರವಾಗಿದ್ದು, ತುಂಗಭದ್ರಾ ನದಿಯ ಎಡದಂಡೆಯ ಮೇಲಿದೆ. "ಉಕ್ಕಡ ಎಂದರೆ ಊರಿನ ಅಥವಾ ನಗರದ ಗುಡಿ, ಮುಂಗಾವಲು, ಪಡೆಯ ನೆಲೆ, ಸುಂಕದಕಟ್ಟೆಯ ತೆರಿಗೆಯನ್ನು ವಸೂಲಿ ಮಾಡುವ ಸ್ಥಳ ಎಂಬರ್ಥಗಳಿವೆ. ಊರು+ಕಡೆ>ಉರ್ಕಡ>ಉಕ್ಕಡ" ವಾಗಿರಬೇಕು.

"ಉಕ್ಕಡಗಾತ್ರಿ 'ಕರಿಬಸವೇಶ್ವರ' ಅಥವಾ 'ಅಜ್ಜಯ್ಯ' ಎಂಬ ಮಹಾನ್‌ಯೋಗಿ, ತ್ಯಾಗ ಸಂತನ ಗದ್ದಿಗೆಯಿದೆ. ಕರ್ನಾಟಕದ ಮೂಲೆ ಮೂಲೆಯಿಂದಲೂ ಉಕ್ಕಡಗಾತ್ರಿಯು ಭಕ್ತರನ್ನು ಆಕರ್ಷಿಸಿದ್ದು ಅದರಲ್ಲಿಯೂ ಬಯಲುಸೀಮೆಯ ಭಕ್ತಾಧಿಗಳ ಸಂಖ್ಯೆ ಈ ಕ್ಷೇತ್ರಕ್ಕೆ ಹೆಚ್ಚಾಗಿ ಭಕ್ತಸಮುದಾಯದಲ್ಲಿ ಹೋಗುತ್ತಾರೆ. ಬೇಡ ಜನಾಂಗದವರ ಸಂಖ್ಯೆ ಹೆಚ್ಚಾಗಿದೆ."[೬] ಹಬ್ಬ-ಜಾತ್ರೆ, ಅಮವಾಸೆ, ಹುಣ್ಣಿಮೆ ಇತರ ವಿಶೇಷ ದಿನಗಳಲ್ಲಿ ದೆವ್ವಗಳು ಬರುವ ಮತ್ತು ಹೋಗುವ ದೃಶ್ಯಗಳನ್ನು ಕಾಣಬಹುದಾಗಿದೆ. ಹಾಗಾಗಿ ದೆವ್ವಗಳನ್ನು ಕುರಿತ ಮನೋವಿಶ್ಲೇಷಣೆಯ ಅಧ್ಯಯನಕ್ಕೆ ಮನಶಾಸ್ತ್ರಜ್ಞರಿಗೆ ತುಂಬ ಸೂಕ್ತ ಸ್ಥಳ ಇದಾಗಿದೆ.

ಬಡವರು, ದೀನ ದಲಿತರು ದೆವ್ವ, ಪೀಡೆ, ಪಿಶಾಚಿ ಮೊದಲಾದ ದುಷ್ಟಶಕ್ತಿಗಳಿಗೆ ಸಿಕ್ಕಿ ನೊಂದ ಜನರಿಗೆ ಅವರ ಬಾಳು ಗೋಳಾಗದಂತೆ, ಬಾಳಿಗೆ ಬೆಳಕು ನೀಡಿದ ಅಜ್ಜಯ್ಯನೇ ಶ್ರೀ ಕರಿಬಸವೇಶ್ವರರು. ಉಕ್ಕಡಗಾತ್ರಿಯಲ್ಲಿ ವರ್ಗ, ವರ್ಣ, ವಯಸ್ಸು, ವ್ಯಕ್ತಿ, ವ್ಯವಹಾರಗಳಿಗೆ ಬೇಧವಿಲ್ಲ. ಇಲ್ಲಿ ಭಕ್ತಿಯೊಂದೇ ಪ್ರಮುಖವಾಗಿದೆ.

ಕರಿಬಸವೇಶ್ವರ ಎಂದರೆ ಜನಸಾಮಾನ್ಯರಲ್ಲಿ ದೆವ್ವಗಳನ್ನು ಬಿಡಿಸುವ ದೇವರೆಂದು ನಂಬಲಾಗಿದೆ. ಶಿವರಾತ್ರಿಯಲ್ಲಿ ಇಲ್ಲಿನ ವೈಭವ ವರ್ಣಿಸಲಸಾಧ್ಯ. ಸಹಸ್ರಾರು ಸಂಖ್ಯೆಯ ಭಕ್ತರು ತುಂಗಭದ್ರೆಯಲ್ಲಿ ಸ್ನಾನಮಾಡಿ ಭಕ್ತಿಭಾವದಿಂದ ಭಜನೆ, ಹಾಡು, ಅರ್ಚನೆ - ಹೀಗೆ ಸಂಗೀತದ ಸುರಿಮಳೆಯೇ ಕರುಣಾನಂದವನ್ನುಂಟು ಮಾಡುತ್ತದೆ. ತುಂಗಭದ್ರಾ ನದಿಯು ಸಾಮಾನ್ಯವಾಗಿ ಹರಿದರೆ ಸಾಕು. ಈ ದೇವಸ್ಥಾನದ ಮೆಟ್ಟಿಲಿಗೆ ನೀರು ಬಂದು ತಾಕುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಇ. ರಾಜನಹಳ್ಳಿ

ರಾಜನಹಳ್ಳಿಯು ಪ್ರಾಚೀನ ಕಾಲದಿಂದಲೂ ಚಾರಿತ್ರಿಕ ಹಾಗೂ ಧಾರ್ಮಿಕ ಇತಿಹಾಸವನ್ನು ಹೊಂದಿದೆ. ತುಂಗಭದ್ರಾ ನದಿ ದಂಡೆಯಲ್ಲಿರುವ ಈ ಗ್ರಾಮವು ಸುಮಾರು ೭೦೦ಕ್ಕೂ ಹೆಚ್ಚು ಮನೆಗಳನ್ನು ಹೊಂದಿದೆ. ಹರಿಹರಕ್ಕೆ ಅತೀ ಸಮೀಪದಲ್ಲಿದ್ದು ಆಧುನಿಕ ಧಾರ್ಮಿಕ ಕ್ಷೇತ್ರಗಳಲ್ಲೊಂದು ಎಂಬ ಖ್ಯಾತಿಯನ್ನು

ಪಡೆದಿದೆ. ಚಾರಿತ್ರಿಕವಾಗಿ ರಾಜನಹಳ್ಳಿಯು ವಿವಿಧ ಅರಸುಮನೆತನ ಆಳ್ವಿಕೆಗೆ ಒಳಪಟ್ಟು ಆ ಮನೆತನಗಳ ಏಳುಬೀಳುಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಮೈಸೂರು ರಾಜರ ಪ್ರಭಾವದಿಂದ 'ರಾಜನಹಳ್ಳಿ' ನಿರ್ಮಾಣವಾಗಿರಬೇಕು. ಈ ರಾಜನಹಳ್ಳಿಯನ್ನು ಪ್ರವೇಶಿಸಿದಾಗ ಪ್ರಾಚೀನ ಅವಶೇಷಗಳಾದ ಮಾಸ್ತಿಗಲ್ಲು, ವೀರಗಲ್ಲು, ಶಿಲಾಶಾಸನಗಳು, ಬಸವೇಶ್ವರ ದೇವಾಲಯ, ಕೋಟೆ-ಕಂದಕಗಳು ಮೊದಲಾದವು ಕಂಡುಬರುತ್ತವೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ರಾಜನಹಳ್ಳಿಯು ಪ್ರಸಿದ್ಧ ಶೈವ ಕೇಂದ್ರವಾಗಿದೆ.

ರಾಜನಹಳ್ಳಿಗೆ ಧಾರ್ಮಿಕ, ಆಧ್ಯಾತ್ಮಿಕವಾಗಿ ವಿಶೇಷವಾದ ಮೆರುಗು ಬಂದಿರುವುದು ೧೯-೦೨-೧೯೯೮ ರಂದು ಶ್ರೀ ವಾಲ್ಮೀಕಿ ಸಂಸ್ಥಾನ ಸ್ಥಾಪನೆಯಿಂದ. ಬೆಂಗಳೂರಿನ ಕೈಲಾಸ ಆಶ್ರಮ ಮಠದ ತಿರುಚ್ಚಿ ಮಹಾಸ್ವಾಮಿಗಳಿಂದ ಸನ್ಯಾಸ ದೀಕ್ಷೆ ಪಡೆದ ಪರಮ ಪೂಜ್ಯ ಜಗದ್ಗುರು ಶ್ರೀ ಪುಣ್ಯಾನಂದಪುರಿ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವ ನಡೆದು ಐತಿಹಾಸಿಕ ದಾಖಲೆಯಾಗಿದೆ. ಶ್ರೀ ಪುಣ್ಯಾನಂದಪುರಿ ಜಗದ್ಗುರುಗಳು ಕನ್ನಡ, ಇಂಗ್ಲೀಷ್, ಸಂಸ್ಕೃತ ಬಹುಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದ್ದಾರೆ.

ರಾಜನಹಳ್ಳಿಯ ಗುರುಪೀಠವು ಭವಿಷ್ಯದಲ್ಲಿ ಮಾದರಿಯ ಗುರುಪೀಠವಾಗುವುದರಲ್ಲಿ ಸಂದೇಹವೇ ಇಲ್ಲ. ಅನೇಕ ಶಾಲಾ-ಕಾಲೇಜು, ಸಂಘ-ಸಂಸ್ಥೆಗಳನ್ನು ಸಾರ್ವತ್ರಿಕಗೊಳಿಸಿ ಅಲಕ್ಷಿಸಲ್ಪಟ್ಟವರ ಏಳಿಗೆಗೆ ಮಾರ್ಗೋಪಾಯವನ್ನು ತೋರಿಸುವಲ್ಲಿ ಯಶಸ್ವಿಯಾಗಿದ್ದಾರೆ. ವಾಲ್ಮೀಕಿ ಜನಾಂಗದ ಗುರುವರ್ಯರಾದ ಸ್ವಾಮೀಜಿಯವರು ದಾವಣಗೆರೆ ಹತ್ತಿರದ ಕರೂರು ಬಳಿ ಕಾವಲುಗಾರನಿಲ್ಲದ ರೈಲುಗೇಟನ್ನು ದಾಟುತ್ತಿದ್ದಾಗ ಆಕಸ್ಮಿಕವಾಗಿ ರೈಲು ಬಂದು ಶ್ರೀಗಳ ಕಾರಿಗೆ ಅಪ್ಪಳಿಸಿದ ಕಾರಣವಾಗಿ ದಿನಾಂಕ ೦೩-೦೪-೨೦೦೭ರ ಮಧ್ಯಾಹ್ನ ೧-೩೦ ರಲ್ಲಿ ಗುರುಪೀಠದ ಶ್ರೀ ಪುಣ್ಯಾನಂದ ಮಹಾಸ್ವಾಮೀಜಿಯವರು ಸ್ಥಳದಲ್ಲಿಯೇ ಲಿಂಗೈಕ್ಯರಾಗಿದ್ದಾರೆ. ಈ ಘಟನೆಯನ್ನು ಕೇಳಿದ ನಾಡಿನ ಜನತೆಯು ಹಾಗೂ ನಾಯಕ ಜನಾಂಗಕ್ಕೆ ತುಂಬಲಾರದ ನಷ್ಟವಾಯಿತು. ಇಡೀ ನಾಡಿನ ಜನತೆ ಶೋಕಸಾಗರದಲ್ಲಿ ಮುಳುಗಿದ್ದರು. ಚಾರಿತ್ರಿಕವಾಗಿ ಈ ಪೀಠವು ವಾಲ್ಮೀಕಿ ಸಮುದಾಯದಲ್ಲಿ ಹೊಸ ಬಗೆಯ ಸಂಚಲನವನ್ನು ಉಂಟು ಮಾಡಿದೆ. ಒಂದು ಸಮುದಾಯದ ಚರಿತ್ರೆಯನ್ನು ಕಟ್ಟುವ ಪ್ರಜ್ಞೆಯು ಇಂತಹ ಪೀಠದಿಂದ ಸಾಧ್ಯವಾಗುತ್ತಿದೆ.

ಈ. ಹರಿಹರ

ದಾವಣಗೆರೆ ಜಿಲ್ಲೆಯ ಹರಿಹರವು ತುಂಗಭದ್ರಾ ನದಿಯ ಬಲದಂಡೆಯ ಮೇಲಿರುವ ಪ್ರಸಿದ್ಧ ಶೈವಕೇಂದ್ರವಾಗಿದೆ. ಐತಿಹ್ಯದ ಪ್ರಕಾರ "ಹರಿಹರವನ್ನು 'ಗುಹಾರಣ ಕ್ಷೇತ್ರ'ವೆಂದು ಕರೆಯುತ್ತಿದ್ದು, 'ಗುಹಾ' ಎಂಬ ಅಸುರನನ್ನು ಸಂಹರಿಸಲು 'ಹರಿ' ಮತ್ತು 'ಹರ'ರು ಒಂದಾಗಿ ರೂಪು ತಳೆದಿರುವರೆಂಬುದಾಗಿ ಇಲ್ಲಿಗೆ ಸಂಬಂಧಿಸಿದ ಐತಿಹ್ಯದಿಂದ ತಿಳಿದುಬರುತ್ತದೆ."[೫] ಹರಿಹರೇಶ್ವರ ದೇವಾಲಯವು ಸುಂದರವಾಗಿದ್ದು ಹೊಯ್ಸಳರ ಶೈಲಿಯಲ್ಲಿದೆ. ೧೨೨೩ ರಲ್ಲಿ ಹೊಯ್ಸಳ ಅರಸ ಎರಡನೇ ನರಸಿಂಹನ ಮಂತ್ರಿ ಪೊಲಾಳ್ವ ಈ ದೇವಾಲಯವನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಈ ಹರಿಹರೇಶ್ವರ ಸ್ವಾಮಿಯು ಸಾವಿರಾರು

ವರ್ಷಗಳಿಂದ ಭಕ್ತರನ್ನು ಅನುಗ್ರಹಿಸಿ ಅಭಯ ನೀಡಿದ್ದಾನೆ. ಪುಣ್ಯಕ್ಷೇತ್ರಗಳಲ್ಲಿ ಒಂದಾದ ಹರಿಹರದಲ್ಲಿ ೫೦ಕ್ಕೂ ಹೆಚ್ಚು ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳು ದೊರಕುತ್ತವೆ. ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಕಳಚೂರಿಗಳು, ಹೊಯ್ಸಳರು, ವಿಜಯನಗರದ ಅರಸರ ಕಾಲದಲ್ಲಿ ಹರಿಹರವು ಶೈವಧರ್ಮದ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿತ್ತು.

ಉ. ಭೈಕುಟ ಕ್ಷೇತ್ರ

ಹರಿಹರ ಕ್ಷೇತ್ರದ ದಕ್ಷಿಣಕ್ಕೆ ತುಂಗಭದ್ರಾ ನದಿ ತೀರದಲ್ಲಿ 'ಭೈರಂಪಾದ' ಎಂಬ ಪುಣ್ಯಸ್ಥಳವಿದೆ. ಇದನ್ನು 'ಬೈಕುಟಕ್ಷೇತ್ರ' ಎಂದು ಕರೆಯುತ್ತಾರೆ. ಇಲ್ಲಿ ಪುಲಸ್ತ್ಯ ಋಷಿಗಳು ತಪಸ್ಸನ್ನಾಚರಿಸಿ ಮುಕ್ತಿ ಪಡೆದರೆಂಬ ನಂಬಿಕೆಯಿದೆ. ಈ ಸ್ಥಳದಲ್ಲಿ ಸ್ನಾನ ಮಾಡಿ ಹರಿಹರೇಶ್ವರನನ್ನು ಪೂಜಿಸಿದರೆ ಬ್ರಹ್ಮ ಹತ್ಯಾದಿ ಪಾಪಗಳು ನಾಶವಾಗುತ್ತವೆಂಬ ನಂಬಿಕೆಯಿದೆ. ಕರ್ನಾಟಕದಲ್ಲಿ ನಾಥಪಂಥವು ತನ್ನದೇ ಆದ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಪಡೆದಿದೆ. 'ಭೈರ' ಎನ್ನುವುದು ಭೈರವಾರಾಧನೆಯನ್ನೂ ನೆನಪಿಸುತ್ತದೆ. ಹಾಗಾಗಿ ಭೈರವನೇ 'ಭೈಕುಟ' ಆಗಿರುವ ಸಾಧ್ಯತೆ ಇದೆ. ಚಾರಿತ್ರಿಕವಾಗಿ ಧಾರ್ಮಿಕ ಪಂಥಗಳ ಸ್ಥಿತ್ಯಂತರವಾದ ನಂತರದಲ್ಲಿ ನಾಥಪಂಥದ ಕ್ಷೇತ್ರವಾಗಿ ಜನರಲ್ಲಿ ಬೆರೆತಿದೆ. ಈ ನೆಲೆಯಲ್ಲಿ ಡಾ. ರಹಮತ್ ತರೀಕೆರೆಯವರ ಕರ್ನಾಟಕದ ನಾಥಪಂಥ ಕೃತಿಯನ್ನು ಅವಲೋಕಿಸಬಹುದಾಗಿದೆ.

ಊ. ಕುರುವತ್ತಿ

ಹಡಗಲಿ ತಾಲ್ಲೂಕಿನ ಕುರುವತ್ತಿ ಗ್ರಾಮದಲ್ಲಿ ತುಂಗಭದ್ರಾ ನದಿಯು ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ತುಂಗಭದ್ರಾ ನದಿಯ ಬಲದಂಡೆಯ ಮೇಲಿರುವ ಕುರುವತ್ತಿಯು ಪ್ರಾಚೀನ ಕಾಲದಿಂದಲೂ ಐತಿಹಾಸಿಕವಾಗಿ ಅನೇಕ ರಾಜಮನೆತನಗಳಿಗೆ ಜನ್ಮ ನೀಡಿದ್ದು, ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಇದೊಂದು ನಿರ್ಣಾಯಕ ಸ್ಥಳವಾಗಿದೆ. ಕುರುವತ್ತಿಯಲ್ಲಿ ಅನೇಕ ಶೈವ ದೇವಾಲಯಗಳಿದ್ದು, ಶ್ರೀಮಲ್ಲಿಕಾರ್ಜುನ ದೇವಾಲಯ, ಕಲ್ಲೇಶ್ವರ ದೇವಾಲಯ, ಬಸವೇಶ್ವರ ದೇವಾಲಯಗಳು ಪ್ರಮುಖವಾಗಿವೆ. ಕುರುವತ್ತಿಯ ಬಸವಣ್ಣ ಅನೇಕರಿಗೆ ಮನೆದೇವರು, ಅದರಲ್ಲಿಯೂ ಶೈವ ಧಾರ್ಮಿಕರಿಗೆ ಆರಾಧ್ಯ ದೈವವಾಗಿದೆ. ಕುರುವತ್ತಿಯ ಬಸವೇಶ್ವರ ಜಾತ್ರೆಯನ್ನು ನೋಡಲಿಕ್ಕಾಗಿಯೇ ನಾಡಿನ ವಿವಿಧ ಭಾಗಗಳಿಂದ ಕುರುವತ್ತಿಗೆ ಆಗಮಿಸುತ್ತಾರೆ. ಇಲ್ಲಿಯ ಬಸವೇಶ್ವರನ ಪ್ರಸಿದ್ಧಿಯನ್ನು ಕುರಿತು ಹೇಳುವುದಾದರೆ ಚಿಕ್ಕಮಕ್ಕಳು ಆಟವಾಡುವ ಸಂದರ್ಭದಲ್ಲಿ ಈ ಕೆಳಗಿನಂತೆ ಹೇಳಿಕೊಂಡು ಖುಷಿಪಡುತ್ತಾರೆ.

"ಕುಂಟ ಕುಂಟ ಕುರುವತ್ತಿ
ಗಂಟ ಹೊಡಿಯೋ ಮಲ್ಲಣ್ಣ
ಕುಂಟ ಕುಂಟ ಕುರುವತ್ತಿ
ಗಂಟ ಹೊಡಿಯೋ ಮಹದೇವ

ನನ್ನೆತ್ತು ಕುರುವತ್ತಿ

ನಿನ್ನೆತ್ತು ಮಹದೇವ

ಬಸವಾ ಬಸವಾ ಬಸವಣ್ಣ ಕುರುವತ್ತಿ ಬಸವಣ್ಣ"[14]

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಬಸವಣ್ಣನ ಮೂಲಕ ಕುರುವತ್ತಿಯ ಸಾಂಸ್ಕೃತಿಕ ಹಿನ್ನೆಲೆಯನ್ನು ಗುರುತಿಸಬಹುದಾಗಿದೆ. ಒಟ್ಟಿನಲ್ಲಿ ಕುರುವತ್ತಿಯು ತುಂಗಭದ್ರಾ ನದಿ ಪರಿಸರದಲ್ಲಿ ಬರುವ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿದೆ.

೫. ಮೈಲಾರ

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ತುಂಗಭದ್ರಾ ನದಿಯ ಬಲದಂಡೆಯ ಮೇಲೆ ಮೈಲಾರ ಗ್ರಾಮವಿದೆ. ದಕ್ಷಿಣ ಭಾರತದಲ್ಲಿ ನಡೆಯುವ ಅನೇಕ ದೊಡ್ಡ, ಜಾತ್ರೆಗಳಲ್ಲಿ ಇದೂ ಒಂದಾಗಿದೆ. ಹಿಂದಿನಿಂದಲೂ ಮೈಲಾರವು ಶೈವ ಧಾರ್ಮಿಕ ಕ್ಷೇತ್ರವೆಂದು ಪ್ರಸಿದ್ಧವಾಗಿದೆ. ವರ್ಷಕ್ಕೊಮ್ಮೆ ಪ್ರಸಿದ್ಧ ಜಾತ್ರೆ ಹಾಗೂ ಕಾರ್ಣಿಕ ನಡೆಯುವುದು ಇಲ್ಲಿನ ವಿಶೇಷವಾಗಿದೆ. 'ಏಳುಕೋಟಿ' ಎಂಬ ನಾಮಾಂಕಿತದಿಂದ ಗೊರವಪ್ಪರು ಕಾಣಿಸಿಕೊಳ್ಳುತ್ತಾರೆ. ಈ ಜಾತ್ರೆಯಲ್ಲಿ ನಡೆಯುವ ಕಾರ್ಣಿಕೋತ್ಸವವು ಸಮಕಾಲೀನ ಪರಿಸ್ಥಿತಿಯನ್ನು ಸಂಕೇತಿಸುವ ಭವಿಷ್ಯವಾಣಿಯಾಗಿದೆ. ಕರ್ನಾಟಕದಲ್ಲಿ ಮೈಲಾರಲಿಂಗ ಪಂಥವು ದಟ್ಟವಾಗಿ ಬೆಳೆದಿದ್ದು ಈ ಕುರಿತ ಅನೇಕ ಸಂಶೋಧನೆಗಳು ಸಾಹಿತ್ಯ ಇತಿಹಾಸ ಗ್ರಂಥಗಳು ಜನಮನ್ನಣೆಗೆ ಪಾತ್ರವಾಗಿವೆ. ಎಂ.ಬಿ. ನೇಗಿನಾಳ, ಪುರುಷೋತ್ತಮ ಬಿಳಿಮಲೆ, ಇವರ ಅಧ್ಯಯನಗಳು ಅಕಾಡೆಮಿಕ್ ಶಿಸ್ತಿನಲ್ಲಿ ವಿದ್ವಾಂಸರ ಗಮನ ಸೆಳೆದಿವೆ.

೬. ಹಂಪೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಗ್ರಾಮಪಂಚಾಯ್ತಿ ಕೇಂದ್ರವಾದ ಹಂಪಿಯು ತುಂಗಭದ್ರಾ ನದಿಯ ಬಲದಂಡೆಯ ಮೇಲೆ ಬೆಳೆದು ನಿಂತಿದೆ. ವಿಶ್ವಪರಂಪರೆಯ ತಾಣಗಳಲ್ಲಿ ಒಂದಾದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದ ಹಂಪಿಯು ಧಾರ್ಮಿಕ ಪರಂಪರೆಯನ್ನು ತನ್ನ ಒಡಲಲ್ಲಿಟ್ಟುಕೊಂಡಿದೆ. ವಿಜಯನಗರವನ್ನಾಳಿದ ಅನೇಕ ರಾಜವಂಶಗಳು ಅದರಲ್ಲೂ ಸಾಳವ ಮನೆತನದ ಕಾಲದಲ್ಲಿ ಶೈವ ಧರ್ಮವು ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದೆ. ಹಂಪಿಯಲ್ಲಿ ವಿರೂಪಾಕ್ಷ ದೇವಾಲಯ, ಉದ್ದಾನ ವೀರಭದ್ರ, ಕಂಪಿಲ ದೇವಾಲಯ, ವಿದ್ಯಾಶಂಕರ ದೇವಾಲಯ, ಶೈವ ಧರ್ಮದ ಖಜಾನೆಗಳಾಗಿವೆ.

೭. ಕಂಪ್ಲಿ

ಬಳ್ಳಾರಿ ಜಿಲ್ಲೆಯ ಕಂಪ್ಲಿಯು ತುಂಗಭದ್ರಾ ನದಿಯ ಸೆರಗಿನಲ್ಲಿ ಬೆಳೆದು ನಿಂತ ಪಟ್ಟಣವಾಗಿದೆ. ಕಂಪ್ಲಿ ಸಾಮ್ರಾಜ್ಯದ ಮೂಲಪುರುಷ ಸಿಂಗನಾಯಕ. ಈತನ ಮಗ ಕಂಪಿಲದೇವರಾಯನ ಕಾಲದಲ್ಲಿ ಈ

ಮನೆತನವೂ ವಿಸ್ತಾರಗೊಂಡಿದೆ. ಶೈವ ಧರ್ಮದ ಆರಾಧಕನಾದ ಕಂಪಿಲದೇವರಾಯನು ಹಲವಾರು ಶೈವದೇವಾಲಯಗಳಿಗೆ ಕಾರಣೀಭೂತನಾಗಿದ್ದಾನೆ. ಕಂಪಿಲಿಯಲ್ಲಿ ಪಂಪಾಪತಿ ದೇವಾಲಯ, ಸೋಮೇಶ್ವರ ದೇವಾಲಯ, ನಗರೇಶ್ವರ ದೇವಾಲಯ ಪ್ರಸಿದ್ಧಿಯನ್ನು ಪಡೆದಿವೆ. ಇಲ್ಲಿನ ಹಿಂದು-ಮುಸ್ಲಿಂರ ಭಾವೈಕ್ಯದ 'ಮೊಹರಂ' ಆಚರಣೆಗೆ ಚಾರಿತ್ರಿಕ ಮಹತ್ವವಿದೆ.

ಪ್ರಸ್ತುತ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳನ್ನು ಅಧ್ಯಯನ ಮಾಡಲಾಗಿದೆ. ತುಂಗಭದ್ರಾ ನದಿಗೆ ಪ್ರಾಚೀನವಾದ ಚರಿತ್ರೆಯಿದೆ. ಪುರಾಣ ದಂತಕತೆಗಳಲ್ಲಿ ಎಲ್ಲಿಲ್ಲದ ಮಹತ್ವ ಈ ನದಿಗೆ ಇದೆ. ರಾಮಾಯಣದಲ್ಲಿ ಇದಕ್ಕೆ 'ಪಂಪಾ' ಎಂದು ಕರೆಯಲಾಗಿದೆ. ೧೦ನೇ ಶತಮಾನಕ್ಕೆ ಇದು ಪಂಪನ ನೆಲೆಯಾಗಿತ್ತು.

ಈ ನದಿ ಪರಿಸರದಲ್ಲಿ ವಿವಿಧ ರಾಜ್ಯ ಸಾಮ್ರಾಜ್ಯಗಳು ಉದಯಿಸಿ ಆಳ್ವಿಕೆ ನಡೆಸಿ ಶೈವ ಧರ್ಮದ ಧಾರ್ಮಿಕ ಪರಂಪರೆ ಹುಟ್ಟಿಕೊಂಡಿದೆ. ಇಂದಿಗೂ ಆ ಧಾರ್ಮಿಕ ಪರಂಪರೆಗಳು ಕನ್ನಡ ನಾಡಿನ ಜನಸಾಮಾನ್ಯರ ಜೀವನಕ್ಕೆ ದಾರಿದೀಪವಾಗಿವೆ. ಶೈವಧರ್ಮವು ಚಾರಿತ್ರಿಕವಾಗಿ ಹಲವು ಸ್ಥಿತ್ಯಂತರಗಳನ್ನು ಕಂಡಿದೆ. ಇದರ ವಿವಿಧ ಸ್ತರಗಳನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ.

೨. ವೈಷ್ಣವ ಧರ್ಮ

ತುಂಗಭದ್ರ ನದಿ ಪರಿಸರವು ಮೂಲತಃ ಧಾರ್ಮಿಕ ನೆಲೆಯನ್ನು ಹೊಂದಿದೆ. ಅಂತೆಯೇ ಈ ನದಿ ಪರಿಸರದ ಉದ್ದಕ್ಕೂ ಹಲವು ಧರ್ಮವು ಧಾರ್ಮಿಕ ಕ್ಷೇತ್ರಗಳು ಕಾರಣವಾಗಿವೆ. ವೈಷ್ಣವ ಧರ್ಮದ ದೃಷ್ಟಿಯಿಂದ ಹೇಳುವುದಾದರೆ ಕೂಡಲಿ, ಹಂಪಿ, ಆನೆಗುಂದಿ, ಮಂತ್ರಾಲಯ ಪ್ರಮುಖ ಕೇಂದ್ರಗಳಾಗಿವೆ. ತುಂಗಭದ್ರಾ ನದಿ ಪರಿಸರದಲ್ಲಿಯ ವೈಷ್ಣವ ಧಾರ್ಮಿಕ ಕ್ಷೇತ್ರಗಳನ್ನು ಅಧ್ಯಯನ ಮಾಡಲಾಗಿದೆ.

ಅ. ಕೂಡಲಿ

'ಕೂಡಲಿ'ಯು ತುಂಗ-ಭದ್ರಾ ನದಿಗಳ ಸಂಗಮ ಸ್ಥಳವಾಗಿ ನಾಡಿನಾದ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಕೂಡಲಿಯು ಪ್ರಸಿದ್ಧವಾದ ವೈಷ್ಣವ ಧಾರ್ಮಿಕ ಕೇಂದ್ರವಾದ ಶೃಂಗೇರಿ ಮಠವಿದೆ. ಸುಮಾರು ೫೦೦ ವರ್ಷಗಳ ಹಿಂದೆ ವರಹಾಸ್ವಾರ್ತರ ಸಲುವಾಗಿ ಸ್ಥಾಪಿಸಿದ ಮಠವಿದಾಗಿದೆ. 'ಸರ್ ಬುಕನಾನ್' ಎಂಬ ಪ್ರವಾಸಿಯು ಈ ಮಠದ ಘನತೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾನೆ. ಇಲ್ಲಿ ಇನ್ನೊಂದು ಮಾಧ್ವ ಮಠವಿದೆ. ಅಲ್ಲದೆ ಬ್ರಹ್ಮೇಶ್ವರ, ರಾಮೇಶ್ವರ ಹಾಗೂ ನರಸಿಂಹ ದೇವಾಲಯಗಳು ಕಂಡುಬರುತ್ತವೆ.

ಐತಿಹಾಸಿಕವಾಗಿ ಹೇಳುವುದಾದರೆ ಕೂಡಲಿಯು ಅನೇಕ ಅರಸು ಮನೆತನಗಳ ನೇರ ಆಳ್ವಿಕೆಗೆ ಒಳಗಾಗಿದ್ದು ಶಾಸನಗಳಲ್ಲಿ ಹೊಯ್ಸಳರಿಗೂ ಮತ್ತು ಸೇವುಣರಿಗೂ ಅನೇಕ ಯುದ್ಧಗಳು ಇಲ್ಲಿ ನಡೆದಿವೆ. ಕೂಡಲಿಯನ್ನು ಸಂದರ್ಶಿಸಿದಾಗ ಪ್ರಾಚೀನ ಕಾಲದ ಕೋಟೆ, ಅವಶೇಷಗಳು ಇಂದಿಗೂ ಕಾಣಸಿಗುತ್ತವೆ.

ಇಲ್ಲಿನ ಪ್ರಮುಖ ಅಧಿದೈವ ನರಸಿಂಹನಾಗಿದ್ದುದರ ಕಾರಣ ನರಸಿಂಹ ಕ್ಷೇತ್ರವೆಂದು ಕೂಡಲಿಯನ್ನು ಕರೆಯುತ್ತಾರೆ.

ಆ. ಹಂಪೆ

ವಿಜಯನಗರದ ಚಕ್ರವರ್ತಿಗಳ ಕಾಲದಲ್ಲಿ ಹಂಪಿಯು ಹಲವು ಧರ್ಮಗಳ ತವರೂರು ಆಗಿತ್ತು. ಪರಮತ ಸಹಿಷ್ಣತೆಯನ್ನು ತಮ್ಮ ಆಳ್ವಿಕೆಯ ಕಾಲದಲ್ಲಿ ನಡೆಸಿದುದರಿಂದ ಶೈವಧರ್ಮದಂತೆ ವೈಷ್ಣವ ಧರ್ಮಕ್ಕೂ ಸಾಕಷ್ಟು ಪ್ರೋತ್ಸಾಹ ನೀಡಿರುವುದು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ.

ವಿಜಯನಗರದಲ್ಲಿ ಪ್ರಸಿದ್ಧವಾದ ವಿಜಯವಿಠಲದೇವಾಲಯ, ಹಜಾರರಾಮ,, ಪಟ್ಟಾಭಿರಾಮ ದೇವಾಲಯ, ಮಾಲ್ಯವಂತ ರಘುನಾಥ ದೇವಾಲಯ, ಲಕ್ಷ್ಮಿನರಸಿಂಹ ದೇವಾಲಯ, ಅಚ್ಯುತ ದೇವಾಲಯ, ಬಾಲಕೃಷ್ಣಸ್ವಾಮಿ ದೇವಾಲಯ ಈ ದೇವಾಲಯಗಳ ಸಮೂಹವನ್ನು ನೋಡಿದಾಗ ವಿಜಯನಗರದಲ್ಲಿ ವೈಷ್ಣವ ಧರ್ಮದ ಆಚಾರ್ಯರಾದ ಪದ್ಮನಾಭತೀರ್ಥ, ನರಹರಿ ತೀರ್ಥ, ಮಾಧವ ತೀರ್ಥ ಇತ್ಯಾದಿ ಗುರುಗಳು ಪ್ರಭಲರಾಗಿದ್ದರು. ಈ ಎಲ್ಲಾ ಅಂಶಗಳಿಂದ ವೈಷ್ಣವ ಧರ್ಮದ ಬೆಳವಣಿಗೆಯನ್ನು ಕಾಣಬಹುದಾಗಿದೆ.

ಇ. ಆನೆಗೊಂದಿ

ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಆನೆಗೊಂದಿಯು ಪ್ರಮುಖ ವೈಷ್ಣವ ಧಾರ್ಮಿಕ ಕೇಂದ್ರವಾಗಿದೆ. ಪ್ರವಾಸಿ ಯಾತ್ರಿಕನಾದ 'ನ್ಯೂನಿಚ್' ಆನೆಗೊಂದಿಯನ್ನು ವಿಜಯನಗರದ ಮಾತೃಸ್ಥಾನವೆಂದು ಹೇಳಿದ್ದಾನೆ. ಶಾಸನಗಳಲ್ಲಿ ಇದನ್ನು 'ಕುಂಜರ ಕೋಣ' 'ಅಸ್ತಿನಾವತಿ'' ಎಂದು ' ಕರೆಯಲಾಗಿದೆ. (ಕ.ದೇ.ಕೊಪ್ಪಳ ಜಿಲ್ಲೆ, ಪುಟ-೮೪) ಆನೆಗೊಂದಿಯಲ್ಲಿ ರಂಗನಾಥ ದೇವಾಲಯ, ಲಕ್ಷ್ಮೀನರಸಿಂಹ ದೇವಾಲಯಗಳು ಪ್ರಸಿದ್ಧಿಯನ್ನು ಪಡೆದಿವೆ.

ಆನೆಗೊಂದಿಯ ಹತ್ತಿರ "ತುಂಗಭದ್ರಾ ನದಿಯ ದಡದಲ್ಲಿ ಪಂಪಾ ಸರೋವರವಿದೆ. ತುಂಗಭದ್ರಾ ನದಿಯ ನಡುವೆ ಒಂದು ಮಂಟಪವಿದ್ದು ಅದನ್ನು ಕಾಲುಮಂಟಪ ಎಂದು ಕರೆಯಲಾಗುತ್ತದೆ. ವಿಜಯನಗರದ ಅರಸ ಶ್ರೀಕೃಷ್ಣದೇವರಾಯ ೬೪ ವಿದ್ಯೆಗಳಲ್ಲಿ ಪಾಂಡಿತ್ಯ ಹೊಂದಿದ್ದರ ಸಂಕೇತವಿದಾಗಿದೆ. ತುಂಗಭದ್ರಾ ನಡುಗಡ್ಡೆಯಲ್ಲಿ ನವಬೃಂದಾವನವಿದೆ. ಇಲ್ಲಿ ಪದ್ಮನಾಭತೀರ್ಥ, ಕವೀಂದ್ರತೀರ್ಥ, ವ್ಯಾಸರಾಜ, ರಘುವರ್ಯ, ಸುದೀಂದ್ರತೀರ್ಥ, ಶ್ರೀನಿವಾಸತೀರ್ಥ, ರಾಮಚಂದ್ರತೀರ್ಥ ಹಾಗೂ ಗೋವಿಂದ ತೀರ್ಥ ಹೀಗೆ ೯ ಯತಿಗಳ ವೃಂದಾವನಗಳಿವೆ.'' ಈ ಮೇಲಿನ ಸಂಗತಿಗಳನ್ನು ಗಮನಿಸಿದಾಗ ಆನೆಗೊಂದಿಯು ತುಂಗಭದ್ರಾ ನದಿ ಪರಿಸರದಲ್ಲಿ ವೈಷ್ಣವ ಧರ್ಮದ ಬೆಳವಣಿಗೆಗೆ ಸಹಕಾರಿಯಾಗಿದೆ. ಈ ಕ್ಷೇತ್ರಕ್ಕೆ ಆಂಧ್ರ, ತಮಿಳುನಾಡಿನಿಂದ ಭಕ್ತಾದಿಗಳು ಬರುತ್ತಾರೆ. ಈ ರೀತಿಯಾಗಿ ತುಂಗಭದ್ರಾ ನದಿ ಪರಿಸರದಲ್ಲಿ ಬರುವ ವೈಷ್ಣವ ಧಾರ್ಮಿಕ ಕ್ಷೇತ್ರಗಳು ಧರ್ಮದ ಪುನರುಜ್ಜೀವನಕ್ಕೆ ತಮ್ಮದೇ ಆದ ಕಾಣಿಕೆಯನ್ನು ಸಲ್ಲಿಸಿವೆ.

ಈ. ಮಂತ್ರಾಲಯ

ಕರ್ನಾಟಕದ ನಾಗರಿಕತೆಯ ವಿಕಸನದಲ್ಲಿ ತುಂಗಭದ್ರಾ ನದಿಯ ಪಾತ್ರವು ಹಿರಿದಾದುದು. ಈ ನದಿ ತಟದ ಸಮೃದ್ಧತೆ, ಫಲವತ್ತತೆ, ಅನುಕೂಲತೆಗಳು, ಜೀವಜಗತ್ತಿನ ಬೆಳವಣಿಗೆಗೆ ಕಾರಣವಾಗಿವೆ. ಹೀಗಾಗಿ ಸಂಸ್ಕೃತಿಯ ವಿವಿಧ ಸ್ತರಗಳಲ್ಲಿ ಈ ನದಿಯೊಂದಿಗಿನ ಸಂಬಂಧವು ಹಾಸುಹೊಕ್ಕಾಗಿ ಬಂದಿರುವುದು ಸಹಜವಾಗಿಯೇ ಕಂಡುಬರುತ್ತದೆ.

ಕರ್ನಾಟಕವಲ್ಲದೆ ಕರ್ನಾಟಕದ ಗಡಿಯಾಚೆಗೆ ಇರುವ ಈ ನದಿ ದಂಡೆಯ ಪ್ರಮುಖ ವೈಷ್ಣವ ಪುಣ್ಯಕ್ಷೇತ್ರ ಮಂತ್ರಾಲಯವಾಗಿದೆ. ಮಂತ್ರಾಲಯವು ಪ್ರಾಚೀನ ಪರಂಪರೆಯಿಂದಲೂ ಇಂದಿನವರೆಗೆ ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಅನೇಕ ತಿರುವುಗಳನ್ನು ಪಡೆದ ಪುಣ್ಯಕ್ಷೇತ್ರವಾಗಿದೆ. ಈ ಸ್ಥಳವು ಶ್ರೀ ರಾಘವೇಂದ್ರಸ್ವಾಮಿಯ ವೃಂದಾವನವಾಗಿದೆ. ಈ ಸ್ಥಳದಲ್ಲಿ ಚಾರಿತ್ರಿಕ ಅಂಶಗಳನ್ನು ಗುರುತಿಸುವುದಾದರೆ ಭಕ್ತಪ್ರಹ್ಲಾದನು ಯಜ್ಞ ಮಾಡಿದ ಕಾರಣದಿಂದಲೇ ರಾಘವೇಂದ್ರ ಸ್ವಾಮಿಗಳು ಆದವಾನಿ ನವಾಬನಿಂದ ಈ ಸ್ಥಳವನ್ನು ದಾನವಾಗಿ ಪಡೆದುಕೊಂಡರೆಂಬ ಉಲ್ಲೇಖವಿದೆ. ಪ್ರಮುಖ ವೈಷ್ಣವ ಧಾರ್ಮಿಕ ಕೇಂದ್ರವಾದ ಮಂತ್ರಾಲಯದಲ್ಲಿ ನಾನಾ ರೀತಿಯ ಉತ್ಸವಗಳು, ಹಬ್ಬಹರಿದಿನಗಳು ವಿಜೃಂಭಣೆಯಿಂದ ಇಂದಿಗೂ ನಡೆಯುತ್ತಿವೆ. ಈ ಕ್ಷೇತ್ರದ ಆರಾಧ್ಯ ದೈವವಾದ ಶ್ರೀರಾಘವೇಂದ್ರ ಸ್ವಾಮಿಯು ಒಂದು ಸೀಮಿತ ಧರ್ಮಕ್ಕೆ ಸೇರದೆ, ಹಿಂದೂ, ಮುಸ್ಲಿಂ, ಕ್ರೈಸ್ತ ಇತ್ಯಾದಿ ಧರ್ಮದ ಜನಾಂಗದವರನ್ನು ತನ್ನ ಕ್ಷೇತ್ರದ ಕಡೆಗೆ ಆಕರ್ಷಿಸಿಕೊಂಡಿರುವುದು ಪ್ರಮುಖ ವೈಶಿಷ್ಟ್ಯವಾಗಿದೆ. ಕರ್ನಾಟಕ ರಾಜ್ಯವಲ್ಲದೆ ದೇಶ, ವಿದೇಶಗಳಿಂದ ಭಕ್ತಾದಿಗಳು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ನಾನಾ ರೀತಿಯ ಸೇವೆಗಳನ್ನು ಸಲ್ಲಿಸಿ ಶ್ರೀ ರಾಘವೇಂದ್ರ ಸ್ವಾಮಿಯ ಕೃಪಾಕಟಾಕ್ಷಕ್ಕೆ ಒಳಗಾಗುತ್ತಾರೆ.

ಮಂತ್ರಾಲಯ ಎದುರಿನ ದಡದ ಮೇಲೆ ಇರುವ ಪವಿತ್ರವಾದ ಮತ್ತೊಂದು ಸ್ಥಳವೆಂದರೆ ಗಾಣದಾಳವಾಗಿದೆ. ಇದು ಪ್ರಾಚೀನ ಕಾಲದಿಂದಲೂ ಪ್ರಖ್ಯಾತಿ ಪಡೆದ ಧಾರ್ಮಿಕ ಕ್ಷೇತ್ರವಾಗಿದೆ. ಈ ಕ್ಷೇತ್ರದ ವೈಶಿಷ್ಟ್ಯವೆಂದರೆ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನ ಇರುವುದಾಗಿದೆ. ಒಟ್ಟಿನಲ್ಲಿ ಶ್ರೀ ರಾಘವೇಂದ್ರಸ್ವಾಮಿ ಹಾಗೂ ಪಂಚಮುಖಿ ಆಂಜನೇಯ ದೈವಗಳು ಭಕ್ತರ ಸಂಕಷ್ಟಗಳನ್ನು ಪರಿಹರಿಸುವ ಧರ್ಮದೇವತೆಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ.

೩. ಶಾಕ್ತೇಯ ಧರ್ಮ

ತುಂಗಭದ್ರಾ ನದಿಯ ದಂಡೆಯಲ್ಲಿ ಶೈವ, ವೈಷ್ಣವ, ಧಾರ್ಮಿಕ ಕ್ಷೇತ್ರಗಳಂತೆ ಶಾಕ್ತೇಯ ಧಾರ್ಮಿಕ ಕ್ಷೇತ್ರಗಳು ಅಲ್ಲಲ್ಲಿ ಕಂಡುಬರುತ್ತವೆ. ಶಾಕ್ತೇಯ ಧಾರ್ಮಿಕ ಕೇಂದ್ರಗಳಾದ ಶೃಂಗೇರಿ, ಕುರುವತ್ತಿ, ಹಂಪಿ, ಹೊಸೂರು, ಹುಲಿಗಿ ಇತ್ಯಾದಿ, ಶಾಕ್ತೇಯ ಧಾರ್ಮಿಕ ಕ್ಷೇತ್ರಗಳು ಸಾಕಷ್ಟು ಪ್ರಬುದ್ಧತೆಯನ್ನು ಪಡೆದಿವೆ. ಪ್ರಸ್ತುತ ಈ ಭಾಗದಲ್ಲಿ ಸಂಕ್ಷಿಪ್ತವಾಗಿ ತುಂಗಭದ್ರಾ ನದಿ ಪರಿಸರದ ಶಾಕ್ತೇಯ ಧಾರ್ಮಿಕ ಕ್ಷೇತ್ರಗಳನ್ನು ಪರಿಶೀಲಿಸಲಾಗಿದೆ.

ಅ. ಶೃಂಗೇರಿ

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯು ಈ ನದಿ ಪರಿಸರದಲ್ಲಿರುವ ಪ್ರಾರಂಭದ ಶಾಕ್ತೇಯ ಕೇಂದ್ರವಾಗಿದೆ. ಶೃಂಗೇರಿಯು ಪ್ರಾಚೀನ ಕಾಲದಿಂದಲೂ ಆಧ್ಯಾತ್ಮಿಕ ನೆಲೆಯಾಗಿದ್ದು, ಬಹುಜನ ಭಕ್ತರನ್ನು ಸಹಜವಾಗಿಯೇ ಆಕರ್ಷಿಸುತ್ತದೆ. ಐತಿಹಾಸಿಕವಾಗಿ ಉಲ್ಲೇಖಿಸುವುದಾದರೆ ವಿಜಯನಗರ ಹಾಗೂ ಇತರೆ ಅರಸು ಮನೆತನಗಳು ಈ ಕ್ಷೇತ್ರಕ್ಕೆ ಪ್ರಾತಿನಿಧ್ಯ ನೀಡಿರುವುದು ಕಂಡುಬರುತ್ತದೆ. ಈ ಕ್ಷೇತ್ರದಲ್ಲಿ ಶಾರದೆಯು ಅಧಿದೇವತೆಯಾಗಿದ್ದು, ಅನೇಕ ಜನ ಭಕ್ತರನ್ನು ಹೊಂದಿದ್ದಾಳೆ. ಆಧುನಿಕ ಸವಲತ್ತುಗಳಿಂದಾಗಿ ಕಣ್ಮನ ಸೆಳೆಯುವ ಪ್ರವಾಸಿ ಕೇಂದ್ರಗಳಲ್ಲಿ ಒಂದಾಗಿದೆ.

ಆ. ಕುರುವತ್ತಿ ಹಿರೇಮಠದಲ್ಲಿ ಚೌಡಿ

ಹಡಗಲಿ ತಾಲ್ಲೂಕಿನ ಕುರುವತ್ತಿಯಲ್ಲಿ ಅನೇಕ ಶಾಕ್ತೇಯ ದೇವಾಲಯಗಳಿದ್ದು, ಜನಸಾಮಾನ್ಯರ ಬದುಕಿಗೆ ಶಾಂತಿ, ನೆಮ್ಮದಿಯನ್ನು ನೀಡಿವೆ. ಕುರುವತ್ತಿ ಹಿರೇಮಠದಲ್ಲಿಯ ಚೌಡಿದೇವತೆಯು ಬಿಜಾಪುರದಿಂದ ವಲಸೆ ಬಂದು ಕುರುವತ್ತಿಯಲ್ಲಿ ನೆಲೆಸಿರುವುದು ವೈಶಿಷ್ಟ್ಯವಾಗಿದೆ. ಈ ಅಂಶವನ್ನು ವಿಶ್ಲೇಷಿಸಿದಾಗ ತುಂಗಭದ್ರಾ ನದಿ ಪರಿಸರದ ಪ್ರಾಮುಖ್ಯತೆ, ಪರಿಸರದ ಪ್ರಭಾವ, ಈ ನೆಲದ ಸಿದ್ಧಿ ಹಾಗೂ ಇತ್ಯಾದಿ ಅಂಶಗಳು ಶಾಕ್ತೇಯ ದೇವತೆಯಾದ ಚೌಡಿ ದೇವತೆಯನ್ನು ಆಕರ್ಷಿಸಿದೆ.

ಕುರುವತ್ತಿಯ ಬಸವೇಶ್ವರ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿ 'ದುರ್ಗಾಂಬಿಕಾದೇವಿ'ಯ ದೇವಾಲಯವಿದೆ. ಈ ದೇವಾಲಯವು ಸಾಧಾರಣ ಗುಡಿಯಾಗಿದೆ. ಶಕ್ತಿದೇವತೆಯಾದ ದುರ್ಗಾಂಬಿಕೆಗೆ ಇಂದಿಗೂ ತ್ರಿಕಾಲ ಪೂಜೆ ನಡೆಯುತ್ತದೆ. ವಿಶೇಷ ಸಂದರ್ಭದಲ್ಲಿ ಕಾರ್ತಿಕ ಪೂಜೆ, ಉತ್ಸವಗಳು ನಡೆಯುತ್ತವೆ. ಈ ನದಿ ಪರಿಸರದಲ್ಲಿ ಬರುವ ಕುರುವತ್ತಿಯು ಶಾಕ್ತೇಯ ದೇವಾಲಯಗಳನ್ನು ಹೊಂದಿ ಆ ಧರ್ಮದ ಹಾಗೂ ಇತರೆ ಧರ್ಮದ ಬಾಂಧವರನ್ನು ಶಾಕ್ತೇಯ ದೇವತೆಗಳು ತಮ್ಮ ಭಕ್ತರಾಗಿಸಿಕೊಂಡಿದ್ದಾರೆ.

ಇ. ಮೈಲಾರದ ಗಂಗಮಾಳವ್ವ

ಮೈಲಾರದಲ್ಲಿ 'ಗಂಗಮಾಳವ್ವ' ಎಂಬ ಶಾಕ್ತೇಯ ದೇವತೆ ಪ್ರಧಾನ ದೇವತೆಯಾಗಿದ್ದಾಳೆ. ಇಲ್ಲಿ ಪಾರ್ವತಿದೇವಿಯು ಇಲ್ಲಿ ಗಂಗಮಾಳವ್ವಳಾಗಿ ಕಾಣಿಸಿಕೊಂಡಿದ್ದು ಹಾಗೆ ಹುಣ್ಣಿಮೆಯಂದು ಮೈಲಾರ ಲಿಂಗನಿಗೂ ಹಾಗೂ ಗಂಗಮಾಳವ್ವಳಿಗೂ ವಿವಾಹ ಮಾಡಿಸುವರು. ಶಾಕ್ತೇಯ ದೇವತೆಯ ಪ್ರಭಾವವನ್ನು ಎತ್ತಿತೋರಿಸುತ್ತದೆ. ಮೈಲಾರದಲ್ಲಿಯೂ ಶಾಕ್ತೇಯ ದೇವತೆಗಳಿದ್ದರೆಂಬುದಕ್ಕೆ ಅನೇಕ ಸೂಚನೆಗಳು ಕಂಡುಬರುತ್ತವೆ.

ಈ. ಹೊಸೂರು

ಹೊಸಪೇಟೆಯಿಂದ ೫ ಕಿ.ಮೀ. ದೂರದಲ್ಲಿರುವ ಹೊಸೂರು ಚಾರಿತ್ರಿಕ, ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ಈ ಗ್ರಾಮದ ಅಧಿದೇವತೆಯಾದ ಹೊಸೂರಮ್ಮನ ಪ್ರಭಾವ ಪ್ರೇರಣೆಯಿಂದ ಈ ಗ್ರಾಮಕ್ಕೆ `ಹೊಸೂರು` ಎಂದು ಕರೆಯಲಾಗಿದೆ.

ಕ್ರಿ.ಶ. ೧೪೩೫ ರಲ್ಲಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ 'ಹೊಸೂರು' ಒಳಪಟ್ಟಿದೆ. ಆ ಕಾಲದಲ್ಲಿದ್ದ `ಮಾದಿ ನಾಯಕ` ಎಂಬಾತನು ಹೊಸೂರಿನ ಮಹಾನ್ ಮಾಯಿಗೆ ಚಿತ್ರವಾಡಿಗೆಯ ಕೆಲವು ಗ್ರಾಮಗಳನ್ನು ದತ್ತಿ ಬಿಟ್ಟ ವಿಷಯ ಹೊಸೂರಮ್ಮನ ಗುಡಿಯಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. ಹೊಸೂರು ಪ್ರಾಚೀನ ಕಾಲದಿಂದಲೂ ಪ್ರಮುಖ ಶಾಕ್ತೇಯ ಕೇಂದ್ರವಾಗಿದೆ. ಹೊಸೂರಮ್ಮ ನಾಯಕ ಸಮುದಾಯದ ಅಧಿದೇವತೆಯಾಗಿದ್ದು ಇತರ ಸಮುದಾಯಗಳನ್ನು ಆಕರ್ಷಿಸಿಕೊಂಡು ತನ್ನ ಪ್ರಭಾವವನ್ನು ಈ ಪರಿಸರದಲ್ಲಿ ಬೀರಿದ್ದಾಳೆ.

ಊ. ಹುಲಿಗಿ

ಹುಲಿಗಿಯು ತುಂಗಭದ್ರಾ ನದಿ ದಂಡೆಯಲ್ಲಿರುವ ಪ್ರಮುಖ ಶಕ್ತಿದೇವತೆಯ ಕೇಂದ್ರವಾಗಿದೆ. ಹುಲಿಗೆಮ್ಮ ಈ ಗ್ರಾಮದ ಪ್ರಭಾವಿ ದೇವತೆಯಾಗಿದ್ದಾಳೆ. ಐತಿಹ್ಯಗಳ ಪ್ರಕಾರ ಹುಲಿಗೆಮ್ಮನ ಭಕ್ತನನ್ನು ಟಿಪ್ಪು ಅವಮಾನಿಸಿದ ಪರಿಣಾಮ ಟಿಪ್ಪು ಶಕ್ತಿಗುಂದಿದನಂತೆ ಇದು ಹುಲಿಗೆಮ್ಮನ ಕೋಪದ ಪರಿಣಾಮವೆಂದು ತಿಳಿದ ಆತ ಹುಲಿಗೆಮ್ಮದೇವಿಗೆ ನಮಿಸಿ ಚಿನ್ನಾಭರಣಗಳನ್ನು ಹರಕೆಯ ರೂಪದಲ್ಲಿ ಒಪ್ಪಿಸಿದ್ದಾನೆಂದು ದಂತಕಥೆಗಳಾಗಿವೆ. ಆಗ ದೇವಿಯು ಸುಪ್ರೀತಳಾಗಿ ಟಿಪ್ಪುವಿಗೆ ಆತನ ಶಕ್ತಿ, ಸಾಮರ್ಥ್ಯವನ್ನು ಹಿಂತಿರುಗಿಸಿದ್ದಾಳೆಂದು ಇಂದು ಹಿಂದು-ಮುಸ್ಲಿಂ ಬಾಂಧವ್ಯದ ಸಂಕೇತವಾಗಿಯೂ ಗಮನಸೆಳೆಯುತ್ತವೆ.

ಹುಲಿಗೆಮ್ಮನು ಶಾಕ್ತೇಯ ದೇವತೆಯಾಗಿದ್ದು ಈ ದೈವದ ಶಕ್ತಿಯನ್ನು ಪ್ರಚಾರಪಡಿಸಲು ಅನೇಕ ಐತಿಹ್ಯಗಳು, ಪವಾಡಗಳು ಪ್ರಚಲಿತದಲ್ಲಿವೆ. ಈ ಐತಿಹ್ಯಗಳು ಹುಲಿಗೆಮ್ಮನು ಮಾಡಿದ ಪವಾಡಗಳು ಎಂಬ ನಂಬಿಕೆ ಸಾರ್ವತ್ರಿಕವಾಗಿ ಜನಪ್ರಿಯವಾಗಿದೆ. ಅಂತಹ ಕೆಲವು ಪವಾಡಗಳನ್ನು ಇಲ್ಲಿ ನೀಡಲಾಗಿದೆ.

"೧. **ಪಾಯಸದ ಪವಾಡ :** ಹುಲಿಗೆಮ್ಮನ ಜಾತ್ರೆಯ ದಿನದಂದು ಕುದಿಯುವ ಪಾಯಸಕ್ಕೆ ಅದರಿಂದಲೇ ಹರಕೆ ಒಪ್ಪಿಸುವುದು. ಇಂದಿಗೂ ಈ ಸಂಪ್ರದಾಯ ನಡೆದುಕೊಂಡು ಬಂದಿದೆ.

೨. **ದಿಂಡು ಪವಾಡ :** ಬಾಳೆಯ ದಿಂಡಿನ ಮೇಲೆ ಪೂಜಾರಿಯೊಬ್ಬ ಕುಳಿತು ಅದರ ಮೇಲೆ ಸವಾರಿ ಮಾಡುವುದು. ಆದರೆ ದಿಂಡು ದುಂಡಾಗುವುದಿಲ್ಲ, ಬಗ್ಗುವುದಿಲ್ಲ. ಈ ಸನ್ನಿವೇಶವನ್ನು ದೇವಿಯ ಪವಾಡವೆಂದು ಅಲ್ಲಿಯ ಭಕ್ತರು ಹೇಳುತ್ತಾರೆ.

೩. **ಕೆಂಡ ಪವಾಡ :** ಕೊಂಡದಲ್ಲಿ ಹಾಕಲಾದ ಕೆಂಡದ ಮೇಲೆ ಪೂಜಾರಿಗಳು ಬರಿಗಾಲಲ್ಲಿ ನಡೆದು ಹರಕೆ ಒಪ್ಪಿಸುತ್ತಾರೆ. ಈ ಮೂರೂ ಪವಾಡಗಳು ಪ್ರತಿ ಜಾತ್ರೆಯಲ್ಲಿ ನಡೆಯುತ್ತವೆ."

ತುಂಗಭದ್ರಾ ನದಿ ಪರಿಸರದಲ್ಲಿ ಹುಲಿಗಿ ಧಾರ್ಮಿಕ ಕ್ಷೇತ್ರದಲ್ಲಿ ಜಾತಿ, ಮತ, ಧರ್ಮ ಬೇಧವಿಲ್ಲದೇ ಸರ್ವ ಧರ್ಮದ ಜನಾಂಗದವರನ್ನು ತನ್ನ ಭಕ್ತರನ್ನಾಗಿಸಿಕೊಂಡಿದ್ದಾಳೆ. ಆದಕಾರಣ ಹುಲಿಗಿಯು ಕರ್ನಾಟಕ ರಾಜ್ಯದಲ್ಲಿಯೇ ಪ್ರಸಿದ್ಧಿ ಪಡೆದ ಪ್ರಮುಖ ಶಾಕ್ತೇಯ ಧಾರ್ಮಿಕ ಕ್ಷೇತ್ರವಾಗಿದೆ.

೨ು. ಮಾತಂಗಿ

ಹಂಪಿ ಪರಿಸರದಲ್ಲಿರುವ ಮಾತಂಗಿ ಪರ್ವತದಲ್ಲಿ 'ಮಾತಂಗಿ' ಎಂಬ ಶಾಕ್ತೇಯ ದೇವತೆಯ ವಿಗ್ರಹವಿದ್ದು ಈಗ ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆ. ಶಾಕ್ತೇಯ ದೇವತೆಯಾದ ಮಾತಂಗಿಯು ಮಾದಿಗ ಸಮುದಾಯದ ಅಧಿದೇವತೆಯಾಗಿದ್ದಾಳೆ. ಪಟ್ಟಣದ ಎಲ್ಲಮ್ಮ, ಹತ್ತು ಕೈಯಮ್ಮ, ಪಂಪಾದೇವಿ, ಭುವನೇಶ್ವರಿ ಇತರ ದೇವತೆಗಳ ದೇವಾಲಯಗಳು ಇಲ್ಲಿವೆ.

ಎ. **ಪಂಪ ಸರೋವರ**

ತುಂಗಭದ್ರೆಯ ಎಡದಂಡೆಯ ಹತ್ತಿರ ಸರೋವರವಿದೆ. "ಪಂಪಾದೇವಿಯು ಈ ಸರೋವರದಲ್ಲಿ ಸ್ನಾನ ಮಾಡಿ ತನ್ನ ಮನಸ್ಸನ್ನು ನಿಗ್ರಹಿಸಿಕೊಂಡಿದ್ದರಿಂದ ಇದಕ್ಕೆ ಪಂಪಾಸರೋವರವೆಂದು ಹೆಸರಾಗಿದೆ. ಇಲ್ಲಿಯೇ ಒಂದು ಜಯಲಕ್ಷ್ಮಿ ದೇವಾಲಯವಿದೆ. ಈ ದೇವಾಲಯವನ್ನು ದುರ್ಗಿ ದೇವಾಲಯ ಎಂದು ಕರೆಯುತ್ತಾರೆ." ಹೀಗೆ ತುಂಗಭದ್ರಾ ನದಿಯು ಹರಿಯುವ ಕಡೆಗಳಲ್ಲೆಲ್ಲಾ ಧಾರ್ಮಿಕ ಕ್ಷೇತ್ರಗಳನ್ನು ನಿರ್ಮಿಸಿಕೊಳ್ಳುತ್ತಾ ಅಲ್ಲಲ್ಲಿ ಶಾಕ್ತೇಯ ದೇವತೆಗಳ ಪ್ರಭಾವದಿಂದ ಈ ನಾಡನ್ನು ಬೆಳಗಿಸಿದ್ದಾಳೆ.

೪. **ಇತರೆ ಧಾರ್ಮಿಕ ಕ್ಷೇತ್ರಗಳು**

ಶೈವ, ವೈಷ್ಣವ, ಶಾಕ್ತೇಯ ಧಾರ್ಮಿಕ ಕ್ಷೇತ್ರಗಳಲ್ಲಿ ಇತರ ಧರ್ಮದ ದೇವಾಲಯಗಳು ತುಂಗಭದ್ರಾ ನದಿಯ ಪರಿಸರದಲ್ಲಿ ನಿರ್ಮಾಣಗೊಂಡಿವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಅ. ಬಲ್ಲೇಶ್ವರ

ಇದು ತುಂಗಭದ್ರಾ ನದಿಯ ತೀರದಲ್ಲಿದೆ. ಇಲ್ಲಿ ಅನೇಕ ದೇವಾಲಯಗಳಿದ್ದು, ಧಾರ್ಮಿಕ ಭಾವನೆಯನ್ನು ಪ್ರತಿನಿಧಿಸುವಂತಹ ಕ್ಷೇತ್ರವಾಗಿದೆ. ಇಲ್ಲಿ ಪಾರ್ಶ್ವನಾಥನ ಬಸದಿಯಿದ್ದು, ಪ್ರಾಚೀನ ಕಾಲದಲ್ಲಿ ಜೈನ ಧರ್ಮದ ಪ್ರಾಬಲ್ಯವನ್ನು ತೋರಿಸುತ್ತದೆ.

ಆ. ಕುರುವತ್ತಿ ಆಂಜನೇಯಸ್ವಾಮಿ ದೇವಾಲಯ

'ಊರು ಸುಟ್ಟರೆ ಊರು ಹೊರಗೆ ಹನುಮಪ್ಪ' ಎಂಬ ನಾಣ್ಣುಡಿಯಂತೆ ಮೈಲಾರದಿಂದ ಕುರುವತ್ತಿಯನ್ನು ಪ್ರವೇಶ ಮಾಡುವಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಆಂಜನೇಯ ಸ್ವಾಮಿಯು ಉದ್ಭವ ಮೂರ್ತಿಯಾಗಿದ್ದು ಗಂಬೀರ ಮುಖಮುದ್ರೆಯಿಂದ ಕೂಡಿದೆ. ಊರು ಕಾಯುವ ಜವಾಬ್ದಾರಿಯನ್ನು ಹೊತ್ತು ನಿಂತಿದ್ದಾನೆ.

ನಂಬಿದವರಿಗೆ ಒಂದು ಕಲ್ಲೂ ಸಹ ದೈವ ಸ್ವರೂಪವಾಗಿ ಪೂಜೆಗೊಳ್ಳುತ್ತದೆ. ಈ ಆಂಜನೇಯ ದೇವಾಲಯದಲ್ಲಿ ದೊಡ್ಡ ಕಲ್ಲಿನ ಒಂದು ದುಂಡಿಯಿದೆ. ಆಂಜನೇಯನ ದರ್ಶನಕ್ಕೆ ಬಂದು ಹೋಗುವ ಭಕ್ತರು ಈ ದುಂಡಿ ಕಲ್ಲಿಗೂ ಕೈಮುಗಿದು ತಮ್ಮ ಮನಸ್ಸಿನಲ್ಲಿ ಏನಾದರೂ ಕೋರಿಕೆಯಿದ್ದರೆ, ಭಕ್ತಿಯಿಂದ ಸ್ಮರಿಸಿಕೊಂಡು ದುಂಡಿಯನ್ನು ಎತ್ತುತ್ತಾರೆ. ದುಂಡಿಯಲ್ಲಿ ಎತ್ತಿದಾಗ ಹಗುರವಾಗಿ ತೋರಿದರೆ ಹಿಡಿದ ಕೆಲಸ ಆಗುತ್ತದೆ. ಭಾರವಾಗಿ ತೋರಿದರೆ ಕೆಲಸ ಆಗುವುದಿಲ್ಲ ಎಂಬ ನಂಬಿಕೆ ಕುರುವತ್ತಿಯಲ್ಲಿ ಇಂದಿಗೂ ಪ್ರಚಲಿತದಲ್ಲಿದೆ. "ಕುರುವತ್ತಿಯಲ್ಲಿ ಮಳೆಬಾರದಿದ್ದಾಗ ಹಿಂದಿನಿಂದಲೂ ಮುತ್ತೈದೆಯರು ತುಂಬಿದ ಕೊಡಗಳನ್ನು ಪೂಜೆ ಮಾಡಿ ಕೋರುಕನ್ನೆಯರ ಕೈಬೆರಳುಗಳನ್ನು ಕೊಡದಲ್ಲಿರಿಸಿ ಮಳೆಗಾಗಿ ಪ್ರಾರ್ಥಿಸಿದರೆ ಆ ಕೊಡಗಳು ತಿರುಗುತ್ತಾ ಮಳೆಯ ಸಂಕೇತ ತೋರುತ್ತದೆ."[೯] ಅನಂತರ ಮುತ್ತೈದೆಯರು, ಕೋರುಕನ್ನೆಯರು ಆಂಜನೇಯಸ್ವಾಮಿ ದೇವಾಲಯದ ಮುಂದೆ ಕೂಡಿಕೊಂಡು ಪೂಜೆ ಮಾಡುತ್ತಾರೆ. ಈ ಸಂಪ್ರದಾಯವು ಪ್ರಾಚೀನ ಕಾಲದಿಂದಲೂ ಇಂದಿನವರೆಗೆ ನಡೆದುಕೊಂಡು ಬಂದಿದೆ.

ಇ. ವೃದ್ಧಿ ಗಣಪತಿ

ಕುರುವತ್ತಿಯಲ್ಲಿ ಶ್ರೀ ಗಣೇಶ ಅಥವಾ ಸಕಲ ವಿಘ್ನನಿವಾರಕನಾದ ವಿಘ್ನೇಶ್ವರಸ್ವಾಮಿ ದೇವಾಲಯವಿದೆ. ಪ್ರಥಮ ಪೂಜೆಗೆ ಆದ್ಯನಾದ ಮಹಾಗಣಪತಿಯ ಪುಟ್ಟ ದೇವಾಲಯವು ಮೈಲಾರದಿಂದ ಕುರುವತ್ತಿಯ ಕಡೆಗೆ ಬರುವ ಮಾರ್ಗದಲ್ಲಿ ಊರಿನ ಸಮೀಪದಲ್ಲಿದೆ.

ಸಾಧಾರಣವಾದ ಈ ದೇವಾಲಯದಲ್ಲಿ ಸುಂದರವಾದ ವಿಘ್ನೇಶ್ವರನ ಮೂರ್ತಿಯಿದೆ. ಈ ಮೂರ್ತಿಯು ಉದ್ಭವ ಮೂರ್ತಿಯೆಂಬ ಪ್ರತೀತಿಯಿದೆ. ಈ ಗಣೇಶನಿಗೆ 'ವೃದ್ಧಿಗಣಪತಿ' ಎಂದು ಕರೆಯುತ್ತಾರೆ. ಏಕೆಂದರೆ ದಿನದಿನಕ್ಕೂ ಬೆಳೆಯುತ್ತಾನೆ ಎನ್ನುವ ನಂಬಿಕೆಯಿದೆ. ಊರಿನವರು ಈ ಮಹಾಗಣಪತಿಗೆ ತುಂಬಾ ವಿಜೃಂಭಣೆಯಿಂದ ವಿಶೇಷ ಪೂಜೆ, ಕಾರ್ತೀಕ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

ಈ. ಮದಲಗಟ್ಟೆ

ಮದಲಗಟ್ಟೆ ಗ್ರಾಮವು ಹಡಗಲಿ ತಾಲೂಕಿನ ಚಿಕ್ಕ ಹಳ್ಳಿಯಾಗಿದೆ. ಈ ಗ್ರಾಮದ ಪಕ್ಕದಲ್ಲಿಯೇ ತುಂಗಭದ್ರಾ ನದಿಯು ಹರಿಯುತ್ತಿದೆ. ಚಾರಿತ್ರಿಕವಾಗಿ ಹೇಳುವುದಾದರೆ ವಿಜಯನಗರದ ಅರಸರು ಈ ನದಿಗೆ ಅಣೆಕಟ್ಟನ್ನು ಕಟ್ಟಲು ಮೊದಲು ಪ್ರಾರಂಭಿಸಿ ಒಂದು ಒಡ್ಡನ್ನು ನಿರ್ಮಾಣಗೊಳಿಸಿದ್ದರು. ಆದರೆ ಕಾರಣಾಂತರಗಳಿಂದ ಈ ಯೋಜನೆ ಕಾರ್ಯಗತಗೊಳ್ಳದೆ ಹೋಯಿತು. ಈಗಿನ ಹೊಸ ಅಣೆಕಟ್ಟು ಹೊಸಪೇಟೆಯ ಹತ್ತಿರ ರಚನೆಯಾಗಿದ್ದರಿಂದ ಹಿಂದಿನ ಹಳೆಯ ಒಡ್ಡು ಹಾಳಾಗಿದೆ. ಆದರೂ ಸಹ ಅದರ ಅವಶೇಷಗಳು ಈಗಲೂ ಕಾಣಸಿಗುತ್ತವೆ. ಆರಂಭಿಸಿದ ಅಣೆಕಟ್ಟಿನ ಕಟ್ಟಡದ ಮೊದಲು ಘಟ್ಟವಾಗಿರುವುದರಿಂದ ಈ ಹಳ್ಳಿಗೆ 'ಮೊದಲು ಘಟ್ಟ' ಎಂಬ ಹೆಸರು ಬಂದಿದೆ. ಇಲ್ಲಿ ಒಂದು ಪ್ರಸಿದ್ಧವಾದ ಆಂಜನೇಯ ದೇವಾಲಯವಿದ್ದು ಹರಪನಹಳ್ಳಿ ಪಾಳೆಯಗಾರ ದಾದಾನಾಯಕನ ಅಧಿದೈವವೆಂದು ತಿಳಿದುಬರುತ್ತದೆ. ಇಂದಿಗೂ ಈ ಆಂಜನೇಯ ಸ್ವಾಮಿಗೆ ಎಲ್ಲ ಧರ್ಮದ ಜನಾಂಗದವರು ಪೂಜೆ, ಅರ್ಚನೆಯಿಂದ ಪೂಜಿಸುವುದು ವೈಶಿಷ್ಟ್ಯವಾಗಿದೆ.

೫. ಹಂಪಿ ಜಿನಾಲಯಗಳು

ಅ. ಪಾರ್ಶ್ವನಾಥ ಜಿನಾಲಯ

ಇತಿಹಾಸ ಪ್ರಸಿದ್ಧವಾದ ವಿಜಯನಗರದಲ್ಲಿಯ ಗಜಶಾಲೆಯ ಹಿಂಭಾಗದಲ್ಲಿ ಸುಂದರವಾದ ಪಾರ್ಶ್ವನಾಥನ ಜಿನಾಲಯವಿದೆ. "ಕ್ರಿ.ಶ.ಸು. ೧೪೨೬ರಲ್ಲಿ ಎರಡನೇ ದೇವರಾಯನು ಪಾರ್ಶ್ವನಾಥ ಜಿನಾಲಯವನ್ನು ನಿರ್ಮಿಸಿದ್ದಾನೆಂದು ಇಲ್ಲಿನ ಶಾಸನದಿಂದ ತಿಳಿದುಬರುತ್ತದೆ."[೧೦] ಈ ದೇವಾಲಯ ಎರಡು ಗರ್ಭಗೃಹ, ಸಭಾಮಂಟಪ ಹಾಗೂ ಮುಖಮಂಟಪಗಳಿಂದ ಕೂಡಿದೆ. ಮುಖ್ಯ ಗರ್ಭಗೃಹದ ಪ್ರವೇಶ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು ಲಲಾಟದಲ್ಲಿ ತೀರ್ಥಂಕರನ ಅಂದವಾದ ಶಿಲ್ಪವಿದೆ.

ಆ. ಗಾಣಗಿತ್ತಿ ಜಿನಾಲಯ

ಹಂಪಿ ಪರಿಸರದಲ್ಲಿರುವ ಗಾಣಗಿತ್ತಿ ಜಿನಾಲಯವು ಕ್ರಿ.ಶ. ೧೪ನೇ ಶತಮಾನದಲ್ಲಿ ನಿರ್ಮಾಣವಾಗಿದೆ. ಎರಡನೇ ಹರಿಹರನ ದಂಡನಾಯಕನಾದ 'ಇರುಗ'ನು ಈ ಗಾಣಗಿತ್ತಿ ದೇವಾಲಯವನ್ನು ಕಟ್ಟಿಸಿದ್ದಾನೆ. ಈ ಜಿನಾಲಯಕ್ಕೆ ಪೂರಕವಾಗಿ ಕುಂಟು ಜಿನನಾಥ ಜಿನಾಲಯ ಎಂಬ ಹೆಸರಿದೆ. ಕಳಿಂಗ ಶೈಲಿಯ ಮೇಲು ರಚನೆ ಪಿರಮಿಡ್ ಆಕಾರದಲ್ಲಿ ಮೆಟ್ಟಿಲು ಮೆಟ್ಟಿಲಾಗಿರುವಂತೆ ರಚಿಸಿದ್ದಾರೆ. ಈ ದೇವಾಲಯದ ಮುಂದೆ ಶಾಸನ ಸಹಿತ ಎತ್ತರದ ಸ್ತಂಭವಿದೆ. ಇದರ ಮೇಲೆ ಯಕ್ಷ ಯಕ್ಷಿಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಿರುವ ಸಾಧ್ಯತೆ ಕಂಡುಬರುತ್ತದೆ. ಈ ಶಾಸನದಲ್ಲಿ "ಎರಡನೆ ಹರಿಹರನ ಸಾಮಂತ ಇರುಗಪ್ಪ ದಂಡನಾಯಕನು ೧೩೮೫ ರಲ್ಲಿ ಬಸದಿ ನಿರ್ಮಿಸಿ ಕುಂಟು ಜಿನನಾಥನ ವಿಗ್ರಹವನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ."[೧೧]

ಹಂಪಿ ಧಾರ್ಮಿಕ ಕ್ಷೇತ್ರದಲ್ಲಿ ಶೈವ, ವೈಷ್ಣವ, ಜೈನ ಧರ್ಮಗಳು ಪ್ರಚಲಿತದಲ್ಲಿದ್ದಂತೆ ಇಸ್ಲಾಂ ಧರ್ಮವೂ ಸಹ ಪ್ರಚಲಿತದಲ್ಲಿತ್ತು. ಈ ಅಂಶಗಳನ್ನು ಗಮನಿಸಿದಾಗ ವಿಜಯನಗರದ ಅರಸರು ಧಾರ್ಮಿಕ ವಿಚಾರದಲ್ಲಿ ಉದಾರ ನೀತಿಯನ್ನು ಅನುಸರಿಸಿದ್ದು ಧರ್ಮ ಸಮನ್ವಯವನ್ನು ಕಾಪಾಡಿಕೊಂಡು ಬಂದಿದ್ದಾರೆ.

೬. ಇಸ್ಲಾಂ ಧರ್ಮ

ವಿಜಯನಗರದ ಅರಮನೆಯ ಈಶಾನ್ಯದಲ್ಲಿರುವ ಸಣ್ಣ ಪ್ರದೇಶವನ್ನು ಮುಸ್ಲಿಂ ಬಡಾವಣೆ ಎಂದು ಹೇಳಲಾಗಿದೆ. ಈ ಪರಿಸರದಲ್ಲಿ ಹಲವಾರು ಘೋರಿಗಳು, ಸಮಾಧಿಗಳು, ಕೆರೆಬಾವಿಗಳು ಮಸೀದಿಗಳಿವೆ. ಇಲ್ಲಿಯ “ಮಸೀದಿಯ ತೊಲೆಯ ಮೇಲೆ ಕೆತ್ತಿದ ಒಂದು ಶಾಸನದಲ್ಲಿ 'ಧರ್ಮಶಾಲಾ' ಎಂದು ಬರೆದಿದೆ. ಈ ಶಾಸನದ ಕಾಲ ಕ್ರಿ.ಶ. ೧೪೩೯ ಸೆಪ್ಟೆಂಬರ್ ೧೮ ಎರಡನೇ ದೇವರಾಯನ ಆಡಳಿತ ಕಾಲವಾಗಿದೆ.

ದಂಡವನ್ನು ಹಿಡಿಯುತ್ತಿದ್ದ ಒಬ್ಬ ಮುಸ್ಲಿಂ ಧರ್ಮದ ಅಧಿಕಾರಿ ಅಹಮ್ಮದ್‌ಖಾನ್ ಎಂಬಾತನು ಈ ಧರ್ಮಶಾಲಾವನ್ನು ಹಾಗೂ ಒಂದು ಬಾವಿಯನ್ನು ತನ್ನ ಒಡೆಯ ದೇವರಾಯನ ಪುಣ್ಯಕ್ಕಾಗಿ ನಿರ್ಮಿಸಿದ್ದಾನೆ. ಕಲ್ಲಿನಿಂದ ಕಟ್ಟಿರುವ ಈ ಕಟ್ಟಡವು ೫×೩ ಅಂಕಣಗಳುಳ್ಳ ಆಯತಾಕಾರದ ಹಜಾರವಾಗಿದೆ.” ಇಲ್ಲಿಯ ಇಸ್ಲಾಂ ಬಡಾವಣೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಇದ್ದು, ಇನ್ನೂ ಕೆಲವು ಸಣ್ಣಪುಟ್ಟ ಮುಸ್ಲಿಂ ಬಡಾವಣೆಗಳು ವಿಜಯನಗರದಲ್ಲಿದ್ದವು.

ಇತ್ತೀಚೆಗೆ ಹಂಪಿಯಲ್ಲಿ ಪುರಂದರ ಮಂಟಪದ ಸಮೀಪ ಈರಣ್ಣನ ಗುಡಿಯಿದೆ. ಇದರ ಪಕ್ಕ ಇದ್ದ ಮುಸ್ಲಿಂ ಸಂತನ ದರ್ಗಾ ಹೊಸದಾಗಿ ಪೂಜೆಗೆ ಒಳಗಾಗುತ್ತಿದೆ. ಪ್ರತಿ ವರ್ಷ ಉರುಸು ನಡೆಯುತ್ತದೆ. ಆದರೆ ಬಜರಂಗದಳ, ಆರ್.ಎಸ್.ಎಸ್.ನಂತಹ ಹಿಂದೂಧರ್ಮದ ಅಂಗಸಂಸ್ಥೆಗಳು ಈ ಉರುಸ್‌ನ್ನು ವಿರೋಧಿಸುತ್ತಿದ್ದಾರೆ. ಇಂದು ಈ ಸ್ಥಳ ಹಿಂದು-ಮುಸ್ಲಿಂ ಸಂಘರ್ಷದ ಸೂಕ್ಷ್ಮ ಸ್ಥಳವಾಗಿದೆ. ಇದು ಮತ್ತೊಂದು ಬಾಬಾಬುಡನ್‌ಗಿರಿ ಆಗುವ ಎಲ್ಲಾ ಸಾಧ್ಯತೆಗಳೂ ಇವೆ. ಕನ್ನಡದ ಪ್ರಸಿದ್ಧ ಚಿಂತಕರಾದ ಡಾ. ಚಿದಾನಂದಮೂರ್ತಿಯವರು ಈ ಬಗ್ಗೆ ಪ್ರಸ್ತಾಪಿಸಿದ್ದಾರೆ. ಚಾರಿತ್ರಿಕವಾಗಿ ಒಂದು ಕಾಲಕ್ಕೆ ಹಿಂದು-ಮುಸ್ಲಿಂ ಸಾಮರಸ್ಯ ಇದ್ದ ವಿಜಯನಗರ ಸಾಮ್ರಾಜ್ಯದ ಹಂಪಿ ಇಂದು ಕೋಮುವಾದಕ್ಕೆ ಕಾರಣವಾಗಿದೆ.

ಕರ್ನಾಟಕದಲ್ಲಿ ಪ್ರಸಿದ್ಧವಾದ ತುಂಗಭದ್ರಾ ನದಿ ಪರಿಸರದಲ್ಲಿ ಬರುವ ಎಲ್ಲಾ ಧರ್ಮಕ್ಷೇತ್ರಗಳನ್ನು ಅವಲೋಕಿಸಿದಾಗ ಇಲ್ಲಿಯ ಧಾರ್ಮಿಕ ಕ್ಷೇತ್ರಗಳು ಒಂದು ಮತ ಧರ್ಮಕ್ಕೆ, ಒಂದು ಜನಾಂಗಕ್ಕೆ ಸೇರಿಲ್ಲ. ಹಲವು ಧರ್ಮಗಳು, ಹಲವು ಜನಾಂಗಗಳು ಈ ನದಿ ಪರಿಸರದಲ್ಲಿ ಬಾಳಿದ್ದು ವಿವಿಧತೆಯಲ್ಲಿ ಏಕತೆಯನ್ನು ಕಾಯ್ದುಕೊಂಡು ಬಂದಿದೆ. ಕೆಳಸ್ತರದಿಂದ ಹಿಡಿದು ಮೇಲುಸ್ತರದವರೆಗಿನ ಜನಾಂಗಗಳು ಈ ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಯುವ ಹಬ್ಬ ಉತ್ಸವಗಳಲ್ಲಿ ಸಮತಾಭಾವದಿಂದ ಪಾಲ್ಗೊಂಡಿದ್ದಾರೆ. ಅಂತೆಯೇ ವಿಜಯನಗರದಲ್ಲಿಯೂ ಸರ್ವಧರ್ಮಗಳ ಸಂಗಮವನ್ನು ಕಾಣಬಹುದೆಂದು ನನ್ನ ನಂಬಿಕೆಯಾಗಿದೆ.

೬. ಕ್ರೈಸ್ತ ಧರ್ಮ

ವಿಜಯನಗರ ಸಾಮ್ರಾಜ್ಯದ ಹುಟ್ಟು, ಬೆಳವಣಿಗೆ, ಅಂದಿನ ಧಾರ್ಮಿಕ ಸಂಗತಿಗಳು, ಧಾರ್ಮಿಕ ವಲಯದಲ್ಲಿ ಆದಂತಹ ಸ್ಥಿತ್ಯಂತರಗಳು ಭಾರತೀಯರನ್ನಷ್ಟೇ ಅಲ್ಲದೆ ವಿಶ್ವದ ಅನೇಕರನ್ನು ಕುತೂಹಲಕ್ಕೀಡು ಮಾಡಿವೆ. ವಿಜಯನಗರವನ್ನಾಳಿದ ರಾಜಮನೆತನಗಳು ವಿಭಿನ್ನ ಮತ ಧರ್ಮ ಪಂಥಗಳನ್ನು ಕುರಿತು ತಾರತಮ್ಯದಿಂದ ನಡೆದುಕೊಂಡಿದ್ದರ ಬಗ್ಗೆ ಉದಾಹರಣೆ ಅಥವಾ ಆಧಾರಗಳಿಲ್ಲ. ಬದಲಾಗಿ ಸಹಿಷ್ಣುತೆಯ, ಸೌಹಾರ್ದದ ಧೋರಣೆಗಳನ್ನು ವ್ಯಕ್ತಪಡಿಸಿರುವುದೇ ಹೆಚ್ಚು. ಹೀಗಿರುವಾಗ ಇಂದು ಬೌದ್ಧ, ಜೈನ, ಇಸ್ಲಾಂ ಹಾಗೂ ಕ್ರೈಸ್ತ ಮತಧರ್ಮಗಳೂ ಸಹ ಒಟ್ಟೊಟ್ಟಿಗೆ ಸಾಗಿಬಂದ ಚಾರಿತ್ರಿಕ ಆದಾಗಿದೆ. ಇಂತಹ ಸಹನೆಯ ಪರಿಸರದ ಸಾಂಸ್ಕೃತಿಕ ಅಂಶಗಳನ್ನು ವಿಶ್ವದ ಅನೇಕ ಪ್ರವಾಸಿಗರನ್ನು ತಮ್ಮ ಕಥನಗಳಲ್ಲಿ ದಾಖಲಿಸುವಂತೆ ಪ್ರೇರೇಪಿಸಿದೆ.

ತುಂಗಭದ್ರಾ ನದಿ ಪರಿಸರದಲ್ಲಿಯ ವಿಜಯನಗರದ ಅರಸರು ಹಿಂದೂ ಹಾಗೂ ಮುಸ್ಲಿಂರಿಗೆ ನೀಡಿದ್ದ ರಕ್ಷಣೆ-ಪ್ರೋತ್ಸಾಹಗಳನ್ನು ಕ್ರೈಸ್ತ ಬಾಂಧವರಿಗೂ ನೀಡಿದ್ದಾರೆ. ಅದರಲ್ಲಿಯೂ ಕಡಲ ತೀರದಲ್ಲಿದ್ದ ರೋಮನ್ ಕ್ಯಾಥೋಲಿಕ್ ಮಿಶನರಿಗಳಿಗೆ ಯಾವುದೇ ಅಡ್ಡಿ ಆತಂಕಗಳಿರಲಿಲ್ಲ. ಮತಾಂತರದ ಪ್ರಕ್ರಿಯೆಗಳನ್ನು ನಡೆಸಿದ್ದ ಅಂದಿನ ಕ್ರೈಸ್ತ ಮಿಶನರಿಗಳು ಸೇಂಟ್ ಥೋಮ್ ಹಾಗೂ ನಾಗಪಟ್ಟಣಂಗಳಲ್ಲಿ ಚರ್ಚುಗಳನ್ನು ನಿರ್ಮಿಸಿದ್ದರು. ಅನಂತರ ಬಂದ ಜೆಸ್ಯೂಟ್‌ರು ಸಹ ಇದೇ ನಿಲುವನ್ನು ಅನುಸರಿಸಿದ್ದರು. ವಿಜಯನಗರದ ಅರಸರು ಇದಾವುದಕ್ಕೂ ಉದ್ವೇಗಗೊಳ್ಳದೆ ವಿದೇಶಿಯರನ್ನು ಪ್ರೀತಿಗೌರವಗಳಿಂದ ಕಂಡಿರುವುದು ತಿಳಿದುಬರುತ್ತದೆ. ಬಾರ್ಬೋಸನು ಹೇಳುವ ಪ್ರಕಾರ "ವಿದೇಶಿಯರಿಗೆ ವಿಜಯನಗರ ಸಾಮ್ರಾಜ್ಯದಲ್ಲಿ ಸ್ವಾತಂತ್ರ್ಯವಿತ್ತು. ಅಲ್ಲದೆ ಎಲ್ಲಾ ಕ್ರೈಸ್ತರಿಗೆ, ಕ್ರೈಸ್ತರಲ್ಲದವರಿಗೆ, ಮೂರರಿಗೆ, ಜ್ಯೂಗಳಿಗೆ ಹಾಗೂ ಪೋರ್ಚುಗೀಸ್ ಮೊದಲಾದವರಿಗೆ ಸಮಾನ ರೀತಿಯ ನೋಟ, ನ್ಯಾಯ ವಿತರಣೆಗಳನ್ನು ಮಾಡಲಾಗುತ್ತಿತ್ತು"[೧೩] ಎನ್ನಲಾಗಿದೆ.

ಟಿಪ್ಪಣಿಗಳು

೧. ಲೇ. ಹಿ.ಚಿ.ಶಾಂತವೀರಯ್ಯ, ಪವಾಡ ಪುರುಷ ಉಕ್ಕಡಗಾತ್ರಿ ಅಜ್ಜಯ್ಯ ಶ್ರೀಕರಿಬಸವೇಶ್ವರರು, ಕರಿಬಸವೇಶ್ವರ ಗದ್ದಿಗೆ ಟ್ರಸ್ಟ್ ಕಮಿಟಿ, ಉಕ್ಕಡಗತ್ರಿ, ೧೯೯೫, ಪು.೧.

೨. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, **ಭಾವೈಕ್ಯ**, ವಾರ್ಷಿಕ ಸಂಭ್ರಮ-೨೦೦೫, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೭೬.

೩. ಶ್ರೀ ಹೆಚ್.ಎಂ. ಶಂಕರನಾರಾಯಣರಾವ್, **ಶ್ರೀ ಹರಿಹರ ದೇವಾಲಯ**, ಶಾರದಾ ಮಂದಿರ, ರಾಮಯ್ಯ ರಸ್ತೆ, ಮೈಸೂರು, ೧೯೮೨, ಪು.೧೮.

೪. ಲೇ : ಟಿ. ಗಿರಿಜಾ, **ಶ್ರೀ ಕುರುವತ್ತಿ** ಬಸವೇಶ್ವರ **ಕ್ಷೇತ್ರದರ್ಶನ**, ಬಸವಮಿತ್ರ ಬಳಗ, ದಾವಣಗೆರೆ, ೨೦೦೦, ಪು.೧.

೫. ಡಾ.ಕೆ.ಎಂ. ಸುರೇಶ, ಇತರರು, **ಕರ್ನಾಟಕ ದೇವಾಲಯ ಕೋಶ-ಕೊಪ್ಪಳ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೮೪.

೬. **ತುಂಗ ಮತ್ತು ಭದ್ರಾ ನದಿಗಳ ಹುಟ್ಟು, ಪಾತ್ರ ಹಾಗೂ ಜಲಚರಗಳ ಕುರಿತ ಅಧ್ಯಯನ ವರದಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೯೮.

೭. ಡಾ.ಪುರುಷೋತ್ತಮ ಬಿಳಿಮಲೆ, **ಹುಲಿಗೆಮ್ಮ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪು. ೩.

೮. ಡಾ.ಕೆ.ಎಂ. ಸುರೇಶ, ಇತರರು, **ಕರ್ನಾಟಕ ದೇವಾಲಯ ಕೋಶ-ಕೊಪ್ಪಳ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೧೧೯-೧೨೦.

೯. ಲೇ : ಟಿ. ಗಿರಿಜಾ, **ಶ್ರೀ ಕುರುವತ್ತಿ** ಬಸವೇಶ್ವರ **ಕ್ಷೇತ್ರದರ್ಶನ**, ಬಸವಮಿತ್ರ ಬಳಗ, ದಾವಣಗೆರೆ, ೨೦೦೦, ಪು.೪೨.

೧೦. ಲೇ : ಪ್ರೊ. ಷೇಕ್‌ಅಲಿ, ಪ್ರೊ.ಕೆ.ಎಸ್. ಶಿವಣ್ಣ, **ಕರ್ನಾಟಕ ಚರಿತ್ರೆ ಸಂಪುಟ-೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೩೫೯.

೧೧. ......ಅದೇ..... ಪು.೩೫೮.

೧೨. ......ಅದೇ..... ಪು.೩೬೩.

೧೩. ಪ್ರ.ಸಂ. ಪ್ರೊ. ಪಿ.ಷೇಕ್ ಅಲಿ, ಸಂ.ಸಂ. ಪ್ರೊ. ಕೆ.ಎಸ್. ಶಿವಣ್ಣ, **ಕರ್ನಾಟಕ ಚರಿತ್ರೆ-ಸಂ.೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭..

* * * * *

ಅಧ್ಯಾಯ ೫

ಶೈವ ಧರ್ಮದ ಕ್ಷೇತ್ರಗಳು

ಅಧ್ಯಾಯ ಐದು

ಶೈವ ಧರ್ಮದ ಕ್ಷೇತ್ರಗಳು

ಕನ್ನಡ ನಾಡಿನಲ್ಲಿಯ ಹಲವಾರು ಪ್ರಮುಖ ಜೀವಂತ ನದಿಗಳಲ್ಲಿ ತುಂಗಭದ್ರಾ ನದಿಯೂ ಒಂದಾಗಿದೆ. ತುಂಗಭದ್ರೆಯು ತಾನು ಹರಿದಿರುವೆಡೆಯಲ್ಲಿ ತನ್ನ ತೀರದಲ್ಲಿ ಅನೇಕ ತೀರ್ಥಕ್ಷೇತ್ರಗಳನ್ನು ಹೊಂದಿ ಪವಿತ್ರ ತೀರ್ಥವೆನಿಸಿದ್ದಾಳೆ. ತುಂಗಭದ್ರೆಯು ಪೂರ್ವ ಪಶ್ಚಿಮವಾಹಿನಿಯಾಗಿ ಹರಿದು ತನ್ನ ತೀರದಲ್ಲಿರುವ ಪವಿತ್ರ ಕ್ಷೇತ್ರವನ್ನು 'ದಕ್ಷಿಣ ಕಾಶಿ' ಎನ್ನುವ ಪುಣ್ಯಕ್ಷೇತ್ರಗಳನ್ನಾಗಿಸಿದ ಹೆಗ್ಗಳಿಕೆಯನ್ನು ಹೊಂದಿದ್ದಾಳೆ. ಈ ತುಂಗಭದ್ರಾ ನದಿಗೆ ಪ್ರಾಚೀನ ಇತಿಹಾಸವಿದೆ. ಪುರಾಣ, ದಂತಕತೆಗಳಲ್ಲಿ ಅನೇಕ ಮಹತ್ವದ ಮಾಹಿತಿಗಳು ದೊರೆಯುತ್ತವೆ. ಪ್ರಾಗೈತಿಹಾಸಿಕ ಕಾಲದಿಂದಲೂ ತನ್ನ ಜೀವಂತಿಕೆಯಿಂದ ನಾಡಿನ ಜನತೆಗೆ ಉಪಕಾರಿಯಾಗಿ, ಅನೇಕ ಐತಿಹಾಸಿಕ ತಾಣಗಳಿಗೆ ನೆಲೆಯಾಗಿ, ಘಟನಾವಳಿಗಳಿಗೆ ಸಾಕ್ಷಿಯಾಗಿ ಅಂದಿನಿಂದ ಇಂದಿನವರೆಗೂ ಮೈದುಂಬಿ ಹರಿಯುತ್ತಿದ್ದಾಳೆ ತುಂಗಭದ್ರೆ. ಈ ನದಿ ಪರಿಸರವು ಹಲವು ಧರ್ಮಗಳ ತಾಣವೂ ಆಗಿದೆ. ತುಂಗಭದ್ರೆಯ ತೀರದಲ್ಲಿ ಉಕ್ಕಡ ಗಾತ್ರಿ, ಹರಿಹರ, ಕುರುವತ್ತಿ, ಮೈಲಾರ ಹಂಪಿ, ಇತ್ಯಾದಿ ಶೈವ ಧಾರ್ಮಿಕ ಕ್ಷೇತ್ರಗಳು ಕಂಡುಬರುತ್ತವೆ.

ಪ್ರಸ್ತುತ ಈ ಭಾಗದಲ್ಲಿ ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಚರ್ಚೆಯನ್ನು ಮಾಡಲಾಗಿದೆ. ತುಂಗಭದ್ರೆ ನದಿ ಪರಿಸರಕ್ಕೂ, ಶೈವ ಧಾರ್ಮಿಕ ಕೇಂದ್ರಗಳಿಗೂ ಇರುವ ಸಾಂಸ್ಕೃತಿಕ ಸಂಬಂಧಗಳನ್ನು ತೌಲನಿಕವಾಗಿ ಪರಿಶೀಲಿಸಲಾಗಿದೆ. ಒಂದು ಪರಿಸರದಲ್ಲಿ ಶೈವ ಧರ್ಮ ಇಷ್ಟೊಂದು ಪ್ರಬಲವಾಗಿ ಬೆಳೆಯಲು ಇರುವ ಸಾಂಸ್ಕೃತಿಕ ಒತ್ತಡಗಳನ್ನು ಗಮನಿಸಿದೆ.

೧. ಕುರುವತ್ತಿ

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿಗೆ ಸೇರಿದ ಕುರುವತ್ತಿ ಗ್ರಾಮ ಹಡಗಲಿಯಿಂದ ೩೬ ಕಿ.ಮೀ. ದೂರದಲ್ಲಿ ನೈಋತ್ಯ ದಿಕ್ಕಿನಲ್ಲಿದೆ. ತುಂಗಭದ್ರಾ ನದಿ ಬಲದಂಡೆಯ ತೀರದಲ್ಲಿರುವ ಪುಣ್ಯ ಧಾರ್ಮಿಕ ಕ್ಷೇತ್ರವೇ ಕುರುವತ್ತಿಯಾಗಿದೆ. ಕುರುವತ್ತಿಯು ಪ್ರಾಚೀನ ಕಾಲದಲ್ಲಿ ಐತಿಹಾಸಿಕ, ಧಾರ್ಮಿಕ ಹಿನ್ನೆಲೆಯುಳ್ಳ ಗ್ರಾಮವಾಗಿದೆ.

ಜಾನಪದ ಸಾಹಿತ್ಯದಲ್ಲಿ ತುಂಗಭದ್ರಾ ನದಿ ಹಾಗೂ ಕುರುವತ್ತಿಯ ಸಮಾಗಮವನ್ನು ಈ ಕೆಳಗಿನಂತೆ ಹಾಡಿದ್ದಾರೆ.

"ತುಂಗಭದ್ರೆಯು ಹರಿದು ನಿಮ್ಮ ಪಾದವ ತೊಳೆದು

ಧನ್ಯಳಾಗುವೆನೆಂದು ಭೋರೆಂದು ಬರುತಿಹಳು.

ನಮೋ ನಮೋ ನಿನಗೆ ಕುರುವತ್ತಿಯ ಶ್ರೀಬಸವೇಶಾ||"[೧]

ಎಂಬುದಾಗಿ ಹಾಡಿದ್ದಾರೆ.

ಕುರುವತ್ತಿ ಸ್ಥಳನಾಮದ ವ್ಯುತ್ಪತ್ತಿ

ತುಂಗಭದ್ರಾ ನದಿ ತೀರದಲ್ಲಿಯ ಕುರುವತ್ತಿಯು ಬಹಳ ಪ್ರಸಿದ್ಧ ಸ್ಥಳವಾಗಿದೆ. ಊರ ಹತ್ತಿರದಲ್ಲಿ ಸೋಮೇಶ್ವರ ಲಿಂಗ ಸ್ವಯಂಭೂವಾಗಿ ಉದ್ಭವವಾದಾಗ ಅಲ್ಲಿಯ ಜನರಿಗೆ ಸಂತೋಷ ಉಂಟಾಗಿ ನದಿಯ ತೀರಕ್ಕೆ ಬಂದು ಈಶ್ವರನ ದರ್ಶನ ಪಡೆದು ಪುನೀತರಾದರು. "ದೇವರು ಈಶ್ವರನ ರೂಪದಲ್ಲಿ ಕುರುಹು ತೋರಿದನೆಂದು, ನದಿ ತೀರದ ವರ್ತಿಯಲ್ಲಿ ಲಿಂಗೋದ್ಭವವಾದುದರಿಂದ ವರತಿ-ವರ್ತಿ - ಎಂದು ಕುರುಹಿನ ವರ್ತಿ > ಕುರುವರ್ತಿ > ಕುರುವತ್ತಿ ಎಂದು ಹೆಸರು ಬಂದಿದೆ"[೨] ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಒಂದು ಕಾಲದಲ್ಲಿ ಕುರುವತ್ತಿ ಬ್ರಾಹ್ಮಣ ಸಮುದಾಯವಿದ್ದ ಅಗ್ರಹಾರವಾಗಿತ್ತು ಎಂಬುದಕ್ಕೆ ಶಾಸನದಲ್ಲಿ ಉಲ್ಲೇಖವಿದೆ.

"ಈ ನಾಡಳಗ್ರಹಾರಂ

ಭೂನಾರೀಹಾರ ಮದಿಕ ವಿಭುಧಾಧಾರಂ

ಶ್ರೀ ನಾರಿ ಗಿರಲ ಗಾರಂ

ಭೂ ನಿಧಿ ಕುರುವರ್ತಿನೋಡೆ ಸೊಗಯಿಸುತಿರ್ಕುಂ"[೩]

ಹೀಗೆ ಶಾಸನದಲ್ಲಿ ಕುರುವತ್ತಿ ಅಗ್ರಹಾರದ ಸೊಗಸಾದ ವರ್ಣನೆಯಿದೆ.

ಕುರುವತ್ತಿ:ಧಾರ್ಮಿಕ ಕ್ಷೇತ್ರ

ಒಂದು ಊರಿನ ಸಾಂಸ್ಕೃತಿಕ ಬದುಕನ್ನು ಗುರುತಿಸಬೇಕಾದರೆ ಆ ಊರಿನ ಧಾರ್ಮಿಕ ಪರಂಪರೆಯನ್ನು ಗಮನಿಸಬೇಕಾಗುತ್ತದೆ. ಇವೆರಡನ್ನು ಗುರುತಿಸಬೇಕಾದರೆ ಊರಿನ ದೇವಾಲಯ, ದೇವರುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿಯ ಸಂಪ್ರದಾಯ, ಸಂಸ್ಕಾರಗಳನ್ನು ಪರಿಶೀಲಿಸುವ ಅಗತ್ಯವಿದೆ. ಆಗಲೇ ಧಾರ್ಮಿಕ ಶಬ್ದಕ್ಕೆ ಅರ್ಥ ಸಿಗುತ್ತದೆ.

'ದೇವರಿಲ್ಲದ ಗುಡಿ ಇರಬಹುದು, ಆದರೆ ಗುಡಿಯಿಲ್ಲದ ಊರುಂಟೇ?' ನಾವು ನೀವು ಯಾರೇ ಆಗಲಿ ದೇವರನ್ನು ಬಿಟ್ಟು ಬದುಕಬಲ್ಲೆವೆ? ಯಾವ ಜಾತಿ ಕುಲದವರೇ ಇರಲಿ. ಅವರವರ ಭಾವದಲಿ

ದೇವರು ಆರಾಧಿಸಲ್ಪಡುತ್ತಾನೆ. ಜಪ-ತಪ-ನಿಷ್ಠೆ-ನೇಮ, ಮಡಿ-ಉಡಿ, ಪ್ರಾರ್ಥನೆ ಇತ್ಯಾದಿಗಳಿಂದ ಮನುಷ್ಯರು ಹಾಗೂ ದೇವರಲ್ಲಿ ಅವಿನಾಭಾವನೆಯ ಸಂಪರ್ಕ ತುಂಬಿ ಬರುತ್ತದೆ.

ಧಾರ್ಮಿಕ ನೆಲೆಯಿಂದ ಕುರುವತ್ತಿಯನ್ನು ನೋಡಿದಾಗ ಕುರುವತ್ತಿಯಲ್ಲಿ ಅನೇಕ ದೇವರುಗಳ, ದೇವಾಲಯಗಳ ಆಗರವಾಗಿದೆ. ಕುರುವತ್ತಿಯ ದೇವಾಲಯಗಳಲ್ಲಿ, ಶ್ರೀ ಸೋಮೇಶ್ವರ, ಶ್ರೀಕಲ್ಲೇಶ್ವರ, ಮಲ್ಲಿಕಾರ್ಜುನ ಅತ್ಯಂತ ಪ್ರಮುಖವಾಗಿವೆ. ಕುರುವತ್ತಿಯ ಸಮಗ್ರ ಬದುಕಿಗೆ ಜೀವಕಳೆಯನ್ನು ತಂದಿರುವ ದೇವರೆಂದರೆ ಮಲ್ಲಿಕಾರ್ಜುನ ದೇವಾಲಯದ ಎದುರಿನಲ್ಲಿರುವ ಬಸವಣ್ಣ ದೇವರು. ಈ ಬಸವಣ್ಣನೇ ಸಮಸ್ತರ ಆರಾಧ್ಯ ದೈವ. ಭಕ್ತರ ಮಹಿಮಾ ಪುರುಷ ಸಕಲಕಲಾ ವೈಭವೀ ಕೃತನಾಗಿದ್ದಾನೆ.

ಕುರುವತ್ತಿಯಲ್ಲಿ ಊರಿನ ಪ್ರಮುಖ ದೊಡ್ಡ ದೇವಾಲಯವೆಂದರೆ ಮಲ್ಲಿಕಾರ್ಜುನ ದೇವಾಲಯ. ಆದರೆ ದೇವಾಲಯದ ಮುಂದಿರುವ ಬೃಹತ್ ಬಸವನ ವಿಗ್ರಹವು ಅತ್ಯಂತ ಪ್ರಮುಖವೆನಿಸಿದೆ. ಇದು ಬಸವಣ್ಣನ ಹೆಚ್ಚುಗಾರಿಕೆಯ ಸಂಕೇತವಾಗಿದೆ. ಕುರುವತ್ತಿಯ ಧಾರ್ಮಿಕ ಕೇಂದ್ರ ದೇವರೇ ಬಸವಣ್ಣ. ಇಲ್ಲಿ ಈಶ್ವರನಿಗಿಂತ (ಮಲ್ಲಿಕಾರ್ಜುನ) ಬಸವಣ್ಣನಿಗೆ ಅಗ್ರ ಪೂಜೆ ಸಲ್ಲುವ ಕಾರಣವೇನೆಂದರೆ "ಭೂ ದೇವಿಯನ್ನು ಎತ್ತಿ ಹಿಡಿದು ರಕ್ಷಿಸಿದ ನಂದಿಗೆ ಶಿವನು ಹೇಳುತ್ತಾನೆ. ನೀನು ಭೂಮಂಡಲದಲ್ಲಿ ಭೂಮಿಯನ್ನು ಬಿತ್ತುವಲ್ಲಿ, ಎತ್ತಾಗಿ ಜನ್ಮ ತಳೆದು ಮನುಕುಲ ಕೋಟೆಗೆ ಉಪಕಾರಿಯಾಗು ಎಂದಾಗ, ಮಾನವರು ನನ್ನ ಮೇಲೆ ಕನಿಕರವಿಲ್ಲದೆ ಹಿಂಸೆಗೈದರೆ ಎಂದು ಬಸವ ಶಂಕಿಸಿದಾಗ ಕುರುಹು ತೋರಿದ ನಿನಗೆ ಇಲ್ಲಿ ಅಗ್ರ ಪೂಜೆ ಸಲ್ಲುತ್ತದೆ. ನಿನಗಾಗುವ ತೊಂದರೆಯನ್ನು ನಾನು ಸ್ವೀಕರಿಸುತ್ತೇನೆ"' ಎಂದು ಅಭಯವಿತ್ತಾಗ ನಂದೀಶ್ವರ ಒಪ್ಪಿ ಎತ್ತಾಗಿ ಕುರುವತ್ತಿಯಲ್ಲಿ ಜನ್ಮ ತಾಳುತ್ತಾನೆ. ಆದಕಾರಣ ಮಲ್ಲಿಕಾರ್ಜುನ ದೇವರಿಗಿಂತ ಬಸವಣ್ಣನಿಗೆ ಅಗ್ರಪೂಜೆ. ಆತನ ಹೆಸರಿನಲ್ಲಿಯೇ ಸಕಲ ಮಂಗಳ ಕಾರ್ಯಗಳು ನಡೆಯುತ್ತವೆ. ಇಲ್ಲಿ ನಡೆಯುವ ಧಾರ್ಮಿಕ ಉತ್ಸವಕ್ಕೆ "ಕುರುವತ್ತಿ ಬಸವಣ್ಣನ ಜಾತ್ರೆ" ಎಂದೇ ಕರೆಯುತ್ತಾರೆ.

೧೨ನೇ ಶತಮಾನದ ಭಕ್ತಿ ಭಂಡಾರಿ ಬಸವಣ್ಣನಂತೆ, ಸಮಾಜವಾದಿ, ಕಾಯಕವಾದಿ ಬಸವಣ್ಣನಂತೆ. ಕುರುವತ್ತಿ ಬಸವಣ್ಣ ಸಕಲ ಜೀವಾತ್ಮರಿಗೆ ಲೇಸನ್ನೇ ಮಾಡುತ್ತಾನೆ. ಜಾತಿ, ಕುಲ, ಬೇಧಗಳಿಲ್ಲದೆ ಭಕ್ತಕೋಟಿಯನ್ನು ಹೊಂದಿದ್ದಾನೆ. ಶೈವ ಧಾರ್ಮಿಕ ಪರಂಪರೆಗೆ ಸಾಕ್ಷಿ ಸಂಕೇತವಾಗಿದ್ದಾನೆ ಕುರವತ್ತಿ ಭಸವಣ್ಣ.

ಕುರುವತ್ತಿ ಬಸವಣ್ಣನ ದೇವಾಲಯ

ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯದ ಮುಂದೆ ನಂದಿ ಮಂಟಪವಿದೆ. ಈ ಮಂಟಪದ ಮಧ್ಯೆ ಬೃಹತ್ತಾದ ಬಸವಣ್ಣನ ಮೂರ್ತಿಯ ಶ್ರೀ ಮಲ್ಲಿಕಾರ್ಜುನ ಲಿಂಗಕ್ಕೆ ಅಭಿಮುಖವಾಗಿ ಸದಾ ಈಶ್ವರನ ದರ್ಶನ ಮಾಡುತ್ತಲೇ ಇದ್ದಾನೆ. ಎಲ್ಲಿಯೂ ನಂದಿಯು ನಿಂತ ಭಂಗಿಯಲ್ಲಿ ಇರುವುದಿಲ್ಲ. ಆರಾಮವಾಗಿ ಕುಳಿತು ವಿಶ್ರಮಿಸುವ ರೀತಿಯಲ್ಲಿ ಮೈಚಾಚಿಕೊಂಡಿದೆ. ಕುರುವತ್ತಿಯ ಬಸವೇಶ್ವರ ವಿಗ್ರಹವು

ಮಂಡಿಯೂರಿದಂತೆ ಎಡ ಮುಂಗಾಲನ್ನು ಸ್ವಲ್ಪ ಮೇಲೆತ್ತಿ ಮಡಚಿದಂತೆ, ಮುಖವೆತ್ತಿ ಪ್ರಶಾಂತಮುಖ ಮುದ್ರೆಯಿಂದ ಶಿವನನ್ನೇ ಧ್ಯಾನಿಸುವ - ಧ್ಯಾನಸ್ಥನಂತೆ, ಪ್ರಶಾಂತ ಕಣ್ಣುಗಳನ್ನು ತೆರೆದು ನೋಡುವ ಭಂಗಿಯು ಮನಮೋಹಕವಾಗಿದೆ.

ಹಣೆಯ ಮೇಲೆ ಚಿತ್ತಾರದ ಕೆತ್ತನೆಯ ಸರಮಾಲೆ ಪುಟ್ಟನೆಟ್ಟನೆಯ ದಪ್ಪ ಕೋಡುಗಳು, ಮಲ್ಲಿಕಾರ್ಜುನ ದೇವರ ಮುಂದಿನ ಘಂಟೆಗಳ ನಿನಾದವನ್ನೇ ಆಲಿಸುವಂತೆ ನಿಮಿರಿನಿಂತ ಕಿವಿಗಳು, ಕೊರಳಿಗೆ ಸರಗಳ ಜೋಡು ಮಾಲೆ, ದುಂಡುಗೆಜ್ಜೆಯ ಗಂಟೆಯ ಸರಮಾಲೆಯನ್ನು ಉದ್ದಕ್ಕೂ ಧರಿಸಿದ್ದಾನೆ. ಶಿವ ಮಂತ್ರ ಜಪಿಸುತ್ತಿರುವ ದುಂಡುಬಾಯಿ, ಮುಂಗಾಲುಗಳನ್ನು ಊರಿ, ಮಲ್ಲಿಕಾರ್ಜುನನಿಗೆ ನಮಿಸುವಂತಿರುವ ಕುರುವತ್ತಿ ಬಸವಣ್ಣನ ಭಾವ ಭಂಗಿಯನ್ನು ನೋಡಿದರೆ ನಿಜಕ್ಕೂ ಭಕ್ತರ ಶಿರ ತಾನಾಗಿಯೇ ಬಸವನ ಮುಂದೆ ಭಕ್ತಿಯಿಂದ ಬಾಗುತ್ತದೆ. ಮನ ಬಸವಾ. ಬಸವಾ.. ಎಂದು ಜಪಿಸುತ್ತದೆ.

ಒಂದು ಸರಳ ಮಂಟಪದ ಗುಡಿಯಲ್ಲಿರುವ ಕುರುವತ್ತಿಯ ಕಲಾತ್ಮಕ ಬಸವಣ್ಣನ ಪವಾಡ ಅಸಾಧಾರಣವೆಂದೇ ಹೇಳುತ್ತಾರೆ. ನಂಬಿದವರ ಸಕಲ ಇಷ್ಟಾರ್ಥಗಳನ್ನು ಈಡೇರಿಸುವ ಸಿದ್ಧಪುರುಷ ಎನ್ನುವ ನಂಬಿಕೆ ಭಕ್ತರಲ್ಲಿ ಬೇರೂರಿದೆ. ಬಸವಣ್ಣನಿಂದಲೇ ಕುರುವತ್ತಿ ಜಾಗೃತ ಭೂಮಿಯಾಗಿದೆ. ಈತನಿಂದಲೇ ಕುರುವತ್ತಿಗೆ ಮಹತ್ವ. ಈತನಿಲ್ಲದ ಕುರುವತ್ತಿಯನ್ನು ಊಹಿಸಲೂ ಅಸಾಧ್ಯ. ಕುರುವತ್ತಿ ಬಸವಣ್ಣ ಅನೇಕರಿಗೆ ಮನೆದೇವರು, ಅದರಲ್ಲಿಯೂ ಶೈವಧರ್ಮದವರಿಗೆ ಆರಾಧ್ಯದೈವ ಕುರುವತ್ತಿ ಬಸವಣ್ಣ ಲೋಕ ವಿಖ್ಯಾತ. ಈ ಕಾರಣದಿಂದಲೇ ಕುರುವತ್ತಿಯ ಬಸವಣ್ಣನಿಗೆ ತ್ರಿಕಾಲ ಪೂಜೆ ಸೋಮವಾರ ನೇಮನಿಷ್ಠೆಯ ದಿನ. ಹಬ್ಬಹರಿದಿನಗಳಲ್ಲಿ ವಿಶೇಷ ಪೂಜೆ ಜರುಗುತ್ತವೆ.

ಕತ್ತಲೆಯು ಕಳೆದು ಸುಜ್ಞಾನದ ಜ್ಯೋತಿ ಬೆಳಗಿಸಿದಂತೆ ಬಸವಣ್ಣನಿಗೆ ಕಾರ್ತೀಕ ಮಾಸದಲ್ಲಿ ದೀಪಾರಾಧನೆಯು ಕಾರ್ತೀಕೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಶಿವಸನ್ನಿಧಿಯ ಬಸವಣ್ಣನಿಗೆ ಪ್ರತಿವರ್ಷ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ, ಶಿವರಾತ್ರಿಯ ಮುಂದೆ ಶ್ರೀಮಲ್ಲಿಕಾರ್ಜುನ ದೇವರ ರಥೋತ್ಸವ ಮತ್ತು ಬಸವಣ್ಣ ದೇವರ ದೊಡ್ಡ ಜಾತ್ರೆ ನಡೆಸುತ್ತಾರೆ. ಕುರುವತ್ತಿಗೆ ಬಂದ ಭಕ್ತರು ಮಲ್ಲಿಕಾರ್ಜುನ ದೇವರ ತೇರಿಗೆ ಹೋಗಿದ್ದೆವೆಂದು ಹೇಳದೆ ಕುರುವತ್ತಿ ಬಸವಣ್ಣನ ಜಾತ್ರೆಗೆ ಹೋಗಿದ್ದೆವೆಂದೇ ಹೇಳುತ್ತಾರೆ. ಕುರುವತ್ತಿ ಬಸವಣ್ಣ ತನ್ನ ಭಕ್ತರ ಅಂತರಾಳದಲ್ಲಿ ಅಷ್ಟೊಂದು ಪ್ರಭಾವ ಬೀರಿದ್ದಾನೆ.

ಮಲ್ಲಿಕಾರ್ಜುನ ದೇವಾಲಯ

ಶ್ರೀಮಲ್ಲಿಕಾರ್ಜುನ ದೇವಾಲಯವು ಕುರುವತ್ತಿಯ ದೊಡ್ಡ ದೇವಾಲಯವಾಗಿದೆ. ಈ ದೇವಾಲಯ ವನ್ನು ಕ್ರಿ.ಶ. ೧೦೬೮ರಲ್ಲಿ ಚಾಲುಕ್ಯ ದೊರೆ ಅಹವ ಮಲ್ಲನಿಂದ ನಿರ್ಮಾಣಗೊಂಡಿದೆ. ಮಲ್ಲಿಕಾರ್ಜುನ ದೇವರಿಗೆ ಶಾಸನಗಳಲ್ಲಿ "ಅಹವ ಮಲ್ಲೇಶ್ವರ" ಎಂದು ಉಲ್ಲೇಖಿಸಲಾಗಿದೆ. ಮಲ್ಲಿಕಾರ್ಜುನ ಗುಡಿಯ ತೊಲೆಯ ಹತ್ತಿರದ ಶಾಸನದಲ್ಲಿ "ಕ್ರಿ.ಶ. ೧೧೯೪ರ ಮಾರ್ಚಿ ೨೫ ಶುಕ್ರವಾರ ಹೊಯ್ಸಳರ ಎರಡನೆಯ

ವೀರಬಲ್ಲಾಳನು ಬಾಳ್ಗುಳಿ ನೆಲೆವೀಡಿನಲ್ಲಿದ್ದಾಗ, ಜೆನ್ನೆವೂರು ಹನ್ನೆರಡರ ಕುರುವತ್ತಿ ಗ್ರಾಮದ ಅಹವ ಮಲ್ಲೇಶ್ವರ ದೇವರ ಸೇವಾ ಕಾರ್ಯಕ್ಕೆ ಲೋಕಾಭರಣ ಮುನೀಂದ್ರರಿಗೆ ಮುಕ್ಕರಬ್ಬಿ ಗ್ರಾಮದ ಭೂಮಿಯನ್ನು ಜೆನ್ನವೂರು ೧೨ ರ ಚಂದರಸರ ಒಪ್ಪಿಗೆ ಮೇರೆಗೆ ದತ್ತಿ ಕೊಟ್ಟರು" ಎಂದು ಉಲ್ಲೇಖಗೊಂಡಿದೆ.

ಕಪ್ಪು ಶಿಲೆಯಲ್ಲಿ ನಿರ್ಮಾಣವಾದ ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ಹಾಗೂ ನಂದಿಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಪ್ರವೇಶ ದ್ವಾರವು ಐದು ಶಾಖೆಗಳಿಂದ ಕೂಡಿದೆ. ತೆರೆದ ಅಂತರಾಳದಲ್ಲಿ ಎರಡು ಕಂಬಗಳ ಮೇಲೆ ತೋರಣವಿದೆ. ಇದರಲ್ಲಿ ಇಬ್ಬರು ಚಾಮರಧಾರೆಯ ಸ್ತ್ರೀಯರು ಮಧ್ಯಭಾಗದಲ್ಲಿ ಶಿವ ಹಾಗೂ ಕೇಶವರ ಉಬ್ಬುಶಿಲ್ಪಗಳು ಸಮಭಂಗಿಯಲ್ಲಿವೆ. ಈ ದೇವಾಲಯವು ಚಾಲುಕ್ಯರ ಕಾಲದಲ್ಲಿ ನಿರ್ಮಿಸಿದರೂ ಹೊಯ್ಸಳ ಅರಸರ ಬೇರೆ ಬೇರೆ ಅವಧಿಯಲ್ಲಿ ಹೊಸ ಹೊಸ ಭಾಗಗಳನ್ನು ಸೇರಿಸಿಕೊಂಡು ವಿಸ್ತರಿಸಿ. ಚಾಲುಕ್ಯರಿಂದ ಹೊಯ್ಸಳರಿಗೆ ಕೊಂಡಿಯಾಗಿದೆ.

ಸೋಮೇಶ್ವರ ದೇವಾಲಯ

ಸುಮಾರು ೯೦೦ ವರ್ಷಗಳ ಹಿಂದೆ ಕ್ರಿ.ಶ. ೧೦೯೯ರಲ್ಲಿ ಕುರುವತ್ತಿ ಗ್ರಾಮಕ್ಕೆ ಹತ್ತಿರದಲ್ಲಿ ಕುರುವತ್ತಿ ಮೈಲಾರ ಗ್ರಾಮಗಳ ಮಧ್ಯೆ ತುಂಗಭದ್ರಾ ನದಿತೀರದಲ್ಲಿ ಶ್ರೀಸೋಮೇಶ್ವರ ಲಿಂಗ ಉದ್ಭವವಾದಾಗ ಊರಿನ ಜನರೆಲ್ಲಾ ನದಿತೀರಕ್ಕೆ ಬಂದು ಈಶ್ವರ ಲಿಂಗದರ್ಶನ ಮಾಡಿ ಶ್ರೀ ಸೋಮೇಶ್ವರ ಲಿಂಗವೆಂದು ಕೈಮುಗಿದು ಸಂತೋಷಪಟ್ಟರು.

ಈ ಸೋಮೇಶ್ವರ ಸ್ಥಳೀಯರಿಗೆ 'ಸ್ವಾಮಿ ಲಿಂಗಪ್ಪ'ನಾದ. ಕಲ್ಲೇಶ್ವರ ಗುಡಿಯ ಶಾಸನದ ಪ್ರಕಾರ "ಕ್ರಿ.ಶ. ೧೦೯೯ರ ಜೂನ್ ತಿಂಗಳು ಚಾಲುಕ್ಯ ವಿಕ್ರಮನ ೨೪ನೇ ವರ್ಷದಲ್ಲಿ ಈ ಪ್ರದೇಶವನ್ನು ಚಾಲುಕ್ಯ ತ್ರಿಭುವನ ಮಲ್ಲನು ಆಳುತ್ತಿದ್ದನು. ಈತನು ಸಾಮಂತನಾಗಿ ಹತ್ತಿರದ ಜೆನ್ನೆಯೂರು - ೧೨ನ್ನು ಸುರೇಶ್ವರ ಪಂಡಿತನು ಆಳುತ್ತಿದ್ದ. ಈ ಸಂದರ್ಭದಲ್ಲಿ ಕುರುವತ್ತಿಯ ಊರೊಡೆಯ ಕಾಳಿದಾಸ ಎಂಬಾತನು ವಿಶ್ವಾಮಿತ್ರ ಗೋತ್ರಕ್ಕೆ ಸೇರಿದವನಾಗಿದ್ದು, ಈತನು ಊರಿನ ೨೦೦ ಮಹಾಜನರನ್ನು ಸೇರಿಸಿ ಶ್ರೀ ಸೋಮೇಶ್ವರನಿಗೆ ದೇವಾಲಯವನ್ನು ನಿರ್ಮಿಸಲು ತೀರ್ಮಾನಿಸಿರುವುದು ಕುರುವತ್ತಿಯ ಇತಿಹಾಸದಲ್ಲಿ ಚಾರಿತ್ರಿಕ ದಾಖಲೆಯಾಗಿದೆ. ಶಿಲ್ಪ 'ಗುಲುಗೋಜ' ಈ ಅಭಿನವ ಸೋಮೇಶ್ವರ ದೇವಾಲಯವನ್ನು ನಿರ್ಮಿಸಿದ್ದಾನೆ." ಈ ದೇವಾಲಯದ ಮೇಲ್ವಿಚಾರಣೆಗೆ 'ಕಾಶ್ಮೀರ ದೇವವಂಶದ ಶ್ರೀ ಲಕುಲೀಶ ಪಂಡಿತರೇ ಸೂಕ್ತರಾದರೆಂದು ಅವರನ್ನು ಈ ದೇವಾಲಯದ ಸ್ಥಾನಾಚಾರ್ಯರನ್ನಾಗಿ ನೇಮಿಸಿ ಶ್ರೀ ಲಕುಳೀಶ ಪಂಡಿರ ಪಾದ ತೊಳೆದು ದಾನದತ್ತಿ ನೀಡಿದ ಐತಿಹಾಸಿಕ ವಿಷಯಗಳು ತಿಳಿದು ಬರುತ್ತದೆ.

ಶ್ರೀ ಕಲ್ಲೇಶ್ವರ ದೇವಾಲಯ

ಅಖಂಡ ಕರ್ನಾಟಕದಲ್ಲಿ ಲೆಕ್ಕವಿಲ್ಲದಷ್ಟು ಕಲ್ಲೇಶ್ವರ ದೇವಾಲಯಗಳಿವೆ. ಅವುಗಳಲ್ಲಿ ನಮ್ಮ ಕುರುವತ್ತಿ ಗ್ರಾಮದ ಪ್ರಮುಖ ದೇವಾಲಯಗಳಲ್ಲಿ ಶ್ರೀ ಕಲ್ಲೇಶ್ವರ ದೇವಾಲಯವೂ ಒಂದಾಗಿದೆ. ಈ ದೇವಾಲಯವು ಚಿಕ್ಕದಾದರೂ ಇಲ್ಲಿಯ ಎರಡು ಪ್ರಮುಖ ಶಾಸನಗಳಿಂದ ಅತ್ಯಂತ ಐತಿಹಾಸಿಕ ಮಹತ್ವದ ವಿಚಾರಗಳು ತಿಳಿದು ಬರುತ್ತವೆ.

ತೋಂಟದಾರ್ಯ ವಿರಕ್ತಮಠ

ಕರ್ನಾಟಕದಲ್ಲಿಯ ಮೂರು ಪ್ರಸಿದ್ಧ ಮಠಗಳಲ್ಲಿ ಕುರುವತ್ತಿಯ ತೋಂಟದಾರ್ಯ ವಿರಕ್ತಮಠವೂ ಒಂದಾಗಿದೆ. ತುಂಗಭದ್ರಾ ನದಿಯ ಎತ್ತರದ ದಂಡೆಯ ಮೇಲೆ ಸುತ್ತಲೂ ಹಚ್ಚಹಸಿರಿನ ಗಿಡಗಳ ಮಧ್ಯೆ ಪ್ರಶಾಂತವಾದ ಪರಿಸರದಲ್ಲಿ ತಾನೇ ತಾನಾಗಿ ಮೌನವನ್ನೇ ಹೆಪ್ಪುಗಟ್ಟಿಸಿಕೊಂಡಂತೆ, ತಪಸ್ವಿಯಂತೆ ವಿರಕ್ತವಾಗಿ ನಿಂತಿದೆ. ಈ ಮಠವು ಸುಮಾರು ೩೦೦ ವರ್ಷಗಳ ಇತಿಹಾಸದಲ್ಲಿ ಅನೇಕ ವಿರಕ್ತರನ್ನು ಜ್ಞಾನ ದಾಸೋಹಿಗಳನ್ನು, ಶಿವಯೋಗಿಗಳನ್ನು ತನ್ನಂತರಂಗದಲ್ಲಿ ಅವಿರ್ಭವಿಸಿಕೊಂಡು ತುಂಗಭದ್ರೆಯ ಸಲಿಲ ಜಲಧಾರೆಯೊಂದಿಗೆ ಧಾರ್ಮಿಕ ಜಲಧಾರೆಯನ್ನು ಹರಿಸಿದೆ.

ಕುರುವತ್ತಿ ತುಂಗಭದ್ರೆಯ ಸಂಗಮವಾಹಿನಿಯಲ್ಲಿ ಭಕ್ತ-ಭಕ್ತರ, ಗುರು-ಲಿಂಗ-ಜಂಗಮರ ದೇವಸನ್ನಿಧಿಯಾಗಿದೆ. ಇಂತಹ ಪರಿಸರಕ್ಕೆ ಎಡೆಯೂರಿನ ಶ್ರೀ ಸಿದ್ಧಲಿಂಗೇಶ್ವರ ತೋಂಟದಾರ್ಯರ ಶಿಷ್ಯರಾದ ಪರಮ ಜಂಗಮ ಮೂರ್ತಿಯೊಬ್ಬರು ನಿಂತಲ್ಲಿ ನಿಲ್ಲದೆ, ಕೂತಲ್ಲಿ ಕೂರದೇ, ಹಗಲಿಗೊಂದೂರು, ರಾತ್ರಿಗೊಂದೂರು ಎಂದು ಶಿವಸಂಚಾರಿಯಾಗಿ ಇತ್ತ ಬಂದಾಗ ಕುರುವತ್ತಿಯ ಬಸವಣ್ಣ ಸಾನಿಧ್ಯ. ಚೆನ್ನಮಲ್ಲಿಕಾರ್ಜುನ ದೇವಮಂದಿರ ತುಂಗನದಿ ತೀರದ ಪ್ರಶಾಂತ ಪರಿಸರ ಧಾರ್ಮಿಕ ಭಾವದ ಮುಕ್ತಿ ಮಾರ್ಗಕ್ಕೆ ಸೂಕ್ತ ನೆಲೆಯೆನಿಸಿದೆ.

ತುಂಗಭದ್ರಾ "ನದಿ ತೀರದಲ್ಲಿ ಬಿಲ್ವ-ಬನ್ನಿ ವೃಕ್ಷ ಸಮೂಹದ ಮಧ್ಯೆ ಧ್ಯಾನಸ್ಥರಾಗಿ ಕುಳಿತಾಗ ತುಂಗಭದ್ರೆ ಗುರುಗಳ ಕನಸಿನ ಮನಸ್ಸಿನಲ್ಲಿ ಆಗಮಿಸಿ 'ಇಲ್ಲಿಯೇ ನೆಲಸಿರಿ'... ನನ್ನಿಂದ ಏನೂ ತೊಂದರೆಯಾಗದು" ಎಂದು ನುಡಿದಂತಾಗಿ ಗುರುಗಳಿಗೆ ನಿಜಕ್ಕೂ ಇದು ಜಾಗೃತ ಸ್ಥಾನ ಎನಿಸಿದೆ. ಇಲ್ಲಿಯೇ ನನ್ನ ನೆಲೆ ಹಾಗೂ ನನ್ನ ಗುರು ತೋಂಟದಾರ್ಯರ ವಿರಕ್ತ ಪರಂಪರೆಯ ಮಠವಾಗಬೇಕೆಂದು ಸಂಕಲ್ಪಿಸಿ ಗಿಡ ಮರಗಳ ಮಧ್ಯೆ ಗುರುಗಳು ಪರ್ಣ ಕುಬೇರದಂತೆ ವಿರಕ್ತಮಠ ಸ್ಥಾಪಿಸಿದರು"[೨] ಊರಿನವರು ಇದು ಭಕ್ತಿಯ ಮಾರ್ಗವೆಂದು ಗುರುಗಳ ಸನ್ನಿಧಿಗೆ ಶರಣು ಬಂದರು. ಹೀಗೆ ಕುರುವತ್ತಿಯ ಜನರ ಬದುಕಿನೊಂದಿಗೆ ಶ್ರೀ ತೋಂಟದಾರ್ಯ ಮಠವು ಹಾಸುಹೊಕ್ಕಾಗಿ ಬೆರೆತುಕೊಂಡಿದೆ.

ಕುರುವತ್ತಿಯ ಹಿರೇಮಠದ ಶ್ರೀ ಕುರುವತ್ತಪ್ಪಜ್ಜನವರು

ಕುರುವತ್ತಿಯ ಬಸವಣ್ಣ ಅಥವಾ ಮಲ್ಲಿಕಾರ್ಜುನ ದೇವಸ್ಥಾನ ರಸ್ತೆಯಲ್ಲಿ ಹಿಂದಿನ ಕಾಲದ ದೊಡ್ಡ ದೊಡ್ಡ ಮನೆಗಳು ಚಿತ್ತಾರದ ಬಾಗಿಲುಗಳು ನೋಡುಗರ ಕಣ್ಮನಗಳನ್ನು ಸೆಳೆಯುತ್ತವೆ. ಈ ಸಾಲು ಮನೆಗಳ ಮಧ್ಯೆ ದೇವಸ್ಥಾನದ ಎದುರು ಸಾಲಿನಲ್ಲಿ ಒಂದು ಮನೆ ಹೊರನೋಟಕ್ಕೆ ಸಾಧಾರಣ ಮನೆಯಂತೆ ಕಂಡರೂ ಒಳಹೊಕ್ಕಾಗ ತುಂಬಾ ವಿಶಾಲವಾದ ದೊಡ್ಡ ದೊಡ್ಡ ಕೊಠಡಿಗಳು ಜಗಲಿ, ಮಹಡಿಗಳಿಂದ ಕೂಡಿದ್ದು ದೊಡ್ಡ ಮಠದ ಬಾಗಿಲಿನಿಂದ ಇದೇ ಕುರುವತ್ತಿಯ ಹಿರೇಮಠವಾಗಿದೆ.

ಒಂದು ಕಾಲದಲ್ಲಿ ಈ ಮಠವು ಉತ್ತುಂಗ ಸ್ಥಿತಿಯಲ್ಲಿ ಇತ್ತೆಂದು ಈ ದೇವಾಲಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ತಿಳಿದು ಬರುತ್ತದೆ. ಈ ಮಠದಲ್ಲಿಯ ಗುರುವರ್ಯರು ಒಂದಿಲ್ಲ ಒಂದು ಸಂದರ್ಭಗಳ ಪವಾಡ ಸದೃಶ ನಡಾವಳಿಗಳಿಂದ ಮಹಾತ್ಮರೆನಿಸಿಕೊಂಡಿದ್ದಾರೆ. ಇಂತವರಲ್ಲಿ ಒಬ್ಬ ಶರಣರು ಹಾಗೂ ಈ ಮಠದ ಎಂಟನೆಯ ಸ್ವಾಮಿಗಳು ಶ್ರೀ ಕುರುವತ್ತಪ್ಪಜ್ಜನವರು. ಇವರು ಕುರುವತ್ತಿಯ ಬಸವಣ್ಣನ ಪರಮಭಕ್ತರಾಗಿದ್ದು ಹಲವಾರು ಪವಾಡಗಳಿಂದ ಈ ನಾಡಿನ ಜನರ ಮನಸ್ಸಿನಲ್ಲಿ ಮಹಾತ್ಮರಾಗಿ ನೆಲೆಸಿದ್ದಾರೆ.

೨. ಮೈಲಾರ

ಧರ್ಮವು ಭಾರತೀಯ ಸಂಸ್ಕೃತಿಯ ಕೇಂದ್ರಶಕ್ತಿ. ಅದು ನಮ್ಮ ಬದುಕಿನ ಚಟುವಟಿಕೆಗಳ ತಾರಕ ಮಂತ್ರವಾಗಿದೆ. ಕರ್ನಾಟಕವು ಹಲವಾರು ಧರ್ಮಗಳ ನೆಲೆವೀಡಾಗಿದ್ದು ಅವುಗಳ ನಡುವಿನ ಸಾಮರಸ್ಯವು ನಮ್ಮ ಸಂಸ್ಕೃತಿಯ ತಿರುಳಾಗಿ ಪರಿಣಮಿಸಿದೆ. ನಮ್ಮ ಜನಪದರು ಧರ್ಮದ ಹೆಸರಿನಲ್ಲಿ ಹಲವಾರು ದೈವಗಳನ್ನು ಸೃಷ್ಟಿಸಿಕೊಂಡು ಆರಾಧಿಸಿದ್ದಾರೆ. ಆ ದೈವಗಳ ಆರಾಧನೆಯು ಹಲವಾರು ಕಡೆಗೆ ಪ್ರಸರಿಸಿ ಹಲವು ಹೆಸರುಗಳಿಂದ ಕರೆಯಿಸಿಕೊಂಡು ಆರಾಧನೆಗೆ ಭಾಜನವಾಗಿವೆ. ಅಂತಹ ದೈವಗಳಲ್ಲಿ ಮೈಲಾರಲಿಂಗವೂ ಒಂದಾಗಿದೆ.

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕಿನಿಂದ ಪಶ್ಚಿಮ ದಿಕ್ಕಿನಲ್ಲಿ ೩೩ ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿಗೆ ೨ ಕಿ.ಮೀ. ಸಮೀಪದಲ್ಲಿ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ನೆಲೆಸಿದ್ದಾನೆ. ತುಂಗಭದ್ರಾನದಿಯು ಮೈಲಾರ ಗ್ರಾಮದ ದಕ್ಷಿಣದಲ್ಲಿ ಪೂರ್ವದಿಂದ ಪಶ್ಚಿಮಕ್ಕೂ, ಪಶ್ಚಿಮದಿಂದ ಉತ್ತರಕ್ಕೂ, ಉತ್ತರದಿಂದ ಪೂರ್ವಕ್ಕೂ ಸ್ವಲ್ಪ ದೂರದವರೆಗೂ ಹರಿದಿದೆ. ಗ್ರಾಮವೆಂಬುವ ಬೆರಳಿಗೆ ಉಂಗುರವನ್ನು ತೊಡಿಸಿದಂತೆ ಶೋಭಿಸುತ್ತದೆ. ಈ ಕಾರಣದಿಂದಲೇ ಈ ಗ್ರಾಮಕ್ಕೆ `ವುಂಗ್ಲಾರ' ಕ್ಷೇತ್ರವೆಂದು ಕರೆದಿದ್ದಾರೆ.

"ಪೌರಾಣಿಕ ಕಥೆಯಲ್ಲಿ ದೈತ್ಯರಾದ ಮಲ್ಲಾಪುರ ಮತ್ತು ಮಣಿಕಾಸುರರು ಮಣಿಚೂಲ ಪರ್ವತದ ತುದಿಯಲ್ಲಿದ್ದ ಬ್ರಹ್ಮನನ್ನು ಕುರಿತು ತಮ್ಮ ಕಾಲಿನ ಉಂಗುಟದ ಮೇಲೆ ನಿಂತು ದೀರ್ಘಕಾಲ ತಪಸ್ಸು

ಮಾಡಿದರು. ಬ್ರಹ್ಮ ದೇವರು ಪ್ರಸನ್ನನಾಗಿ ಅವರು ಕೇಳಿದ ವರವನ್ನು ಅನುಗ್ರಹಿಸಿದನು. ದಾನವ-ಮಾನವರಿಂದ ತಮಗೆ ಮರಣವಾಗಬಾರದೆಂದು ಅವರು ಬೇಡಿದ್ದರು. ಉಂಗುಟದಿಂದ ದೈತ್ಯರು ತಪಗೈದ ಸ್ಥಳವಾದುದರಿಂದ ಈ ಸ್ಥಳಕ್ಕೆ 'ವುಂಗ್ಗಾರ' ಕ್ಷೇತ್ರವೆಂದು ಹೆಸರು ಬಂದಿದೆ".[೮]

"ಬ್ರಹ್ಮಾಂಡ ಪುರಾಣದ ಕ್ಷೇತ್ರಖಂಡ ಎಂಟನೇ ಪ್ರಕರಣದಲ್ಲಿ ಈ ಸ್ಥಳಕ್ಕೆ 'ಮೈರಾಲಿ' ಎಂದು ಕರೆದಿರುವರು. 'ಮೈರಾಲ'ವೆಂದರೆ ತ್ರಿಮೂರ್ತಿಗಳ ಸಂಗಮ. 'ಮೈರಾಲ' ಆಡುನುಡಿಯಲ್ಲಿ ಅಕ್ಷರ ಬದಲಾವಣೆಯಿಂದ 'ಮೈಲಾರ'ವಾಗಿರುವುದು. ಈ ದೇವರಿಗೆ 'ಓಂ ಮೈರಾಲ ನಮಃ' ಎಂದು ಪ್ರಾರ್ಥನಾ ಮಂತ್ರದಲ್ಲಿ ತಿಳಿಸಿದೆ."[೯] 'ವುಂಗ್ಗಾರ' ಅಪಭ್ರಂಶವಾಗಿ ಜನರ ಬಾಯಿಯಲ್ಲಿ 'ಗುಂಗ್ಗಾರ' ಎಂದೂ. ಕೊನೆಗೆ 'ಗುಂಗುರಾ'ವೆಂದಾಗಿದೆ.

ಮೈಲಾರ, ಮಾಳಾಪುರ, ಸೋಮಲಾಪುರ, ಹನುಮಾಪುರ, ವಿಠಲಾಪುರ, ರಾಮಾಪುರ, ಗುಂಗುರಘಟ್ಟಿ ಈ ಏಳೂ ಗ್ರಾಮಗಳಲ್ಲಿ ಕೋಟೆಗಳಿದ್ದುದರಿಂದ 'ಏಳು ಕೋಟಿ' ಎಂಬ ಮಾತು ವಾಡಿಕೆಯಲ್ಲಿದೆ. ಮತ್ತೊಂದು ಐತಿಹ್ಯದ ಪ್ರಕಾರ "ಮಾಘ ಶುದ್ಧ ಏಳು ರಥ ಸಪ್ತಮಿಯಿಂದ ಮಾಘ ಬಹುಳ ಎರಡರವರೆಗೆ ಅಂದರೆ ಹನ್ನೊಂದು ದಿನಗಳವರೆಗೆ ನಿರಂತರವಾಗಿ ಯುದ್ಧ ಮಾಡಿ. ದೈತ್ಯರನ್ನು ಸಂಹರಿಸಿದನು. ಮಲ್ಲಾಸುರ ದೈತ್ಯನನ್ನು ಸಂಹರಿಸಿದ್ದರಿಂದ ಮಲ್ಲನ - ಅರಿ - ವೈರಿ - ಮೈಲಾರಿ ಎಂಬ ಹೆಸರು ಪಡೆದನು. ಮೈಲಾರಿ ದೇವರು ಇವರು ಸ್ಥಳಕ್ಕೆ ಮೈಲಾರವೆಂಬ ಹೆಸರು ಉಂಟಾಗಿರಬೇಕು ಎಂಬುದು ಕೆಲವರ ಹೇಳಿಕೆಯಾಗಿದೆ.

ವಿದ್ವಾಂಸರಾದ ಡಾ.ಎಂ. ಚಿದಾನಂದಮೂರ್ತಿಯವರು "ಮೈಲಾರ ಎಂಬುದು 'ವ್ಯಕ್ತಿವಾಚಕ'ವಾಗದೆ 'ಸ್ಥಳವಾಚಕ'ವೆಂದು ಹೇಳಿದ್ದಾರೆ."[೧೦]

ಮೈಲಾರಲಿಂಗೇಶ್ವರ ದೇವಾಲಯ

ಚಾಲುಕ್ಯರ ತ್ರಿಭುವನಮಲ್ಲದೇವನು ಈ ಮೈಲಾರೇಶ್ವರ ದೇವಾಲಯವನ್ನು ನಿರ್ಮಿಸಿದ್ದಾನೆ. ವಿಜಯನಗರದ ಅರಸರ ಕಾಲದಲ್ಲಿ ರಂಗಮಂಟಪವನ್ನು ಕಟ್ಟಲಾಗಿದೆ. ಕ್ರಿ.ಶ. ೧೬೫೦ರಲ್ಲಿ ತಮ್ಮಣ್ಣ ಒಡೆಯನ ಇಬ್ಬರು ಪತ್ನಿಯರಾದ ಫಣೆಯನ್ನ, ಜಕ್ಕಮ್ಮನವರು ದೇವಾಲಯದ ಶಿಖರ ಕಟ್ಟಿಸಿದರೆಂದು ತಿಳಿದುಬರುತ್ತದೆ. ೧೮೦೫ರಲ್ಲಿ ದೇವಾಲಯದ ಪಡಸಾಲೆಯನ್ನು ಕಟ್ಟಿಸಿದವರು. ಶ್ರೀ ವೆಂಕಟಪ್ಪಯ್ಯ ಒಡೆಯರು, ಶ್ರೀ ಮೈಲಾರಲಿಂಗೇಶ್ವರ ದೇವಾಲಯವು ಸುಂದರವಾದ ಗೋಪುರವನ್ನು ಹೊಂದಿದೆ.

ಮೈಲಾರ ಪುಣ್ಯಕ್ಷೇತ್ರದಲ್ಲಿರುವ ಮಣ್ಣು ಮೈಲಾರವೆಂಬ ಸ್ಥಳವನ್ನು ಕುರಿತ ಐತಿಹ್ಯ ಹೀಗಿದೆ. "ಪ್ರಾಚೀನ ಕಾಲದಲ್ಲಿ ಹೀಗಿನ ಗುಡಿಯಿರುವ ಸ್ಥಳದಲ್ಲಿ ಬೆಳೆದ ಪೊದೆಯೊಂದರಲ್ಲಿ ಹುತ್ತ ಕಟ್ಟಿತ್ತು. ಶ್ರೀಗೋಮುನಿಗಳ ಕಾವಲಿಗೆ ಒಳಪಟ್ಟು ಒಂದು ಆಕಳು ನಿತ್ಯವೂ ಬಂದು ಹುತ್ತದ ಮೇಲೆ ಹಾಲು ಕರೆಯುತ್ತಿತ್ತು. ಇದನ್ನು ಅರಿತ ಗೋಮುನಿಗಳು ಹುತ್ತವನ್ನು ಅಗೆಯಿಸಿದರು. ಅಗೆದ ಸ್ಥಳದಲ್ಲಿ ಲಿಂಗವೂ

ಕಂಡಿತು. ಗೋಮುನಿಗಳು ಆಶ್ಚರ್ಯಚಕಿತರಾದರು. ಪಕ್ಕದ ಪೊದೆಯಲ್ಲಿಯೇ ಕುಳಿತು ಧ್ಯಾನಾಸಕ್ತರಾದ ಕಪಿಲ ಮುನಿಗಳನ್ನು ಕಂಡರು. ಅವರು ಎಚ್ಚರವಾದ ಮೇಲೆ ಮಾರ್ತಾಂಡ ಭೈರವನ ಮಹಿಮೆಯನ್ನು ವಿವರವಾಗಿ ಹೇಳಿದರು. ಆ ಹುತ್ತದ ಮಣ್ಣಿನಿಂದ ಮಾರ್ತಾಂಡ ಭೈರವನ ಮೂರ್ತಿಯನ್ನು ಋಷಿಗಳೆಲ್ಲರೂ ಸೇರಿ ನಿರ್ಮಿಸಿದರು. ಆ ಮೂರ್ತಿಗೆ "ಮೃಣ್ಮಯ ಮಲ್ಹಾರಿ" ಅಥವಾ ಮಣ್ಣು ಮಲ್ಹಾರಿ ಎಂದು ಕರೆದು ಪೂಜಿಸಿದರು. ಹುತ್ತದ ಮಣ್ಣಿನಿಂದ ಉದ್ಭವ ಮೂರ್ತಿಗೆ ಮಣ್ಣುಮಲ್ಹಾರಿ ಎಂದು ಆತನು ನೆಲಸಿದ ಸ್ಥಳಕ್ಕೆ ಮಣ್ಣು ಮೈಲಾರವೆಂದು ಇಂದಿಗೂ ಸಹ ಕರೆಯುತ್ತಾರೆ".[೧೧]

ಈ ದೇವಾಲಯದಲ್ಲಿ ಹಿತ್ತಾಳೆಯ ಅನೇಕ ಮೂರ್ತಿಗಳಿವೆ. ಅದರಲ್ಲೂ ಗರ್ಭಗುಡಿಯಲ್ಲಿರುವ ಹಿತ್ತಾಳೆಯ ಉತ್ಸವ ಮೂರ್ತಿಯು ೫೦ ಕಿ.ಲೋ. ತೂಕವಿದ್ದು ಸುಂದರ ಮುಖವಾಡದ ಮೂರ್ತಿಯಾಗಿದೆ. ಈ ಮೂರ್ತಿಯ ಕೆಳಗಡೆ ಶಿವಲಿಂಗವಿದೆ. ಈ ದೇವಾಲಯದ ಮಹಾದ್ವಾರವು ಸಾಕಷ್ಟು ದೊಡ್ಡದಿದೆ. ಇಲ್ಲಿ ಸ್ವಾಮಿಯ ದೊಡ್ಡ ದೊಡ್ಡ ಪಾದುಕೆಗಳನ್ನು ಇಟ್ಟಿದ್ದಾರೆ. ಪ್ರತಿವರ್ಷ ಹೊಸ ಪಾದರಕ್ಷೆ ತಯಾರಿಸಿಡುತ್ತಾರೆ. ಭಕ್ತರು ಬಾಗಿಲಲ್ಲಿಯೇ ದೇವರ ಪಾದರಕ್ಷೆಗೆ ಕೈಮುಗಿದು `ಬಂಡಾರ' ಧರಿಸಿ ಮುಂದೆ ಹೋಗುತ್ತಾರೆ.

ಖಂಡುಗ ಭಂಡಾರದಯ್ಯ

ಮೈಲಾರನಿಗೆ ಇರುವ ಹಲವಾರು ನಾಮಗಳಲ್ಲಿ ಇದೂ ಒಂದಾಗಿದೆ. ಮೈಲಾರಲಿಂಗನ ಸಂಪ್ರದಾಯದಲ್ಲಿನ ಭಕ್ತರಿಗೆ `ಭಂಡಾರ' ಎಂದರೆ ಬಹಳ ಪವಿತ್ರವಾಗಿದೆ. ಇದು ಅರಿಷಿನ ಪುಡಿ ಎಂಬ ಕಲ್ಪನೆ ಇರದೆ ಮೈಲಾರನ ಪವಿತ್ರ ಭಸ್ಮವೆಂದು ತಮ್ಮ ಹಣೆಗೆ ಬಳಿದುಕೊಳ್ಳುವುದು ಒಂದು ಬಹುದೊಡ್ಡ ಸಂಪ್ರದಾಯವಿದೆ.

"ಮೈಲಾರಲಿಂಗ ರಾಕ್ಷಸರೊಡನೆ ಯುದ್ಧ ಮಾಡುತ್ತಿದ್ದ ಕಾಲದಲ್ಲಿ ಮೈಯಿಗೆ ಲೇಪಿಸಿಕೊಂಡ ಹಳದಿ ವರ್ಣದ ಪುಡಿ ಮತ್ತು ಪೀತ ವರ್ಣದ ಬಟ್ಟೆಯ ಸಂಕೇತ. ಇದರಿಂದ ರಾಕ್ಷಕರನ್ನು ಸಂಹರಿಸಲು ಸಹಾಯಕಾರಿಯಾದ ಕಾರಣ ಈ ಭಂಡಾರವನ್ನು ಭಕ್ತರು ಬಳಿದುಕೊಳ್ಳುತ್ತಾರೆ. ಮೈಲಾರ ಭೂಲೋಕಕ್ಕೆ ಬರುವಾಗ ತನ್ನೊಂದಿಗೆ ತಂದನೆಂದು ಆತನನ್ನು ಖಂಡುಗ `ಭಂಡಾರ ದೊಡೆಯ' ಭಂಡಾರದಯ್ಯ"[೧೨] ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಮೈಲಾರಲಿಂಗನೂ ಸಹ ಶಿವನ ಅವತಾರ ಪ್ರಾಚೀನ ಕಾಲದಿಂದಲೂ ಮೈಲಾರ ದೇವರ ಸಂಪ್ರದಾಯಕ್ಕೆ ಸಂಬಂಧಿಸುವ ದೇವಾಲಯಗಳು ಕರ್ನಾಟಕದ ತುಂಬೆಲ್ಲಾ ಹರಡಿವೆ. ಅದಾಗ್ಯೂ ಕರ್ನಾಟಕದ ತುಂಬೆಲ್ಲಾ ಜನರ ಮನಸ್ಸಿನಲ್ಲಿ ನೆಲೆನಿಂತು ಪೂಜೆಗೊಳ್ಳುತ್ತಿರುವ ಮೈಲಾರಲಿಂಗ ಮತ್ತು ಜನಪದರ ಸಂಬಂಧ ಗಾಢವಾದುದು. ಬಳ್ಳಾರಿ ಜಿಲ್ಲೆಯಲ್ಲಿರುವ ಮೈಲಾರವೇ ಮೈಲಾರಲಿಂಗನ ಮೂಲ ಸ್ಥಳ. ಮೈಲಾರಲಿಂಗನ ಭಕ್ತರು ಏಳು ಕೋಟಿ, ಏಳುಕೋಟಿ ಎಂದು ಹೇಳುತ್ತಾರೆ. ಮೈಲಾರನು ತಿರುಪತಿ ತಿಮ್ಮಪ್ಪನ ತಂಗಿಯನ್ನು

ಮದುವೆಯಾದನೆಂದೂ, ಆತನಿಂದ ಏಳುಕೋಟಿ ಹೊನ್ನನ್ನು ಸಾಲವಾಗಿ ಪಡೆದಿದ್ದನಂತೆ. ಆದರೆ ತಿಮ್ಮಪ್ಪನಿಗೆ ಹೊನ್ನನ್ನು ಮರಳಿಸಲಿಲ್ಲವಾದ್ದರಿಂದ ಮೈಲಾರನು ನನ್ನ ಭಕ್ತರು ಏಳುಕೋಟಿ ಕೊಟ್ಟಾಗ ನಿನಗೆ ಕೊಡುತ್ತೇನೆಂದ. "ನಿನ್ನ ಭಕ್ತರು ಸದಾ ನನ್ನ ಹೊನ್ನಿನ ಸಾಲವನ್ನು ಸ್ಮರಿಸುತ್ತಾ ನನ್ನನ್ನು ನೆನಪಿಸಿಕೊಳ್ಳಲಿ" ಎಂದು ತಿಮ್ಮಪ್ಪನು ಹೇಳುತ್ತಾನೆ. ಇದು ಮೈಲಾರಲಿಂಗನ ಭಕ್ತರು 'ಏಳುಕೋಟಿ, ಏಳುಕೋಟಿ' ಎನ್ನುವುದರ ಹಿನ್ನೆಲೆಯಾಗಿದೆ.

ಹೀಗೆ ಬಳ್ಳಾರಿ ಜಿಲ್ಲೆಯ ಮೈಲಾರಲಿಂಗನ ಹುಟ್ಟು, ಸೃಷ್ಟಿಯು ಒಂದು ವಿಚಿತ್ರವಾದರೂ ಐತಿಹ್ಯಗಳ ಹಿನ್ನೆಲೆಯಲ್ಲಿ ಒಂದು ಸಮುದಾಯದ ಬದುಕಿನ ಚಿತ್ರಣವು ವ್ಯಕ್ತವಾಗುತ್ತದೆ. ಒಂದು ಕಾಲಘಟ್ಟದಲ್ಲಿ ವಲಸೆ ಬಂದು ನೆಲಸಿದವರಲ್ಲಿ ನಾಯಕರೇ ಇರಬೇಕು. ಪ್ರತಿಯೊಂದು ಸಮುದಾಯಗಳಿಗೂ ಒಂದೊಂದು ಐತಿಹ್ಯ ಅಥವಾ ಪುರಾಣವಾಗಿರುವುದು ಕಂಡುಬರುತ್ತದೆ. ಒಂದು ಸಮುದಾಯದ ಮೂಲ ಜೀವನ ಕ್ರಮ ಸಾಮಾಜಿಕ ಸಂಬಂಧಗಳಿಗೂ ಸಂಬಂಧಿಸಿದಂತೆ ಆತ್ಮಕಥನಗಳು ಹುಟ್ಟಿಕೊಂಡಿರುತ್ತವೆ.

ಮೈಲಾರಲಿಂಗನು ಒಂದು ಸಾಂಸ್ಕೃತಿಕ ಚಿಂತನೆಯ ನಾಯಕನಾಗಿ ಆತನು ಮೂರು ಮಂದಿ ಹೆಂಡಂದಿರನ್ನು ಮದುವೆ ಮಾಡಿಕೊಳ್ಳುವ ಸನ್ನಿವೇಶ, ಆತನು ಬೇಟೆಗೆ ಹೊರಡುವುದು ಒಂದು ರೀತಿಯ ಇಂಡಿಯಾದ ವಲಸೆಗಾರರ ಸಮುದಾಯವನ್ನು ಪ್ರತಿನಿಧಿಸುತ್ತದೆ. ಮೈಲಾರಲಿಂಗನ ಮೂರು ಹೆಂಡಂದಿರು ಬೇರೆ ಬೇರೆ ಜಾತಿಯವರಾಗಿದ್ದಾರೆ. ಮೈಲಾರಲಿಂಗನಿಗೆ ಜಾತಿಬೇಧದ ಅಂತರವಿಲ್ಲ. ಬ್ರಾಹ್ಮಣರಿಂದ ಹಿಡಿದು ಕೆಳಸಮುದಾಯಗಳಾದ ಮಾದಿಗ, ಹೊಲೆಯರು ಮೈಲಾರಲಿಂಗನ ಭಕ್ತರಿರುವುದು ಒಂದು ವಿಶೇಷವೇ ಆಗಿದೆ. ಹಾಗಾಗಿ ಮೈಲಾರಲಿಂಗನಿಗೆ ಭಕ್ತರಾಗುವ ಜನಾಂಗ ಯಾವ ಸಮುದಾಯಕ್ಕೆ ಸೇರಿದರೂ ಜಾತ್ರೆ ಹುಣ್ಣಿಮೆಗಳಲ್ಲಿ ಮಣಿಕಟ್ಟಿಸಿದರೆ 'ಅವರು 'ಗೊರವ' - 'ಗೊರವಿ'ಯರಾಗುತ್ತಾರೆ. ಮಣಿಕಟ್ಟಿಸಿಕೊಂಡವರು ದೇವರು ಅಥವಾ ದೇವತೆಯರಿಗೆ ಸಮಾನರಾದಂತೆ - ಭಕ್ತಾದಿಗಳು ಮೈಲಾರಲಿಂಗನಿಗೆ ಹಬ್ಬ, ಜಾತ್ರೆ, ಹುಣ್ಣಿಮೆಗಳಲ್ಲಿ 'ದೋಣಿ ಸೇವೆ' ಎಂದೂ ಮೈಲಾರಲಿಂಗನಿಗೆ ಬಾಳೆಹಣ್ಣು, ತುಪ್ಪ, ಹಾಲು, ಸಕ್ಕರೆಯನ್ನು ದೋಣಿಯಲ್ಲಿ ಹಾಕಿ ಗೊರವರನ್ನು ಕರೆಯಿಸಿ, ದೋಣಿ ನೀಡಿಸುವುದು ಪದ್ಧತಿಯಾಗಿದೆ. ದೇವರಿಗೆ ಅರ್ಪಿತ ಮಾಡುವಾಗ ಗೊರವರು ಯಾವುದೇ ಜಾತಿಗೆ ಸೇರಿರಬಹುದು. ಅವರು ಮೊದಲು ದೋಣಿ ಸೇವೆ ಮಾಡಿದ ಮೇಲೆ ಉಳಿದ ಹಣ್ಣು, ತುಪ್ಪ ಸಕ್ಕರೆಯನ್ನು ಪ್ರಸಾದವೆಂದು ಬೇಧ-ಭಾವ ಮಾಡದೆ ಭಕ್ತಾಧಿಗಳು ಸ್ವೀಕರಿಸುತ್ತಾರೆ. ಈ ಆಚರಣೆಯು ಸಾಮಾಜಿಕ ಅಸಮಾನತೆಯ ಪಿಡುಗನ್ನು ತೊಡೆದು ಹಾಕಿದ ಮಹಾನ್ ಸಂಸ್ಕೃತಿ ಎನ್ನಬಹುದಾಗಿದೆ. ಮಹಾಭಾರತದ ಕತೆಯಲ್ಲಿ ಬರುವ ವಿರಾಟರಾಜನ ಅಳಿಯನಾದ 'ಕೀಚಕನ' ಮನೆ ದೇವರು 'ಮೈಲಾರಲಿಂಗೇಶ್ವರ'ನಾಗಿದ್ದಾನೆ. ಆದಕಾರಣ ಮೈಲಾರಲಿಂಗೇಶ್ವರ ಒಂದು ಜಾತಿಯವರಿಗೆ ಸಂಬಂಧಿಸಿದ ದೇವರಲ್ಲ. ಸಕಲ ಜನಾಂಗಕ್ಕೂ ಸರ್ವಸಿದ್ಧಿಯನ್ನು ನೀಡುವ, ಸರ್ವಭಕ್ತರ ದೇವರಾಗಿದ್ದಾನೆ. ಆದರೆ 'ಕುರುಬ' ಜನಾಂಗಕ್ಕೆ ಆರಾಧ್ಯ ದೈವನೆಂದು ಹೇಳುತ್ತಾರೆ.

೩. ರಾಜುವಾಳ : ಕಲ್ಲೇಶ್ವರ ದೇವಾಲಯ

ಹಡಗಲಿ ತಾಲೂಕಿನ ರಾಜುವಾಳವು ಚಾರಿತ್ರಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಈ ನಾಡಿನ ಜನರ ಮನಸ್ಸನ್ನು ಸೆಳೆದುಕೊಂಡಿದೆ. ತುಂಗಭದ್ರಾ ನದಿಯ ಬಲದಂಡೆಯ ಮೇಲಿರುವ 'ರಾಜುವಾಳ'ದ 'ಕಲ್ಲೇಶ್ವರ ದೇವಾಲಯ' ಅತೀ ಪ್ರಾಚೀನವಾಗಿದ್ದೆ. ೧೧ನೇ ಶತಮಾನದಲ್ಲಿ ನಿರ್ಮಾಣವಾಗಿದ್ದು ಕಲ್ಯಾಣ ಚಾಲುಕ್ಯರ ಶೈಲಿಯನ್ನು ಹೊಂದಿದೆ.

ಈ ದೇವಾಲಯದ ಗರ್ಭಗೃಹದ ಪ್ರವೇಶ ದ್ವಾರವು ಸಾದಾ ಕೆತ್ತನೆಯಿಂದ ಕೂಡಿದ್ದು ಗರ್ಭಗೃಹದಲ್ಲಿ ಶಿವಲಿಂಗವಿದೆ. ಈ ದೇವಾಲಯದ ಮುಂಭಾಗದಲ್ಲಿ "ಕಲ್ಯಾಣಿ ಚಾಲುಕ್ಯರಿಗೆ ಸೇರಿದ ಉಮಾ-ಮಹೇಶ್ವರರ ವಿಗ್ರಹವಿದೆ. ಈ ವಿಗ್ರಹವು ೧ ೧/೨ ಅಡಿ ಎತ್ತರವಾಗಿದ್ದು, ಕೈಗಳಲ್ಲಿ ತ್ರಿಶೂಲ, ಡಮರುಗಳಿದ್ದು, ಉಳಿದೆರಡು ಅಭಯ ಹಾಗೂ 'ಉಮಾ'ಳನ್ನು ಬಳಸಿವೆ. 'ಉಮಾ' ಕೈಗಳಲ್ಲಿ ವರದಾ ಫಲಗಳನ್ನು ಚಿತ್ರಿಸಲಾಗಿದೆ."[೧೬]

೧೪. ಹಂಪಿ ಪರಿಸರದ ಶೈವ ದೇವಾಲಯಗಳು

ಹೊಸಪೇಟೆ ತಾಲೂಕಿನ ತುಂಗಭದ್ರಾ ಬಲದಂಡೆಯ ಮೇಲೆ ಕಂಡುಬರುವ ಗ್ರಾಮವೇ 'ಹಂಪೆ'ಯಾಗಿದೆ. ವಿಶ್ವಪರಂಪರೆಯ ತಾಣಗಳಲ್ಲಿ ಒಂದಾದ, ಇತಿಹಾಸ ಪ್ರಸಿದ್ಧವಾದ ಹಂಪಿಯು ಬೇರೆ ಬೇರೆ ಕಾರಣಗಳಿಂದ ಸಾಕಷ್ಟು ಜನಪ್ರಿಯತೆಯನ್ನು ಪಡೆದುಕೊಂಡಿದೆ. ಪುರಾಣ, ತತ್ವಶಾಸ್ತ್ರಜ್ಞರಿಗೆ ಹಂಪಿಯು ಅತಿ ಪ್ರಾಚೀನ ಕಾಲದ ಜನವಸತಿಯ ಕೇಂದ್ರವಾಗಿ ಆಕರ್ಷಿಸಿದೆ. ಪುರಾಣ ಪ್ರಿಯರಿಗೆ ಹಂಪಿಯು ರಾಮಾಯಣ ಕಾಲದ 'ಕಿಷ್ಕಿಂಧೆ'ಯಾಗಿ ಪವಿತ್ರ ಸ್ಥಳವಾಗಿದೆ. ದೈವ ಭಕ್ತರಿಗೆ ವಿರೂಪಾಕ್ಷನ ಸಾನಿಧ್ಯದ ಕಾರಣದಿಂದ ಆರಾಧನಾ ಸ್ಥಳವಾಗಿದೆ. ಹಂಪಿಯಲ್ಲಿರುವ ಮುರುಕು ಮಂಟಪಗಳು ದೇವಾಲಯಗಳು. ಹರಿಯುತ್ತಿರುವ ತುಂಗಭದ್ರಾನದಿ ಇತ್ಯಾದಿ ಅಂಶಗಳಿಂದ ಹಂಪಿಯು ವಿದ್ವಾಂಸರ, ಸಂಶೋಧಕರ ಗಮನವನ್ನು ಸೆಳೆದುಕೊಂಡು ಬಗೆಬಗೆಯ ಚರ್ಚೆಗಳನ್ನು ಹುಟ್ಟಿ ಹಾಕಿದೆ.

"ಭಾಸ್ಕರ ಕ್ಷೇತ್ರ, ಕಿಷ್ಕಿಂಧೆ, ಪಂಪಾದೇವಿ ತಪಸ್ಸಿನ ಕ್ಷೇತ್ರವೆಂದು ಪ್ರಸಿದ್ಧಿಯಾದ ಹಂಪೆಯು ತುಂಗಭದ್ರೆಯ ಬಲದಂಡೆಯಲ್ಲಿ ಬೆಳೆದು ನಿಂತಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ನಂತರ ಆದ ಬೆಳವಣಿಗೆಯ ಕುರುಹುಗಳು ಇಂದಿಗೂ ಕಂಡು ಬರುತ್ತವೆ. ಶೈವ ಧರ್ಮದ ಖ್ಯಾತಿಯಂತೆ ಇತರೆ ಧರ್ಮಗಳಿಗೆ ಪ್ರೋತ್ಸಾಹ ಲಭಿಸಿದ್ದು ಇಲ್ಲಿಯೇ ಆಗಿದೆ. ವಿದ್ಯಾರಣ್ಯರ ತಪೋಭೂಮಿಯಾದ ಹಂಪಿ ಅನೇಕ ಧರ್ಮಗಳ, ದೇವಾಲಯಗಳ ಆವಾಸ ಕೇಂದ್ರವಾಗಿದೆ."[೧೪] ವಿರೂಪಾಕ್ಷ ದೇವಾಲಯ, ವಿಠಲದೇವಾಲಯ, ಹಜಾರರಾಮ ದೇವಾಲಯ, ಉಗ್ರನರಸಿಂಹ ಇತ್ಯಾದಿ ದೇವಾಲಯಗಳು ಪ್ರಪಂಚದ ಕಣ್ಣನ್ನು ಕುಕ್ಕಿಸಿವೆ.

ಹಂಪಿಯ ವಿರೂಪಾಕ್ಷ ದೇವಾಲಯದ ಸಮೀಪ ತುಂಗಭದ್ರಾ ನದಿಯ ನೀರು ಪೂರ್ವಾಭಿಮುಖವಾಗಿ ಹರಿದು ನಂತರ ಉತ್ತರಕ್ಕೆ ತಿರುಗುತ್ತದೆ. ಹೀಗೆ ತಿರುಗುವ ಸ್ಥಳಗಳನ್ನು "ತೀರ್ಥ"ಗಳೆಂದು ಕರೆಯಲಾಗುತ್ತದೆ.

ಇಲ್ಲಿ ಇದನ್ನು ಚಕ್ರತೀರ್ಥವೆಂದು ಕರೆಯುತ್ತಾರೆ. ಇದೇ ಕಾವ್ಯ-ಶಾಸನಗಳಲ್ಲಿ ಉಲ್ಲೇಖಗೊಂಡಿರುವ 'ಪಂಪಾತೀರ್ಥ' ಎನ್ನಲಾಗಿದೆ. ವಿರೂಪಾಕ್ಷ ದೇವಾಲಯದ ಬಳಿ ಉತ್ತರಕ್ಕಿರುವ ನದಿಯ ಸ್ನಾನ ಘಟ್ಟಕ್ಕಿಂತ 'ಚಕ್ರತೀರ್ಥ' ಪ್ರದೇಶವು ವಿರೂಪಾಕ್ಷ ದೇವರಿಗೆ ಪವಿತ್ರವೆನಿಸಿದ್ದು ಇಲ್ಲಿಯೇ ಫಲಪೂಜೆ ಆಚರಣೆ ನಡೆಯುತ್ತದೆ. ಈ ಪ್ರದೇಶದಲ್ಲಿ ಅನೇಕ ಪ್ರಾಗೈತಿಹಾಸಿಕ ಕುರುಹುಗಳು ಕಾಣಸಿಗುತ್ತವೆ. ತುಂಗಭದ್ರಾ ನದಿಯನ್ನು ಹಡಗಲಿಯಿಂದ ಕಂಪಲಿಯವರೆಗೆ 'ಹಂಪಿ ಹೊಳೆ' ಎಂದು ಕರೆಯಲಾಗುತ್ತದೆ. ಹಂಪಿ ಹೊಳೆ ಇಲ್ಲಿನ ಜನಸಾಮಾನ್ಯರಿಗೆ ತುಂಗಭದ್ರೆಯ ಪರ್ಯಾಯ ನಾಮವಾಗಿದೆ.

ವಿಜಯನಗರವನ್ನಾಳಿದ ಮೊದಲ ಮನೆತನವಾದ 'ಸಂಗಮ'ರು ಶೈವ ಪಂಥೀಯರಾಗಿದ್ದಾರೆ. ಶಿವನ ಆರಾಧಕರಾಗಿದ್ದ 'ಹರಿಹರ' ಮತ್ತು ಬುಕ್ಕರಾಯರು ಈ ಪಂಥದ ವಿಚಾರಗಳಿಂದ ಪ್ರಭಾವಿತರಾಗಿದ್ದರು. ರಾಜ್ಯಾಡಳಿತದ ಜೊತೆಗೆ ಧರ್ಮವನ್ನು ಬೆರೆಸಿದವರಲ್ಲ, ಬದಲಾಗಿ ಎಲ್ಲಾ ಧರ್ಮ ಪಂಥಗಳಿಗೆ ಸಮಾನ ದೃಷ್ಟಿಯನ್ನು ಹರಿಸಿದ್ದರು.

ವಿಜಯನಗರ ಸಾಮ್ರಾಜ್ಯದ ಉದಯದ ಹಿನ್ನೆಲೆಯಲ್ಲಿ ಸನಾತನ ಧರ್ಮದ ಸಂರಕ್ಷಣೆಯು ಏಕೈಕ ಧ್ಯೇಯವಿದ್ದುದನ್ನು ವಿದ್ವಾಂಸರು ಗುರುತಿಸಿದ್ದಾರೆ. "ಕ್ರಿ.ಶ. ೧೩೩೬ರಲ್ಲಿ ಹಂಪಿಯಲ್ಲಿ 'ಹಕ್ಕ-ಬುಕ್ಕ' ಸಹೋದರರಿಂದ ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಆ ಸಾಮ್ರಾಜ್ಯ ಸ್ಥಾಪನೆಯಾಗದಿದ್ದರೆ ಇಡೀ ಸನಾತನ ಧರ್ಮ ಹೇಳ ಹೆಸರಿಲ್ಲದಂತಾಗುತ್ತಿತ್ತು ಎಂಬುದಾಗಿ ಪಿ.ಬಿ. ದೇಸಾಯಿ, ಶ್ರೀನಿವಾಸ ರಿತ್ತಿ, ಬಾ.ರಾ. ಗೋಪಾಲರು "A History of Karnataka."[೧೫] ದಲ್ಲಿ ಉಲ್ಲೇಖಿಸಿದ್ದಾರೆ.

ಹಂಪಿಗೆ ಪ್ರಕೃತಿ ನೀಡಿದ ಸೌಂದರ್ಯ ಒಂದೆಡೆಯಾದರೆ ಈ ಪ್ರದೇಶದಲ್ಲಿ ಸಾಮ್ರಾಜ್ಯ ಕಟ್ಟಿ ಆಡಳಿತ ನಡೆಸಿದ ವಿಜಯನಗರದ ಅರಸರ ಸ್ಮಾರಕಗಳ ನಿರ್ಮಾಣದ ಸೌಂದರ್ಯದ ಬೆಡಗು ಮತ್ತೊಂದು ಕಡೆ. ಹಂಪಿಯ ಸ್ಮಾರಕಗಳು ವಿಜಯನಗರವನ್ನು ಆಳಿದ ಪ್ರಮುಖ ರಾಜವಂಶಗಳ ಆಡಳಿತ ಕಾಲಕ್ಕೆ ನಿರ್ಮಾಣಗೊಂಡ ಬಗೆಗೆ ಸಂಶಯವಿಲ್ಲ. ಆದರೆ ಅವರು ನಿರ್ಮಿಸಿದ ಸ್ಮಾರಕಗಳು ವೈವಿಧ್ಯಮಯ ಹಾಗೂ ವೈಶಿಷ್ಟ್ಯಪೂರ್ಣವಾದವುಗಳು. ಹಂಪಿ ಪರಿಸರದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು, ಮಂಟಪಗಳು, ಮಹಾದ್ವಾರಗಳು, ಅರವಟ್ಟಿಗೆಗಳು, ಗೋಪುರಗಳು ಮಹತ್ವದ ಸಾಧನೆಯ ಪ್ರತೀಕಗಳಾಗಿ ಕಂಡು ಬರುತ್ತದೆ. ಅಲ್ಲದೆ ಈ ಸಾಮ್ರಾಜ್ಯದಲ್ಲಿ ಮಹತ್ವದ ಸ್ಥಾನ ಪಡೆದು ಬೆಳೆದು ಬಾಳಿದ ಶೈವ, ವೈಷ್ಣವ, ಜೈನ ಧರ್ಮಗಳೂ ಸಹ ಈ ಹಿನ್ನೆಲೆಯಲ್ಲಿ ಮಹತ್ವದ ಪಾತ್ರವಹಿಸಿವೆ. 'ದೇವಾಲಯವೊಂದು ವೈಷ್ಣವ ಧರ್ಮದ್ದಾಗಿದ್ದರೆ, ಆ ದೇವಾಲಯದಲ್ಲಿ ವೈಷ್ಣವ ಧರ್ಮದ ದೇವರು ಪ್ರತಿಷ್ಠಾಪನೆಗೊಂಡಿದ್ದರೂ ದೇವಾಲಯದಲ್ಲಿ ಕಂಡು ಬರುವ ಹಲವು ಬಗೆಯ ಉಬ್ಬು ಶಿಲ್ಪಗಳು ಆ ಧರ್ಮದ ಮಹತ್ವದ ವಿಚಾರಗಳ ಜೊತೆಗೆ ಜನಸಾಮಾನ್ಯರಲ್ಲಿ ವೈಷ್ಣವ ಧರ್ಮದ ಪ್ರತಿರೂಪಗಳನ್ನು ಬಿತ್ತರಿಸುವಂತಿವೆ. ಅಲ್ಲದೆ ಅಂದಿನ ಕಾಲದ ಜನಸಾಮಾನ್ಯರ ಸಾಮಾಜಿಕ ಜೀವನದ ಹಲವಾರು ವಿಚಾರಗಳನ್ನು ಕಾಣಬಹುದು.

ಹಾಗೆಯೇ ಶೈವ ದೇವಾಲಯಗಳಲ್ಲೂ ಸಹ ಶಿವಪುರಾಣ, ಶಿವಕಥೆಗಳ ವಿಚಾರಗಳು ಜನಸಾಮಾನ್ಯರಲ್ಲಿ ಶಿವಭಕ್ತಿ ಶೈವ ಧರ್ಮದ ಅವಲಂಬನೆಯ ಬಗೆಗೆ ವಿವರಗಳು ದೊರಕುತ್ತವೆ. ದೇವಾಲಯಗಳ ಉಬ್ಬುಶಿಲ್ಪಗಳು ದೇವಾಲಯದ ಸೌಂದರ್ಯ ಅಲಂಕಾರಕ್ಕೆ ಮಾತ್ರ ಸೀಮಿತಗೊಳ್ಳದೇ ಧರ್ಮ ಪ್ರಚಾರ ಹಾಗೂ ಅದರ ಬೆಳವಣಿಗೆಯ ದಿಕ್ಕಿನಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದವು. ಜೊತೆಗೆ ಮಾನವ ಸಂಬಂಧ ಹಾಗೂ ಜೀವ ಸಂಬಂಧದ ವಿಚಾರಗಳನ್ನು ತಿಳಿಯಪಡಿಸುತ್ತವೆ. ಆದಕಾರಣ ದೇವಾಲಯವೊಂದು ಬರಿ ದೇವಾಲಯವಾಗಿರದೆ ಅದರಾಚೆಗಿನ ಹಲವಾರು ಮಹತ್ವದ ವಿಚಾರಗಳು ಒಳಗೊಂಡಿರುವುದನ್ನು ಕಾಣಬಹುದಾಗಿದೆ.

ವಿಜಯನಗರದ ದೇವಾಲಯಗಳು ಈವರೆಗೂ ಅನುಸರಿಸಲಾಗದಿರುವ ಮತ್ತು ತಮ್ಮದೇ ವೈಶಿಷ್ಟ್ಯವುಳ್ಳ ಬೋದಿಗೆಕಲ್ಲು, ಚಪ್ಪಡಿಗಳ ಕಟ್ಟಡ ರಚನೆ ಮತ್ತು ವಾಸ್ತುಶಿಲ್ಪಕ್ಕೆ ಮಾದರಿಗಳಾಗಿವೆ. ಶೈಲಿಯ ದೃಷ್ಟಿಯಿಂದ ಹಂಪಿಯ ದೇವಾಲಯಗಳು ಚಾಲುಕ್ಯರಲ್ಲಿ ಹಾಗೂ ಹೊಯ್ಸಳರಲ್ಲಿ ರೂಢಿಯಲ್ಲಿದ್ದ ವಿಧಾನಗಳಿಂದ ಪ್ರಭಾವಿತವಾಗದೆ ದಕ್ಷಿಣ ಶುದ್ಧ ವಿಮಾನ ಶೈಲಿಯನ್ನು ವ್ಯಕ್ತಪಡಿಸುತ್ತವೆ. ವಿಜಯನಗರದ ಅರಸರು ಹಂಪಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಈ ಪವಿತ್ರ ಸ್ಥಳದಲ್ಲಿ ಅನೇಕ ಧಾರ್ಮಿಕ ಕಾರ್ಯಗಳ ಜೊತೆಗೆ ದೇವಾಲಯಗಳ ನಿರ್ಮಾಣ ಕಾರ್ಯವನ್ನು ನಿರಂತರವಾಗಿ ಪೋಷಿಸುತ್ತಾ ಬಂದಿದ್ದಾರೆ.

ಮೂಲ ಶ್ರೀ ವಿರೂಪಾಕ್ಷ ದೇವಾಲಯ

ಹಂಪಿಯ ಹೇಮಕೂಟದಲ್ಲಿರುವ ಮೂಲ ವಿರೂಪಾಕ್ಷ ದೇವಾಲಯ ಕ್ರಿ.ಶ. ಸು. ೧೪ನೇ ಶತಮಾನದಲ್ಲಿ ನಿರ್ಮಾಣವಾಗಿದೆ. ಶ್ರೀ ವಿರೂಪಾಕ್ಷ ವಿಜಯನಗರ ಅರಸರ ಕುಲದೈವವಾಗಿತ್ತು. ಮೂಲ ವಿರೂಪಾಕ್ಷ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ತೆರೆದ ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದ ಒಳಗೆ ವೃತ್ತಾಕಾರದ ಮಣೆಪೀಠದ ಮೇಲೆ ಶಿವಲಿಂಗವಿದೆ. ಇದೇ ಮಾದರಿಯಲ್ಲಿರುವ ಅಂತರಾಳದ ಪ್ರವೇಶ ದ್ವಾರದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಈ ದೇವಾಲಯದಲ್ಲಿ ಶಿವಲಿಂಗಕ್ಕೆ ಎದುರಾಗಿ ಸುಂದರವಾದ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.

ಕಂಪಿಲರಾಯ ದೇವಾಲಯ

ಇತಿಹಾಸ ಪ್ರಸಿದ್ಧ ಹಂಪಿಯ ಹೇಮಕೂಟದಲ್ಲಿರುವ ಕಂಪಿಲರಾಯ ದೇವಾಲಯವು ಕ್ರಿ.ಶ. ಸು. ೧೪ನೇ ಶತಮಾನದಲ್ಲಿ ನಿರ್ಮಾಣವಾಗಿದೆ. ಎತ್ತರದ ಜಗತಿಯ ಮೇಲೆ ನಿರ್ಮಾಣದ ತ್ರಿಕೂಟಾಚಲವನ್ನು ಹೊಂದಿದ ಈ ದೇವಾಲಯವು ಮೂರು ಗರ್ಭಗೃಹಗಳು, ಅಂತರಾಳಗಳು, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹಗಳು, ಅಂತರಾಳಗಳ ಪ್ರವೇಶ ದ್ವಾರಗಳು ಸರಳ ಶೈಲಿಯಲ್ಲಿವೆ. ಈ ದೇವಾಲಯದ ಸಭಾಮಂಟಪದ ಕಂಬದ ಮೇಲಿರುವ ಶಾಸನದಲ್ಲಿ "ಮುಮ್ಮಡಿಸಿಂಗನಾಯಕನ ಮಗ

ವೀರಕಂಪಿಲದೇವನು ಶಿವಾಲಯವನ್ನು ಕಟ್ಟಿಸಿ, ಮೂರು ಲಿಂಗಗಳನ್ನು ಪ್ರತಿಷ್ಠಾಪನೆ ಮಾಡಿದ ಉಲ್ಲೇಖವಿದೆ.”[೧೬]

ವಿರೂಪಾಕ್ಷ ದೇವಾಲಯ

ಹಂಪಿಯ ಗ್ರಾಮದೊಳಗಿನ ಬಜಾರದ ಉತ್ತರದ ಕೊನೆಯಲ್ಲಿರುವ ವಿರೂಪಾಕ್ಷ ದೇವಾಲಯವು ಕ್ರಿ.ಶ.ಸು. ೧೪ನೇ ಶತಮಾನದಲ್ಲಿ ನಿರ್ಮಾಣವಾಗಿದೆ. ವಿಶಾಲವೂ, ಭವ್ಯವೂ ಆದ ಹಂಪಿಯ ದೇವಾಲಯಗಳಲ್ಲಿ ವಿರೂಪಾಕ್ಷ ದೇವಾಲಯವೂ ಒಂದು. ಈ ದೇವಾಲಯ ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬರುವ ಪೂರ್ವದಲ್ಲಿಯೇ ವಿರೂಪಾಕ್ಷ ಪಂಪಾಪತಿಯ ಆರಾಧನೆ ಹೆಚ್ಚು ಪ್ರಚಾರದಲ್ಲಿದ್ದುದರ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಈ ದೇವಾಲಯದ ಗರ್ಭಗೃಹವು ಅಂತರಾಳ, ಅರ್ಧಮಂಟಪ, ಪ್ರದಕ್ಷಿಣಾ ಪಥ, ಸಭಾಮಂಟಪ ಹಾಗೂ ಮಹಾಮಂಟಪಗಳಿಂದ ಕೂಡಿದೆ. ಗರ್ಭಗೃಹ ಮತ್ತು ಅಂತರಾಳದ ಪ್ರವೇಶ ದ್ವಾರಗಳು ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದು, ಲಲಾಟ ಬಿಂಬದಲ್ಲಿ ಗಜಲಕ್ಷ್ಮಿ, ಇಕ್ಕೆಲಗಳಲ್ಲಿ ತ್ರಿಶೂಲ, ಡಮರು, ಗದೆ, ಹಿಡಿದು ನಿಂತ ದ್ವಾರಪಾಲಕರ ವಿಗ್ರಹಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಸ್ಥಾಪಿಸಲಾಗಿದೆ.

“ವಿಶಾಲವಾದ ತೆರೆದ ಮಹಾಮಂಟಪವನ್ನು ಕ್ರಿ.ಶ. ೧೫೧೦ರಲ್ಲಿ ಶ್ರೀ ಕೃಷ್ಣದೇವರಾಯನು ಕಟ್ಟಿಸಿದನು. ಇದನ್ನು ಶಾಸನದಲ್ಲಿ ರಂಗ ಮಂಟಪವೆಂದು ಕರೆಯಲಾಗಿದೆ.”[೧೭]

ವಿರೂಪಾಕ್ಷ ದೇವಾಲಯದ ಪೂರ್ವ ದ್ವಾರದ ಗೋಪುರ ೧೬೦ ಅಡಿ ಎತ್ತರವಿದೆ. ಕಲ್ಯಾಣಮಂಟಪವನ್ನು ಮತ್ತು ಒಳಗಡೆಯ ಕಿರುಗೋಪುರವನ್ನು ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಿಸಲಾಯಿತು. ಕಲ್ಯಾಣ ಮಂಟಪದ ಚಾವಣಿಯ ಮೇಲೆ ಅಮೂಲ್ಯವಾದ ಭಿತ್ತಿಚಿತ್ರಗಳು ರಚಿತವಾಗಿವೆ. ಪಲ್ಲಕ್ಕಿಯಲ್ಲಿ ಕುಳಿತಿರುವ ವಿದ್ಯಾರಣ್ಯರು, ತ್ರಿಪುರ ಸಂಹಾರಿ ಶಿವ ಅರ್ಜುನನು ಮತ್ಸ್ಯಯಂತ್ರವನ್ನು ಬೇಧಿಸುವ ಚಿತ್ರಗಳು ಚಿತ್ತಾಕರ್ಷಕವಾಗಿವೆ. ಈ ಮೇಲೆ ತಿಳಿಸಲಾದ ವಿರೂಪಾಕ್ಷ ದೇವಾಲಯವಲ್ಲದೆ ಉದ್ದಾನವೀರಭದ್ರ ದೇವಾಲಯ, ಬಡವಲಿಂಗ, ಇತ್ಯಾದಿ ಸಣ್ಣ-ದೊಡ್ಡ ಶೈವ ದೇವಾಲಯಗಳು ಹಂಪಿ ಪರಿಸರದಲ್ಲಿವೆ.

ವಿದ್ಯಾಶಂಕರ ದೇವಾಲಯ

ವಿಜಯನಗರದ ಕಾಲದಲ್ಲಿ ನಿರ್ಮಿತವಾದ ಶೈವ ದೇವಾಲಯಗಳಲ್ಲಿ ಅತ್ಯುತ್ತಮವಾದುದರ ಗುಂಪಿಗೆ ಇದು ಸೇರುತ್ತದೆ. ಈ ದೇವಾಲಯದ ನಿರ್ಮಾಣವಾದ ಸ್ಥಳವೇ ಬಹು ಆಕರ್ಷಕವಾದುದು. ಬಾಗಿ ಹರಿಯುತ್ತಿರುವ ತುಂಗಾನದಿಯ ದಡದ ಮೇಲೆ ನಿಂತ ಈ ದೇವಾಲಯ ಒಂದು ದೃಷ್ಟಿಯಲ್ಲಿ ಆಗ್ರಾದ ತಾಜ್‌ಮಹಲನ್ನು ನೆನಪಿಗೆ ತರುತ್ತದೆ.

ಈ ದೇವಾಲಯದ ತಲವಿನ್ಯಾಸ ವಿಶಿಷ್ಟ ಬಗೆಯದಾಗಿ ಪೂರ್ವಕ್ಕೆ ಮುಖವಾಗಿರುವ ಈ ದೇವಾಲಯವು ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಅರ್ಧ ವೃತ್ತಾಕಾರದಂತಿದ್ದು ಇದರಿಂದ ದೇವಾಲಯದ ಒಟ್ಟು ರಚನೆ ಸ್ವಲ್ಪಮಟ್ಟಿಗೆ ಅಂಡಾಕಾರವಾಗಿ ಕಾಣುತ್ತದೆ. ಪಶ್ಚಿಮದ ಅರ್ಧ ವೃತ್ತಾಕಾರದೊಳಗೆ ಒಂದು ಗರ್ಭಗೃಹವಿದ್ದು ಅದರ ಮುಂದೆ ದೊಡ್ಡ ಸುಕನಾಸಿಯಿದೆ.

ಗೋಡೆಗಳ ಹೊರಭಾಗದಲ್ಲಿ ಏಳೆಂಟು ಅಲಂಕಾರ ಪಟ್ಟಿಕೆಗಳು ಇವೆ. ಶಿವನಲೀಲೆಗಳು, ಪೌರಾಣಿಕ ಕಥೆಗಳು ಮೊದಲಾದ ವಿಗ್ರಹಗಳಿವೆ. ಹೀಗೆ ಹಲವಾರು ಅಂಶಗಳನ್ನು ಅಳಪಡಿಸಿಕೊಂಡುದರ ಫಲವಾಗಿ ಇದಕ್ಕೊಂದು ವಿಶಿಷ್ಟವಾದ ರೂಪ ಮತ್ತು ಸೌಂದರ್ಯ ಸಿದ್ಧಿಸಿದೆ.

೫. ಕಂಪ್ಲಿ - ಧಾರ್ಮಿಕ ಕ್ಷೇತ್ರ

ಹಂಪಿಯಿಂದ ೨೩ ಕಿ.ಮೀ. ದೂರದಲ್ಲಿರುವ ಕಂಪ್ಲಿಯು ಇತಿಹಾಸ ಪ್ರಸಿದ್ಧ ಸ್ಥಳವಾಗಿದೆ. ಕಂಪ್ಲಿ ಸಾಮ್ರಾಜ್ಯದ ಮೂಲಪುರುಷ ಸಿಂಗನಾಯಕ. ಈತ ಮಗನಾದ ಕಂಪಿಲ ದೇವರಾಯನ ಕಾಲದಲ್ಲಿ ಈ ಮನೆತನದ ಸಾಮ್ರಾಜ್ಯವು ವಿಸ್ತಾರಗೊಂಡಿದೆ. ಮುಮ್ಮಡಿ ಸಿಂಗನಾಯಕ ಕಂಪಿಲರಾಯ, ಕುಮಾರರಾಮರಿಂದ ಕಂಪಿಲೆಯು ಪುಣ್ಯಭೂಮಿಯಾಗಿದೆ. ಐತಿಹಾಸಿಕವಾಗಿ ಹೇಳುವುದಾದರೆ "`ಕಪಿಲಾ` ಎಂಬ ಋಷಿ ಇಲ್ಲಿ ತಪಸ್ಸು ಮಾಡಿದ್ದು ಮುಂದೆ ಈ ಪ್ರದೇಶವನ್ನು ಆಳಿದ ಅರಸನಿಗೆ ಕಂಪಿಲರಾಯ ಎಂಬ ಹೆಸರು ಇಡಲಾಗಿದೆ. ಅದರಿಂದಾಗಿ ಈ ಪುರಕ್ಕೆ `ಕಂಪಿಲಿ` ಎಂಬ ಹೆಸರು ಬಂದಿದೆ. ಇಲ್ಲಿಯ ಸ್ಥಳನಾಮದ ಪ್ರಕಾರ ಇಲ್ಲಿಯ ರಾಜನು ಕೆಂಪು ಹುಲಿಯನ್ನು ಕೊಂದುದರಿಂದ ಆತನ ಹೆಸರು ಕೆಂಪು ಹುಲಿರಾಯ ಎಂದಾಗಿ ಕಂಪಿಲರಾಯನೆಂದಾಯಿತು. ಆತನ ಹೆಸರಿನಿಂದ ಈ ಊರಿಗೆ 'ಕಂಪಿಲಿ' ಎಂಬ ಹೆಸರು ಬಂದಿದೆ"[೧೮]

ಕಂಪಿಲಿಯ ಪಂಪಾಪತಿ ದೇವಾಲಯ

ಕಂಪ್ಲಿಯು ಧಾರ್ಮಿಕ ದೃಷ್ಟಿಯಿಂದ ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಕಂಪ್ಲಿ ಗ್ರಾಮದ ಪಶ್ಚಿಮಕ್ಕೆ ಪಂಪಾಪತಿಯ ದೇವಾಲಯವು ಕ್ರಿ.ಶ. ೧೫ನೇ ಶತಮಾನದಲ್ಲಿ ನಿರ್ಮಿತಗೊಂಡಿದೆ. ಎತ್ತರದ ದಿಬ್ಬದ ಮೇಲೆ ನಿರ್ಮಾಣವಾದ ಈ ದೇವಾಲಯ ದ್ವಿಕೂಟಾಚಲವಾಗಿದೆ. ದಕ್ಷಿಣ, ಪಶ್ಚಿಮ ಭಾಗಗಳಲ್ಲಿ ಗರ್ಭಗೃಹಗಳಿದ್ದು ಅವುಗಳಿಗೆ ಹೊಂದಿಕೊಂಡು ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಸಾದಾ ಕೆತ್ತನೆಯಿಂದ ಕೂಡಿದ ಗರ್ಭಗೃಹದಲ್ಲಿ ಉದ್ಭವ ಲಿಂಗವಿದೆ. ಪಶ್ಚಿಮ ಭಾಗದಲ್ಲಿರುವ ಗರ್ಭಗೃಹದ ಪ್ರವೇಶ ದ್ವಾರದ ಲಲಾಟ ಬಿಂಬದಲ್ಲಿ ಪದ್ಮವಿದೆ. ಕೈಗಳಲ್ಲಿ ಪದ್ಮವಿಡಿದ ಸಮಭಂಗಿಯಲ್ಲಿ ನಿಂತ ಪಂಪಾದೇವಿಯ ಚಿಕ್ಕ ಶಿಲ್ಪವನ್ನು ಒಳಗೆ ಪ್ರತಿಷ್ಠಾಪಿಸಲಾಗಿದೆ. "ಈ ದೇವಾಲಯದ ಆವರಣದಲ್ಲಿ ವಿಜಯನಗರ ಅರಸ ಸದಾಶಿವರಾಯನ ಕ್ರಿ.ಶ. ೧೫೫೨ರ ಶಾಸನದಲ್ಲಿ ದೇವಾಲಯಗಳಿಗೆ ದಾನ ನೀಡಿದ ವಿಷಯವಿದೆ".[೧೯]

ಸೋಮೇಶ್ವರ ದೇವಾಲಯ

ಕಂಪಿಲೆಯ ಅಧಿದೈವವಾದ ಸೋಮೇಶ್ವರ ದೇವಾಲಯವು ಬಹು ಪ್ರಸಿದ್ಧಿಯನ್ನು ಪಡೆದಿದೆ. ಕ್ರಿ.ಶ. ಸು. ೧೪ನೇ ಶತಮಾನದಲ್ಲಿ ನಿರ್ಮಾಣವಾದ ಈ ದೇವಾಲಯದ ಗರ್ಭಗೃಹ, ಅಂತರಾಳ ಮತ್ತು ತೆರೆದ ಸಭಾ ಮಂಟಪಗಳಿವೆ. ಸದಾ ಕೆತ್ತನೆಯ ಪ್ರವೇಶ ದ್ವಾರವನ್ನು ಹೊಂದಿದೆ. ಗರ್ಭಗೃಹದಲ್ಲಿ ೬ ಅಡಿ ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ, ಕಪಾಲಿ ಹಿಡಿದುಕೊಂಡಿದ್ದಾನೆ. ಅಂತರಾಳದ ಪ್ರವೇಶ ದ್ವಾರಕ್ಕೆ ತಗಡನ್ನು ಜೋಡಿಸಲಾಗಿದೆ. ಅದರ ಮೇಲ್ಭಾಗದಲ್ಲಿ "ಕ್ರಿ.ಶ. ೧೮೭೯ರ ಶಾಸನದಲ್ಲಿ ಮುದ್ದಾಪುರದ ಮುನೇಗೌಡನ ಮಗ ಗುರಾಪ್ಪನ ಹೆಂಡತಿ ಹಂಪಮ್ಮನ ಸೇವಾರ್ಥ ಹೇವಳಂಬ" ಎಂಬ ಉಲ್ಲೇಖವಿದೆ."[೨೦]

ಅಂತರಾಳದಲ್ಲಿ ಸುಮಾರು ೩ ಅಡಿ ಎತ್ತರದ ಸುಖಾಸನದಲ್ಲಿ ಕುಳಿತ ಶಿಲ್ಪವಿದೆ. ಕೈಗಳಲ್ಲಿ ಖಡ್ಗ, ಕಪಾಲಿ, ಹಿಡಿದುಕೊಂಡಿರುವ ಇದನ್ನು ಸ್ಥಳೀಯರು ಕಂಪಿಲರಾಯನೆಂದು ಕರೆಯುವರು. ಸಭಾ ಮಂಟಪದಲ್ಲಿ ನಂದಿಶಿಲ್ಪವಿದೆ. ದೇವಾಲಯದ ಗೋಡೆಯನ್ನು ಅಲ್ಲಲ್ಲಿ ಜೀರ್ಣೋದ್ಧಾರ ಗೊಳಿಸಲಾಗಿದೆ.

ನಗರೇಶ್ವರ ದೇವಾಲಯ

ಕಂಪ್ಲಿಯ ದೇವಸ್ಥಾನಗಳಲ್ಲಿ ನಗರೇಶ್ವರ ದೇವಾಲಯವು ಕ್ರಿ.ಶ. ೧೬ನೇ ಶತಮಾನಕ್ಕೆ ಸೇರಿದ್ದು, ಪ್ರಸಿದ್ಧಿಯನ್ನು ಪಡೆದಿದೆ. ಈ ದೇವಾಲಯವು ಗರ್ಭಗೃಹ ತೆರೆದ ಸಭಾ ಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಈಶ್ವರಲಿಂಗ, ಸಭಾಮಂಟಪದಲ್ಲಿ ನಂದಿಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದ ಮಧ್ಯದಲ್ಲಿರುವ ಚೌಕಾಕಾರದ ನಾಲ್ಕು ಕಂಬಗಳು ಶೈವ, ವೈಷ್ಣವ, ಜನಪದೀಯ ಉಬ್ಬು ಶಿಲ್ಪಗಳಿಂದ ಅಲಂಕರಿಸಲ್ಪಟ್ಟಿರುವುದು, ಈ ದೇವಾಲಯದ ವೈಶಿಷ್ಟ್ಯವಾಗಿದೆ.

೬. ಆನೆಗೊಂದಿ

ಆನೆಗೊಂದಿಯು ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಕಂಗೊಳಿಸುವ ಪ್ರಮುಖ ಪಟ್ಟಣಗಳಲ್ಲೊಂದಾಗಿದೆ. ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದ ಈ ಪಟ್ಟಣಕ್ಕೆ ವಾನರ ಕೇಂದ್ರ, ಹಸ್ತಿನಾವತಿ, ದಕ್ಷಿಣಕಾಶಿ ವಿವಿಧ ಹೆಸರುಗಳಿಂದ ಪ್ರಸಿದ್ಧಿ ಪಡೆದಿವೆ. ಈ ಪ್ರದೇಶದ ಪುರಾಣ ಪ್ರಸಿದ್ಧ ಸ್ಥಳಗಳಾದ ವಾಲಿಭಂಡಾರ, ಪಂಪಾ ಸರೋವರ, ಅಂಜನಾದೇವಿಯ ಬೆಟ್ಟಗಳು ಮನಮೋಹಕವಾಗಿವೆ. ವಿಜಯನಗರದ ಅರಸರು ಆನೆಗಳನ್ನು ಇಲ್ಲಿ ಸಾಕುತ್ತಿದ್ದರು ಎಂಬ ಕಾರಣದಿಂದಾಗಿ ಆನೆಗೊಂದಿ ಎಂಬ ಹೆಸರು ಬಂತೆಂದು ಸ್ಥಳೀಯರು ಅಭಿಪ್ರಾಯಪಡುತ್ತಾರೆ. ಅದಕ್ಕೆ ಪೂರಕವಾಗಿ 'ಆನೆಸಾಲು' ಎಂದು ಕರೆಯಲ್ಪಡುವ ಕಟ್ಟಡವನ್ನು ತೋರಿಸುತ್ತಾರೆ.

"ನ್ಯೂನಿಜ್ ಆನೆಗೊಂದಿಯನ್ನು 'ನಾಗೊಂದಿ' ಎಂದು ಉಲ್ಲೇಖಿಸಿ "Mother of Empire City" ಮಾತೃಸ್ಥಾನ ಎಂಬುದಾಗಿ ವರ್ಣಿಸಿದ್ದಾನೆ. ವಿಜಯನಗರದ ಸೋಲು ಗೆಲುವಿನಲ್ಲಿ ಈ ಪ್ರದೇಶವು

ನಿರ್ಣಾಯಕವೆನಿಸಿದೆ".[೨೧] ಹೀಗೆ ತುಂಗಭದ್ರೆಯು ಹರಿಯುವಾಗ ತನ್ನೊಡಲಲ್ಲಿ ಕನಕಗಿರಿ, ಕವಿತಾಳ, ರಾಯಚೂರು, ದೇವಿಘಾಟ್, ಮಂತ್ರಾಲಯ ಇತ್ಯಾದಿ ಯಾತ್ರಾ ಕ್ಷೇತ್ರಗಳನ್ನು ಹೊಂದಿದೆ. ಹೀಗೆ ಶೈವ ಧರ್ಮದ ಕ್ಷೇತ್ರಗಳು ಹಲವು ಧಾರ್ಮಿಕ ಸಂಘರ್ಷಗಳ ಕುರುಹುಗಳಾಗಿಯೂ ಇವೆ. ಇದು ವೈಷ್ಣವ, ಶಾಕ್ತೇಯರೊಂದಿಗೆ ಮುಖಾಮುಖಿಯಾದ ಹಲವು ಸ್ಥಿತ್ಯಂತರಗಳನ್ನು ಈ ದೇಗುಲಗಳ ಭೌತಿಕ ಚಹರೆಯಲ್ಲಿ ಗುರುತಿಸಬಹುದಾಗಿದೆ.

ಹೀಗೆ ಶೈವ ಧರ್ಮದ ಕ್ಷೇತ್ರಗಳು ಹಲವು ಧಾರ್ಮಿಕ ಸಂಘರ್ಷಗಳ ಕುರುಹುಗಳಾಗಿಯೂ ಇವೆ. ಇದು ವೈಷ್ಣವ, ಶಾಕ್ತೇಯರೊಂದಿಗೆ ಮುಖಾಮುಖಿಯಾದ, ಹಲವು ಸ್ಥಿತ್ಯಂತರಗಳನ್ನು ಈ ದೇಗುಲಗಳ ಭೌತಿಕ ಚಹರೆಯಲ್ಲಿ ಗುರುತಿಸಬಹುದಾಗಿದೆ.

ಟಿಪ್ಪಣಿಗಳು

೧. ಲೇ.ಟಿ. ಗಿರಿಜಾ. ಶ್ರೀ **ಕುರುವತ್ತಿ** ಬಸವೇಶ್ವರ ಕ್ಷೇತ್ರದರ್ಶನ, ಬಸವ ಮಿತ್ರಾಬಳಗ, ದಾವಣಗೆರೆ, ಪು. ೨.

೨. .....ಅದೇ....ಪು. ೬.

೩. ..... ಅದೇ... ಪು. ೫೫.

೪. ..... ಅದೇ..... ಪು. ೧೭.

೫. ಕುಂ.ಬಾ.ಸ., ೧೯೯೦, ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಮಾಲತೇಶ ಪ್ರಕಾಶನ, ಕುಂಚೂರು, ಪು. ೧೭೦.

೬. ಲೇ. ಟಿ. ಗಿರಿಜಾ, ಶ್ರೀ **ಕುರುವತ್ತಿ** ಬಸವೇಶ್ವರ ಕ್ಷೇತ್ರದರ್ಶನ, ಪು. ೩೯.

೭. ....ಅದೇ...... ಪು. ೪೫.

೮. ಸಂಶೋಧಕ ಎ. ಕರಿಬಸಪ್ಪ, ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೧೩.

೯. ಕುಂ.ಬಾ.ಸ., ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಪು. ೧೧೮.

೧೦. ಸಂಶೋಧಕ ಎ. ಕರಿಬಸಪ್ಪ, ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೧೪.

೧೧. ....ಅದೇ...... ಪು. ೧೧೨.

೧೨. ....ಅದೇ...... ಪು. ೧೫೩.

೧೩. ಸಂ. ಡಾ. ಕೆ. ಎಂ. ಸುರೇಶ್ ಇತರರು, ೧೯೯೯, **ಕರ್ನಾಟಕ ದೇವಾಲಯ ಕೋಶ**, ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೨೪.

೧೪. ಡಾ. ಎಸ್. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೫, **ಭಾವೈಕ್ಯ ವಾರ್ಷಿಕ ಸಂಭ್ರಮ**, ಪು. ೭೭.

೧೫. **ಕನ್ನಡ ಪ್ರಭ** ಸೋಮವಾರ ೧೬.೪.೨೦೦೭, ಪು. ೫.

೧೬. **ಕರ್ನಾಟಕ ದೇವಾಲಯಗಳ ಕೋಶ**, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೦೯.

೧೭. ....ಅದೇ....... ಪು. ೧೧೮.

೧೮. **ತುಂಗಾ ಮತ್ತು ಭದ್ರಾ ನದಿಗಳ ಹುಟ್ಟು, ಪಾತ್ರ ಹಾಗೂ ಜಲಚರಗಳ ಕುರಿತ ಅಧ್ಯಯನ ವರದಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೯೫.

೧೯. ಡಾ.ಕೆ.ಎಂ.ಸುರೇಶ್ ಇತರರು, **ಕರ್ನಾಟಕ ದೇವಾಲಯ ಕೋಶ**, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೭೭.

೨೦. ....ಅದೇ........

೨೧. ಡಾ.ಕೆ.ಎಂ. ಸುರೇಶ್ ಇತರರು, ೧೯೯೯, **ಕರ್ನಾಟಕ ದೇವಾಲಯ ಕೋಶ**, ಕೊಪ್ಪಳ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೩.

* * * * *

ಅಧ್ಯಾಯ ೬

ವೈಷ್ಣವ ಧರ್ಮದ ಕ್ಷೇತ್ರಗಳು

ಅಧ್ಯಾಯ ಆರು

ವೈಷ್ಣವ ಧರ್ಮದ ಕ್ಷೇತ್ರಗಳು

ತುಂಗಭದ್ರಾ ನದಿ ಪರಿಸರದಲ್ಲಿಯ ವಿಜಯನಗರ ಸಾಮ್ರಾಜ್ಯವು ಪ್ರಾಚೀನ ಕಾಲದಿಂದಲೂ ಧಾರ್ಮಿಕವಾಗಿ ಪ್ರಸಿದ್ಧಿಯನ್ನು ಪಡೆದಿದೆ. ವಿಜಯನಗರವನ್ನಾಳಿದ ಪ್ರತಿಯೊಂದು ಅರಸು ಮನೆತನಗಳು ಧಾರ್ಮಿಕ ವಿಚಾರದಲ್ಲಿ ಉದಾರ ನೀತಿಯನ್ನು ಅನುಸರಿಸಿರುವುದು ಇಲ್ಲಿರುವ ದೇವಾಲಯಗಳು, ಮಂಟಪಗಳು, ಬಸದಿಗಳು, ಇತ್ಯಾದಿ ಅಂಶಗಳಿಂದ ವೇದ್ಯವಾಗುತ್ತದೆ. ಈ ಮನೆತನಗಳಲ್ಲಿ ಬರುವ ಸಾಳುವರ ಕಾಲದಲ್ಲಿ ವೈಷ್ಣವ ಧರ್ಮವು ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಿದೆ. ಅಂದು ಪ್ರಚಲಿತದಲ್ಲಿದ್ದ ಶೈವ ಪಂಥದ ಸ್ಥಾನವನ್ನು ಅಲಂಕರಿಸಿ ಅದರಷ್ಟೇ ಜನಮನ್ನಣೆ ಗಳಿಸಿದ ಧರ್ಮವೆಂದರೆ ವೈಷ್ಣವ ಧರ್ಮವಾಗಿದೆ.

ವಿಜಯನಗರದಲ್ಲಿ ಜನಸಾಮಾನ್ಯರು ವಿಷ್ಣು ಹಾಗೂ ಆತನ ಇತರೆ ಅವತಾರಗಳಲ್ಲಿ ನಂಬಿಕೆಯಿಟ್ಟು ಆರಾಧಿಸುವವರನ್ನು ವೈಷ್ಣವರೆಂದು ಕರೆಯಲಾಗಿದೆ. ಈ ಪಂಥದವರಿಗೆ ಹರಿ, ನಾರಾಯಣ, ಕೃಷ್ಣ, ಗೋವಿಂದ, ವೆಂಕಟೇಶ್ವರ, ಪುರುಷೋತ್ತಮ, ಮಾಧವ, ಲಕ್ಷ್ಮೀ ಈ ಮೊದಲಾದ ರೂಪಗಳಲ್ಲಿ ವಿಷ್ಣುವನ್ನು ಆರಾಧಿಸುವ ವೈಷ್ಣವರು "ಹರಿಯೇ ಪರಮ ಸತ್ಯ, ಜಗತ್ತು ಮಿಥ್ಯವಲ್ಲ ಸತ್ಯವೇ" ಎಂಬ ಸಿದ್ಧಾಂತವನ್ನು ನಂಬಿದ್ದರು.

ವಿಜಯನಗರ ಕಾಲದಲ್ಲಿ ಪದ್ಮನಾಭ, ನರಹರಿತೀರ್ಥ, ಮಾಧವತೀರ್ಥ, ಅಕ್ಷೋಭ್ಯತೀರ್ಥ ಮೊದಲಾದವರು ವೈಷ್ಣವ ಧರ್ಮವನ್ನು ಸಾಕಷ್ಟು ಪ್ರಚುರಪಡಿಸಿದ್ದಾರೆ. ತುಂಗಭದ್ರಾ ನದಿಯ ಬಳಿ ಬೆಟ್ಟದ ಇಳಿಜಾರಿನಲ್ಲಿರುವ ವೈಷ್ಣವ ದೇವಾಲಯಗಳ ಸಮೂಹ ಮತ್ತು ಕಲ್ಲಿನ ನರಸಿಂಹ, ನಯನ ಮನೋಹರವಾದ ಮಹಾನವಮಿದಿಬ್ಬ, ಇವೆಲ್ಲವುಗಳು ವೈಶಿಷ್ಟ್ಯ ಹಾಗೂ ವೈವಿಧ್ಯವನ್ನು ಉಳಿಸಿಕೊಂಡಿದ್ದು ವಾಸ್ತುಶಿಲ್ಪದ ಘನತೆಯನ್ನು ಪ್ರತಿನಿಧಿಸುತ್ತವೆ.

ವಿಜಯನಗರದ ಅರಸರು ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿ ಅನೇಕ ವೈಷ್ಣವ ದೇವಾಲಯಗಳ ನಿರ್ಮಾಣಕ್ಕೆ ಕಾರಣೀಭೂತರಾಗಿದ್ದಾರೆ. ಪ್ರಸ್ತುತ ಅಧ್ಯಾಯದಲ್ಲಿ ವಿಜಯನಗರದಲ್ಲಿಯ ವೈಷ್ಣವ ದೇವಾಲಯಗಳನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗಿದೆ.

೧. ಹಜಾರರಾಮ ದೇವಾಲಯ

ಹಂಪಿಯಲ್ಲಿಯ ಅರಮನೆಯ ಆವರಣದಲ್ಲಿಯ ಹಜಾರರಾಮ ದೇವಾಲಯ ಕ್ರಿ.ಶ. ೧೪ನೇ ಶತಮಾನದಲ್ಲಿ ನಿರ್ಮಾಣವಾಗಿದೆ. `ಹಜಾರ' ಎಂಬ ಹೆಸರೇ ಸೂಚಿಸುವಂತೆ ಅರಮನೆಯ ಹೊರಗಿನ ಹೆಬ್ಬಾಗಿಲ ಬಳಿ ರಚಿತವಾಗಿರುವ ಈ ದೇವಾಲಯ ಅರಮನೆಯ ಉಪಯೋಗಕ್ಕೆ ಮಾತ್ರ ಸೀಮಿತವಾಗಿತ್ತು. ಶ್ರೀಕೃಷ್ಣದೇವರಾಯ ಈ ದೇವಾಲಯವನ್ನು ನಿರ್ಮಿಸಿದನೆಂದು ಪ್ರತೀತಿಯಿದೆ. ಆದರೆ ಗುಡಿಯ "ಶಾಸನಗಳು ಅಲ್ಲಿನ ಶಿಲ್ಪಶೈಲಿಯನ್ನು ನೋಡಿದರೆ ಇದು ಕೃಷ್ಣದೇವರಾಯನ ಕಾಲಕ್ಕೂ ಹಿಂದಿನದೆಂದು ತೋರುತ್ತದೆ. ಬಹುಶಃ ಇಮ್ಮಡಿ ದೇವರಾಯನ (೧೪೨೨-೧೪೨೬) ಕಾಲಕ್ಕೆ ಸೇರಿರಬಹುದು."[1]

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅರ್ಧಮಂಟಪ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ರಾಮನ ಶಿಲ್ಪಗಳೊಂದಿಗೆ ರಾಮಾಯಣದ ಮಹಾಕಾವ್ಯವನ್ನು ಪ್ರತಿಬಿಂಬಿಸುವ ಅನೇಕ ಚಿತ್ರಗಳು ಇಲ್ಲಿ ದೊರೆಯುವುದರಿಂದ ಹಜಾರರಾಮ ದೇವಾಲಯವೆಂದು ಕರೆದಿರುವುದು ಪ್ರತೀತಿ. ಗರ್ಭಗೃಹದ ಪ್ರವೇಶ ದ್ವಾರ ಸಾದಾ ಕೆತ್ತನೆಯಿಂದ ಕೂಡಿದ್ದು ಅದರ ಇಕ್ಕೆಲಗಳಲ್ಲಿ ಚಕ್ರ, ಗದೆ, ಶಂಖ ಹಿಡಿದು ನಿಂತ ದ್ವಾರಪಾಲಕರ ವಿಗ್ರಹಗಳಿವೆ. ಸಭಾಮಂಟಪದಲ್ಲಿ ನೀಡಿದಾಗ ಘನಾಕೃತಿಯ ನಾಲ್ಕು ಚೌಕಾಕಾರದ ಕಪ್ಪುಶಿಲೆಯ ಕಂಬಗಳನ್ನು ನಯವಾಗಿ ಕೆತ್ತನೆ ಮಾಡಿ ಮೆರಗುಗೊಳಿಸಲಾಗಿದೆ. ಪ್ರತಿಯೊಂದು ಕಂಬದ ನಾಲ್ಕು ಚಚ್ಚೌಕ ಮುಖದಲ್ಲಿ ವಿಷ್ಣುವಿನ ೨೪ ಅವತಾರಗಳಿವೆ. ಇದರಲ್ಲಿ ಕಲ್ಕಿಯ ಅವತಾರವನ್ನು ನಿರೂಪಿಸುವುದೊಂದು ವೈಶಿಷ್ಟ್ಯವಾಗಿದೆ. ಚತುರ್ಭುಜ ವಿಷ್ಣು, ಶಂಖ, ಚಕ್ರ, ಗುರಾಣಿಗಳನ್ನು ಹಿಡಿದು ಕುದುರೆಯ ಮೇಲೆ ಕುಳಿತಿದ್ದಾನೆ. ಈ ಕಂಬಗಳ ಮೇಲೆ ಪುಷ್ಪ ಬೋದಿಗೆಗಳನ್ನು ಜೋಡಿಸಲಾಗಿದೆ. ಈ ದೇವಾಲಯದ ಸಭಾಮಂಟಪದ ಹೊರಭಾಗದ ಗೋಡೆಯ ಮೆಲೆ ನಾಗರೀ ಲಿಪಿ ಶಾಸನವಿದೆ.

"ವಾಣೀವ ಭೋಜರಾಜಂ ತ್ರಿಪುರಾಂಭಾ ವತ್ಸರಾಜಂ ಇವ
ಕಾಳೀವ ವಿಕ್ರಮಾರ್ಕ ಕಲಯತಿ ಪಂಪಾ ದೇವರಾಯ ನೃಪ"[2] ಎಂದಿದೆ.

ಈ ಶಾಸನದಲ್ಲಿ ಉಲ್ಲೇಖಿಸಿರುವ 'ದೇವರಾಯ ಮೊದಲನೆಯವನೋ, ಎರಡನೆಯ ವನೋ ತಿಳಿಯುವುದಿಲ್ಲ. ಈ ದೇವಾಲಯದ ವಾಸ್ತುಶೈಲಿಯನ್ನು ಗಮನಿಸಿದರೆ, ಬಹುಶಃ ಕ್ರಿ.ಶ. ೧೪ನೇ ಶತಮಾನದಲ್ಲಿ ಎರಡನೆಯ ಹರಿಹರನ ಕಾಲದಲ್ಲಿ ಕಟ್ಟಿರುವ ಸಾಧ್ಯತೆಯಿದೆ.

೨. ವಿಜಯವಿಠಲ ದೇವಾಲಯ

ತುಂಗಭದ್ರಾ ನದಿಯ ಬಲದಂಡೆಯ ಮೇಲೆ ಇರುವ ವಿಜಯವಿಠಲ ದೇವಾಲಯವು ಕ್ರಿ.ಶ. ೧೫ನೇ ಶತಮಾನದಲ್ಲಿ ನಿರ್ಮಾಣವಾಗಿದೆ. ಈ ದೇವಾಲಯವನ್ನು ಎರಡನೇ ದೇವರಾಯನ ಕಾಲದಲ್ಲಿ

ಕಟ್ಟಲು ಪ್ರಾರಂಭಿಸಲಾಯಿತು. ಅನಂತರ ಇದರ ಕೆಲಸವು ಕೃಷ್ಣದೇವರಾಯ, ಅಚ್ಯುತದೇವರಾಯ, ಸದಾಶಿವರಾಯ, ಅರಸರ ಕಾಲದಲ್ಲಿ ಮುಂದುವರೆಯಿತು.

ವಿಜಯವಿಠಲ ದೇವಾಲಯವು ಸುಂದರವಾದ ಕೆತ್ತನೆಯ ಕೆಲಸಗಳಿಂದ ಕೂಡಿದ್ದು ದೊಡ್ಡ ದೇವಾಲಯವಾಗಿದೆ. ಇದರ ಒಳಾಂಗಣ ೫೦೦ ಅಡಿ ಉದ್ದ, ೩೨೦ ಅಡಿ ಅಗಲವಿದೆ. ಈ ದೇವಾಲಯದಲ್ಲಿ ಗರ್ಭಗುಡಿ, ಆರಾಧನಾ ಮಂಟಪ ಹಾಗೂ ಮಹಾಮಂಟಪಗಳಿಂದ ಕೂಡಿದೆ. ಈ ಮಹಾಮಂಟಪವು ೫೬ ಶ್ರೇಷ್ಠ ಕೆತ್ತನೆಯ ಕೃತಿಗಳಿಂದ ಕೂಡಿದ ಕಲ್ಲುಕಂಬಗಳ ಮೇಲೆ ನಿಂತಿದೆ. ಈ ಮಹಾರಂಗಮಂಟಪವು ಅಲಂಕೃತವಾದ ಒಂದು ಅಧಿಷ್ಠಾನದ ಮೇಲೆ ನಿರ್ಮಿತವಾಗಿದ್ದು, ಕುದುರೆಗಳು ಮತ್ತು ಯೋಧರ ಸ್ತಬ್ಧಚಿತ್ರಗಳು, ಹಂಸಗಳು, ವಿಷ್ಣುವಿನ ದಶಾವತಾರ ವಿಗ್ರಹಗಳನ್ನು ಒಳಗೊಂಡ ವಿಮಾನ ವಿಗ್ರಹಗಳು ಅಧಿಷ್ಠಾನವನ್ನು ಅಲಂಕರಿಸಿವೆ. ಈ ಮಂಟಪದಲ್ಲಿ ೫೬ ಕಂಬಗಳು ಸುಂದರವಾಗಿದ್ದು, ಮಧ್ಯಾಂಗಣವನ್ನು ರೂಪಿಸಿದೆ. ಈ ಕಂಬಗಳ ಮೇಲೆ ಲಘುವಾಗಿ ಹೊಡೆದಾಗ ಸಪ್ತಸ್ವರಗಳ ಮಾಧುರ್ಯ ಹೊರಹೊಮ್ಮುತ್ತದೆ.

ವಿಜಯನಗರ ಕಾಲದ ಅತ್ಯಂತ ವಿಶಾಲ ಹಾಗೂ ಶಿಲ್ಪಕಲೆಯ ಶ್ರೇಷ್ಠತೆಯುಳ್ಳ ದೇವಾಲಯಗಳಲ್ಲಿ ಹಜಾರರಾಮ ದೇವಾಲಯವೂ ಒಂದಾಗಿದೆ. ಈ ದೇವಾಲಯ ಸಂಗಮರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದು ಕಾಲಾನುಕ್ರಮದಲ್ಲಿ ವಿಸ್ತಾರವಾಗುತ್ತಾ ಬಂದಿದೆ. “ಕ್ರಿ.ಶ. ೧೫ನೇ ಶತಮಾನ ಆದಿ ಭಾಗದಲ್ಲಿ ಈ ದೇವಾಲಯವು ಅಸ್ತಿತ್ವದಲ್ಲಿತ್ತೆಂಬುದು ಹರಿಭಟ್ಟನ 'ಉತ್ತರ ನರಸಿಂಹ ಪುರಾಣ'ದಿಂದ ತಿಳಿಯುತ್ತದೆ. ಕ್ರಿ.ಶ. ೧೫೧೩ರಲ್ಲಿ ಕೃಷ್ಣದೇವರಾಯನ ರಾಣಿಯರಾದ ಚಿನ್ನಾದೇವಿ, ತಿರುಮಲಾದೇವಿಯರು ವಿಠಲದೇವಾಲಯದ ಗೋಪುರವನ್ನು ನಿರ್ಮಿಸಿದರು. ಅಚ್ಯುತದೇವರಾಯನ ಕಾಲದಲ್ಲಿ ಮುಖಮಂಟಪ, ಕಲ್ಯಾಣಮಂಟಪ ಮತ್ತು ಪ್ರಾಕಾರದ ಗೋಡೆಗೆ ಹೊಂದಿಕೊಂಡಂತೆ ಕೆಲವು ಮಂಟಪಗಳು ನಿರ್ಮಾಣವಾಗಿದೆ.”

೩. ರಘುನಾಥ ದೇವಾಲಯ

ಕಮಲಾಪುರ - ಕಂಪ್ಲಿ ರಸ್ತೆಯಲ್ಲಿರುವ ಮಾಲ್ಯವಂತ ಬೆಟ್ಟದ ಆಶ್ರಯದಲ್ಲಿ ಈ ದೇವಾಲಯ ನಿರ್ಮಾಣವಾಗಿದೆ. ಹನುಮಂತನು ಸೀತೆಯ ಶೋಧನೆಗೆ ಹೋದಾಗ ರಾಮ-ಲಕ್ಷ್ಮಣರು ಆತನ ಬರುವಿಕೆಗಾಗಿ ಕಾಯುತ್ತಾ ಈ ಪರ್ವದ ಮೇಲೆ ತಂಗಿದ್ದರೆಂಬುದು ಕಾವ್ಯಗಳಲ್ಲಿ ಕಂಡುಬರುವ ಅಂಶವಾಗಿದೆ. ಎತ್ತರವಾದ ಪ್ರದೇಶದ ಮೇಲೆ ನಿರ್ಮಾಣವಾದ ಈ ದೇವಾಲಯವು ಗರ್ಭಗೃಹ, ಅಂತರಾಳ, ಅರ್ಧಮಂಟಪ, ಪ್ರದಕ್ಷಿಣಾ ಪಥ, ಸಭಾಮಂಟಪ, ಮಹಾಮಂಟಪಗಳಿಂದ ಕೂಡಿದೆ. ಅಂತರಾಳ, ಗರ್ಭಗೃಹಗಳ ಪ್ರವೇಶ ದ್ವಾರಗಳು ಸಾದಾ ಕೆತ್ತನೆಗಳಿಂದ ಕೂಡಿದ್ದು, ಒಳಗೆ ಬೃಹತ್ ಬಂಡೆಯಲ್ಲಿ ರಾಮ-ಲಕ್ಷ್ಮಣ ಮತ್ತು ಸೀತೆಯ ಉಬ್ಬುಶಿಲ್ಪಗಳಿವೆ. ಅರ್ಧಮಂಟಪದ ಇಕ್ಕೆಲಗಳಲ್ಲಿ ಪ್ರದಕ್ಷಿಣಾಪಥದ ಪ್ರವೇಶ ದ್ವಾರಗಳಾಗಿವೆ. ಈ ಪ್ರವೇಶ ದ್ವಾರಗಳಲ್ಲಿ ಹೂವಿನ ಎಸಳುಗಳು, ಪದ್ಮಗಳು ಲಲಾಟ ಬಿಂಬದಲ್ಲಿ, ಗಜಲಕ್ಷ್ಮಿ ಮತ್ತು

ಇಕ್ಕೆಲಗಳಲ್ಲಿ ಚಕ್ರ, ಶಂಖ, ಗದೆ, ಹಿಡಿದು ನಿಂತ ದ್ವಾರಪಾಲಕರ ವಿಗ್ರಹಗಳಿಂದ ಅಲಂಕರಿಸಲಾಗಿದೆ. ಉತ್ತರ ನರಸಿಂಹ ಪುರಾಣದಲ್ಲಿ ಉಲ್ಲೇಖಿಸಿರುವಂತೆ ಎರಡನೆಯ ದೇವರಾಯನ ಕಾಲದಲ್ಲಿ ಈ ದೇವಾಲಯದಲ್ಲಿ ಆರಾಧನೆ ನಡೆಯುತ್ತಿತ್ತೆಂದು ತಿಳಿದು ಬರುತ್ತದೆ.

೪. ತಿರುವೇಂಗಳನಾಥ ದೇವಾಲಯ

ತುಂಗಭದ್ರಾ ದಂಡೆಯ ಹಂಪಿಯಲ್ಲಿರುವ ಈ ದೇವಾಲಯ ಕ್ರಿ.ಶ. ಸು. ೧೫ನೇ ಶತಮಾನದಲ್ಲಿ ನಿರ್ಮಾಣವಾಗಿದೆ. "ಕ್ರಿ.ಶ. ೧೫೩೪ರ ಶಾಸನದಲ್ಲಿ ಅಚ್ಯುತದೇವರಾಯ ತಿರುವೇಂಗಳನಾಥ ದೇವಾಲಯವನ್ನು ಕಟ್ಟಿಸಿ ಮೂರ್ತಿ ಪ್ರತಿಷ್ಠಾಪನೆ ಮಾಡಿ ದಾನದತ್ತಿಗಳನ್ನು ಬಿಟ್ಟ ಉಲ್ಲೇಖವಿದೆ."[೪] ಈ ಕಾರಣದಿಂದಲೇ ಈ ದೇವಾಲಯಕ್ಕೆ ಅಚ್ಯುತ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ತೆರೆದ ಮಂಟಪ ಮತ್ತು ಮಹಾಮಂಟಪಗಳಿಂದ ಕೂಡಿದೆ. ಎರಡು ಗೋಡೆಗಳ ಮಧ್ಯೆ ಆಗ್ನೇಯ ಭಾಗದಲ್ಲಿರುವ ನೃತ್ಯಮಂಟಪ ಎತ್ತರದ ಜಗತಿಯ ಮೇಲೆ ನಿರ್ಮಾಣವಾಗಿದೆ. ಇಲ್ಲಿಯ ಕಂಬಗಳ ಮೇಲೆ ಅನೇಕ ಭಂಗಿಗಳಲ್ಲಿ ನೃತ್ಯ ಮಾಡುತ್ತಿರುವ ಸ್ತ್ರೀಪುರುಷರ ಲೈಂಗಿಕ ಶಿಲ್ಪಗಳು ಹಾಗೂ ವಿಷ್ಣುವಿನ ಅವತಾರಗಳನ್ನು ಬಿಡಿಸಲಾಗಿದೆ. ಮುಖ್ಯ ಪ್ರವೇಶ ಗೋಪುರದ ಇಕ್ಕೆಲಗಳಲ್ಲಿ ಕಂಬಗಳ ಮೇಲೆ ಮಕರಾರೂಢರಾದ ಗಂಗೆ ಯಮುನಾ, ನದಿದೇವತೆಗಳ ಶಿಲ್ಪಗಳು, ಕೃಷ್ಣನ ಕತೆಗಳನ್ನು ರಚಿಸಿರುವುದರಿಂದ ನೋಡುಗರ ಕಣ್ಮನಗಳನ್ನು ಸೆಳೆಯುತ್ತವೆ.

೫. ಬಾಲಕೃಷ್ಣ ದೇವಾಲಯ

"ಕೃಷ್ಣ ದೇವರಾಯನು ೧೫೧೩ ಫೆಬ್ರವರಿ ೧೬ ರಂದು ಉದಯಗಿರಿಯನ್ನು ಮುತ್ತಿಗೆ ಹಾಕಿದಾಗ ಕೃಷ್ಣನ ಮೂರ್ತಿಯನ್ನು ತರಲಾಯಿತು. ಆಗ ವಿಜಯನಗರದಲ್ಲಿದ್ದ ಮಾಧವಮುನಿ ವ್ಯಾಸರಾಯರು ಸಂತೋಷದಿಂದ ಬರಮಾಡಿಕೊಂಡರು. ಅನಂತರ ಇದಕ್ಕೊಂದು ದೇವಾಲಯವನ್ನು ನಿರ್ಮಿಸಿ ೧೫೨೬ರಲ್ಲಿ ಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಈ ವಿಗ್ರಹವು ಈಗ ಮದ್ರಾಸಿನ ವಸ್ತುಸಂಗ್ರಹಾಲಯದಲ್ಲಿದೆ."[೫]

ಈ ದೇವಾಲಯವು ಗರ್ಭಗೃಹ, ಅಂತರಾಳ, ಮುಚ್ಚಿದ ಪ್ರದಕ್ಷಿಣಾಪಥ, ಅರ್ಧಮಂಟಪ, ಸಭಾಮಂಟಪ ಮತ್ತು ತೆರೆದಮಂಟಪಗಳಿಂದ ಕೂಡಿದೆ. ಸಭಾಮಂಟಪದ ಮಧ್ಯದಲ್ಲಿರುವ ದೊಡ್ಡ ಪ್ರಮಾಣದ ಚೌಕಾಕಾರದ ನಾಲ್ಕು ಕಂಬಗಳ ಮೇಲೆ ಆಂಜನೇಯ, ಗರುಡ, ಕೈಯಲ್ಲಿ ಬೆಣ್ಣೆ ಹಿಡಿದು ನರ್ತಿಸುತ್ತಿರುವ ಬಾಲಕೃಷ್ಣ, ಕಾಳಿಂಗಮರ್ಧನ, ಕೃಷ್ಣ ಮುಂತಾದ ಉಬ್ಬುಶಿಲ್ಪಗಳನ್ನು ಕಂಡರಿಸಲಾಗಿದೆ.

"ಮಹಾಮಂಟಪದ ಮುಂಭಾಗದಲ್ಲಿ ಒಂದು ಚಿಕ್ಕ ಗುಡಿಯ ಗೋಡೆಯ ಮೇಲೆ ಕೃಷ್ಣದೇವರಾಯ ಉದಯಗಿರಿ ಯಾತ್ರೆಯನ್ನು ಉಲ್ಲೇಖಿಸುವ ಶಾಸನವಿದೆ. ಅಲ್ಲದೇ ಇನ್ನೊಂದು ದೇವಾಲಯದ ಪ್ರವೇಶದಲ್ಲಿ

ಬೃಹದಾಕಾರದ ಬಂಡೆಯ ಮೇಲೆ ನೂರೊಂದು ಸಾಲುಗಳ ಶಿಲಾಶಾಸನವಿದೆ. ಅದು ಕೃಷ್ಣದೇವರಾಯನ ಉದಯಗಿರಿಯ ದಿಗ್ವಿಜಯ ಹಾಗೂ ಅಲ್ಲಿಂದ ತಂದ ಬಾಲಕೃಷ್ಣನ ಪ್ರತಿಷ್ಠಾಪನೆಯನ್ನು ಉಲ್ಲೇಖಿಸುತ್ತದೆ.

೬. ಹೊಸೂರು ಗೋಪಾಲಕೃಷ್ಣ ದೇವಾಲಯ (ಹೊಸಪೇಟೆ)

ತುಂಗಭದ್ರಾ ನದಿ ದಂಡೆಯ ಮೇಲಿರುವ ಈ ದೇವಾಲಯವು ಕ್ರಿ.ಶ.ಸು. ೧೫ನೇ ಶತಮಾನಕ್ಕೆ ಸೇರಿದೆ. ಈ ದೇವಾಲಯವು ಗರ್ಭಗೃಹ, ತೆರೆದ ಸಭಾಮಂಟಪಗಳಿಂದ ನಿರ್ಮಾಣವಾಗಿದೆ. ಗರ್ಭಗೃಹದ ಪ್ರವೇಶದ್ವಾರ ಸಾದಾ ಕೆತ್ತನೆಯಿದ್ದು ಲಲಾಟ ಬಿಂಬದಲ್ಲಿ ಗಣೇಶ ವಿಗ್ರಹವಿದೆ. ಗರ್ಭಗೃಹದಲ್ಲಿ ಗೋಪೆಗೆ ಹೊಂದಿಕೊಂಡು ಚಕ್ರ, ಶಂಖ, ಕೊಳಲು ಹಿಡಿದು ನಿಂತ ಗೋಪಾಲಕೃಷ್ಣನ ವಿಗ್ರಹವಿದೆ. ಕೊಳಲಿನ ನಾದವನ್ನು ಸುತ್ತಲಿರುವ ಹಸುಗಳು ಆಲಿಸುತ್ತಿರುವ ದೃಶ್ಯವಂತೂ ನಯನ ಮನೋಹರವಾಗಿದೆ.

೭. ಬಾಗವಾಡಿ ರಾಮಲಿಂಗೇಶ್ವರ ದೇವಾಲಯ (ಸಿರುಗುಪ್ಪಾ)

ಬಾಗವಾಡಿ ರಾಮಲಿಂಗೇಶ್ವರ ದೇವಾಲಯವು ತುಂಗಭದ್ರಾ ನದಿಯ ಬಲದಂಡೆಯಲ್ಲಿದೆ. ಈ ದೇವಾಲಯವು ಕ್ರಿ.ಶ. ಸು. ೧೩ನೇ ಶತಮಾನಕ್ಕೆ ಸೇರಿದ್ದು, ಕಲ್ಯಾಣಿ ಚಾಲುಕ್ಯರ ಶೈಲಿಯನ್ನು ಹೊಂದಿದೆ. ಎತ್ತರವಾದ ಅಧಿಷ್ಠಾನದ ಮೇಲೆ ರಾಮಲಿಂಗೇಶ್ವರ ದೇವಾಲಯ ನಿರ್ಮಾಣವಾಗಿದೆ. ಮೂರು ಗರ್ಭಗೃಹಗಳು, ಅಂತರಾಳಗಳು, ಸಭಾಮಂಟಪ ಹಾಗೂ ತೆರೆದ ಮಂಟಪಗಳಿವೆ. ತ್ರಿಕೂಟಾಚಲವಾದ ಈ ದೇವಾಲಯದ ಮೂರು ಗರ್ಭಗುಡಿಗಳಲ್ಲಿ ಶಿವಲಿಂಗ ಮತ್ತು ನಂದಿ ಶಿಲ್ಪಗಳಿವೆ. ಬಾಗಿಲವಾಡವನ್ನು ಅರೆಗಂಬಗಳು, ಉಬ್ಬುಶಿಲ್ಪಗಳು ಹಾಗೂ ದ್ವಾರಪಾಲಕರ ವಿಗ್ರಹಗಳಿಂದ ಅಲಂಕರಿಸಲಾಗಿದೆ.

ವೈಷ್ಣವ ದೇವಾಲಯಗಳನ್ನು ನೋಡಿದರೆ ತುಂಗಭದ್ರ ನದಿ ತಟವು ಹಲವು ಧಾರ್ಮಿಕ ಪಂಥಗಳಿಗೆ ಆಶ್ರಯವಿತ್ತದ್ದು ತಿಳಿಯುತ್ತದೆ. ಅಂತೆಯೇ ಕಾಲಾನಂತರದಲ್ಲಿ ಈ ಪಂಥಗಳ ಸ್ಥಿತ್ಯಂತರ ಆಗಿರಲಿಕ್ಕೂ ಸಾಧ್ಯವಿದೆ. ಶೈವ ದೇವಾಲಯಗಳಿಗೆ ಪರ್ಯಾಯವಾಗಿ ವೈಷ್ಣವ ದೇವಾಲಯ ಹೀಗೆ ಪರಿಹಾರ ಸಂಘರ್ಷ ಮುಖಾಮುಖಿ ನಡೆದಿರುವುದು ಚಾರಿತ್ರಿಕವಾಗಿ ದಾಖಲಿಸುವ ಸಂಗತಿಗಳು.

ಟಿಪ್ಪಣಿಗಳು

೧. ಸಂ: ಹಾ.ಮಾ. ನಾಯಕ, **ಕರ್ನಾಟಕ ವಿಷಯ ವಿಶ್ವಕೋಶ,** ಕ.ಅ.ಸಂ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೧೫೫೪.

೨. ಸಂ: ಡಾ.ಕೆ.ಎಂ. ಸುರೇಶ್, ಇತರರು, ೧೯೯೯, **ಕರ್ನಾಟಕ ದೇವಾಲಯಗಳ ಕೋಶ (ಬಳ್ಳಾರಿ ಜಿಲ್ಲೆ),** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು. ೧೧೪.

೩. ಎಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ. ಮೂರ್ತಿ, ೧೯೮೫, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೬೦೫.

೪. ಡಾ. ಕೆ.ಎಂ. ಸುರೇಶ್, ೧೯೯೯, **ಕರ್ನಾಟಕ ದೇವಾಲಯಗಳ ಕೋಶ** (ಬಳ್ಳಾರಿ ಜಿಲ್ಲೆ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು. ೧೧೬.

೫. ....ಅದೇ......ಪು. ೧೧೨.

೬. ....ಅದೇ.......ಪು. ೧೧೨.

* * * * *

ಅಧ್ಯಾಯ ೭

ಶಾಕ್ತೇಯ ಧಾರ್ಮಿಕ ಕ್ಷೇತ್ರಗಳು

ಅಧ್ಯಾಯ ಏಳು

ಶಾಕ್ತೇಯ ಧಾರ್ಮಿಕ ಕ್ಷೇತ್ರಗಳು

ಶಾಕ್ತೇಯ (ಸ್ತ್ರೀ) ದೇವತೆಯು ಸರ್ವಸ್ವತಂತ್ರಳು, ಶಿವನು ಹಿನ್ನೆಲೆ ಮಾತ್ರ. ಶಾಕ್ತೇಯ ದೇವತೆಯೆಂಬ ಶಕ್ತಿಯ ರೂಪವು ಉಗ್ರಸ್ವರೂಪ ನಾಶದ್ದಾಗಿದೆ. ದುರ್ಗಿ, ಚಾಮುಂಡಿ, ಕಾಳಿ, ಆದಿಶಕ್ತಿಯ ಉಗ್ರರೂಪಗಳಾಗಿ, ಪಾರ್ವ, ಉಮೆ, ಶಂಕರಿ ಶಕ್ತಿಯ ಸೌಮ್ಯರೂಪಗಳಾಗಿವೆ. ಇವು ಶಕ್ತಿಯ ಮಾಯೆಯ ರೂಪಗಳು. ಶೈವ, ವೈಷ್ಣವ ದೇವಾಲಯಗಳ ಜೊತೆಯಲ್ಲಿಯೇ ಶಾಕ್ತೇಯ ಧಾರ್ಮಿಕ ಕೇಂದ್ರಗಳೂ ತುಂಗಭದ್ರಾ ನದಿ ಪರಿಸರದಲ್ಲಿವೆ. ಪ್ರಸ್ತುತ ಅಧ್ಯಾಯದಲ್ಲಿ ತುಂಗಭದ್ರಾ ನದಿ ಪರಿಸರವನ್ನು ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಅಧ್ಯಯನ ನಡೆಸಿದಾಗ ಕುರುವತ್ತಿ, ಮೈಲಾರ, ಹಂಪಿ, ಹೊಸೂರು ಇತ್ಯಾದಿ ಕ್ಷೇತ್ರಗಳಲ್ಲಿ ಶಾಕ್ತೇಯ ದೇವತೆಯ ಪ್ರಭಾವವು ಹೆಚ್ಚಾಗಿ ಕಂಡು ಬರುತ್ತದೆ.

೧. ಕುರುವತ್ತಿ ಪರಿಸರದ ಶಕ್ತಿ ದೇವತೆಗಳು

ಅ. ಹಿರೇಮಠದಲ್ಲಿ ಚೌಡಿ

ಧಾರ್ಮಿಕ ಕ್ಷೇತ್ರದಲ್ಲಿ ಕುರುವತ್ತಿಯ ಹಿರೇಮಠವು ಪ್ರಮುಖ ಪಾತ್ರವನ್ನು ವಹಿಸಿದೆ. ಹಿರೇಮಠದ ಎಂಟನೇ ಪೀಠಾಧ್ಯಕ್ಷರಾದ ಕುರುವತ್ತಪ್ಪಜ್ಜನವರು "ಶ್ರೀಬಸವೇಶ್ವರ ದೇವರ ಹೊಸ ತೇರುಗಾಲಿಗಳನ್ನು ಬಿಜಾಪುರದಿಂದ ತರುವಾಗ ಚೌಡಿಯು ಕಾಣಿಸಿಕೊಂಡು ನಿಮ್ಮೂರಿಗೆ ಬರುತ್ತೇನೆ ಎಂದು ಅಜ್ಜನವರಿಗೆ ಹೇಳಿದಂತಾದಾಗ ನಮ್ಮ ಮನೆಯಲ್ಲಿ ಜಾಗೇವು ಇಲ್ಲ. ಇನ್ನು ನಿನಗೆಲ್ಲಿ ಸ್ಥಳ ತರೋಣ ಎಂದರೆ 'ನನಗೆ ಯಾವ ಜಾಗವೂ ಬೇಡ ನಿಮ್ಮ ಮಠದ ಮುಂಬಾಗಿಲಿನಲ್ಲಿ ಸ್ವಲ್ಪ ಸ್ಥಳ ಕೊಟ್ಟರೆ ಸಾಕು' ಎಂದು ಇವರೊಂದಿಗೆ ಬಂದು ಬಿಟ್ಟಳಂತೆ ಚೌಡಿ"[೧] ಎಂದು ಅಲ್ಲಿನ ಸ್ಥಳಪುರಾಣದಿಂದ ವ್ಯಕ್ತಗೊಂಡಿರುವ ವಿಚಾರವನ್ನು ಶ್ರೀಮತಿ ಮಠದ ಚೆನ್ನಮ್ಮನವರು ತಿಳಿಸುತ್ತಾರೆ.

ಈ ದೇವಾಲಯವನ್ನು ಒಳಹೊಕ್ಕು ನೋಡಿದಾಗ ಚೌಡಿ ದೇವತೆ ಮಠದ ಮುಂಬಾಗಿಲ ಒಳಗಡೆ ಒಂದು ಮೂಲೆಯಲ್ಲಿ ನಿಂತಿದ್ದಾಳೆ. ಮಠವನ್ನು ಪ್ರವೇಶಿಸುತ್ತಲೇ ಒಂದು ಸುಂದರ ಮರದ ಮುಖದ ಹೆಣ್ಣಿನ ಗೊಂಬೆ ಗೋಡೆಗೆ ಒರಗಿ ನಿಂತಿದೆ. ಭಕ್ತರು ಸೀರೆ ಉಡಿಸಿದ್ದಾರೆ. ನೋಡಿದಾಕ್ಷಣ ನಾಲ್ಕು ಅಡಿ ಎತ್ತರದ ಸೀರೆ ಉಟ್ಟು ತೆಳ್ಳನೆಯ ಚೌಡಿ ದೇವತೆ ಕಣ್ಮನಗಳನ್ನು ಸೆಳೆಯುತ್ತಾಳೆ. ಈ ಚೌಡಿ ದೇವತೆಯು

ಕುರುವತ್ತೆಪ್ಪಜ್ಜ. ಜಗುಲಿಯ ಮೇಲೆ ಮಲಗಿದ್ದರೆ ಮಾತನಾಡುತ್ತಾಳಂತೆ, ಮನೆಯಲ್ಲಿ ಮಕ್ಕಳು ಅತ್ತರೆ ಯಾರೂ ಇರದಿದ್ದರೆ ತೊಟ್ಟಿಲಲ್ಲಿ ತೂಗುತ್ತಾಳಂತೆ ಈ ರೀತಿಯಾಗಿ ಈ ಚೌಡಿ ದೇವತೆಯು ಓರೇಮಠದ ಮನೆತನದ ಮಗಳಾಗಿದ್ದಾಳೆ. ಭಕ್ತರು ಮಕ್ಕಳಿಗೆ ಏನಾದರೂ ತೊಂದರೆಯಾದರೆ ಹರಕೆ ಮಾಡಿಕೊಂಡರೆ ವಾಸಿ ಆಗ್ತುತ್ತದೆ ಎನ್ನುವ ನಂಬಿಕೆಯ ಕುರುವತ್ತಿಯ ಜನಸಾಮಾನ್ಯರಲ್ಲಿ ವಾಡಿಕೆಯಾಗಿದೆ.

ಆ. ದುರ್ಗಾಂಬಿಕಾ ದೇವಿ

ಕುರುವತ್ತಿಯ ಬಸವೇಶ್ವರ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿದೆ. ಊರಿನ ಹೆಣ್ಣು ದೇವತೆ ದುರ್ಗಾಂಬಿಕಾ ದೇವಿಯ ದೇವಾಲಯಕ್ಕೆ ವಿಶೇಷ ಕಟ್ಟಡವೇನೂ ಇರದಿದ್ದರೂ ಸಾಧಾರಣ ಗುಡಿಯಿದೆ. ಕುಂಬಾರ ಆವಿಗೆಯಲ್ಲಿ ದೇವಿ ಉದ್ಭವಿಸಿದಳೆಂದು ಪ್ರತೀತಿಯಿದೆ. ಈ ದುರ್ಗಾಂಬಿಕಾ ದೇವಿಗೆ ತ್ರಿಕಾಲ ಪೂಜೆ ನಡೆಯುತ್ತದೆ. ಹಬ್ಬದ ವಿಶೇಷ ಸಂದರ್ಭಗಳಲ್ಲಿ ಪೂಜೆ, ಕಾರ್ತೀಕ ನಡೆಯುತ್ತವೆ. ಕುರಿ-ಕೋಳಿಗಳ ಬಲಿಯೂ ನಡೆಯುತ್ತವೆ. ಕುರುವತ್ತಿಯ ಎಲ್ಲಾ ಧರ್ಮದ ಜನರು ಈ ದುರ್ಗಾಂಬಿಕಾ ದೇವಿಯನ್ನು ಆರಾಧಿಸುತ್ತಾರೆ.

೨. ಮೈಲಾರದ ಗಂಗಮಾಳಮ್ಮ

ಮೈಲಾರಲಿಂಗೇಶ್ವರ ದೇವಾಲಯದ ಎಡಭಾಗದಲ್ಲಿ ಪ್ರತ್ಯೇಕವಾದ ಶಯ್ಯಾಗೃಹವನ್ನು ಹೊಂದಿದ ಚಿಕ್ಕ ಕೋಣೆಯಿದೆ. ಇಲ್ಲಿ ಪಾರ್ವತಿದೇವಿಯು ಗಂಗೆಮಾಳವ್ವಳಾಗಿ ಕಾಣಿಸಿಕೊಳ್ಳುವುದು ವೈಶಿಷ್ಟ್ಯವಾಗಿದೆ. ಪ್ರತಿ ವರ್ಷ ಆಗಿ ಹುಣ್ಣಿಮೆಯಂದು ಮೈಲಾರ ದೇವರಿಗೂ ಗಂಗಿಮಾಳವ್ವಳಿಗೂ ವಿವಾಹ ಜರುಗುವುದು ಪದ್ಧತಿಯಾಗಿದೆ. ಮೈಲಾರಲಿಂಗ ದೇವಾಲಯದ ಎಡಭಾಗದಲ್ಲಿರುವ ಚಿಕ್ಕ ಗುಡಿಯ ಕೋಣೆಯೊಂದರಲ್ಲಿ ಹಾಸಿಗೆ ಹೊದಿಕೆಯಿದ್ದು, ಈ ಹಾಸಿಗೆಗಳನ್ನು ಬಳಕೆಯಾಗಿರುವ ಸುಳಿವುಗಳು ಗೋಚರವಾಗುತ್ತವೆ ಎಂಬ ವಿಚಾರವನ್ನು ಸ್ಥಳೀಕರಾದ ಶ್ರೀ ಕೋಟೆಪ್ಪ ಇವರಿಂದ ಮೌಖಿಕ ಆಕರವಾಗಿ ಸಂಗ್ರಹಿಸಲಾಗಿದೆ. ಈ ಗಂಗಿಮಾಳವ್ವ ಚಿಕ್ಕಗುಡಿಯಾಗಿದ್ದರೂ ಸಹ ಮೈಲಾರದಲ್ಲಿ ಪ್ರಸಿದ್ಧವಾಗಿದ್ದು, ಇಲ್ಲಿನ ಜನಸಾಮಾನ್ಯರ ಬದುಕಿಗೆ ಶಾಂತಿ, ನೆಮ್ಮದಿ ನೆಲಸುವಂತೆ ಮಾಡಿದ್ದಾಳೆ.

೩. ಹೊಸೂರು : ಹೊಸೂರಮ್ಮ

ಹೊಸಪೇಟೆ ಬಳಿಯ ಹೊಸೂರು ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಈ ಭಾಗದ ಜನತೆಯಲ್ಲಿ ಸಾಕಷ್ಟು ಪ್ರಭಾವವನ್ನು ಬೀರಿದೆ. ಈ ಗ್ರಾಮದ ಅಧಿದೇವತೆಯಾದ ಹೊಸೂರಮ್ಮನನ್ನು ಕುರಿತು ಐತಿಹ್ಯಗಳು, ದಂತಕತೆಗಳು ಸೃಷ್ಟಿಯಾಗಿವೆ.

ಐತಿಹಾಸಿಕವಾಗಿ ಹೇಳುವುದಾದರೆ ಸು. ೧೫-೧೬ನೇ ಶತಮಾನದ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಈ ಹೊಸೂರಮ್ಮ ದೇವಸ್ಥಾನವು ಅವರ ಅಧೀನಕ್ಕೆ ಒಳಪಟ್ಟಿತ್ತು. ಈ ದೇವತೆಗೆ ಅಷ್ಟೊಂದು

ಪ್ರಾಮುಖ್ಯತೆಯನ್ನು ನೀಡಲಾಗಿರಲಿಲ್ಲ. ಆಗ ಗರ್ಭಗುಡಿಯಷ್ಟೇ ನಿರ್ಮಾಣಗೊಂಡಿತ್ತು. ಹೊಸೂರಮ್ಮ ದೇವಿಯ ದೇವಸ್ಥಾನಕ್ಕೆ ಯಾವ ಆಸ್ತಿಯೂ ಇರಲಿಲ್ಲ.

"ಸೋಮಶೇಖರ ನಾಯಕನಿಗೆ ಸ್ವಪ್ನದಲ್ಲಿ ಗ್ರಾಮದೇವತೆ ಶ್ರೀ ಹೊಸೂರಮ್ಮ ದೇವಿಯು ಬಂದು ಹೊಸೂರು ಕೋಟೆಯನ್ನು ರಕ್ಷಿಸುತ್ತಿದ್ದಂತೆ ಕಂಡು ಬಂತು. ಇದರಿಂದ ಪಶ್ಚಾತ್ತಾಪ ಪಟ್ಟ ನಾಯಕನು ಹೊಸೂರಮ್ಮನನ್ನು ಭಕ್ತಿಯಿಂದ ನಮಸ್ಕರಿಸಿ ಕ್ಷಮಿಸುವಂತೆ ಬೇಡಿಕೊಂಡ. ದೇವಿಯ ಪೂಜೆಯನ್ನು ಮರುದಿನ ಬೆಳಿಗ್ಗೆ ವಿಜೃಂಭಣೆಯಿಂದ ಮಾಡಿಸಿದನು. ಸೋಮಶೇಖರ ನಾಯಕನು ದೇವಿಯ ನಿತ್ಯ ಪೂಜೆಯನ್ನು ಹಾಗೂ ಜಾತ್ರೆಯ ಇನ್ನಿತರ ಸಂಪ್ರದಾಯಗಳು ಸಾಂಗವಾಗಿ ಜರುಗಲು ೨೦ ಎಕರೆ ಭೂಮಿಯನ್ನು ಭಕ್ತಿಯಿಂದ ದತ್ತಿಯಾಗಿ ನೀಡಿದನು"[೨] - ಎಂಬ ವಿಷಯವು ಸ್ಥಳ ಪುರಾಣದಿಂದ ತಿಳಿದು ಬರುತ್ತದೆ.

ಪೌರಾಣಿಕ ಹಿನ್ನೆಲೆ

ಹೊಸೂರಿನಲ್ಲಿ ಹೊಸೂರಮ್ಮ ದೇವತೆ, ಸವದತ್ತಿ ಯಲ್ಲಮ್ಮ, ಹುಲಿಗೆಮ್ಮ, ದುರುಗಮ್ಮ ಮುಂತಾದ ಆಯಾ ಊರಿನ ದೇವತೆಗಳಿಗೂ ಒಂದೇ ರೀತಿಯಲ್ಲಿ ಅನ್ವಯವಾಗುವಂತೆ ಹೊಸೂರಮ್ಮನಿಗೂ ಪೌರಾಣಿಕ ಹಿನ್ನೆಲೆಯಿದೆ.

ಹೊಸೂರು ಗ್ರಾಮದ ಜನರನ್ನು ಕಂಡು ಈ ದೇವಾಲಯದ ಪೌರಾಣಿಕ ಹಿನ್ನೆಲೆಯನ್ನು ಕುರಿತು ಚರ್ಚಿಸಿದಾಗ "ಜಮದಗ್ನಿ ಋಷಿಯ ಹೆಂಡತಿ ರೇಣುಕೆ ಈಕೆಯ ಮಗ ಪರಶುರಾಮ ತಂದೆಯ ಆಜ್ಞೆಯಂತೆ ತಾಯಿಯ ತಲೆಯನ್ನು ಕಡಿಯುತ್ತಾನೆ. ಆ ಶಿರವೇ ಇಲ್ಲಿರುವ ಹೊಸೂರಮ್ಮ ಎಂದು ಹೊಸೂರಿನ ಜನರ ನಂಬಿಕೆಯಾಗಿದೆ.

ಹೊಸೂರಮ್ಮ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ, ಮಹಾಮಂಟಪಗಳಿಂದ ಕೂಡಿದೆ. ಎತ್ತರವಾದ ೨೪ ಕಂಬಗಳಲ್ಲಿ ಮುಂದಿನ ಭಾಗದವು ಕೆಳಗೆ ಅಸಮ ಚೌಕಾಕಾರ ಮೇಲೆ ಅಷ್ಟಭಾಗದ ವೃತ್ತಾಕಾರದಲ್ಲಿದೆ. ಈ ದೇವಾಲಯದ ಗೋಡೆ, ಕಂಬಗಳಲ್ಲಿ ಪೌರಾಣಿಕ, ಜನಪದ, ಉಬ್ಬುಶಿಲ್ಪವನ್ನು ಚಿತ್ರಿಸಲಾಗಿದೆ. ಗರ್ಭಗೃಹದಲ್ಲಿ ಚಿಕ್ಕ ಮುಖಮಾತ್ರವಿರುವ ಹೊಸೂರಮ್ಮನ ಶಿಲ್ಪವಿದೆ.

ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣವಾದ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯ ನಿರಂತರವಾಗಿ ನಡೆಯುತ್ತಿದೆ. "ಈ ದೇವಾಲಯದಲ್ಲಿ ೪ ಶಿಲಾಶಾಸನಗಳಿವೆ. ಅವುಗಳಲ್ಲಿ 'ಮಹಾಪಿಯಾ-ಹೊಸೂರು' ಎಂದು ಈ ಗ್ರಾಮವನ್ನು ಕರೆಯಲಾಗಿದೆ. ಹೊಸೂರಮ್ಮ ದೇವಾಲಯಕ್ಕೆ ಎತ್ತರವಾದ ಪ್ರಾಕಾರ ಗೋಡೆ, ಅದಕ್ಕೆ ಉತ್ತರ ಮತ್ತು ಪಶ್ಚಿಮಕ್ಕೆ ಪ್ರವೇಶ ಗೋಪುರಗಳಿವೆ. ಆವರಣಕ್ಕೆ ಹೊಂದಿಕೊಂಡು ಮಾತಂಗೇಶ್ವರ, ತಾಯಿ ಮುದ್ದಮ್ಮ, ಆಂಜನೇಯ ದೇವಾಲಯಗಳಿವೆ. ಅವುಗಳಲ್ಲಿ ಏಳು ಎಡೆಗಳನ್ನು ಹೊಂದಿದ ಸರ್ಪ, ಆಂಜನೇಯನ ಶಿಲ್ಪಗಳಿವೆ."[೩]

ಹೊಸೂರಮ್ಮನ ದೇವಾಲಯ ಹಾಗೂ ಜಾತ್ರೆಯಿಂದ ಭಕ್ತ ಸಮೂಹದಲ್ಲಿ ಅನೇಕ ನಂಬಿಕೆಗಳು ಹಾಗೂ ಸಂಪ್ರದಾಯ ಆಚರಣೆಯನ್ನು ಕಾಣಬಹುದಾಗಿದೆ.

ನಂಬಿಕೆಗಳು

೧. ಹೊಸೂರಮ್ಮನ ಭಕ್ತರು ಈ ದೇವತೆಯನ್ನು ನಿಷ್ಠೆ ಹಾಗೂ ಭಕ್ತಿಭಾವದಿಂದ ಪೂಜಿಸಿ ತಮ್ಮ ಕಷ್ಟಕಾರ್ಪಣ್ಯಗಳನ್ನು ದೇವಿಯ ಕೃಪೆಗೆ ಪಾತ್ರರಾಗಿ ಪರಿಹರಿಸಿಕೊಳ್ಳುವ ನಂಬಿಕೆಯಿದೆ.

೨. ಮದುವೆಯಾದ ಹೆಂಗಸಿಗೆ ಬಹಳ ಕಾಲದವರೆಗೆ ಮಕ್ಕಳ ಸಂತಾನ ಆಗಲಿಲ್ಲವೆಂದರೆ ಮಂಗಳವಾರ ಅಥವಾ ಶುಕ್ರವಾರ ಹೊಸೂರಮ್ಮನನ್ನು ಭಕ್ತಿಭಾವದಿಂದ ಪೂಜಿಸಿದರೆ ಆಕೆಗೆ ವರ್ಷದೊಳಗೆ ಮಕ್ಕಳಾಗುತ್ತವೆ ಎಂಬ ನಂಬಿಕೆ ಸಾರ್ವತ್ರಿಕವಾಗಿದೆ.

೩. ದನ ಕರು ಹಾಕಿದರೆ ಮೊದಲು ಕರೆದ ಹಾಲಿನಿಂದ ತುಪ್ಪನ್ನು ತಯಾರಿಸುತ್ತಾರೆ. ತುಪ್ಪವನ್ನು ಜಾತ್ರೆಯ ದಿವಸ ಇಲ್ಲವೇ ಮಂಗಳವಾರ ಅಥವಾ ಶುಕ್ರವಾರ ದೈವಕ್ಕೆ ಅರ್ಪಿಸುತ್ತಾರೆ. ಈ ತುಪ್ಪವಿಂದ ದೇವಿಗೆ ತುಪ್ಪದ ದೀಪ ಉರಿಸುತ್ತಾರೆ. ಹೀಗೆ ಮಾಡಿದರೆ ದನಕರು ಮಾತ್ರವಲ್ಲದೆ ಮನೆಯವರಿಗೂ ಕ್ಷೇಮವಾಗುತ್ತದೆ ಎಂಬ ನಂಬಿಕೆಯಿದೆ.

೪. ಹೊಸೂರು ಗ್ರಾಮದಲ್ಲಿನ ಪುಟ್ಟ ಗಿಡಗಳಿಗೆ ಬಟ್ಟೆಯಲ್ಲಿ ತೊಟ್ಟಿಲು ಕಟ್ಟಿ ಅದರಲ್ಲಿ ಒಂದು ಕಲ್ಲಿರಿಸಿ ಕೈ ಮುಗಿಯುತ್ತಾರೆ. ಹೀಗೆ ಮಾಡುವುದರಿಂದ ಆ ಭಕ್ತ ದಂಪತಿಗಳಿಗೆ ಹೊಸೂರಮ್ಮನ ಅನುಗ್ರಹದಿಂದ ಮಕ್ಕಳಾಗುತ್ತವೆ ಎಂಬ ನಂಬಿಕೆ ಪ್ರಬಲವಾಗಿದೆ.

ಹೀಗೆ ಹೊಸೂರಮ್ಮನ ಜಾತ್ರೆಯಿಂದ ಹಾಗೂ ಹರಕೆಗಳಿಂದ ನಾನಾ ಕೊಡುಗೆಗಳನ್ನು ಕಾಣಬಹುದಾಗಿದೆ. ಈ ದೇವಿಯ ಜಾತ್ರೆಗೆ ವರ್ಗ, ವರ್ಣ, ಮತಬೇಧವಿಲ್ಲದೆ ಸರ್ವಜನಾಂಗದ ಭಕ್ತರನ್ನು ಹೊಸೂರಮ್ಮನು ತನ್ನತ್ತ ಸೆಳೆದುಕೊಂಡು ಈ ಭಾಗದ ಪ್ರಭಾವಿ ದೇವತೆಯಾಗಿದ್ದಾಳೆ.

೪. ಹುಲಿಗಿ : ಹುಲಿಗೆಮ್ಮ

ತುಂಗಭದ್ರಾ ನದಿ ದಂಡೆಯಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದ ಹುಲಿಗಿಯು ಶಾಕ್ತೇಯ ದೇವತೆಯ ಕ್ಷೇತ್ರವಾಗಿದೆ. ಇಂದಿನ ಕೊಪ್ಪಳ ಜಿಲ್ಲೆಯ ಹುಲಿಗಿಯಲ್ಲಿರುವ ಹುಲಿಗೆಮ್ಮ ಹುಲಿಗಿ ಸ್ಥಳದೊಂದಿಗೆ ಈ ದೈವವೂ ಸಮನ್ವಯಗೊಂಡಿದೆ. ಈ ಹುಲಿಗೆಮ್ಮನನ್ನು ಮನೆದೈವವಾಗಿ ಪೂಜಿಸುವವರು ಉತ್ತರ ಕರ್ನಾಟಕದಾದ್ಯಂತ ತಮ್ಮ ಮನೆಯಲ್ಲಿ ಈ ದೇವತೆಯನ್ನು ಇರಿಸಿಕೊಂಡಿದ್ದಾರೆ. ಸುಮಾರು ೧ ಲಕ್ಷಕ್ಕೂ ಹೆಚ್ಚು ಭಕ್ತರ ಅಧಿದೇವತೆಯಾಗಿದೆ.

ಮಾತೃಪ್ರಧಾನ ವ್ಯವಸ್ಥೆ ಇರುವ ಪುರಾವೆಗಳು ಈ ನದಿತೀರದ ಶಕ್ತಿಕೇಂದ್ರಗಳಲ್ಲಿ ಕಾಣಬಹುದು. ಇವುಗಳು ಪಶುಪಾಲನ ಮತ್ತು ಕೃಷಿ ಹಂತದ ಜೀವನ ವಿಧಾನದ ಭಾಗವಾಗಿಯೂ ಪೂಜೆಗೆ ಒಳಗಾಗಿವೆ.

ನದಿಯನ್ನು ಹೆಣ್ಣಿಗೆ ಹೋಲಿಸಿ ಪೂಜಿಸುವ ಪದ್ಧತಿ ನದಿ ತೀರದ ಜನರಿಗಿದೆ. ಹಾಗಾಗಿ ಗ್ರಾಮದೇವತೆಗಳ ಚರಿತ್ರೆಯೂ ಇಂತಹ ಧಾರ್ಮಿಕ ಪ್ರಭುತ್ವದ ಹಿನ್ನೆಲೆಯಲ್ಲಿ ತಳಕು ಹಾಕಿಕೊಂಡಿದೆ. ಈ ಕಾರಣದಿಂದಾಗಿ ತುಂಗಾಭದ್ರ ನದಿ ತೀರದ ಶಾಕ್ತೇಯ ಕೇಂದ್ರಗಳು ಅಧ್ಯಯನಕ್ಕೆ ಕುತೂಹಲದ ಕೇಂದ್ರಗಳಾಗಿವೆ.

೫. ಹಂಪೆ ಪರಿಸರದ ಶಕ್ತಿ ದೇವತೆಗಳು

ಅ. ಮಾತಂಗಿ ಪರ್ವತ

ಹಂಪಿಯ ವಿರೂಪಾಕ್ಷ ದೇವಾಲಯದ ಎದುರಿಗಿರುವ ಎತ್ತರವಾದ ಬೆಟ್ಟವನ್ನು ಮಾತಂಗ ಪರ್ವತ ಎಂದು ಕರೆಯುತ್ತಾರೆ. ಈ ಪರ್ವದಲ್ಲಿ 'ಮಾತಂಗಿ' ಎಂಬ ಋಷಿ ಇದ್ದನೆಂಬ ಕಾರಣ ಈ ಬೆಟ್ಟಕ್ಕೆ ಮಾತಂಗ ಬೆಟ್ಟವೆಂದೂ, ಮಾತಂಗ ಪರ್ವತವೆಂದು ಕರೆಯುವುದು ರೂಢಿಯಲ್ಲಿದೆ. ಸ್ಥಳೀಯ ಹೇಳಿಕೆಯ ಪ್ರಕಾರ "ಈ ಬೆಟ್ಟದಲ್ಲಿ 'ಮಾತಂಗಿ' ಇದ್ದಳು. ಆದುದರಿಂದ ಮಾತಂಗಿ ಪರ್ವತವೇ ಹೊರತು 'ಮಾತಂಗ' ಪರ್ವ ಅಲ್ಲವೆಂದೂ ಸಹ ಹೇಳುತ್ತಾರೆ. ಈ ಪರ್ವತದಲ್ಲಿ ಮಾತಂಗಿ ವಿಗ್ರಹವು ಪೂರ್ವದಲ್ಲಿತ್ತು. ಈಗ ಅದನ್ನು ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆ ಎಂಬ ವಿಷಯವನ್ನು ತಿಳಿಸುತ್ತಾ 'ಮಾತಂಗಿ' ದೇವತೆಯು 'ಮಾದಿಗ' ಸಮುದಾಯದ ಅಧಿದೇವತೆಯಾಗಿದ್ದಾಳೆ."[೩] ಈ ಅಂಶಗಳನ್ನು ವಿಶ್ಲೇಷಿಸಿದಾಗ ಇಂದಿಗೂ ಸಹ ಮಾತಂಗಿ ಪರ್ವತ ಮಾದಿಗ ಜನಾಂಗಕ್ಕೆ ಪವಿತ್ರ ಸ್ಥಳವಾಗಿದೆ. ಮಾತಂಗಿಯು ಈ ಪರಿಸರದಲ್ಲಿ ಪ್ರಭಾವಿ ದೇವತೆಯಾಗಿದ್ದು ಸಾಕಷ್ಟು ಭಕ್ತ ಕೋಟಿಯನ್ನು ಹೊಂದಿದ್ದಾಳೆ.

ಆ. ಅಂಜನಾದ್ರಿ ಪರ್ವತ : ಅಂಜನಾದೇವಿ

ಭಾರತದ ಇತಿಹಾಸದಲ್ಲಿ ಬೆಳಕಾಗಿ ಬಾಳಿದ ವಿಜಯನಗರ ಸಾಮ್ರಾಜ್ಯ ಕರ್ನಾಟಕ ಇತಿಹಾಸ ಲೋಕಕ್ಕೆ ಒಂದು ಮಹತ್ವದ ಕೊಡುಗೆಯಾಗಿದೆ. ಅಂದಿನ ವಿಜಯನಗರ ನೆಲೆಗೊಂಡಿದ್ದು, ಹಂಪಿ ಪ್ರದೇಶದ ತುಂಗಭದ್ರಾ ನದಿಯ ಬಲದಂಡೆಯ ದಕ್ಷಿಣಕ್ಕೆ ಇದೆ. ಈ ಮೊದಲೇ ನದಿಯ ಎಡದಂಡೆಯ ಮೇಲಿರುವ ವಿಜಯನಗರದ ಪೂರ್ವದ ರಾಜಧಾನಿ ಆನೆಗೊಂದಿ ಪ್ರಾಚೀನ ಪಟ್ಟಣವು ಅಸ್ತಿತ್ವದಲ್ಲಿತ್ತು. ಈ ನದಿ ಪರಿಸರದಲ್ಲಿ ಬರುವ ಸಪ್ತ ಪರ್ವತಗಳಾದ ಮಾತಂಗಿ, ಮಾಲ್ಯವಂತ, ಋಷ್ಯಮುಖಿ, ಅಂಜನಾದ್ರಿ ಪರ್ವತ, ಜಂಬುನಾಥ, ಸೋಮನಾಥ, ಸುಗ್ರೀವಗಿರಿ ಈ ಪರ್ವತಗಳು ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಹಿನ್ನೆಲೆಯನ್ನು ಹೊಂದಿವೆ. ಇವು ಈ ಪ್ರದೇಶದ ಸಂರಕ್ಷಣೆಯನ್ನಷ್ಟೇ ಅಲ್ಲದೆ ಸೌಂದರ್ಯ ಹಾಗೂ ಸಂಪತ್ತಿನ ಗಣಿಗಳೂ ಆಗಿವೆ. ರಾಜ್ಯದ ರಕ್ಷಣೆಯ ದೃಷ್ಟಿಯಿಂದ ವೈರಿಗಳು ನಗರವನ್ನು ಅಷ್ಟು ಸುಲಭವಾಗಿ ಪ್ರವೇಶಿಸಲಾಗದಂತಹ ದುರ್ಗಮ ಸ್ಥಳಗಳಾಗಿವೆ. ಕೋಟೆ ಬಾಗಿಲುಗಳ ಮೂಲಕವಲ್ಲದೆ ಬೇರೆ ಯಾವ ಕಡೆಯಿಂದಲೂ ರಾಜಧಾನಿಯನ್ನು ಪ್ರವೇಶ ಮಾಡಲು ಸಾಧ್ಯವಾಗದಂತೆ ಇಲ್ಲಿನ ಕೋಟೆ ಕೊತ್ತಲಗಳು ನೈಸರ್ಗಿಕ ಹಿನ್ನೆಲೆಯಲ್ಲಿಯೇ ನಿರ್ಮಾಣಗೊಂಡಿವೆ.

ಪ್ರಸ್ತುತ ಅಧ್ಯಾಯದಲ್ಲಿ ಅಂಜನಾದ್ರಿ ಪರ್ವತವನ್ನು ಕುರಿತು ಹನುಮಂತನ ತಾಯಿ ಅಂಜನಾದೇವಿಯು ಈ ಪರ್ವತದಲ್ಲಿ ವಾಸವಾಗಿದ್ದಳೆಂದು ಜನರ ನಂಬಿಕೆಯಾಗಿದೆ. ಹಂಪಿ ಹೊಳೆಯ ಎಡದಂಡೆಯಲ್ಲಿರುವ ಈ ಪರ್ವತವು ಇಂದು ಸಾದುಸಂತರ ನೆಲೆಯಾಗಿದೆ. ಇಲ್ಲಿ ಹನುಮ ಜಯಂತಿಯ ಕಾರ್ಯಕ್ರಮವನ್ನು ವಿಶೇಷವಾಗಿ ಆಚರಿಸುತ್ತಾರೆ.

ಅಂಜನಾದ್ರಿ ಪರ್ವತವನ್ನು ಐತಿಹ್ಯವಾಗಿ ಹೇಳುವುದಾದರೆ ಅಂಜನಾದೇವಿ ಈ ಪರ್ವತದಲ್ಲಿ ವಾಸವಾಗಿದ್ದುದರಿಂದ ಈ ಪರ್ವತಕ್ಕೆ ಅಂಜನಾದ್ರಿ ಪರ್ವತ ಎಂಬ ಹೆಸರು ಬಂತೆಂಬ ನಂಬಿಕೆ ಸಾರ್ವತ್ರಿಕವಾಗಿದೆ. ಹನುಮಂತನೇ ಇಲ್ಲಿ ತುಂಗಭದ್ರಾ ನದಿಯ ನೀರನ್ನು ಒದಗಿಸಿಕೊಟ್ಟಿದ್ದನ್ನು ಜನಪದ ಕವಿಗಳು ಈ ಕೆಳಗಿನಂತೆ ದಾಖಲಿಸಿದ್ದಾರೆ.

"ಅಡವ್ಯಾಗಂಜನದೇವಿ ಹನುಮಾನ ಹಡೆದಾಳೆ
ತೊಡೆಯ ತೊಳೆಯೋಕ ನೀರಿಲ್ಲ; ಹನುಮಣ್ಣ
ಸುತ್ತಲ ಹೊಳೆಯ ತಿರುವ್ಯಾನೆ."

೩. ಪಟ್ಟಣದ ಎಲ್ಲಮ್ಮ

ಹಂಪಿಯ ಹಜಾರರಾಮ ದೇವಸ್ಥಾನದ ಮುಂಭಾಗದಲ್ಲಿರುವ ಹಳೆಯ ಪಟ್ಟಣದ ದೇವತೆಯನ್ನು ಪಟ್ಟಣದ ಎಲ್ಲಮ್ಮ ಎಂದು ಕರೆಯುತ್ತಾರೆ. ಎಲ್ಲಮ್ಮನನ್ನು ಕುರಿತಾದ ನಾನಾ ರೀತಿಯ ಕತೆಗಳಿವೆ. ಚಾರಿತ್ರಿಕವಾಗಿ ಹೇಳುವುದಾದರೆ ವಿಜಯನಗರದ ಅರಸರು ಬೇರೆ ರಾಜ್ಯದ ರಾಜರುಗಳೊಡನೆ ಯುದ್ಧಕ್ಕೆ ಹೊರಡುವ ಮುನ್ನ ಪಟ್ಟಣದ ಎಲ್ಲಮ್ಮ ದೇವಿಯ ಅಪ್ಪಣೆ ಪಡೆದು, ವಿಜಯ ತಾಂಬೂಲ (ಪಾನ್‌ಸುಪಾರಿ ಬಜಾರು ಹತ್ತಿರ) ಸ್ವೀಕರಿಸಿ ಹೋಗುತ್ತಿದ್ದರಂತೆ. ಎಲ್ಲಮ್ಮ ದೇವಿಯು ವಿಜಯನಗರದ ಮುಖ್ಯ ದೈವವಾಗಿದ್ದು, ಪಟ್ಟಣವನ್ನು ರಕ್ಷಿಸುವ ಹೊಣೆ ಈ ದೇವತೆಯದಾಗಿದೆ. ವಿಜಯನಗರದ ದೊರೆಗಳು ಮೊದಲು ಎಲ್ಲಮ್ಮನಿಗೆ ಕೈಮುಗಿದು ನಂತರ ವಿರೂಪಾಕ್ಷ ದೇವಸ್ಥಾನಕ್ಕೆ ಹೋಗುತ್ತಿದ್ದುದು ವೈಶಿಷ್ಟ್ಯವಾಗಿದೆ.

ಇನ್ನೊಂದು ಐತಿಹ್ಯದ ಪ್ರಕಾರ ವಿಜಯನಗರದ ಉದಯದ ಕಾಲದಲ್ಲಿ ಈ ರಾಜ್ಯವನ್ನು ಕಟ್ಟಿದ ರಾಜರೂ ಹಾಗೂ ಸೈನಿಕರಿಗೆ ಈಕೆ ಕೊಟ್ಟಣದಿಂದ ನೆಲ್ಲನ್ನು ಕುಟ್ಟಿ ಗಂಜಿ ಮಾಡಿಕೊಟ್ಟು ಸಹಾಯ ಮಾಡಿದಳಂತೆ. ಅದಕ್ಕಾಗಿ ಈಕೆಗೆ ಕೊಟ್ಟಣದ ಎಲ್ಲಮ್ಮ ಎಂಬ ಹೆಸರು ಬಂದಿದೆ. ಒಟ್ಟಿನಲ್ಲಿ ಈ ಎಲ್ಲಮ್ಮ ಪಟ್ಟಣದ ರಕ್ಷಣೆಯ ಪ್ರಮುಖ ದೈವವಾಗಿದೆ.

ಟಿಪ್ಪಣಿಗಳು

೧. ಟಿ. ಗಿರಿಜಾ, ೨೦೦೦, **ಶ್ರೀ ಕುರುವತ್ತಿ ಬಸವೇಶ್ವರ ಕ್ಷೇತ್ರದರ್ಶನ**, ಬಸವ ಮಿತ್ರಬಳಗ, ದಾವಣಗೆರೆ, ಪು.೪೮.

೨. ಕೆ.ಎಂ. ಸುರೇಶ್, ಇತರರು, ೧೯೯೯, **ಕರ್ನಾಟಕ ದೇವಾಲಯಗಳ ಕೋಶ** (ಬಳ್ಳಾರಿ ಜಿಲ್ಲೆ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೩೦.

೩. ಸಂಶೋಧಕ ಜಿ. ಕರಿಬಸಪ್ಪ, ಮಾರ್ಗದರ್ಶಕರು -- ಡಾ. ಕೆ. ರವೀಂದ್ರನಾಥ, **ಬಳ್ಳಾರಿ ಜಿಲ್ಲಾ ಐತಿಹ್ಯಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೧೩.

* * * *

ಅಧ್ಯಾಯ ೮

ಧಾರ್ಮಿಕ ಕ್ಷೇತ್ರಗಳ ಹಬ್ಬ-ಜಾತ್ರೆಗಳು

ಅಧ್ಯಾಯ ಎಂಟು

ಧಾರ್ಮಿಕ ಕ್ಷೇತ್ರಗಳ ಹಬ್ಬ-ಜಾತ್ರೆಗಳು

ತುಂಗಭದ್ರಾ ನದಿ ಪರಿಸರದಲ್ಲಿಯ ಧಾರ್ಮಿಕ ಕ್ಷೇತ್ರಗಳಲ್ಲಿ ಅನೇಕ ರೀತಿಯ ಹಬ್ಬ, ಆಚರಣೆಗಳು ಹಾಗೂ ಜಾತ್ರೆಗಳು ಪ್ರಾಚೀನ ಕಾಲದಿಂದಲೂ ಇಂದಿನವರೆಗೆ ನಡೆದುಕೊಂಡು ಬಂದಿವೆ. ಪ್ರಸ್ತುತ ಅಧ್ಯಾಯದಲ್ಲಿ ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳಲ್ಲಿ ಹಬ್ಬ-ಜಾತ್ರೆಗಳನ್ನು ನಡೆಯುವ ಬಳ್ಳಾರಿ ಜಿಲ್ಲೆಗೆ ಸೀಮಿತಗೊಳಿಸಿ ಅಧ್ಯಯನ ಮಾಡಲಾಗಿದೆ.

ಪ್ರತಿದಿನವೂ ಪ್ರಕೃತಿಯ ಮಡಿಲಲ್ಲಿ ಶ್ರಮವಹಿಸಿ ದುಡಿಯುವ ಜನಪದರು ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಸಂತೋಷವಾಗಿರಲು ಹಬ್ಬ-ಹರಿದಿನಗಳನ್ನು ಆಚರಿಸುವ ಮೂಲಕ ತೇರು, ಉತ್ಸವ, ಜಾತ್ರೆ ಮುಂತಾದ ಸಾಮೂಹಿಕ ಆಚರಣೆ ಮತ್ತು ಸಂಪ್ರದಾಯಗಳನ್ನು ಕಂಡುಕೊಂಡರು. ಜಾತ್ರೆಯ ಜೊತೆಗೂಡಿ ಬಳಕೆಯಾಗುವ ಶಬ್ದ ಹಬ್ಬವಾಗಿದೆ. ಜಾತ್ರೆ, ಹಬ್ಬ, ಆಚರಣೆ ಇವೆರಡಕ್ಕೂ ಸಾಕಷ್ಟು ಅಂತರವಿದೆ. ಹಬ್ಬವನ್ನು ಸಾಮೂಹಿಕವಾಗಿ ಮನೆಗಳಲ್ಲಿ ಪ್ರತ್ಯೇಕವಾಗಿ ಆಚರಿಸಿ ಸುಖಭೋಜನದಿಂದ ಸುಖಿ ಸಂತೋಷಪಡುವುದರೊಂದಿಗೆ ಸಂತೃಪ್ತರಾಗುತ್ತಾರೆ. ಆದರೆ ಜಾತ್ರೆಗಳನ್ನು ಮನೆಯಲ್ಲಿ ಮಾಡಲು ಬರುವುದಿಲ್ಲ. ಜಾತ್ರೆ ಯಾವುದೋ ಧಾರ್ಮಿಕ ಕ್ಷೇತ್ರದಲ್ಲಿ ಸಾಮೂಹಿಕವಾಗಿ ಆಚರಿಸಿ, ವೈಭವೀಕರಿಸುವಂತದ್ದಾಗಿದೆ. ಜಾತ್ರೆಯಿರುವಲ್ಲಿ ಹಬ್ಬವಿದ್ದರೂ ಹಬ್ಬವಿರುವಲ್ಲೆಲ್ಲಾ ಜಾತ್ರೆಯಿರಬೇಕೆಂದೇನೂ ಇರಲ್ಲ. ಇದೇ ಅಂಶವನ್ನು ದೇ.ಜ.ಗೌ. ಈ ಕೆಳಗಿನಂತೆ ಉಲ್ಲೇಖಿಸಿದ್ದಾರೆ.

"ಎಲ್ಲಾ ಹಬ್ಬಗಳಲ್ಲಿ ಜಾತ್ರೆ ನಡೆಯುವುದಿಲ್ಲ. ಜಾತ್ರೆ ನೆರೆದಾಗಲೆಲ್ಲಾ ಹಬ್ಬದ ಸಂಭ್ರಮವಿದ್ದೇ ಇರುತ್ತದೆ."[1]

'ಜನ ಸೇರಿದಲ್ಲಿ ಜಾತ್ರೆ' ಎಂಬ ಗಾದೆಯಂತೆ ಹಬ್ಬವನ್ನಾಚರಿಸಲು ಜನರು ಕೂಡಬೇಕೆಂದೇನೂ ಇಲ್ಲ. ಆದರೆ ಜನರಿಲ್ಲದಿದ್ದರೆ ಜಾತ್ರೆಯಿಲ್ಲ. ಹಾಗೆಂದ ಮಾತ್ರಕ್ಕೆ ಜನ ಸೇರಿದರೆ ಜಾತ್ರೆಯಾಗುವುದಿಲ್ಲ. ಸಂತೆಯಲ್ಲಿಯೂ ಜನ ಸೇರುತ್ತಾರೆ. ವಸ್ತು, ಒಡವೆ ಕೊಂಡುಕೊಳ್ಳುವ ವ್ಯವಹಾರಗಳು ನಡೆಯುತ್ತವೆ. ಅಲ್ಲಿ ಕೇವಲ ವ್ಯವಹಾರ ದೃಷ್ಟಿ ಮಾತ್ರ ಇರುತ್ತದೆ. ಜಾತ್ರೆಯಲ್ಲಿಯೂ ಇಂಥ ವ್ಯವಹಾರಗಳು ನಡೆಯುತ್ತಿವೆಯಾದರೂ ಅದಕ್ಕಿಂತ ಮುಖ್ಯವಾಗಿ ದೇವತೆಯ ಆರಾಧನೆಗೆ ಪ್ರಾಧಾನ್ಯತೆಯಿರುತ್ತದೆ.

ತುಂಗಭದ್ರಾ ನದಿ ಪರಿಸರದಲ್ಲಿಯ ಧಾರ್ಮಿಕ ಕ್ಷೇತ್ರಗಳಲ್ಲಿ ವ್ಯವಸಾಯ ಸಂಬಂಧಿ ಹಬ್ಬಗಳು ನಡೆಯುತ್ತವೆ. ಹತ್ತಾರು ಆಚರಣೆಗಳನ್ನು ಜನಪದರು ವರ್ಷ ಪರ್ಯಂತ ಆಚರಿಸುತ್ತಿದ್ದರೂ ನಿಗಧಿಯಾದ ದಿವಸದ ಆಚರಣೆಗಳು ಹಬ್ಬವಾಗಿ ಮಾರ್ಪಟ್ಟಿವೆ. ಉದಾಹರಣೆ:- ಯುಗಾದಿ, ಬಸವನಹಬ್ಬ, ಕಾರಹಬ್ಬ, ನಾಗರಪಂಚಮಿ, ಗೌರಿಹಬ್ಬ, ಮಾರ್ನವಮಿ, ಕಾರ್ತೀಕ ರಥೋತ್ಸವಗಳು, ಸಂಕ್ರಾತಿ, ಶಿವರಾತ್ರಿ. ಇವುಗಳ ಜೊತೆಗೆಯೇ ಹಬ್ಬಗಳ ಹಿಂದೆ ಅಪ್ಪಟ ಜನಪದೀಯವಾದ ವ್ಯವಸಾಯ ಸಂಬಂಧಿಯಾದ ರೊಟ್ಟಿ ಹಬ್ಬ ಇತ್ಯಾದಿ ಹಬ್ಬಗಳಿವೆ. ಈ ಮೇಲಿನ ಎಲ್ಲಾ ಹನ್ನೆರಡು ಹಬ್ಬಗಳು "ಕೃಷಿಯ ವೇಳಾಪಟ್ಟಿಗೆ ಅನುಗುಣವಾಗಿ ಮತ್ತು ವ್ಯವಸಾಯಗಾರರ ಬದುಕಿನ ಹಿತವನ್ನು ಕಾಪಾಡುವ ಕಾಲಗಳಂತೆ ನಡೆಯುತ್ತವೆ."[೨]

"ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬಗಳು ಮತ್ತು ಜಾತ್ರೆಗಳು ಒಟ್ಟೊಟ್ಟಿಗೆ ನಡೆಯುತ್ತವೆ. ಹಬ್ಬ ಮತ್ತು ಜಾತ್ರೆಯನ್ನು ಬೇರೆ ಬೇರೆಯೆಂದು ಪರಿಗಣಿಸುವುದು ಕಷ್ಟ ಎಂದು ಎಂ.ಜಿ. ಈಶ್ವರಪ್ಪ ತಿಳಿಸಿದ್ದಾರೆ. ಹಬ್ಬದ ಅಂಗವಾಗಿ ಜಾತ್ರೆ ನಡೆಯುತ್ತದೆ"[೩] ಎಂಬುದು ಅವರ ಅಭಿಮತವಾಗಿದೆ. ಆದರೆ ಈ ಅಭಿಪ್ರಾಯಗಳು ಸಮಂಜಸವಲ್ಲ. ಏಕೆಂದರೆ ಹಬ್ಬ ಮತ್ತು ಜಾತ್ರೆಗಳು ಎರಡು ಭಿನ್ನ ಭಿನ್ನ ಸಂಸ್ಕೃತಿಗಳ, ಜನವರ್ಗಗಳ ಪರಂಪರೆಗಳಾಗಿದ್ದು, ತದನಂತರದಲ್ಲಷ್ಟೇ ಅವುಗಳ ಸಂಯೋಗವಾಯಿತಾದರೂ ಪ್ರತ್ಯೇಕ ವೈಶಿಷ್ಟ್ಯಗಳು ಇಂದಿಗೂ ಉಳಿದುಕೊಂಡು ಬಂದಿವೆಯೆಂದರೆ ಅತಿಶಯೋಕ್ತಿಯಾಗಲಾರದು.

ತುಂಗಭದ್ರಾ ನದಿ ಪರಿಸರದಲ್ಲಿ ಈ ಹಿಂದೆ ತಿಳಿಸಲಾದ ನಾಗರ ಪಂಚಮಿ, ಗೌರಿಹಬ್ಬ, ಇತ್ಯಾದಿ ಹಬ್ಬಗಳ ಸಾಲೇ ಇಂದಿಗೂ ನಡೆಯುತ್ತಿದ್ದು ಈ ನಾಡಿನ ಜನಸಮೂಹದ ಬದುಕಿಗೆ ಹೊಸತನವನ್ನಲ್ಲದೆ, ಕೊಟ್ಟು ನಾನಾ ರೀತಿಯ ಕೊಡುಗೆಗಳನ್ನು ಕೊಟ್ಟು ಉಪಕರಿಸಿದೆ.

'ಜಾತ್ರೆ' ಎನ್ನುವ ಪದಕ್ಕೆ 'ಪುಣ್ಯ ಕ್ಷೇತ್ರದರ್ಶನ ಅಥವಾ ಧಾರ್ಮಿಕ ಉದ್ದೇಶವಿಟ್ಟುಕೊಂಡು ಮಾಡುವ ಪ್ರಯಾಣ ಎಂಬ ಅರ್ಥವಿವರಣೆಯು ಇದೆ. 'ಯಾತ್ರಾ' ಶಬ್ದದ ತದ್ಭವ ರೂಪವೇ 'ಜಾತ್ರೆ'. ಯಾವುದೋ ಒಂದು ದೇವತೆಯ ರಥೋತ್ಸವ ಹಾಗೂ ವಿಶೇಷ ಕಾರ್ಯಕ್ರಮವನ್ನು ಜಾತ್ರೆಯ ಅರ್ಥದಲ್ಲಿ ಹೇಳಲಾಗುತ್ತದೆ. ಅಲ್ಲದೇ ದೇವರ ರಥೋತ್ಸವ ಸಂದರ್ಭದಲ್ಲಿ ಸೇರುವ ಜನರ ಗುಂಪು, ಸಮೂಹ, ಪರಿಸೆ - ಎಂಬ ಅರ್ಥದಲ್ಲಿ ಹೇಳಲಾಗಿದೆ.

ಪ್ರಾಚೀನ ಕಾಲದಿಂದಲೂ ಜನರು ನಂಬಿಕೊಂಡು ಬಂದ ದೇವದೇವತೆಗಳನ್ನು ಭಯ ಭಕ್ತಿಯಿಂದ ಗುಂಪಾಗಿ ಪೂಜಿಸಿ, ಪ್ರಾರ್ಥಿಸಿದ ಜನ ಸಮೂಹವೇ 'ಜಾತ್ರೆ' ಎಂದಾಗಿದೆ. ಸಮಾಜದ ಜೊತೆಗೆ ಜೀವನ ಸಾಗಿಸುತ್ತಾ ಬಂದ ಮನುಷ್ಯ ವೈಯಕ್ತಿಕ ಮತ್ತು ಸಂಘ ಜೀವನದ ಹಿತರಕ್ಷಣೆಗಾಗಿಯೋ, ಪಶು ಪಕ್ಷಿಗಳ ಸುಖಕ್ಕಾಗಿಯೋ, ರೋಗರುಜಿನಗಳು ಬಾರದಂತೆ ಮಳೆ, ಬೆಳೆ ಸರಿಯಾಗಿ ಬರುವಂತೆ ದೇವರನ್ನು ಪ್ರಾರ್ಥಿಸುವ ಉದ್ದೇಶ ಈ ಜಾತ್ರೆಗಳದ್ದಾಗಿದೆ. ಹಾಗೆಂದೇ ಹರಕೆ ಹೊತ್ತುದನ್ನು ಕಾರ್ಯರೂಪದಲ್ಲಿ ತರುವ ಆಚರಣೆಯೇ ಜಾತ್ರೆಯಾಗಿದೆ.

ಜಾತ್ರೆಯು ಭಾರತೀಯ ಸಂಸ್ಕೃತಿಯ ವಿಶಿಷ್ಟ ಸಮಾಜೋದ್ಧಾರ್ಮಿಕ ಪ್ರಕ್ರಿಯೆಯಾಗಿದೆ. 'ಜಾತ್ರೆ' ಎಂದಾಕ್ಷಣ ಎಲ್ಲರಿಗೂ ಖುಷಿಯೋ ಖುಷಿ. ಅದರಲ್ಲೂ ಜಾತ್ರೆಯಲ್ಲಿ ತೇರು ಎಳೆಯುವುದೆಂದರೆ ಎಲ್ಲಿಲ್ಲದ ಆನಂದ, ದೇವರ ಕಾರ್ಯದಲ್ಲಿ ತಾನೂ ಪಾಲ್ಗೊಂಡೆನೆಂಬ ಸಾರ್ಥಕತೆ. ತನ್ನ ಆರಾಧ್ಯ ದೈವದ ಆಶೀರ್ವಾದಕ್ಕೊಳಗಾದೆನೆಂಬ ಹರ್ಷ. ಹೀಗೆ ಹರ್ಷದಿಂದ ಭಕ್ತಿಯ ಮಹಾಪೂರದಲ್ಲಿ ಮನುಷ್ಯನನ್ನು ತೇಲುವಂತೆ, ಆಕರ್ಷಣೆಗೊಳಪಡುವಂತೆ, ನಾಸ್ತಿಕನನ್ನು ಆಸ್ತಿಕನನ್ನಾಗಿ ಪರಿವರ್ತಿಸುವ ಆಯಾಮಗಳೇ ಎಂದರೆ ಜಾತ್ರೆಗಳು ಎಂದರೆ ಅತಿಶಯೋಕ್ತಿಯಾಗಲಾರದು.

ಜಾತ್ರೆಯ ಬಗ್ಗೆ ವಿವಿಧ ವಿದ್ವಾಂಸರು ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡಿದ್ದಾರೆ.

೧. ಹಂಪನಾರವರು - "ಯಾವುದೋ ಒಂದು ನಿಗದಿತವಾದ ವೇಳೆಯಲ್ಲಿ ಜನರೆಲ್ಲಾ ಸೇರಿ ದೇವರನ್ನು ಆರಾಧಿಸುವುದು".

೨. "ಜಾತ್ರೆ ಎಂಬುದು ವರ್ಷಕ್ಕೆ ನಿಗಧಿಯಾದ ಇನ್ನಿತರ ಅವಧಿಗೋ ಗೊತ್ತಾದ ಸ್ಥಳದಲ್ಲಿ ಒಂದು ದಿನವೋ ಇನ್ನೂ ಹೆಚ್ಚಿನ ದಿನಗಳವರೆಗೂ ಜನ ಸೇರಿ ನಡೆಸುವ ಉತ್ಸವ" ಎಂದಿದ್ದಾರೆ.

ಜಾತ್ರೆ ಎನ್ನುವುದು ಜಾನಪದ ರೂಢಿ ಮತ್ತು ಸಂಪ್ರದಾಯಗಳ ಮೊತ್ತವಾಗಿದೆ. ಜಾತ್ರೆ ಭಾರತದಲ್ಲಿ ಅತ್ಯಂತ ಪರಿಚಿತವಾದ ಆಕರ್ಷಕವಾದ ವಿಚಾರ, ಜಾತ್ರೆ ಭಾರತದ ಹಳ್ಳಿ ಹಳ್ಳಿಗಳಲ್ಲಿಯೂ ಕಂಡು ಬರುವ ಎಲ್ಲಾ ಜನಜೀವನವನ್ನು ರಂಜಿಸುವ, ಸಂತೋಷಪಡಿಸುವ ಸಂಪ್ರದಾಯವಾಗಿದೆ. ಹೀಗಿದ್ದರೂ ಸಹ ಜಾತ್ರೆಗಳ ಬಗ್ಗೆ ಸಂಪೂರ್ಣ ಅಧ್ಯಯನ ಸಾಕಷ್ಟು ಆಗಿಲ್ಲ, ಅದೂ ಇನ್ನೂ ಪೂರ್ಣವಾಗಿ ಆಗಬೇಕಿದೆ.

ಇತಿಹಾಸಕಾರರು 'ಜಾತ್ರೆ'ಯ ಇತಿಹಾಸವನ್ನು ಸ್ಥೂಲವಾಗಿ ಎರಡು ರೀತಿಯಲ್ಲಿ ಗುರುತಿಸುತ್ತಾರೆ. ಮೊದಲನೆಯದಾಗಿ, ಆರ್ಥಿಕ ಸಮಸ್ಯೆಯೊಂದಕ್ಕೆ ಪರಿಹಾರ ರೂಪವಾಗಿ ಜಾತ್ರೆ ಹುಟ್ಟಿಕೊಂಡಿತು. ಎರಡನೆಯದಾಗಿ, ಜನರು ತಮ್ಮ ಕರಕೌಶಲ್ಯವನ್ನು ಪ್ರದರ್ಶಿಸುವ ಬಯಕೆಯಿಂದ ಜಾತ್ರೆ ಹುಟ್ಟಿಕೊಂಡಿತು. ಹಿಂದಿನ ಕಾಲದಲ್ಲಿ ಜನರು ತಮಗೆ ಬೇಕಾದುದಕ್ಕಿಂತ ಹೆಚ್ಚು ಉತ್ಪಾದಿಸುವುದನ್ನು ಕಲಿತಿದ್ದರು. ಹಾಗೆಯೇ ವಿವಿಧ ರೀತಿಯ ಕೌಶಲ್ಯಗಳನ್ನು, ವೃತ್ತಿಗಳನ್ನು ಜನರು ಬೆಳೆಸಿಕೊಂಡಿದ್ದರು. ರೈತರು ತಾವು ಬೆಳೆದ ಕೃಷಿ ವಸ್ತುಗಳನ್ನು ಇತರರಿಗೆ ಕೊಡುವ ಮತ್ತು ಇತರರ ಕರಕುಶಲ ತಯಾರಿಕೆಗಳನ್ನು ಅವರಿಂದ ಪಡೆದುಕೊಳ್ಳುವ ಅವಶ್ಯಕತೆ ಉಂಟಾಯಿತು. ಈ ಪ್ರಕ್ರಿಯೆಯಲ್ಲಿ ವಸ್ತುವಿನಿಮಯ ಪದ್ಧತಿ ಬೆಳೆಯಿತು. ಬರು ಬರುತ್ತಾ ನಗದು ಹಣ ಅಥವಾ ನಾಣ್ಯಗಳನ್ನು ಬಳಸಿ ಕ್ರಯ, ವಿಕ್ರಯಗಳನ್ನು ರೂಢಿಗೆ ತಂದರು. ಪ್ರತಿದಿನ ಈ ಕ್ರಯ ವಿಕ್ರಯ ಕಷ್ಟವಾಗುತ್ತಾ ಬಂದಿರಬೇಕು ಹಾಗೂ ಈ ವ್ಯವಸ್ಥೆಯ ಅವಶ್ಯವೂ ಇರಲಿಕ್ಕಿಲ್ಲ. ತಾವು ಬಳಸಿ ಉಳಿಸಿದ್ದನ್ನು ಇತರರಿಗೆ ಮಾರಲು ತಮ್ಮಲ್ಲಿಲ್ಲದ ವಸ್ತುಗಳನ್ನು ಪಡೆಯಲು ಏನಾದರೂ ಒಂದು ವ್ಯವಸ್ಥೆ ಮಾಡಿಕೊಳ್ಳಬೇಕಾಯಿತು. ಇಂಥ ವ್ಯವಸ್ಥೆಯೇ ಜಾತ್ರೆಯಾಗಿ ಮಾರ್ಪಾಡಾಯಿತು. ವರ್ಷದ ಒಂದು ನಿಗದಿತ ಸಮಯದಲ್ಲಿ ಒಂದು ನಿರ್ದಿಷ್ಟ ಸ್ಥಳದಲ್ಲಿ ಜನರು ಸೇರಿ ಕ್ರಯ ವಿಕ್ರಯ ಮಾಡುವ ಸಂಪ್ರದಾಯ

ಬೆಳೆದು ಈಗಿನ ಜಾತ್ರೆಯ ಸ್ವರೂಪವನ್ನು ಪಡೆಯಿತು. “ಜಾತ್ರೆಗೆ ಆರ್ಥಿಕ, ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮುಖಗಳಿವೆ” ಎನ್ನುವ ಹಂಪ ನಾಗರಾಜಯ್ಯರವರ ಮಾತು ಸತ್ಯವಾಗಿದೆ.

ಧಾರ್ಮಿಕವಾಗಿ ಹೇಳುವುದಾದರೆ ಜಾತ್ರೆಗಳು ಧರ್ಮವನ್ನು ಜನಪ್ರಿಯಗೊಳಿಸಿವೆ. ಒಂದೇ ದೇವರ ಒಕ್ಕಲುಗಳನ್ನು, ಭಕ್ತರನ್ನು ಒತ್ತಟ್ಟಿಗೆ ತಂದವು. ಪೂಜೆ, ಹರಕೆ, ಕಾಣಿಕೆಗಳ ಮುಖಾಂತರ ದೈವದ ನಂಟುತನವನ್ನು ಜಾತ್ರೆಯು ಬಿಗಿಗೊಳಿಸಿತು. ಕಾಯಿಲೆ-ಕಸಾಲೆ, ಕಷ್ಟ ಕಾರ್ಪಣ್ಯಗಳಲ್ಲಿ ತಮ್ಮ ಮನೆದೇವರಿಗೋ ಅಥವಾ ಇನ್ನಾವುದೋ ಪ್ರಸಿದ್ಧಿ ದೇವರಿಗೆ ಮಡುಪಿಟ್ಟು, ಯಾತ್ರೆ, ಜಾತ್ರೆ ಮಾಡುವ ಹರಕೆ ಹೊತ್ತರೆ ಜನಪದರಿಗೆ ನೆಮ್ಮದಿ ಇಡೀ ವರ್ಷದುದ್ದಕ್ಕೂ ಜಾತ್ರೆಗೆ ಹೋಗಿ ಹರಕೆ ಸಂಪ್ರದಾಯ ಮಾಡುವುದು ನಮ್ಮ ಜನಪದರ ಕಷ್ಟಗಳಿಗೆ ಪರಿಹಾರ ಕೊಡುವ ಒಂದು ಮುಖ್ಯ ಉಪಾಯವಾಗಿದೆ.

ಗ್ರಾಮಗಳಲ್ಲಿ ಮಳೆ ಬೀಳದಿದ್ದಾಗ, ಬೆಳೆಗಳು ಹಾಳಾದಾಗ, ಬಾವಿಗಳ ನೀರು ಬತ್ತಿದಾಗ, ಜನರಿಗೂ ಮತ್ತು ದನಕರುಗಳಿಗೂ ಸೋಂಕು ರೋಗಗಳು ತಲೆದೋರಿದಾಗ ಜಾತ್ರೆ ನೆರೆಯಿಸುವ ರೂಢಿ ಇದೆ. ಇದರಿಂದ ಸಾರ್ವಜನಿಕರಿಗೆ ಕ್ಷೇಮವಾಗುತ್ತದೆ ಎಂಬುದು ಜನಪದರ ನಂಬಿಕೆ. ಇಂತಹ ನಂಬಿಕೆಯೇ ಅವರನ್ನು ಕಾಪಾಡುತ್ತಾ ಅವರ ಸಂಕಟಗಳ ವಿರುದ್ಧ ಹೋರಾಡುವ ಧೈರ್ಯ ಕೊಟ್ಟಿದೆ. ಹೀಗೆ ಜನಪದರ ದೃಷ್ಟಿಯಲ್ಲಿ ಜಾತ್ರೆಗಳು ಜನರ ಕ್ಷೇಮಕ್ಕಾಗಿ ನಡೆಯುತ್ತವೆ.

ಸಾಮಾಜಿಕವಾಗಿ ಹೇಳುವುದಾದರೆ, ಒಂದು ಗ್ರಾಮದ ಒಕ್ಕಟ್ಟಿನ ಸಂಕೇತವೆಂದರೆ ಜಾತ್ರೆಗಳನ್ನು ಆಚರಿಸುವುದು ಗ್ರಾಮದ ಅದಿದೇವತೆಯ ಜಾತ್ರೆ ಊರಿನ ಜನಪದರಿಗೆಲ್ಲರಿಗೂ ಸೇರಿದ್ದು ಜಾತ್ರೆಯನ್ನು ಯಶಸ್ವಿಗೊಳಿಸುವ ಜವಾಬ್ದಾರಿ ಇವರದ್ದಾಗಿದೆ. ಊರಿನ ಜಾತ್ರೆಯ ಸಮಯದಲ್ಲಿ ಪರವೂರಿನಲ್ಲಿರುವ ಬಂಧು ಬಳಗದವರನ್ನು ಆಮಂತ್ರಿಸಿ ಅವರಿಗೆ ಸುಖಭೋಜನ ಮಾಡಿಸಿ, ಮನರಂಜಿಸಿ, ಜಾತ್ರೆ ಮಾಡಿಸಿ ಕಳಿಸುವುದು ಜನಪದರ ಧರ್ಮದ ಜೊತೆಗೆ ಕರ್ತವ್ಯವೂ ಆಗಿದೆ.

ಜಾತ್ರೆಯನ್ನು ಕುರಿತು ಸಾಂಸ್ಕೃತಿಕವಾಗಿ ಹೇಳುವುದಾದರೆ ಗ್ರಾಮದ ಒಕ್ಕಟ್ಟು, ಸಮಗ್ರತೆ, ಅಭಿಮಾನ, ಜಾತ್ರೆಗಳಲ್ಲಿ ಜಾಗೃತವಾಗುತ್ತದೆ. ತಮ್ಮ ಊರು ಉತ್ತಮ ಸಂಸ್ಕೃತಿವಂತರ ಊರು, ಉಪಕಾರಿಗಳ ಊರು ಎಂದು ಹೊಗಳಿಸಿಕೊಳ್ಳಲು ಎಂತಹ ತ್ಯಾಗ ಮಾಡಲೂ ಜನರು ಮುಂದೆ ಬರುತ್ತಾರೆ.

ಕಲೆಗಳ ದೃಷ್ಟಿಯಿಂದ ಜಾತ್ರೆಗಳು ಜನಪದರ ಕರಕೌಶಲ್ಯಗಳಿಗೆ ಕಲೆ ಮತ್ತು ಸಾಹಿತ್ಯಕ್ಕೆ ಕೊಟ್ಟ ಪ್ರೋತ್ಸಾಹ ಆಶ್ರಯಕ್ಕೆ ಕೊರತೆಯಿಲ್ಲ. ಚಿನ್ನ, ಬೆಳ್ಳಿ, ತಾಮ್ರ, ಕಂಚುಗಳಿಂದ ತಯಾರಿಸಿದ ಒಡವೆ ಮತ್ತು ಉಪಕರಣಗಳು ಜಾತ್ರೆಗಳಿಲ್ಲದಿದ್ದರೆ ಮೂಲೆಗುಂಪಾಗುತ್ತಿದ್ದವು. ಕುಸುರಿ ಕೆಲಸ, ಜರಿಕೆಲಸ, ಮೂರ್ತಿಶಿಲ್ಪಗಳು, ಮರದ ಕೆತ್ತನೆ ಕೆಲಸ ಮುಂತಾದವುಗಳು ಜಾತ್ರೆಗಳಿಲ್ಲದಿದ್ದರೆ ಬದುಕುಳಿಯುವುದು ಕಷ್ಟವಾಗುತ್ತಿತ್ತು. ಊರಿನ ಜಾತ್ರೆಗಳಿಲ್ಲದಿದ್ದರೆ ಹಳ್ಳಿಯ ನಾಟಕ, ಕುಣಿತ, ಹಾಡುಗಳು ನಾಶವಾಗುವ ಕಾಲ ಬರುತ್ತಿತ್ತು. ಆದಕಾರಣ ಜಾತ್ರೆಗಳು ಎಂದರೆ ಎಲ್ಲಾ ಕಲೆಗಳ ಸಮಾರಾಧನೆ ಮತ್ತು ಎಲ್ಲಾ ಕಲೆಗಳಿಗೆ ಚೈತನ್ಯದಾಯಕವಾಗಿವೆ.

ಜಾತ್ರೆಯೂ ಮೋಕ್ಷ ಸಾಧನೆಯ ಮಾರ್ಗವೂ ಎನ್ನಬಹುದು. ಏಕೆಂದರೆ ಹಿಂದೂಗಳಾಗಿ ಹುಟ್ಟಿದವರು ತಮ್ಮ ಆಯುಷ್ಯದಲ್ಲಿ ಯಾವುದಾದರೂ ಒಂದು ಪುಣ್ಯ ಕ್ಷೇತ್ರಕ್ಕೆ ಯಾತ್ರೆಗೆ ಹೋಗಲೇಬೇಕಾಗಿತ್ತು. ಈ ಅಂಶವು ಶಿಷ್ಟ ಜನರಿಗೆ ಸೇರಿದ್ದಾದರೆ ಗ್ರಾಮೀಣ ಜನರಿಗೆ ಗ್ರಾಮದೇವತೆಗಳ ಜಾತ್ರೆಗಳಿವೆ, ಇಂತಹ ಮೋಕ್ಷದ ಪರಿಪೂರ್ಣದ ಕಲ್ಪನೆ ಜನಪದರಿಗೆ ಇರಲಿ ಬಿಡಲಿ ತಾವು ತಮ್ಮ ಜೀವಿತ ಕಾಲದಲ್ಲಿ ಒಂದಾದರೂ ಜಾತ್ರೆಯನ್ನು ನೋಡಲೇಬೇಕೆಂದು ಬಯಸುತ್ತಾರೆ.

ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ತುಂಗಭದ್ರಾ ನದಿ ಪರಿಸರದಲ್ಲಿಯ ಪ್ರಮುಖ ಧಾರ್ಮಿಕ ಕ್ಷೇತ್ರಗಳಾದ ಕುರುವತ್ತಿ, ಮೈಲಾರ, ಹಂಪಿ ಇತ್ಯಾದಿ ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಯುವ ಜಾತ್ರೆಗಳನ್ನು ಈ ಕೆಳಗಿನಂತೆ ಅಧ್ಯಯನ ಮಾಡಲಾಗಿದೆ.

೧. ಕುರುವತ್ತಿ ಬಸವಣ್ಣನ ಜಾತ್ರೆ

ಧಾರ್ಮಿಕ ಕ್ಷೇತ್ರವಾದ ಕುರುವತ್ತಿಯಲ್ಲಿ ಫೆಬ್ರವರಿ-ಮಾರ್ಚ್ ತಿಂಗಳಿನ ಮಾಘ ಶುದ್ಧ ರಥಸಪ್ತಮಿಯ ಶಿವರಾತ್ರಿಯಲ್ಲಿ ಕುರುವತ್ತಿ ಬಸವಣ್ಣ ದೇವರ ದೊಡ್ಡ ಜಾತ್ರೆ ನಡೆಯುತ್ತದೆ. ಸುತ್ತಲೂ ಹತ್ತು ಹಲವಾರು ಕಡೆಯಿಂದ ತಮ್ಮ ಬಂಧು ಬಳಗದವರೊಂದಿಗೆ ಕುರುವತ್ತಿಯ ಬಸವೇಶ್ವರ ಜಾತ್ರೆಯ ವೈಭವವನ್ನು ಕಣ್ತುಂಬ ನೋಡಿ ಆನಂದಿಸುತ್ತಾರೆ. ಈ ಜಾತ್ರೆಯ ವೈಭವವನ್ನು ವರ್ಣಿಸಲು ಅಕ್ಷರಗಳೇ ಸಾಲದು. ಉದಾ. ಜನಪದ ಹಾಡನ್ನು ಇಲ್ಲಿ ಗಮನಿಸಬಹುದಾಗಿದೆ.

> "ನಾವು ಜಾತ್ರೆಗೆ ಹೊರಟೇವಿ ಎತ್ತಿನ ಬಂಡಿ ಕಟ್ಟಿಕೊಂಡು ನಾವು ಜಾತ್ರೆ ಹೊರಟೇವಿ ರೊಟ್ಟಿ ಬುತ್ತಿ ಮಾಡಿಕೊಂಡು ಬರುತೀರಾ ನೀವು ಬರುತೀರಾ? ನಾವು ಜಾತ್ರೆಗೆ ಹೊರಟಿವಿ ಕುರುವತ್ತಿ ಬಸವಣ್ಣನ ಜಾತ್ರೆಗೆ ನೀವು ಬರ್‍ತಿರಾ? ಹೊರಟೇವಿ ಬರುತ್ತೀರಾ? ನೀವು ಬರುತ್ತಿರಾ"?[೬]

ಕುರುವತ್ತಿಯ ಜಾತ್ರೆಗೆ ಸುಮಾರು ೧ ಲಕ್ಷಕ್ಕೂ ಮೇಲ್ಪಟ್ಟು ಜನ ಬಸವಣ್ಣನ ಜಾತ್ರೆ ಮಾಡಲಿಕ್ಕೆ, ನೋಡಲಿಕ್ಕಾಗಿಯೋ, ಕುರುವತ್ತಿಯ ಗ್ರಾಮಕ್ಕೆ ಬರುತ್ತಾರೆ. ಆ ಜನ ನೋಡಿಯೇ ಹೇಳುತ್ತಾರೇನೋ "ಜನ ಮರುಳೋ ಜಾತ್ರೆ ಮರುಳೋ" ಅಂತ. ಆದರೆ ಇಲ್ಲಿ ಒಂದು ಮಾತು ನಿಜ ಕುರುವತ್ತಿಯ ಬಸವಣ್ಣ ಜನರಿಗೆ ಆತನ ನಾಮಸ್ಮರಣೆಯು ಆತನ ದರ್ಶನ ಭಾಗ್ಯ, ಮರುಳನ್ನೇ ಹಿಡಿಸಿಬಿಟ್ಟಿದ್ದಾನೆ.

ಬಸವಣ್ಣನ ಜಾತ್ರೆಗೆ ಮೂರು ದಿನ ಮೊದಲೇ ಜನ ಬರಲಿಕ್ಕೆ ಪ್ರಾರಂಭಿಸುತ್ತಾರೆ. ಜಾತ್ರೆಗೆ ಜನರನ್ನು ಬರಮಾಡಿಕೊಳ್ಳಲು ಕುರುವತ್ತಿಯ ಜನ ಗುಡಿಗುಂಡಾರಗಳನ್ನೆಲ್ಲಾ, ಮನೆಮಾರುಗಳನ್ನೆಲ್ಲಾ ಬಣ್ಣ ಬಣ್ಣಗಳಿಂದ ಶುಚಿಗೊಳಿಸಿ ಅಂಗಳವನ್ನು ರಂಗೋಲಿಯ ಎಳೆಗಳಿಂದ ಸಿಂಗರಿಸಿ, ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ಊರಬಾಗಿಲು ತೆಂಗಿನಗರಿ, ಮಾವಿನಗರಿ, ತಳಿರಿನಿಂದ ಬರುವ ಬಸವಣ್ಣನ ಭಕ್ತಾದಿಗಳಿಗೆ ಸ್ವಾಗತ ಕೋರಲು ಸಿಂಗಾರವಾಗಿರುತ್ತದೆ.

ಊರ ಮುಂದಿನ ಬಯಲಿನಲ್ಲಿ ಜನಜಂಗುಳಿಯ ಮಧ್ಯೆ ಧೀಮಂತವಾಗಿ ರಥವು ನಿಂತಿರುತ್ತದೆ. ಬಣ್ಣ ಬಣ್ಣಗಳ ಚಿತ್ತಾರಗಳ ಪಟದಿಂದ ಕೂಡಿದ ತೇರು ರಂಗಾಗಿರುತ್ತದೆ. ಜಾತ್ರೆಗೆ ಬಂದ ಜನರೆಲ್ಲಾ ದೊಡ್ಡ ತೇರಿನ ಸುತ್ತ ನವ ವಸ್ತ್ರಾಭರಣ ಭೂಷಿತರಾಗಿ, ಉಲ್ಲಾಸಿತರಾಗಿ ನೆರೆದಿರುತ್ತಾರೆ. ಎಲ್ಲರ ಮುಖದಲ್ಲಿಯೂ ತೇರು ನೋಡುವ ಉತ್ಸಾಹದ ನಗೆ ಚಿಮ್ಮುತ್ತಿರುತ್ತದೆ. ಸಂತಸದ ಕಾತರ ತುಂಬಿರುತ್ತದೆ. ಈ ಜಾತ್ರೆಯಲ್ಲಿ ಜಾತಿ, ಕುಲ, ಬಡವ, ಬಲ್ಲಿದ, ಗಂಡು, ಹೆಣ್ಣು, ಹುಡುಗರು-ಮುದುಕರು ಎನ್ನದೆ ಮನುಜ ಕುಲ ಒಂದೇ ಎನ್ನುವ ಸದ್ಭಾವನೆಯಿಂದ ಈಶ್ವರ, ಬಸವಣ್ಣನ ತೇರು ನೋಡಲು ಸಕಲ ಭಕ್ತರೂ ಅಖಂಡವಾಗಿ ನೆರೆದಿರುವ ಚಿತ್ರಣವು ಮನಮೋಹಕ.

ಓತ್ತಾಳೆಯು ಬಸವಣ್ಣನ ಮೂರ್ತಿಯನ್ನು ಮಂಗಳವಾದ್ಯ ಮೇಳದೊಂದಿಗೆ ಮೆರವಣಿಗೆಯಲ್ಲಿ ತರುತ್ತಾರೆ. ಈ ಉತ್ಸವ ಮೂರ್ತಿ ಮೇಲೆ ಬಸವ ನಿಂತುಕೊಂಡು ಡುಬ್ಬದ ಮೇಲೆ ಪರಶಿವನನ್ನು ಹೊತ್ತುಕೊಂಡಿದ್ದಾನೆ. ಹೀಗೆ ದೇವರು ಬರುವುದನ್ನೇ ಆಕಾಶದ ಹನಿ ನೀರಿಗಾಗಿ ಬಾಯ್ತೆರೆದು ಕಾಯುವ (ಜಾವಗೆ) ಚಾತಕ ಪಕ್ಷಿಯಂತೆ ಜನ ನೋಡುತ್ತಾರೆ. ಜಾತ್ರೆಯ ಸಂಪ್ರದಾಯದಂತೆ ದೇವರೊಂದಿಗೆ ತೇರನೇರಲು ಶ್ರೀ ಚೌಡಯ್ಯ ದಾನಾಪುರದ ಮಹಾಮಠದ ಸ್ವಾಮೀಜಿಗಳು ಸಕಲ ವಾದ್ಯಗಳೊಂದಿಗೆ ತೇರನ್ನು ಏರುತ್ತಾರೆ. ಹೀಗೆ ದೇವರು, ಸ್ವಾಮಿಗಳು ತೇರನ್ನೇರಿದ ಮೇಲೆ ತೇರುಗಾಲಿಗೆ ಪೂಜೆಗಾಗಿ ಎಡೆಯನ್ನು ಹಾಕುತ್ತಾರೆ. ಅನಂತರ ನೆರೆದ ಭಕ್ತ ಸಮೂಹವು 'ಕುರುವತ್ತಿ ಬಸವೇಶ್ವರನಿಗೆ ಜಯವಾಗಲಿ', 'ನಂದೀಶ್ವರನಿಗೆ ಜಯವಾಗಲಿ' ಎಂದು ಜೈಕಾರ ಹಾಕುತ್ತಾ ತೇರಿಗೆ ಎರಡೂ ಬದಿ ದಪ್ಪವಾಗಿ ಕಟ್ಟಿದ ನೂಲಿನ ಹಗ್ಗದ ಉದ್ದನೆಯ ಮಣಿಯನ್ನು ಜೊಗಸೆಯ ತುಂಬ ಹಿಡಿದು ತಮ್ಮ ಶಕ್ತಿಯನ್ನೆಲ್ಲಾ ಪ್ರಯೋಗಿಸುತ್ತಾ ಬಸವಣ್ಣನ ನಾಮಸ್ಮರಣೆ ಮಾಡುತ್ತಾ ತೇರು ಎಳೆಯುವ ಸುಂದರ ದೃಶ್ಯಾವಳಿಯು ವರ್ಣಿಸಲಸದಳವಾಗಿದೆ. ಹೀಗೆ ಜನರು ತೇರು ಎಳೆಯುವ ಮುನ್ನ ತೇರುಗಾಲಿಗೆ ತಮ್ಮ ಭಕ್ತಿಯನ್ನು ಅರ್ಪಿಸಲೆಂದು ತೆಂಗಿನ ಕಾಯಿ ಒಡೆಯುತ್ತಾರೆ. ಕೆಲವರು ಬಾಳೆಹಣ್ಣು, ಉತ್ತತ್ತಿ ಎಸೆಯುತ್ತಾರೆ. ಈ ರೀತಿಯಾಗಿ ಕುರುವತ್ತಿಯ ಬಸವಣ್ಣನ ತೇರು ಭಕ್ತರಲ್ಲಿ ಅಪಾರ ಹರ್ಷವನ್ನು ಉಂಟು ಮಾಡುತ್ತಾ ಬಹುಹೊತ್ತಿನವರೆಗೂ ಸಾಗಿಯೇ ಇರುತ್ತದೆ. ಕುರುವತ್ತಿಯ ಅಂಗಳದ ತುಂಬಾ ಮಂಗಳಮಯವಾಗಿ ಬದುಕಿನ ತೇರು ಹೀಗೆಯೇ ಸುಖ-ಸಂತೋಷದಿಂದ ಸಾಗುತ್ತಿರಲಿ ಎನ್ನುವ ಸಂದೇಶವನ್ನು ಬೀರುತ್ತದೆ. ಪರವೂರಿನಿಂದ ಜಾತ್ರೆಗೆ ಬಂದ ಭಕ್ತ ಸಮೂಹಕ್ಕೆ ಅಲ್ಲಲ್ಲಿ ಅನ್ನ ದಾಸೋಹ, ನೀರಿನ ಅರವಟ್ಟಿಗೆಗಳ ವ್ಯವಸ್ಥೆ ಆಗಿರುತ್ತದೆ. ಜಾತ್ರೆಗೆ ಬಂದ ಯಾತ್ರಿಕರಿಗೆ ನೀರಿನ ತೊಂದರೆ ಆಗುವುದಿಲ್ಲ. ಕಾರಣ ಊರಿಗೆ ಹೊಂದಿದಂತೆಯೇ ತುಂಗಭದ್ರಾ ಹರಿಯುತ್ತದೆ.

ಬೇಸಿಗೆಯ ತಾಪಕ್ಕೆ ಶಿವರಾತ್ರಿ ಶಿವ ಶಿವ ಎಂದು ಶಿವನನ್ನು ನೆನೆಸುವ ಧಗೆಯ ಕಾಲದಲ್ಲಿ ತುಂಗಭದ್ರೆಯು ಕುರುವತ್ತಿಗೆ ವರಪ್ರಸಾದವಾಗಿದೆ. ಜಾತ್ರೆಯ ಸಮಯದಲ್ಲಿ ಕಾಲು ಹೊಳೆಯಲ್ಲಿ ಆ ದಡದಿಂದ ಈ ದಡಕ್ಕೆ ನದಿಯು ಮಧ್ಯೆ ಓಡಾಡುವ ರೀತಿಯಲ್ಲಿ ತೆಳ್ಳಗೆ-ತಿಳಿಯಾಗಿ ನದಿ ಹರಿಯುತ್ತಿರುತ್ತದೆ.

ಹೊಳೆಯಲ್ಲಿ ಸ್ನಾನ ಮಾಡುವುದಕ್ಕೆ, ಕುಡಿಯುವ ನೀರಿಗೆ ಜಾತ್ರೆಯ ಸಮಯವಾದರೂ ಸಹ ಒಂದಿಷ್ಟು ತೊಂದರೆಯಾಗುವುದಿಲ್ಲ. ತುಂಗಭದ್ರೆಯು ಜಲಸಂಪನ್ನೆಯಾಗಿ ಕುರುವತ್ತಿಯಲ್ಲಿ ಹರಿಯುತ್ತಾಳೆ. ಅದನ್ನು ಈ ಕೆಳಗಿನಂತೆ ನೋಡಬಹುದು.

"ತುಂಗಭದ್ರೆಯು ಹರಿದು ನಿಮ್ಮ ಪಾದಾವ ತೊಳೆದು
ಧನ್ಯಳಾಗುವೆನೆಂದು ಭೋರೆಂದು ಬರುತಿಹಳು
ಕುರುವತ್ತಿಯ ಬಸವೇಶ"[4]

ಕುರುವತ್ತಿಯ ಬಸವಣ್ಣನ ರಥೋತ್ಸವ ನಡೆದ ಮೂರನೆಯ ದಿನ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಜಾತ್ರೆಗೆ ಬಂದ ಭಕ್ತರು ಹಾಗೂ ಊರಿನವರು ತಮ್ಮ ತಮ್ಮ ಎತ್ತುಗಳನ್ನು ತುಂಗಭದ್ರೆಯಲ್ಲಿ ಸ್ನಾನ ಮಾಡಿಸಿ ಎತ್ತುಗಳ ಕೋಡುಗಳಿಗೆ ಬಣ್ಣ ಬಳಿದು ವಿಭೂತಿ ಧರಿಸಿ ಚೆಂದವಾಗಿ ಅಲಂಕರಿಸಿ, ಮೆರವಣಿಗೆಯಲ್ಲಿ ತಮ್ಮ ತಮ್ಮ ಎತ್ತುಗಳನ್ನು ಬಸವಣ್ಣನ ದೇವಾಲಯದ ಮುಂದೆ ಸಾಲಾಗಿ ನಿಲ್ಲಿಸಿ ಪೂಜೆ ಮಾಡಿಸಿ ಬಸವಣ್ಣನ ದರ್ಶನ ಮಾಡಿಸುತ್ತಾರೆ. ಇದು ನಿಜಕ್ಕೂ ಒಂದು ಅವಿಸ್ಮರಣೀಯ ಸಂದರ್ಭವಾಗಿದೆ.

ಜೀವಂತ ಬಸವಗಳಿಗೆ - ಬಾಯಿ ಇಲ್ಲದಿದ್ದರೇನಂತೆ? ಮೌನವಾಗಿ ತಮ್ಮ ಅಂತರಂಗದ ಮೌನಗೀತೆಯ ಭಕ್ತಿ ಸಮರ್ಪಣೆಯನ್ನು ಒಂದೇ ಒಂದು ನೋಟದಲ್ಲಿ ಕುರುವತ್ತಿಯ ಬಸವಣ್ಣನಲ್ಲಿ ನಿವೇದಿಸಿಕೊಳ್ಳುತ್ತವೆ. ಬಸವಣ್ಣನ ಪುಣ್ಯ ಕೃಪೆಗೆ ಪಾತ್ರವಾಗುತ್ತವೆ.

ಈ ಸಂದರ್ಭದಲ್ಲಿ ದೇವಾಲಯದ ಬೀದಿ ಯುದ್ದಕ್ಕೂ ಅಲಂಕೃತ ಎತ್ತುಗಳ ಸುಂದರ ಸಾಲುಗಳೇ ಕಂಡು ಬರುತ್ತವೆ. ಇದೇ ದಿನ ಬಣ್ಣದ ಓಕುಳಿಯೂ ಆಗುತ್ತದೆ. ಜಾತ್ರೆಗೆ ಬಂದ ಜನ ಸಂತಸದಿಂದ ಓಕುಳಿ ಆಡಿ ನಕ್ಕು ನಲಿಯುತ್ತಾರೆ. ಬಹುರೂಪಿ ಬಸವಣ್ಣನ ಕಾರುಣ್ಯದ ಮೂರ್ತಿಯನ್ನು ತಮ್ಮ ಮನದಲ್ಲಿ ತುಂಬಿಕೊಳ್ಳುತ್ತಾ, ಆನಂದಿಸುತ್ತಾ 'ಸಕಲಕ್ಕೆಲ್ಲಾ ಅತ್ಕಳಂಕ ಗುರು ನೀನೊಬ್ಬನೇ ಬಸವಣ್ಣ' ಎಂದು ಬಸವಣ್ಣನ ಮಹಿಮೆಯನ್ನು ಭಕ್ತಿಭಾವದಿಂದ ಕೊಂಡಾಡುವ ದೃಶ್ಯವನ್ನು ಕುರುವತ್ತಿಯ ಜಾತ್ರೆಯಲ್ಲಿ ಕಾಣಬಹುದಾಗಿದೆ.

೨. ಕುರುವತ್ತಿಯ ದನಗಳ ಜಾತ್ರೆ

ಜಾತ್ರೆ-ಪರಿಷೆ, ತೇರುಗಳಿಗೆ ಹೋದಾಗಲೇ ಜಾತ್ರೆಯಲ್ಲಿ ಖರೀದಿ ಮಾಡಿಕೊಳ್ಳುವುದು ವಾಡಿಕೆಯಾಗಿದೆ. ಹೆಂಗಸರು ಅಡಿಗೆ ಮನೆಗೆ ಬೇಕಾದ ಲಟ್ಟಣಿಕೆ, ಮಣೆ, ಸೌಟು, ಜರಡಿ ಇತ್ಯಾದಿ ವಸ್ತುಗಳನ್ನು ಕೊಂಡರೆ ಗಂಡಸರು ತಮ್ಮ ವ್ಯವಸಾಯಕ್ಕೆ ಬೇಕಾದ ವಸ್ತುಗಳನ್ನು ಕೊಂಡುಕೊಳ್ಳುತ್ತಾರೆ. ಅದರಲ್ಲೂ ವಿಶೇಷವಾಗಿ ಎತ್ತುಗಳನ್ನು ಖರೀದಿಸುತ್ತಿರುವುದು, ದನಕರುಗಳನ್ನು ಖರೀದಿಸುತ್ತಿದ್ದುದೂ, ಮಾರುವುದಿದ್ದರೆ ಮಾರುತ್ತಿದ್ದುದು ಕುರುವತ್ತಿಯ ಜಾತ್ರೆಯಲ್ಲಿ ಸಹಜವೇ ಆಗಿದೆ.

ಕುರುವತ್ತಿ ಬಸವಣ್ಣನ ಜಾತ್ರೆಯ ಸಂದರ್ಭದಲ್ಲಿ ಜಾತ್ರೆಯ ಅಂಗವಾಗಿ ತಿಂಗಳುಗಟ್ಟಲೇ ದೊಡ್ಡ ದನಗಳ ಜಾತ್ರೆಯೇ ನಡೆಯುತ್ತದೆ. ನಂದೀಶ್ವರನ ಅವತಾರ ಸ್ಥಾನವಾದ ಕುರುವತ್ತಿಯ ದನದ ಜಾತ್ರೆಯೆಂದರೆ ಇಡೀ ಹಿಂದೂ ಸ್ಥಾನದಲ್ಲಿ ನಡೆಯುವ ದನಗಳ ಜಾತ್ರೆಯಲ್ಲಿಯೇ ಕುರುವತ್ತಿ ದನಗಳ ಜಾತ್ರೆಯು ದೊಡ್ಡ ಜಾತ್ರೆಯೆಂದು ಹೇಳುತ್ತಾರೆ.

ಕುರುವತ್ತಿಯಲ್ಲಿ ಎತ್ತುಗಳನ್ನು ಹಸುಗಳನ್ನು ಕೊಳ್ಳುವವರು ಮಾರಾಟ ಮಾಡುವವರು ದೊಡ್ಡ ಪ್ರಮಾಣದಲ್ಲಿ ನೆರೆದು ವ್ಯಾಪಾರ-ವಹಿವಾಟನ್ನು ಜೋರಾಗಿಯೇ ನಡೆಸುವುದು ಇಂದಿಗೂ ಕಂಡು ಬರುತ್ತದೆ. ಜನಪದರ ಬಾಯಿಯಲ್ಲಿ `ಕುರುವತ್ತಿ ಜಾತ್ರ್ಯಾಗ ಚಲೋ ಎತ್ತು ಖರೀದಿ ಮಾಡಿದೆ! ಎಂದು ರೈತರು ಬಹಳ ಹೆಮ್ಮೆಯಿಂದ ತಾವು ಕೊಂಡು ತಂದ ದನಗಳನ್ನು ದೇವರ ಬಳಿ ಕರೆದೊಯ್ದು ಪೂಜೆ ಮಾಡಿಸಿಕೊಂಡು ಮನೆ ತುಂಬಿಸಿಕೊಂಡು ಮನೆಗೆ ಮಂಗಳವನ್ನಾಗಿಸಿಕೊಳ್ಳುತ್ತಾರೆ.

ಕುರುವತ್ತಿಯ ಬಸವಣ್ಣನ ಜಾತ್ರೆಯಲ್ಲಿ ಕೊಂಡ ಎತ್ತುಗಳು ಹೊಲಗಳಲ್ಲಿ ಬೆಳೆ ಹುಲುಸಾಗಲು, ರೈತರಿಗೆ ಭುಜಕ್ಕೆ ಭುಜಕೊಟ್ಟು ದುಡಿಯುತ್ತವೆ. ಹಸುಗಳು ಹಾಲು ಉಕ್ಕಿಸಿ ಮಕ್ಕಳು ಮರಿಗಳಿಗೆ ಅಮೃತಧಾರೆಯೆರೆಯುತ್ತವೆ. ಹೀಗೆ ಕುರುವತ್ತಿ ಬಸವೇಶ್ವರ ಜಾತ್ರೆಯಲ್ಲಿ ಎಲ್ಲಾ ಧರ್ಮ, ಎಲ್ಲಾ ಜನಾಂಗದವರು ಸೇರಿ ಈ ಜಾತ್ರೆಯನ್ನು ಆಚರಿಸುವುದು ವೈಶಿಷ್ಟ್ಯವಾಗಿದೆ. ಒಟ್ಟಾರೆ ಕುರುವತ್ತಿಯು ಐತಿಹಾಸಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ನಾಡಿನ ಜನಸಮುದಾಯಕ್ಕೆ ತನ್ನದೇ ಆದಂತಹ ಕೊಡುಗೆಗಳನ್ನು ನೀಡಿ ಉಪಕರಿಸಿದೆ.

೩. ಮೈಲಾರ ಜಾತ್ರೆ

ಬಳ್ಳಾರಿ ಜಿಲ್ಲಾ ಹಡಗಲಿ ತಾಲೂಕಿನ ತುಂಗಭದ್ರಾ ಪರಿಸರದಲ್ಲಿ ಬರುವ ಪ್ರಮುಖ ಧಾರ್ಮಿಕ ಕ್ಷೇತ್ರಗಳಲ್ಲಿ ಮೈಲಾರವೂ ಒಂದಾಗಿದೆ. ಮೈಲಾರಲಿಂಗೇಶ್ವರನೆಂದೇ ಹೆಸರುವಾಸಿಯಾಗಿದೆ ಈ ದೇವಾಲಯ. ಪೂರ್ವ ಬಾಗಿಲುಗಳ್ಳ ಗರ್ಭಗುಡಿ, ಸುಖಾಸನವನ್ನು ಒಳಗೊಂಡ ಭವ್ಯವಾದ ಹೆಬ್ಬಾಗಿಲನ್ನು ಹೊಂದಿದೆ.

ಪ್ರತಿವರ್ಷದ ಆಚರಣೆಯಂತೆ ಮಾಘಶುದ್ಧ ಪೌರ್ಣಮಿ ಭರತ-ಹುಣ್ಣಿಮೆಯಂದು ಮೈಲಾರಲಿಂಗೇಶ್ವರನ ಜಾತ್ರೆ ಹಾಗೂ ಜಾತ್ರೆಯ ಮುಖ್ಯ ಆಕರ್ಷಣೆಯಾದ ಕಾರ್ಣಿಕೋತ್ಸವವು ವಿಜೃಂಭಣೆಯಿಂದ ನಡೆಯುತ್ತದೆ. ಯುಗಾದಿಯ ಪಾಡ್ಯದ ದಿನದಂದು ಪಡ್ಲೋಣಿಗೆ ಸೇವೆ, ಅಗಿಹುಣ್ಣಿಮೆಯಲ್ಲಿ ಮೈಲಾರಲಿಂಗ ಮತ್ತು ಗಂಗಮಾಳವ್ವಳ ಮದುವೆ, ಖಂಡೇ ನವಮಿ, ಹಾಗೂ ಕಡ್ಲೆಗಡಬಿನ ಹುಣ್ಣಿಮೆಯಲ್ಲಿ ಒಳದಂಡೆ ನವರಾತ್ರಿಯಲ್ಲಿ ಪಲ್ಲಕ್ಕಿ ಉತ್ಸವ, ದಸರಾ ದಿನದಂದು ಶಿಭಾರಕ್ಕೆ ಹೋಗಿ ಬನ್ನಿ ಮುಡಿಯುವುದು, ಬಂಡಾರ ಪೂಜೆ, ಮುದ್ದಿಹುಣ್ಣಿಮೆ - ಲಕ್ಷ ದೀಪೋತ್ಸವ ಸೇರಿದಂತೆ ಕನಿಷ್ಟ ಪ್ರಮಾಣದ ಸೇವೆಗಾಗಿ ಭಕ್ತರು ಶ್ರದ್ಧೆ ಭಕ್ತಿಯಿಂದ ಇಷ್ಟಾರ್ಥ ಸಿದ್ಧಿಗಾಗಿ ಮುಂದಾಗುತ್ತಾರೆ. ತಮ್ಮ ಮನೋಭಿಲಾಷೆಯನ್ನು ಈಡೇರಿಸಿಕೊಳ್ಳುತ್ತಾರೆ.

ಬಳ್ಳಾರಿಯ ಬಯಲುಸೀಮೆಯಲ್ಲಿ ಸುಗ್ಗಿಯ ಕಾಲ ಮುಗಿದು, ಬಿಡುವು ಮಾಡಿಕೊಂಡ ಜನತೆ ಮನೆವಿಗೆ ನೆಮ್ಮದಿಯನ್ನು ತಂದುಕೊಳ್ಳುವ ಸಂದರ್ಭದಲ್ಲಿ ಮೈಲಾರಲಿಂಗನ ಜಾತ್ರೆ ನಡೆಯುತ್ತದೆ. ಪ್ರತಿ ವರ್ಷವು ಜನತೆಯಲ್ಲಿ ಸಡಗರ ಸಂಭ್ರಮವನ್ನು ರೂಪಿಸುತ್ತಾ, ಶುಭ್ರ ಬೆಳದಿಂಗಳು ಮತ್ತು ಬಿಳಿಜೋಳದ ಗೂಡುಗಳನ್ನು ನೋಡುವುದೇ ಇಲ್ಲಿನ ಸಂತಸ. ಅಪ್ಪಟ ಹಳ್ಳಿಯ ಮದುಮಗನಂತೆ ಬಿರುಕೋಲುಗಳ ಬಾಸಿಂಗ ಧರಿಸಿರುವ ಬಂಡಿಗಳ ದಿಬ್ಬಣವನ್ನು ಜಾತ್ರೆಯಲ್ಲಿ ಕಾಣಬಹುದು. ಜಾತ್ರೆಯ ಅಂಗವಾಗಿ ದೇವಾಲಯದ ಮುಂಭಾಗದಲ್ಲಿ ನಾನಾ ರೀತಿಯ ಪವಾಡಗಳು ಹಾಗೂ ಆಚರಣೆಗಳನ್ನು ಕಾಣಬಹುದು. ಮೈಲಾರಲಿಂಗನ ಭಕ್ತರು ಅನೇಕ ಸೇವೆಗಳನ್ನು ಹರಕೆಯ ರೂಪದಲ್ಲಿ ಅರ್ಪಿಸುತ್ತಾರೆ.

ಮೈಲಾರಲಿಂಗನ ಭಕ್ತರು ಜಾತ್ರೆಯಲ್ಲಿ ದೋಣಿ ಸೇವೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಹಾಗೂ ಸಂಪ್ರದಾಯವಿದೆ. ಹಾಗಾಗಿ ಜಾತ್ರೆಗೆ ಬಂದ ಭಕ್ತರು. ಆ ನಂಬಿಕೆಯಿಂದ ದೋಣಿ ಸೇವೆ ಮಾಡಿಸುವುದು ಆಚರಣೆಯಾಗುತ್ತದೆ. ದೋಣಿ ಸೇವೆ ಎಂದರೆ ಮೈಲಾರಲಿಂಗನಿಗೆ ಅರ್ಪಿಸುವ ನೈವೇದ್ಯ ಒಂದು ವಿಶಿಷ್ಟ ಬಗೆಯದ್ದಾಗಿದೆ. ಕರಿಕಂಬಳಿಯನ್ನು ಹಾಸಿ ಅದರ ಮೇಲೆ ನೀರು ಚಿಮುಕಿಸಿ, ಚೌಕಾಕೃತಿಯ ಮರದ, ಕಂಚಿನ ಅಥವಾ ಲೋಹದಿಂದ ಮಾಡಿದ ಭಿಕ್ಷಾ ಪಾತ್ರೆಯಲ್ಲದೆ ಬೆಳ್ಳಿ, ಬಂಗಾರ, ದೋಣಿಗಳನ್ನು ಇಡುತ್ತಾರೆ. ಸುಲಿದ ಬಾಳೆಯ ಹಣ್ಣು, ತುಪ್ಪ, ಸಕ್ಕರೆ ಹಾಗೂ ಬೆಲ್ಲವನ್ನು ದೋಣಿಯೊಳಗೆ ಹಾಕುತ್ತಾರೆ. ನಂತರ ಕರಿಕಂಬಳಿಗೆ ಮತ್ತು ದೋಣಿಗಳಿಗೆ ಕುಂಕುಮ, ಬಂಡಾರ ಹಚ್ಚಿ ಹಣ್ಣು ಹಿಡಿದು, ಕಾಯಿ ಒಡೆದು ಪೂಜೆ ಮಾಡುತ್ತಾರೆ. ನಂತರ ಗೊರವಪ್ಪಗಳ ಮತ್ತು ನಾಯಿಗೊರವರು ಡಮರು ಬಾರಿಸುತ್ತಾ ಸುತ್ತಲೂ ತಿರುಗಿ ಮಲಗಿ ಸ್ವಾಮಿಗೆ ಅರ್ಪಿತವಾದ ಹಣ್ಣು-ತುಪ್ಪವನ್ನು ಸೇವಿಸುವುದು, ಅವರು ನಾಯಿಯಂತೆ ಜಗಳ, ಅರಚುತ್ತಾ ಬಾಯಿಯಿಂದಲೇ ದೋಣಿಯಲ್ಲಿರುವ ಹಣ್ಣು ತುಪ್ಪವನ್ನು ತಿನ್ನುತ್ತಾರೆ. ಉಳಿದ ಪ್ರಸಾದವನ್ನು ಭಕ್ತಾದಿಗಳು ಹಂಚಿಕೊಂಡು ತಿನ್ನುತ್ತಾರೆ. ಇದು ದೋಣಿ ಸೇವೆ ಮಾಡುವ ಮೈಲಾರಲಿಂಗನ ಭಕ್ತರ ವಿಶಿಷ್ಟ ಆಚರಣೆಯಾಗಿದೆ.

ದೋಣಿ ಸೇವೆಯ ಹಿನ್ನೆಲೆಯನ್ನು ಗಮನಿಸಿದಾಗ 'ದೋಣಿ' ಎಂಬುದು ಸಾಮಾನ್ಯವಲ್ಲ. ಮೈಲಾರಲಿಂಗಪ್ಪನ ಪವಾಡ ಎಂದೂ, ಆತನ ಮಹಿಮೆಯೆಂತಲೂ ಹೇಳುವುದು ಐತಿಹ್ಯವಾಗಿದೆ. ಹಿಂದೆ ದೇವರ ದರ್ಶನಕ್ಕೆಂದು ಮೈಲಾರಕ್ಕೆ ಭಕ್ತರು ತುಂಗಭದ್ರಾ ನದಿಯನ್ನು ದಾಟಿ ಬರಲು ಗೋಳಾಡುತ್ತಿದ್ದರಂತೆ ನದಿಯನ್ನು ದಾಟಿಸಿದ ಭಕ್ತರು ಅಂದಿನಿಂದ ಗೊರವರಿಗೆ ದೋಣಿ ತುಂಬಾ ಆಹಾರವನ್ನು ಇಟ್ಟು ತೃಪ್ತಿಗೊಳಿಸುತ್ತೇವೆ ಎಂದರಂತೆ. ಇದು ದೋಣಿ ಸೇವೆಯ ಸುತ್ತ ಇರುವ ಐತಿಹ್ಯವಾಗಿದೆ.

ಸರಪಳಿ ಪವಾಡ

ಮೈಲಾರದಲ್ಲಿ ಭಕ್ತರು ಕೈಯಲ್ಲಿ ಕಬ್ಬಿಣದ ಸರಪಳಿ ಹಿಡಿದು ಮೈಲಾರಲಿಂಗನ ಹೆಸರು ಹೇಳಿ ಭಕ್ತಿಯಿಂದ ಜಗ್ಗಿದರೆ ಆ ಸರಪಳಿಯು ತುಂಡಾಗುತ್ತದೆ. ಇದರಿಂದಾದ ಅಘೋರ ನೋವಿಗೆ ಬಂಡಾರ ಒಂದೇ ಮದ್ದೆಂದು ಮಠದ ಶ್ರೀ ಒಡೆಯರು ಹೇಳುತ್ತಾರೆ.

ಸರಪಳಿ ಹರಿಯುವಾಗ ಕಟ್ಟುವ ಕಲ್ಲುಗೂಟಕ್ಕೆ 'ನಾಯಿಗೂಟ' ಎನ್ನುತ್ತಾರೆ. ನಾಯಿಗೊರವರು ವಿಶಿಷ್ಟ ದಿನಗಳಲ್ಲಿ ಮೈಲಾರಲಿಂಗನ ಬಾಗಿಲನ್ನು ಕಾಯುವ ಕಾಯಕ ಮಾಡುವುದು. ನಾಯಿ ನಿಷ್ಠೆಯನ್ನು ಪ್ರತಿನಿಧಿಸುವ ಆಚರಣೆಯಾಗಿದೆ. ಹೀಗೆ ನಾಯಿಯ ಬಗ್ಗೆ ಮೈಲಾರಲಿಂಗನ ಸಂಪ್ರದಾಯಗಳಲ್ಲಿ ವಿಶಿಷ್ಟ ಸ್ಥಾನವಿದೆ.

ಪಾದುಕೆಗಳ ಸೇವೆ

ಮೈಲಾರ ಕ್ಷೇತ್ರದಲ್ಲಿ ಪಾದುಕೆಗಳನ್ನು ಪೂಜಿಸುವ ಪದ್ಧತಿಯಿದೆ. ಇದಕ್ಕೆ ಕಾರಣ ಮೈಲಾರಲಿಂಗನು ಪಾದುಕೆಗಳನ್ನು ತೊಟ್ಟು, ಬೇಟೆಗೆ ಹೋಗುತ್ತಿದ್ದನೆಂದು ನಂಬಿಕೆ. ಇದರಿಂದಾಗಿ ಮೈಲಾರಲಿಂಗ ಜೀವಂತಿಕೆಯಿಂದ ಇರುವನು. ಆತನು ಹುಲಿ ಬೇಟೆಗೆ ಹೋಗುತ್ತಾನೆ. ಬೇಟೆಯ ಓಡಾಟದಿಂದ ಪಾದುಕೆಗಳು ಸವೆಯುತ್ತವೆ ಎಂಬ ಕಾರಣದಿಂದ ಮೈಲಾರಲಿಂಗನ ಒಕ್ಕಲುಗಳು ಪ್ರತಿವರ್ಷ ಪಾದುಕೆಗಳನ್ನು ತಯಾರಿಸಿಕೊಂಡು ಬಂದು ದೇವಸ್ಥಾನದಲ್ಲಿ ಪೂಜೆ ಮಾಡಿಸುವುದು ಕಂಡು ಬರುತ್ತದೆ. ಇವುಗಳಲ್ಲದೆ ದೈವಭಕ್ತಿಯ ಹಿನ್ನೆಲೆಯಲ್ಲಿ ಅನೇಕ ಬಗೆಯ ಉಗ್ರ ಆಚರಣೆಗಳನ್ನು ಮಾಡುವುದುಂಟು. ಭಕ್ತರು ಮೈಲಾರಲಿಂಗನ ಮುಂದೆ ಕುದುರೆಯಂತೆ ಕುಣಿದು ಕುದುರೆ ಸೇವೆ ಸಲ್ಲಿಸುವುದುಂಟು. ಕುದುರೆಯಂತೆ ಕುಣಿಯುವಾಗ ಕಾಲಿಗೆ ಬಾರುಕೋಲಿನ ಏಟು ಹಾಕಿಕೊಂಡಾಗ ರಕ್ತ ಬಂದರೂ ಅದರ ಪರಿವೇ ಅವರಿಗೆ ಇರುವುದಿಲ್ಲ. ಸೇವೆಯ ನಂತರ ರಕ್ತ ಬಂದ ಜಾಗೆಗೆ ಬಂಡಾರ ಹಚ್ಚಿ ಗಾಯ ಮಾಯಿಸಿಕೊಳ್ಳುತ್ತಾರೆ. ಕೆಲವು ಗೊರವರು ತೊಡೆಯಲ್ಲಿ ಕಬ್ಬಿಣದ ಹಾರೆಯನ್ನು ಪಾರುಮಾಡಿಕೊಂಡು ತೆಗೆದ ನಂತರ ಆ ಜಾಗೆಯಿಂದ ಈ ಜಾಗೆಗೆ ಬಂಡಾರ ಹಚ್ಚಿಕೊಂಡು ಬಿಳಿ ಅರಿವೆಯನ್ನು ಕಟ್ಟಿಕೊಂಡು ಗಾಯ ಮಾಯಿಸಿಕೊಳ್ಳುತ್ತಾರೆ. ಇವುಗಳಲ್ಲದೆ ಕಾಲಿನ ಪವಾಡ, ಗುಂಡು ಎತ್ತುವ ಸೇವೆ, ಚಾಮರ ಸೇವೆ, ದೀವಟಿಗೆ ಸೇವೆ, ಇತ್ಯಾದಿ ಅನೇಕ ಪವಾಡಗಳು ಮೈಲಾರಲಿಂಗನ ಜಾತ್ರೆಯಲ್ಲಿ ಕಂಡು ಬರುತ್ತವೆ. ಈ ಆಚರಣೆಗಳು ಮನೋವೈಜ್ಞಾನಿಕ ಅಧ್ಯಯನಕ್ಕೆ ವಿಪುಲ ಸಾಮಗ್ರಿಯನ್ನು ಒದಗಿಸುತ್ತವೆ.

ಡೆಂಕನ ಮರಡಿ

ಮೈಲಾರದಲ್ಲಿ ಭಾರತ ಹುಣ್ಣಿಮೆಯ ದಿವಸ ಜಾತ್ರೆ ನಡೆಯುತ್ತದೆ. ಎರಡನೆಯ ದಿನ ರಥಸಪ್ತಮಿಯಂದು ಈ ಕಾರ್ಣಿಕೋತ್ಸವವು ನಡೆಯುತ್ತದೆ. ಈ ಕಾರ್ಯಕ್ರಮ ನಡೆಯುವ ಎತ್ತರವಾದ ಸ್ಥಳವೇ ಡೆಂಕನ ಮರಡಿಯಾಗಿದೆ. ಮೈಲಾರದಲ್ಲಿಯ ಕೆಲವು ಮರಡಿಗಳಲ್ಲಿ ಇದು ವಿಶೇಷ ಮರಡಿಯಾಗಿದೆ. ಈ ಸ್ಥಳದ ಐತಿಹ್ಯವನ್ನು ಕುರಿತು ಹೇಳುವುದಾದರೆ, 'ಮೈಲಾರನು ಮಲ್ಲಾಸುರನೊಡನೆ ಯುದ್ಧ ಮಾಡಿ ಈ ಸ್ಥಳದಲ್ಲಿ ಕೊಂದು ಹಾಕಿದನಂತೆ. ಕೊಲ್ಲುವುದಕ್ಕೆ ಬಳಸಿದ ಆಯುಧ 'ಡೆಂಕ'. ಕೊಂದ ಸ್ಥಳ: 'ಮರಡಿ' ಹಾಗಾಗಿ ಇದನ್ನು 'ಡೆಂಕನ ಮರಡಿ' ಎಂದು ಕರೆಯುವುದಾಗಿ ಜನಪದರು ತಿಳಿಸುತ್ತಾರೆ. ಈ ಮೈಲಾರಲಿಂಗೇಶ್ವರ ಜಾತ್ರೆಯಲ್ಲಿ ಅತ್ಯಂತ ಪ್ರಖ್ಯಾತಿ ಪಡೆದ ಸಂಪ್ರದಾಯವೆಂದರೆ ಕಾರ್ಣಿಕೋತ್ಸವವಾಗಿದೆ. ಡೆಂಕನ ಮರಡಿಯಲ್ಲಿಯೇ ಈ ಕಾರ್ಣಿಕೋತ್ಸವವು ನಡೆಯುತ್ತದೆ.

ಮೈಲಾರನು ಮಣಿಮಲ್ಲಾಸುರನನ್ನು ಕೊಲ್ಲುವುದಕ್ಕೆ ಹನ್ನೊಂದು ದಿನ ಯುದ್ಧ ಮಾಡಿದನಂತೆ. ಯುದ್ಧದಲ್ಲಿ ರಾಕ್ಷಸರನ್ನು ಸಂಹರಿಸಿದ್ದರಿಂದ ಹರ್ಷಗೊಂಡ ಋಷಿ ಮುನಿಗಳು ಮೈಲಾರನನ್ನು ಎತ್ತಿ ಕುಣಿದಾಡಿದರಂತೆ. ಆ ವಿಜಯದ ಸಂಕೇತವಾಗಿ ಪ್ರತಿ ಜಾತ್ರೆಯಲ್ಲಿ ಕಾರ್ಣಿಕೋತ್ಸವವನ್ನು ಆಚರಿಸುತ್ತಾ, ಮೈಲಾರನ ವಿಜಯವನ್ನು ಸ್ಮರಿಸಿಕೊಳ್ಳುವುದರ ಮೂಲಕ ಮೈಲಾರನ ಸಂಸ್ಕೃತಿಯನ್ನು ವಿಜೃಂಭಿಸುವ ಕಣವಾಗಿರುವ ಡೆಂಕನಮರಡಿ ಮೈಲಾರದ ಹೊರಭಾಗದಲ್ಲಿದೆ. ಇಲ್ಲಿಯ ಕಾರ್ಣಿಕೋತ್ಸವಕ್ಕಾಗಿ ದೇವಾಲಯದ ಗೊರವಪ್ಪನು ರಥಸಪ್ತಮಿಯ ದಿನದಿಂದಲೇ ಹನ್ನೊಂದು ದಿನ ಮೌನ ಹಾಗೂ ಉಪವಾಸ ವ್ರತ ಕೈಗೊಳ್ಳುತ್ತಾನೆ. ಶಿವನು ರಾಕ್ಷಸನನ್ನು ಕೊಂದ ದಿನದಂದೇ ಎಂದು ನಂಬಿಕೊಂಡಿರುವ ಈ ಕಾರ್ಣಿಕದ ದಿನ ಸಾಯಂಕಾಲ ಡೆಂಕನ ಮರಡಿಯಿಂದ ಕುದುರೆ ಏರಿ ಬಂದ ಗೊರವಪ್ಪ ಕರಿಯ ಕಂಬಳಿ ನಿಲುವಾಗಿ ಧರಿಸಿ ಬಿರುಸಿನಿಂದ ಕಾರ್ಣಿಕದ ಸ್ಥಳಕ್ಕೆ ಬರುತ್ತಾನೆ. ನೆರೆದ ಭಕ್ತ ಸಮೂಹವು ಭಯ ಭಕ್ತಿ ಭಾವದಿಂದ `ಏಳು ಕೋಟಿ ಚಹಾಂಗ ಭಲೋ` ಎನ್ನುತ್ತಿರುತ್ತಾರೆ. ಮೈಲಾರಲಿಂಗನ ವಂಶಪಾರಂಪರ್ಯರಾದ ವೆಂಕಪ್ಪ ಒಡೆಯರು ಆ ಗೊರವಪ್ಪನಿಗೆ ಬಂಡಾರ ಹಚ್ಚಿ ಆಶೀರ್ವದಿಸುತ್ತಾರೆ. ನಂತರ ಸುಮಾರು ಹದಿನೈದು ಅಡಿ ಎತ್ತರದ ಬಿಲ್ಲನ್ನು ಗೊರವಪ್ಪ ಸರಸರನೆ ಏರಿ `ಸದ್ದಲೇ` ಎಂದು ಜನಸ್ತೋಮಕ್ಕೆ ಹೇಳಿದಾಗ ಕೆಲವು ಕ್ಷಣ ಕಾಲ ಲಕ್ಷಾಂತರ ಜನತೆ ನಿಶ್ಯಬ್ಧರಾಗುತ್ತಾರೆ. ಆಗ ಭಕ್ತರನ್ನು ನೋಡಿ ವರ್ಷದ ಭವಿಷ್ಯವಾಣಿಯನ್ನು ಹೇಳಿ ಕೆಳಗೆ ಬೀಳುತ್ತಿದ್ದಂತೆ ಗೊರವರ ವೃಂದ. ಕಂಬಳಿಯಲ್ಲಿ ಹಿಡಿದುಕೊಳ್ಳುವರು. ಪ್ರತಿವರ್ಷವು ಪಾರಂಪರ್ಯವಾಗಿ ಹೀಗೆ ಕಾರ್ಣಿಕದ ಮಾತುಗಳು ನಡೆದುಕೊಂಡು ಬಂದಿದೆ. ನಮ್ಮ ನಾಡಿನ ಜನತೆಯು ಈ ಪವಿತ್ರ ನುಡಿಯ ಮೇಲೆ ವರ್ಷದ ಕಷ್ಟ-ಸುಖ, ನೋವು, ನಲಿವು ರಾಜಕೀಯದ ಲೆಕ್ಕಾಚಾರ ಹಾಕುತ್ತಾರೆ. ಈ ವರ್ಷ ಅಂದರೆ ದಿನಾಂಕ ೪ ಫೆಬ್ರುವರಿ ೨೦೦೭ನೇ ಭಾನುವಾರ ಈ ಧಾರ್ಮಿಕ ಕ್ಷೇತ್ರಕ್ಕೆ ಭೇಟಿ ನೀಡಿದಾಗ ಕಾರ್ಣಿಕದ ನುಡಿಯು "ಅಂಬಲಿ ಹಳಸೀತು, ಕಂಬಳಿ-ಬೀಸೀತು ಪರಾಕ್ ಲೇ" ಎಂಬ ಮೈಲಾರ ಲಿಂಗೇಶ್ವರನ ಕಾರ್ಣಿಕದ ನುಡಿಯು ಜನಸಮೂಹಕ್ಕೆ ಕಾರ್ಣಿಕವಾಗಿದೆ. ಈ ಮೈಲಾರಲಿಂಗೇಶ್ವರ ಜಾತ್ರೆಯು ಕರ್ನಾಟಕ ರಾಜ್ಯದಲ್ಲಿಯೇ ಅಲ್ಲದೆ ಇತರೆ ರಾಜ್ಯಗಳಲ್ಲಿಯೂ ಪ್ರಖ್ಯಾತಿಯನ್ನು ಪಡೆದಿದೆ.

೪. ಹಂಪಿಯ ಶ್ರೀ ವಿರೂಪಾಕ್ಷೇಶ್ವರ ರಥೋತ್ಸವ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ `ಹಂಪಿ` ಭಾರತದ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. `ವಿಜಯನಗರ`ವು ಈ ಸಾಮ್ರಾಜ್ಯದ ರಾಜಧಾನಿಯಾಗಿದೆ. ಪ್ರಕೃತಿ ಸಿರಿಯನ್ನು ವಿಪುಲವಾಗಿಟ್ಟುಕೊಂಡು ನಿಸರ್ಗ ರಮಣೀಯವಾಗಿ ಕಂಗೊಳಿಸುವ ತಾಣವಾಗಿದೆ. ಎತ್ತ ನೋಡಿದರತ್ತ ಕಲ್ಲು ಬಂಡೆಗಳು, ದೇವಾಲಯಗಳ ಸಮೂಹ, ನವವಧುವಿನಂತೆ, ಹರಿಯುತ್ತಿರುವ ತುಂಗಭದ್ರೆ, ಬೆಟ್ಟಗುಡ್ಡಗಳನ್ನು ಹೊಂದಿರುವ ಹಂಪಿಯು ಇಂದು ಇತಿಹಾಸದ ನಿಧಿಯಾಗಿ ಒಂದು ಮಹಾಸಾಮ್ರಾಜ್ಯದ ಅವಶೇಷಗಳನ್ನು ಕಾಣಿಸುತ್ತಿರುವ ಹಂಪಿಯು ಕಡಲಾಚೆಯ ದೂರದ `ರೋಮ್`ನ್ನು ನೆನಪಿಗೆ ತರುವ ಪ್ರವಾಸಿ ಕೇಂದ್ರವಾಗಿದೆ.

ವಿಜಯನಗರ ಸ್ಥಾಪನೆಯಾಗುವುದಕ್ಕಿಂತ ಮೊದಲು `ಹಂಪಿ' ಒಂದು ಪುಣ್ಯಕ್ಷೇತ್ರವಾಗಿದೆ. ವಿಜಯನಗರದ ``ಪೂರ್ವದ ಹೆಸರು `ಪಂಪಾ'. ಬ್ರಹ್ಮದೇವನಿಗೆ `ಪಂಪಾ' ಎಂಬ ಮಾನಸ `ಕನ್ಯೆ' ಇದ್ದಳು. ಆದರೆ ಆಕೆ ಕೈಲಾಸದ ಒಡೆಯ ಶಿವನನ್ನು ಕುರಿತು ತಪಸ್ಸು ಮಾಡಿ ಆತನ ವರದಿಂದ ಶಿವನನ್ನೇ ವರಿಸಿದಳು. ಈ ಕಾರಣದಿಂದಲೇ ಹಂಪಿಯ ಮುಖ್ಯ ದೇವತೆಯಾದ `ಶ್ರೀ ವಿರೂಪಾಕ್ಷ', `ಪಂಪಾವತಿ', `ಪಂಪಾ ವಿರೂಪಾಕ್ಷ'ನೆಂದೇ ಹೆಸರಾಗಿದ್ದಾನೆ''.[೪] `ಪಂಪಾ' ಹೆಸರಿನ ಈಚಿನ ಕನ್ನಡ ರೂಪವೇ ಹಂಪಿ ಅಥವಾ `ಹಂಪೆ' ಆಗಿದೆ.

ಉತ್ತರ ಕರ್ನಾಟಕದಲ್ಲಿನ ಪ್ರಮುಖ ಐತಿಹಾಸಿಕ ಜಾತ್ರೆಗಳಲ್ಲಿ ತಲತಲಾಂತರಗಳಿಂದ ಸಾಗಿ ಬಂದಿರುವ ಅತೀ ಪ್ರಾಚೀನ ಜಾತ್ರೆಗಳಲ್ಲಿ ಹಂಪಿಯ ಜಾತ್ರೆ ಹಾಗೂ ಅಲ್ಲಿನ ಆಚರಣೆಗಳು ಬಹು ಪ್ರಮುಖವಾದವುಗಳಾಗಿವೆ. ಜನಪ್ರಿಯತೆಯ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯಲ್ಲಿನ ಮೈಲಾರದ ಜಾತ್ರೆಯನ್ನು ಬಿಟ್ಟರೆ ಇದು ಎರಡನೆಯದು ಎಂದು ಹೇಳಲಾಗಿದೆ. ಹಂಪಿ ಜಾತ್ರೆಯು ಹಂಪಮ್ಮ ಹಾಗೂ ಪಂಪಾಪತಿಯರ (ಶಿವ-ಪಾರ್ವತಿ) ಕಲ್ಯಾಣದ ಸಂಕೇತವೂ ಆಗಿದೆ. ವಿಜಯನಗರದ ಅರಸರ ಕಾಲದಿಂದಲೂ ನಡೆಯುತ್ತಿಕೊಂಡು ಬಂದಿರುವ ಈ ಜಾತ್ರೆಯನ್ನು ಅನೇಕ ಪಾಶ್ಚಾತ್ಯ ಯಾತ್ರಿಕರು ತಮ್ಮ ದಿನಚರಿಯಲ್ಲಿ ಉತ್ಸಾಹದಿಂದ ದಾಖಲಿಸಿದ್ದಾರೆ.

ಶ್ರೀ ಪಂಪಾ ವಿರೂಪಾಕ್ಷೇಶ್ವರ ಜಾತ್ರೆಯು ಪ್ರತಿವರ್ಷದ ಆಚರಣೆಯಂತೆ ಚೈತ್ರಾಶುದ್ಧ ನವಮಿಯಿಂದ ಪ್ರಾರಂಭಗೊಂಡು ಒಂಭತ್ತು ದಿನಗಳ ಪರ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಹಂಪಿಯ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಪಂಪಾವಿರೂಪಾಕ್ಷೇಶ್ವರ ಹಾಗೂ ಶ್ರೀ ಚಂದ್ರಮೌಳೀಶ್ವರ ಜೋಡಿ ರಥಗಳು ಚೈತ್ರ ಶುಕ್ಲ ಹುಣ್ಣಿಮೆಯಂದು ಲಕ್ಷಾಂತರ ಜನರ ಸಮ್ಮುಖದಲ್ಲಿ ಜರುಗುತ್ತವೆ. ಅಂದು ನಾಡಿನಾದ್ಯಂತ `ಹಂಪಿ ಹುಣ್ಣಿಮೆ' ಎಂದೇ ಪ್ರಸಿದ್ಧಿಯಾಗಿದೆ. ಅಂದು ಬೆಳಗ್ಗೆ ೯ ಗಂಟೆಗೆ ತೇರುಗಳನ್ನು ಅಲಂಕರಿಸಿ ಹೋಮ-ಹವನಾದಿಗಳನ್ನು ಮಾಡಿ ಸಾವಿರಾರು ಜನ ಭಕ್ತರು ಮಡಿ ತೇರನ್ನು ಎಳೆಯುತ್ತಾರೆ.

ಅಂದು ಸಾಯಂಕಾಲ ೪ ಗಂಟೆಗೆ ನವರತ್ನ ಖಚಿತವಾದ ಕಿರೀಟಧಾರಣ ಸಹಿತವಾದ ಶ್ರೀ ಪಂಪಾ ವಿರೂಪಾಕ್ಷ ಸ್ವಾಮಿ ಹಾಗೂ ಶ್ರೀ ಚಂದ್ರಮೌಳೀಶ್ವರ ಸ್ವಾಮಿಯ ಜೋಡಿ ರಥಗಳನ್ನು ಲಕ್ಷಾಂತರ ಭಕ್ತರು ಭಕ್ತಿಭಾವದಿಂದ ಎಳೆಯುತ್ತಾರೆ. ಈ ರಥದ ಗಾಲಿಗಳಿಗೆ ಕಮಲಾಪುರದ ಮ್ಯಾಸನಾಯಕರು ಹಾಗೂ ಹೊಸಪೇಟೆಯ ಮ್ಯಾಸಕೇರಿಯ ನಾಯಕರು ಸನ್ನೆಯನ್ನು ಹಾಕುವುದು ಪದ್ಧತಿಯಾಗಿದೆ. ಭಕ್ತರು ಬಾಳೆಹಣ್ಣು, ಹೂವು, ಉತ್ತತ್ತಿಗಳನ್ನು ಎಸೆಯುತ್ತಾರೆ. ನವದಂಪತಿಗಳಂತೂ ಕಳಸಕ್ಕೆ ಗುರಿಯಿಟ್ಟು ಎಸೆಯುತ್ತಾರೆ. ಅವರ ಗುರಿ ಮುಟ್ಟಿತ್ತೆಂದರೆ ಸಂತೋಷಿಗಳಾಗಿ ಭಾವಿ ಜೀವನ ನಡೆಸುತ್ತಾರೆ. ಈ ಜಾತ್ರೆಯ ವಿಶೇಷವೆಂದರೆ ವಿದೇಶಿಯರೂ ಇದರಲ್ಲಿ ಪಾಲ್ಗೊಂಡು ತಮ್ಮ ಆನಂದವನ್ನು ವ್ಯಕ್ತಪಡಿಸಿ ಕುಣಿದುಕುಪ್ಪಳಿಸುತ್ತಾರೆ. ಜೊತೆ ಜೊತೆಯಲ್ಲಿಯೇ ವಿಜಯನಗರ ಹಾಗೂ ಶ್ರೀ ಪಂಪಾವಿರೂಪಾಕ್ಷೇಶ್ವರರ

ಬಗ್ಗೆ ಅಧ್ಯಯನವನ್ನು ಕೈಗೊಂಡು ವಿಶೇಷ ರೀತಿಯ ಅನುಭವಗಳನ್ನು ತಮ್ಮ ನಾಡಿನಲ್ಲಿ ವಿಶದಪಡಿಸುತ್ತಾರೆ. ಭಾರತದ ಆಚರಣೆ - ಸಂಪ್ರದಾಯಗಳೆಂದರೆ ಪಾಶ್ಚಾತ್ಯ ನಾಡಿನವರಿಗೆ ಎಲ್ಲಿಲ್ಲದ ಆದರತೆ ಹಾಗೂ ಕುತೂಹಲಪಡುತ್ತಾರೆ.

ಜಾತ್ರೆಯ ಸಂದರ್ಭದಲ್ಲಿ ಸುಮಾರು ೫೦ ಅಡಿ ಎತ್ತರವಿರುವ ಈ ತೇರು ೫ ಅಂಕಣಗಳಿಂದ ಕೂಡಿದ್ದು ಸುತ್ತಲೂ ಬಣ್ಣ ಬಣ್ಣದ ಬಟ್ಟೆ ಕಟ್ಟಿ, ೪ ಮೂಲೆಗೂ ಬಣ್ಣದ ಗೊಂಬೆಗಳನ್ನು ನಿಲ್ಲಿಸಿ ಸುಂದರವಾಗಿ ಅಲಂಕರಿಸುತ್ತಾರೆ. ತೇರಿನ ಸುತ್ತಲೂ ಬಾಳೆಯ ಕಂಬಗಳು, ಪತ್ರಿಕೆ, ಧ್ವಜಗಳು ಬಹು ಆಕರ್ಷಣೆಯಿಂದ ಕೂಡಿರುತ್ತವೆ. ನವರತ್ನ ಖಚಿತ ಕಿರೀಟಧಾರಿಯಾದ ಶ್ರೀಸ್ವಾಮಿಯ ರಥೋತ್ಸವವು ನೋಡಲು ಸಾಧ್ಯವಾಗುತ್ತದೆ. ರಥೋತ್ಸವದ ಸಂದರ್ಭದಲ್ಲಿ ಮೊದಲು ತೇರನ್ನು ಎಳೆಯುವ ಜವಾಬ್ದಾರಿ ಹೊಸಪೇಟೆ ಹಾಗೂ ಕಮಲಾಪುರದ ಬೇಡ ಜನಾಂಗದ್ದಾಗಿದೆ. ಈ ಜನಾಂಗದವರು ಬಂದು ತೇರು ಎಳೆಯುವ ಹೊರತು ಅದನ್ನು ಬೇರೆ ಯಾರೂ ಮುಟ್ಟಿ ಎಳೆಯುವಂತಿಲ್ಲ. ಈ ಬೇಡರು ಮೆರವಣಿಗೆಯ ಮೂಲಕ ಹಂಪಿಗೆ ಬಂದು ದೇವರಿಗೆ ಪೂಜೆ ಸಲ್ಲಿಸಿ ತೇರು ಎಳೆಯುತ್ತಾರೆ. ನಂತರ ಇವರುಗಳನ್ನು ಗೌರವಾದರಗಳೊಂದಿಗೆ ಅವರವರ ಸ್ಥಳಗಳಿಗೆ ಕಳುಹಿಸಿಕೊಡುವ ಸಂಪ್ರದಾಯವು ಇದೆ.

ಜಾತ್ರೆಯ ಸಂದರ್ಭದಲ್ಲಿ ತಮ್ಮ ಇಷ್ಟಾರ್ಥ ಸಿದ್ಧಿಯಾದ ಭಕ್ತರು ಹರಕೆ ಒಪ್ಪಿಸುತ್ತಾರೆ. ಉರುಳು ಸೇವೆ, ಹೆಜ್ಜೆ ನಮಸ್ಕಾರ, ರಥದ ಗಾಲಿಯ ಮೇಲೆ ತೆಂಗಿನ ಕಾಯಿ ಒಡೆಯುವುದು. ಮುಡಿಕೊಡುವುದು ಇತ್ಯಾದಿ ಪ್ರಮುಖ ಹರಕೆಗಳನ್ನು ಜಾತಿ ಧರ್ಮಗಳ ಬೇಧವಿಲ್ಲದೆ ಎಲ್ಲಾ ಜನಾಂಗದವರು ಶ್ರೀ ಸ್ವಾಮಿಗೆ ಒಪ್ಪಿಸುವ ದೃಶ್ಯ ಕಣ್ಣಿಗೆ ಕಟ್ಟುವಂತಿದೆ.

ಹಂಪಿಯ ರಥೋತ್ಸವಕ್ಕೆ ಅನೇಕ ಜನಪದ ಕಲಾತಂಡಗಳು ಆಗಮಿಸಿರುತ್ತವೆ. ಈ ಕಲಾತಂಡಗಳು ದೇವಾಲಯದ ಒಳಾಂಗಣದಲ್ಲಿ ಹಾಗೂ ಹೊರಗಿನ ಮಂಟಪಗಳಲ್ಲಿ ಇಡೀ ರಾತ್ರಿ ಹಾಡು, ಕುಣಿತ, ಕೋಲಾಟ, ಚೌಡಿಕೆ ಮೇಳ, ತಪ್ಪಡಿ ಮೇಳ, ಭಜನೆ, ರಾಜಮೋಡಿ, ರಣಮೋಡಿಯಂತಹ ವಿಶಿಷ್ಟ ಕಲೆಗಳ ಪ್ರದರ್ಶನಗಳನ್ನು ಹಂಪಿ ಜಾತ್ರೆಯಲ್ಲಿ ಕಾಣಬಹುದಾಗಿದೆ. ಈ ಪರಿಸರದಲ್ಲಿ ರಥೋತ್ಸವದ ಶುಭದಿನದಂದು ಅನೇಕ ಶುಭಕಾರ್ಯಗಳನ್ನು ದೇವಸ್ಥಾನದ ಪ್ರಾಂಗಣದಲ್ಲಿ ಆಚರಿಸುತ್ತಾರೆ. ಹೆಣ್ಣು ಮಕ್ಕಳಿಗೆ ಉಡಿ ತುಂಬಿಸುವ ಕಾರ್ಯ, ಮಕ್ಕಳಿಗೆ ಜವಳ ತೆಗೆಯುವ ಕಾರ್ಯಗಳನ್ನು ಇಲ್ಲಿ ಆಚರಿಸಿದರೆ, ಹರಕೆಯ ರೀತಿಯಲ್ಲಿ ಮುಡಿಕೊಡುವ ಕಾರ್ಯ ದೇವಾಲಯದ ಪಕ್ಕದಲ್ಲಿ ತುಂಗಭದ್ರೆಯ ನದಿ ದಂಡೆಯ ಹತ್ತಿರ ನಡೆಯುತ್ತದೆ.

ಹಂಪಿ ವಿರೂಪಾಕ್ಷ ಬಜಾರದ ಇಕ್ಕೆಲಗಳಲ್ಲಿರುವ ಸಾಲು ಮಳಿಗೆಗಳ ಮುಂಭಾಗದಲ್ಲಿ ಬಳೆ, ಕುಂಕುಮ, ಹಣ್ಣು-ಕಾಯಿ, ಆಟಿಕೆ ಹಾಗೂ ಸಿಹಿತಿಂಡಿಯ ಅಂಗಡಿಗಳು ಸಾಲುಗಟ್ಟಿರುತ್ತವೆ. ವಿದೇಶಿಯರಿಗೂ ಅನುಕೂಲವಾದ ಹೊಟೇಲ್‌ಗಳಿವೆ. ಹಿಂದೆ ಈ ಬಜಾರದಲ್ಲಿ ಮುತ್ತುರತ್ನಗಳನ್ನು ಮಾರಿದ್ದಾರೆ. ಈಗ

ಜಾತ್ರೆಯಲ್ಲಿ ಜಾತ್ರೆಯ ಸಾಮಾನು ಸರಂಜಾಮುಗಳನ್ನು ಮಾರುತ್ತಿರುತ್ತಾರೆ. ಒಟ್ಟಿನಲ್ಲಿ ತುಂಗಭದ್ರೆಯ ದಡದಲ್ಲಿ ಪ್ರತಿವರ್ಷ ನಡೆಯುವ ಹಂಪಿಯ ಶ್ರೀ ವಿರೂಪಾಕ್ಷೇಶ್ವರ ರಥೋತ್ಸವಕ್ಕೆ ಲಕ್ಷಾಂತರ ಜನ ಪಾಲ್ಗೊಂಡು ಧಾರ್ಮಿಕ ಕೃಪಾಕಟಾಕ್ಷಕ್ಕೆ ಪಾತ್ರರಾಗುತ್ತಿರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ.

೫. ಹೊಸೂರು : ಹೊಸೂರಮ್ಮನ ಜಾತ್ರೆ

ಗ್ರಾಮದೇವತೆಗಳ ಸೃಷ್ಟಿಗೆ ನಾನಾ ಐತಿಹ್ಯ, ಕಥೆಗಳುಂಟು ಪ್ರಾರಂಭದಲ್ಲಿ ಪ್ರಕೃತಿಯ ಅಘಟಿತ ಘಟನೆಗಳು ಹಾಗೂ ಅವುಗಳ ಮಹತ್ವದಿಂದ ಪೂಜೆಗೆ ಅರ್ಹವಾಗಿವೆ. ಮಾನವನ ಅಲೆಮಾರಿತನವನ್ನು ಬದಲಾಯಿಸಿ ಒಂದೆಡೆ ನೆಲಸಿ ವಾಸಕ್ಕಾಗಿ ಗ್ರಾಮಗಳನ್ನು ಸೃಷ್ಟಿಸಿಕೊಂಡಂತೆ ಮಾನವ ತನ್ನ ಗ್ರಾಮದಲ್ಲಿ ದೇವತೆಯನ್ನೂ ಸ್ಥಾಪಿಸಿಕೊಂಡ ಮನುಷ್ಯ ಗ್ರಾಮಗಳನ್ನು ಹುಟ್ಟು ಹಾಕಿದಾಗ ಗ್ರಾಮದೇವತೆಗಳೂ ಕೂಡಾ ಹುಟ್ಟಿಕೊಂಡಿವೆ.

ಈ ಗ್ರಾಮದೇವತೆಗಳನ್ನು ಸಂತುಷ್ಟಪಡಿಸಲು ಹಬ್ಬ-ಜಾತ್ರೆಗಳನ್ನು ಈ ಮಾನವನೇ ಸೃಷ್ಟಿಸಿಕೊಂಡಿದ್ದಾನೆ. ಶಿಷ್ಟದೇವರುಗಳ ಜಾತ್ರೆಗಳಿಗಿಂತ ಗ್ರಾಮೀಣ ಪರಿಸರದಲ್ಲಿರುವ ಜಾತ್ರೆಗಳು ವಿಭಿನ್ನವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಹೊಸೂರಮ್ಮನ ಜಾತ್ರೆಯು ವೈಶಿಷ್ಟ್ಯತೆಯಿಂದ ಕೂಡಿದೆ. ಹೊಸೂರಮ್ಮನ ಜಾತ್ರೆಯು ಸತತವಾಗಿ ಹತ್ತು-ಹನ್ನೆರಡು ದಿನಗಳ ಕಾಲ ಬೇರೆ ಬೇರೆ ರೀತಿಯ ಉತ್ಸವ ಹಾಗೂ ಪೂಜಾ ವಿಧಾನಗಳ ಮೂಲಕ ಜರುಗುತ್ತದೆ. ವರ್ಷಕ್ಕೊಮ್ಮೆ ಜರುಗುವ ರಥೋತ್ಸವದ ರಥದಲ್ಲಿ ದೇವಿಯ ಉತ್ಸವ ಮೂರ್ತಿಗಳನ್ನಿಟ್ಟು ಸಡಗರ ಸಂಭ್ರಮಗಳಿಂದ ತೇರನ್ನು ಎಳೆಯುತ್ತಾರೆ.

ಈ ಗ್ರಾಮದ ಜಾತ್ರೆಯ ದಿನಗಳಲ್ಲಿ ದೇವಿಯ ಪೂಜಾ ಪದ್ಧತಿಯ ಪ್ರಧಾನಾರ್ಚನೆ. ಬ್ರಾಹ್ಮಣ ಪೂಜಾರಿಗಳಿಂದ ನಡೆಯುವುದು ವಾಡಿಕೆಯಾಗಿದೆ. ಆದರೆ ಅಕ್ಕಿಪಡಿ, ಬಾಳೆದಂಡಿಗೆ ಹಾಗೂ ಅಗ್ನಿಕುಂಡದ ದಿನದಲ್ಲಿ ವೀರಶೈವ ಜನಾಂಗದ ಪೂಜಾರಿಯು ಪೂಜೆ ಸಲ್ಲಿಸುತ್ತಾನೆ. ಹಾಗೆಯೇ ಈತನಿಂದ ಕೆಲವು ಪವಾಡಗಳೂ ನಡೆಯುತ್ತವೆ.

ಹೊಸೂರಮ್ಮ ದೇವಿಯ ಜಾತ್ರೆಯಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯುತ್ತಿದ್ದು ಅವುಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ಸೂಚಿಸಲಾಗಿದೆ.

೧. ಕಂಕಣ ಧಾರಣೆ	೫. ಶೇಷ ವಾಹನೋತ್ಸವ
೨. ಮಯೂರ ವಾಹನೋತ್ಸವ	೬. ಶ್ವೇತ ವಾಹನೋತ್ಸವ
೩. ಅಶ್ವ ವಾಹನೋತ್ಸವ	೭. ಗೋಪುರೋತ್ಸವ
೪. ಸಿಂಹ ವಾಹನೋತ್ಸವ	೮. ಗಜೋತ್ಸವಗಳನ್ನು ಆಚರಿಸುತ್ತಾರೆ.

ಹೀಗೆ ಹೊಸೂರಮ್ಮನ ಜಾತ್ರೆಯಲ್ಲಿ ಜಾತಿವರ್ಗವಿಲ್ಲದೆ ಹಲವು ಧರ್ಮದ ಜನಾಂಗಗಳು ಹೊಸೂರಮ್ಮ ದೇವಿಯ ಜಾತ್ರೆಯಲ್ಲಿ ಭಕ್ತಿಭಾವದಿಂದ ಪಾಲ್ಗೊಂಡು ತಮ್ಮ ಹರಕೆ ಸೇವೆ ಇತ್ಯಾದಿಗಳನ್ನು ಸಲ್ಲಿಸಿ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ.

೬. ಹುಲಿಗಿ : ಹುಲಿಗೆಮ್ಮನ ಜಾತ್ರೆ

ಹುಲಿಗಿಯು ಇಂದಿನ ಕೊಪ್ಪಳ ಜಿಲ್ಲೆಯಲ್ಲಿರುವ ಒಂದು ಪ್ರಸಿದ್ಧವಾದ ಶಾಕ್ತೇಯ ಕ್ಷೇತ್ರವಾಗಿದೆ. ತುಂಗಭದ್ರಾ ನದಿ ದಂಡೆಯಲ್ಲಿರುವ "ಈ ಕ್ಷೇತ್ರಕ್ಕೆ 'ವ್ಯಾಘ್ರಪುರಿ' ಎಂಬ ಹೆಸರನ್ನು ಇಟ್ಟುಕೊಂಡಿದ್ದಾರೆ. ಕ್ರಿ.ಶ. ೭ನೇ ಶತಮಾನದ ಕಲ್ಯಾಣ ಚಾಲುಕ್ಯರ ಒಂದು ಶಾಸನದಲ್ಲಿ ಹುಲಿಗೆ 'ಪಲಗೆ' (ವಿ) ಎಂದು ಕರೆದಿರುವ ಸಂಗತಿ ತಿಳಿದುಬರುತ್ತದೆ. ಸದ್ಯ ಹುಲಿಗಿಯು ಪ್ರಸಿದ್ಧ ಕ್ಷೇತ್ರವಾಗಿರುವಂತೆ ಒಂದು ಗ್ರಾಮವೂ ಆಗಿದೆ. ಹುಲಿಗಿ ಕ್ಷೇತ್ರವು ಒಟ್ಟಾರೆಯಾಗಿ ಸಮತಟ್ಟಾದ ಪ್ರದೇಶವಾಗಿದ್ದು ತುಂಗಭದ್ರಾ ನದಿ ದಂಡೆಯ ಮೇಲಿದೆ. ಕ್ರಿ.ಶ. ಸು. ೧೨ನೇ ಶತಮಾನದಲ್ಲಿಯೇ ಹುಲಿಗಿ ಕ್ಷೇತ್ರದಲ್ಲಿ ವ್ಯವಸಾಯವು ಚೆನ್ನಾಗಿ ನಡೆಯುತ್ತಿತ್ತೆಂದು ಹುಲಿಗಿಯಲ್ಲಿನ ಸೋಮೇಶ್ವರ ದೇವಸ್ಥಾನದಲ್ಲಿರುವ ಶಾಸನವು ತಿಳಿಸುತ್ತದೆ."[೯] ಈ ಶಾಸನದ ಪ್ರಕಾರ ಚೌಡಿಭಟ್ಟನೆಂಬುವನು ತುಂಗಭದ್ರೆಯಿಂದ ಕೃಷಿ ಭೂಮಿಗೆ ಬೇಕಾದಷ್ಟು ನೀರು ಒದಗಿಸುವ ಕೆಲಸ ಮಾಡುತ್ತಾನೆ. ಈಗಲೂ ಹುಲಿಗಿ ಕ್ಷೇತ್ರದಲ್ಲಿ ಸಾಕಷ್ಟು ಭತ್ತ ಮತ್ತು ಕಬ್ಬು ಬೆಳೆಯಲಾಗುತ್ತಿದೆ.

ತುಂಗಭದ್ರಾ ನದಿಯ ಒಂದು ದಂಡೆಯಲ್ಲಿ ಹುಲಿಗಿ ಕ್ಷೇತ್ರವಿದ್ದರೆ, ಇನ್ನೊಂದು ದಂಡೆಯಲ್ಲಿ ಹೊಸೂರಮ್ಮನ ಗುಡಿಯಿದೆ. ಜನರು ಹೊಸೂರಮ್ಮನನ್ನು ಹುಲಿಗೆಮ್ಮ-ಎಲ್ಲಮ್ಮ ಎಂದೇ ಭಾವಿಸುತ್ತಾರೆ. ಎರಡೂ ದೈವಗಳ ಜಾತ್ರೆ ಒಂದೇ ರೀತಿಯಲ್ಲಿ ನಡೆಯುತ್ತದೆ. ಹೊಸೂರಮ್ಮ-ಹುಲಿಗೆಮ್ಮಂದಿರೇ ಈ ಪ್ರದೇಶದ ಪ್ರಭಾವ ದೈವಗಳು, ಕೃಷಿಕರು ಈ ದೈವಗಳ ಪರಮಭಕ್ತರಾಗಿರುವರು.

ಹುಲಿಗೆಮ್ಮನನ್ನು ಕುರಿತಾದ ಐತಿಹ್ಯಗಳು

ಹುಲಿಗೆಮ್ಮನನ್ನು ಕುರಿತು ಅನೇಕ ಐತಿಹ್ಯಗಳು ಪ್ರಚಲಿತದಲ್ಲಿದ್ದು ಕೆಲವನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. "ಹುಲಿಗೆಮ್ಮನ ಭಕ್ತನನ್ನು ಒಮ್ಮೆ ಟಿಪ್ಪುಸುಲ್ತಾನನು ಅವಮಾನಿಸಿದನಂತೆ! ಇದರಿಂದಾಗಿ ಟಿಪ್ಪು ಶಕ್ತಿಗುಂದಿದನಂತೆ. ಇದು ಹುಲಿಗೆಮ್ಮನ ಕೋಪದ ಪರಿಣಾಮ ಎಂದು ತಿಳಿದ ಆತನು ದೈವಕ್ಕೆ ಚಿನ್ನಾಭರಣಗಳನ್ನು ಹರಕೆಯ ರೂಪದಲ್ಲಿ ಒಪ್ಪಿಸುತ್ತಾನೆ. ದೇವಿ ಸುಪ್ರೀತಳಾಗಿ ಟಿಪ್ಪುವಿಗೆ ಆತನ ಶಕ್ತಿ ಧೈರ್ಯಗಳನ್ನು ಮರಳಿ ಒಪ್ಪಿಸುತ್ತಾಳೆ"[೧೦] ಉಳಿದಂತೆ ದೈವವು ಕಿವಿ ಕೇಳದವರಿಗೆ ಕೀವಿ ಕೇಳುವಂತೆ, ಮೂಕರನ್ನು ಸಾಬೀತುಪಡಿಸುವಂತಹ ಅನೇಕ ಘಟನೆಗಳನ್ನು ಭಕ್ತರು ಸಾಬೀತುಪಡಿಸುತ್ತಾರೆ. ಹುಲಿಗೆಮ್ಮ ಊರಿಯ ದೇವತೆ. ಆಕೆ ಸಿಟ್ಟಾಗಿ ಕಣ್ತೆರೆದರೆ ಊರೆಲ್ಲಾ ಭಸ್ಮವಾಗುತ್ತದೆ. ಊರಿಗೆ ಬರಗಾಲ ಬರುತ್ತದೆ.

ಇದಕ್ಕಾಗಿ ದೈವದ ಕಣ್ಣಿಗೆ ಎರಡು ಬೆಳ್ಳಿಯ ಕಣ್ಣುಪಟ್ಟಿಗಳನ್ನು ಅಷ್ಟಲಾಗಿ ಕಟ್ಟಿದ್ದಾರೆ. ದೈವವು ಸದಾ ಶಾಂತವಾಗಿರುವಂತೆ ಮಾಡಲು ಭಕ್ತರು ಕೆಲ ವಿಶೇಷ ಹರಕೆಗಳನ್ನು ನೀಡುತ್ತಾರೆ.

ಸ್ಥೂಲವಾಗಿ ನೋಡಿದರೆ ಹುಲಿಗಿ ಜಾತ್ರೆಯು ಒಟ್ಟು ಹತ್ತು ದಿನ ನಡೆಯುತ್ತದೆ. 'ಮೇ' ತಿಂಗಳಲ್ಲಿ ಬರುವ ಆಗಿ ಹುಣ್ಣಿಮೆಯಂದು ನಡೆಯುವುದು. ಇದು ಜಾತ್ರೆಯ ಮೊದಲ ಹಂತ ಅಥವಾ ಜಾತ್ರೆಯ ಆರಂಭ ಎಂದು ಕರೆಯಬಹುದು. ಈ ದಿವಸ ಸಾಯಂಕಾಲ ಗುಡಿಯ ಎದುರಿನಲ್ಲಿ ಸಾವಿರಾರು ಜನ ಜೋಗಪ್ಪ, ಜೋಗತಿಯರು, ಮುತ್ತು ಕಟ್ಟಿಸಿಕೊಂಡವರು. ಭಕ್ತರು ಸೇರುತ್ತಾರೆ. ಈ ನಿಗದಿತ ಸಮೂಹದವರು ದೇವಿಯ ಕೈಗೆ ಕಂಕಣವೊಂದನ್ನು ಕಟ್ಟುತ್ತಾರೆ. ಸೇರಿದ ಜನರೆಲ್ಲಾ ಉಧೋ......ಉಧೋ..... ಎಂದು ಘೋಷಿಸುತ್ತಾರೆ.

ಕಂಕಣ ಕಟ್ಟಿದ ಎರಡನೆಯ ದಿನಕ್ಕೆ ಸರಿಯಾಗಿ ಸಾಯಂಕಾಲ ದೇವಿಯ ರಥೋತ್ಸವ ನಡೆಯುತ್ತದೆ. ಆ ದಿವಸ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿರಿಸಿ ಹೊರಗಿನ ಪ್ರದಕ್ಷಿಣ ಪಥಕ್ಕೆ ತರುತ್ತಾರೆ. ಗಂಗಾಮತಸ್ಥರು ಪಲ್ಲಕ್ಕಿಗೆ ಹೆಗಲು ಕೊಡುವುದು ಸಂಪ್ರದಾಯವಾಗಿದೆ. ಸಹಸ್ರಾರು ಜನರು ಹಿಂಬಾಲಿಸುತ್ತಿರುವಂತೆ ಗುಡಿಗೆ ಏಳುಸುತ್ತು ಬರುತ್ತಾರೆ. ಇದು ಅತ್ಯಂತ ಸಂಭ್ರಮದಿಂದ ನೆರವೇರುತ್ತದೆ. ಜನರು ಪಲ್ಲಕ್ಕಿಯತ್ತ ನಾಣ್ಯಗಳನ್ನು ಎಸೆಯುವುದು, ತೆಂಗಿನಕಾಯಿ ಒಡೆಯುವುದು, ಬಂಡಾರ ಹಚ್ಚುವುದು ನಡದೇ ಇರುತ್ತದೆ. ಪಲ್ಲಕ್ಕಿಯನ್ನು ಗುಡಿಯೊಳಕ್ಕೆ ಕೊಂಡೊಯ್ದಲ್ಲಿಗೆ ರಥೋತ್ಸವ ಮುಗಿಯುತ್ತದೆ.

ಇಲ್ಲಿ ಚರ್ಚಿಸಲಾದ ಹಬ್ಬ ಜಾತ್ರೆಗಳು 'ನದಿ'ಯನ್ನು ಅವಲಂಬಿಸಿ ರೂಪುಗೊಂಡಿವೆ. ಪ್ರತಿ ಸಂಪ್ರದಾಯ ಆಚರಣೆಗಳು 'ಗಂಗಮ್ಮ'ನ ಆಚರಣೆ ಮಾಡುವ ಮೂಲಕವೇ ಪ್ರಾರಂಭವಾಗುತ್ತವೆ. ಹಬ್ಬಗಳಲ್ಲಿ ನದಿ ಸ್ನಾನವೂ ಪವಿತ್ರ ಎಂಬ ನಂಬಿಕೆಯಿದೆ. ಈ ಅಂಶಗಳು ಚರಿತ್ರೆಯನ್ನು ಅವಲೋಕಿಸಿದಾಗ ಅವುಗಳಿಗೆ ಜನರ ಮೌಖಿಕ ಇತಿಹಾಸದ ಸ್ಪಂದನೆ ಅರಿವಾಗುತ್ತದೆ. ಈ ಬಗೆಯ ಚಾರಿತ್ರಿಕ ಸ್ಥಿತ್ಯಂತರಗಳನ್ನು ಗಮನಿಸಲು, ಸಮಕಾಲೀನ ಚಾರಿತ್ರಿಕ ರೂಪವನ್ನು ಅರಿಯಲು ಈ ಹಬ್ಬ ಹರಿದಿನಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಬೇಕಾಗಿದೆ.

ಟಿಪ್ಪಣಿಗಳು

೧. ಲೇ: ಎಸ್.ಎಸ್. ಹಿರೇಮಠ, ೧೯೯೩, **ಜಾತ್ರೆಗಳು**, ಸಮತಾ ಪ್ರಕಾಶನ, ಹೊಸಪೇಟೆ, ಪು. ೪೨.

೨. ....ಅದೇ..... ಪು. ೪೨.

೩. ....ಅದೇ..... ಪು. ೪೭.

೪. ....ಅದೇ...... ಪು. ೩೭.

೫. ....ಅದೇ...... ಪು. ೩೯.

೬. ಲೇ: ಟಿ. ಗಿರಿಜಾ, ೨೦೦೦, **ಶ್ರೀ ಕುರುವತ್ತಿ ಬಸವೇಶ್ವರ ಕ್ಷೇತ್ರದರ್ಶನ**, ಬಸವ ಮಿತ್ರ ಬಳಗ, ದಾವಣಗೆರೆ, ಪು. ೧೧.

೭. ....ಅದೇ....... ಪು. ೨.

೮. ಸಂ. ಡಾ. ಹಾ.ಮಾ. ನಾಯಕ, **ಕರ್ನಾಟಕ ವಿಷಯ ವಿಶ್ವಕೋಶ**, ಕ.ಅ.ಸಂ. ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು. ೧೫೫೨.

೯. ಡಾ. ಪುರುಷೋತ್ತಮ ಬಿಳಿಮಲೆ, **ಹುಲಿಗೆಮ್ಮ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ ೫೮೩ ೨೭೬, ಪು. ೧.

೧೦. ....ಅದೇ....... ಪು. ೨.

* * * * *

ಅಧ್ಯಾಯ ೯

ಧಾರ್ಮಿಕ ಕ್ಷೇತ್ರಗಳ ಕೊಡುಗೆ

ಅಧ್ಯಾಯ ಒಂಬತ್ತು

ಧಾರ್ಮಿಕ ಕ್ಷೇತ್ರಗಳ ಕೊಡುಗೆ

ಕನ್ನಡ ನಾಡಿನಲ್ಲಿ ವಿದ್ಯಾಭ್ಯಾಸಕ್ಕೆ ಬಹು ಪ್ರಾಚೀನವಾದ ಪರಂಪರೆಯಿದೆ ಹಾಗೂ ವ್ಯಾಪಕವಾದ ತಳಹದಿಯಿದೆ. ಈ ದೃಷ್ಟಿಕೋನದಿಂದ ತುಂಗಭದ್ರಾ ನದಿ ಪರಿಸರದಲ್ಲಿಯ ಧಾರ್ಮಿಕ ಕ್ಷೇತ್ರಗಳಾದ ಕುರುವತ್ತಿ, ಮೈಲಾರ, ಹಂಪಿ ಇತ್ಯಾದಿ ಕ್ಷೇತ್ರಗಳು ನೀಡಿದ ಕೊಡುಗೆಯು ಈ ನಾಡಿನ ಜನತೆಗೆ ಅಪಾರವಾದುದಾಗಿದೆ. ಐತಿಹಾಸಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಸಾಕಷ್ಟು ಕೊಡುಗೆಗಳನ್ನು ಈ ಕ್ಷೇತ್ರಗಳು ನೀಡಿವೆ.

೧. ಶಿಕ್ಷಣ

ಶೈಕ್ಷಣಿಕವಾಗಿ ಹೇಳುವುದಾದರೆ ಕುರುವತ್ತಿ ಹಿರೇಮಠವು ಧರ್ಮ ದಾಸೋಹದ ಜೊತೆಗೆ ಜ್ಞಾನ ದಾಸೋಹವನ್ನು ನೀಡಿರುವುದು ಕಂಡು ಬರುತ್ತದೆ. ಕುರುವತ್ತಿಯಲ್ಲಿರುವ ತೋಂಟದಾರ್ಯ ಮಠ ಹಾಗೂ ವಿರಕ್ತಮಠದ ತಲೆಮಾರಿನವರು ತುಂಬಾ ಜ್ಞಾನಿಗಳಾಗಿದ್ದಂತೆ ತೋರುತ್ತದೆ. ಈ ಮಠಗಳು ಸುಮಾರು ೩೦೦ ವರ್ಷಗಳ ಇತಿಹಾಸದೊಂದಿಗೆ ಅನೇಕ ಗುರುಗಳ ಪರಂಪರೆಯನ್ನು ಬೆಳೆಯಿಸಿ ಈ ಭಾಗದ ಜನಸಮೂಹಕ್ಕೆ ಜ್ಞಾನದ ಹಸಿವನ್ನು ನೀಗಿಸಿದ್ದಾರೆ.

ಶಾಸನಗಳಲ್ಲಿ ಕುರುವತ್ತಿಯು ಒಂದು ಅಗ್ರಹಾರವಾಗಿದ್ದು, ಅಗ್ರಹಾರದಲ್ಲಿ ನಾನಾ ವಿಧವಾದ ಶಿಕ್ಷಣ ಪದ್ಧತಿಯು ಇತ್ತೆಂದು ತಿಳಿದು ಬರುತ್ತದೆ.

> "ಆ ನಾಡೊಳಗ್ರಾಹಾರಂ
> ಭೂನಾರೀಹಾರಮಧಿಕ ವಿಭುಧಾಧಾರಂ
> ಶ್ರೀನಾರಿಗಿರಲಾಗಾರಂ
> ಭೂನಿಧಿ ಕುರುವರ್ತಿ ನೋಡೆ ಸೊಗಯಿಸುತಿರ್ಕುಂ"[೧]

ಈ ಮೇಲಿನ ಅಗ್ರಹಾರದ ವರ್ಣನೆಯಲ್ಲಿ ಅಲ್ಲಿರುವ ಶಿಕ್ಷಣ ವಿದ್ವಾಂಸರ ವರ್ಣಿತವಾಗಿದೆ.

ಅ. ಕುರುವತ್ತಿಯ ಹಿರೇಮಠ

ಕುರುವತ್ತಿ ಬಸವಣ್ಣನ ದೇವಸ್ಥಾನದ ರಸ್ತೆ ಸಾಲು ಮನೆಗಳ ಮಧ್ಯೆ ದೇವಸ್ಥಾನದ ಎದುರಿನಲ್ಲಿ ಒಂದು ಮನೆ ಹೊರನೋಟಕ್ಕೆ ಸಾಧಾರಣ ಮನೆಯಂತೆ ಕಂಡರೂ ಒಳಹೊಕ್ಕಾಗ ತುಂಬಾ ವಿಶಾಲವಾದ ದೊಡ್ಡ ದೊಡ್ಡ ಕೊಠಡಿಗಳು, ಜಗುಲಿ ಮಹಡಿಗಳಿಂದ ಕೂಡಿದ ಈ ಮಠವೇ ಕುರುವತ್ತಿಯ ಹಿರೇಮಠವಾಗಿದೆ. ಒಂದು ಕಾಲದಲ್ಲಿ ಈ ಮಠವು ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ತಿಳಿದು ಬರುತ್ತದೆ. ಈ ಮಠದಲ್ಲಿದ್ದವರಂತೂ ಒಂದಿಲ್ಲ ಒಂದು ಸಂದರ್ಭಗಳ ಪವಾಡ ಸದೃಶ ನಡವಳಿಕೆಗಳಿಂದ ಮಹಾತ್ಮರೆನಿಸುತ್ತಾರೆ.

ಹಿರೇಮಠದ ಜ್ಞಾನಸಂಪತ್ತು

ಹಿರೇಮಠದಲ್ಲಿಯ ಹಿಂದಿನ ತಲೆಮಾರಿನ ಗುರುವರ್ಯರು ಜ್ಞಾನಿಗಳು, ಗ್ರಂಥಕರ್ತರು ಹಾಗೂ ಶಿಕ್ಷಣ ಪ್ರೇಮಿಗಳಾಗಿದ್ದರೆಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಈಗಲೂ ಈ ಮಠದ ಕಪಾಟಿನಲ್ಲಿ ಅಪಾರವಾದ ಹಳೆಯ ಕಾಲದ ಕೈ ಬರವಣಿಗೆಯ ಅನೇಕ ಗ್ರಂಥಗಳಿವೆ. ಪುರಾಣವನ್ನೊಳಗೊಂಡ ಪುಸ್ತಕಗಳಿರುವುದು ಕಂಡು ಬರುತ್ತದೆ. ಪ್ರಾಚೀನ ಕಾಲದಲ್ಲಿ ಈ ಮಠವು ಗುರುಕುಲವಾಗಿತ್ತು. ಈ ಮಠದ ಸದಸ್ಯರಾದ ಶ್ರೀಮತಿ ಮಠದ ಚೆನ್ನಮ್ಮ ಅವರೊಡನೆ ಸಾಹಿತ್ಯ ಕೃತಿ, ಪುರಾಣ ಗ್ರಂಥಗಳು ಶಿಕ್ಷಣ ಪ್ರಸಾರ ಇತ್ಯಾದಿ ಅಂಶಗಳ ಬಗ್ಗೆ ಚರ್ಚಿಸಿದಾಗ ಸಹಾನುಭೂತಿಯಿಂದ ಗ್ರಂಥಗಳನ್ನು ಅಧ್ಯಯನಕ್ಕೆ ಕೊಡುವುದಾಗಿಯೂ, ಅವುಗಳನ್ನು ಮರುಪ್ರತಿಗಳನ್ನಾಗಿ ಮಾಡುವಲ್ಲಿ ಆಸಕ್ತಿಯನ್ನು ತೋರಿಸಿರುವುದು ಸ್ವಾಗತಾರ್ಹವಾಗಿದೆ. ಕುರುವತ್ತಿ ಧಾರ್ಮಿಕ ಕ್ಷೇತ್ರವು ಸಾಮಾಜಿಕ, ಶೈಕ್ಷಣಿಕವಾಗಿ ಅಲ್ಲಿನ ಜನಸಮೂಹಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಿದೆ. ಆದರೆ ಕುರುವತ್ತಿ ಕ್ಷೇತ್ರಕ್ಕೆ ಧಾರ್ಮಿಕ ಪರಂಪರೆಯಿದೆ. ಆದರೆ ಅದರ ಸರ್ವತೋಮುಖಿ ಅಭಿವೃದ್ಧಿಯಾಗಬೇಕಾದರೆ ಮಠ ಆರ್ಥಿಕವಾಗಿ ಸಬಲವಾಗಬೇಕು. ಚಿತ್ರದುರ್ಗದ ಮುರುಘಾಮಠ, ಸಿರಿಗೆರೆಯ ತರಳಬಾಳು ಬೃಹನ್ಮಠ, ಧರ್ಮಸ್ಥಳ, ಇತ್ಯಾದಿ ಕ್ಷೇತ್ರಗಳು ವಿದ್ಯೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಅಂತೆಯೇ ಅವುಗಳಿಗೆ ಆರ್ಥಿಕ ಸಬಲತೆ ಇದೆ. ಇಂತಹ ಸಬಲ ಮಠಗಳು ಕುರುವತ್ತಿಯಂತಹ ಮಠಗಳನ್ನು ದತ್ತು ಪಡೆದು ಶೈಕ್ಷಣಿಕ ಕೇಂದ್ರಗಳನ್ನು ತೆರೆಯಬೇಕಾಗಿದೆ. ಅಂದಾಗ ಕುರುವತ್ತಿಯೂ ಸಹ ವಿದ್ಯಾದಾನ ಮಾಡುವ ಕೇಂದ್ರವಾಗುತ್ತದೆ. ಇಲ್ಲಿ ಪ್ರೌಢಶಾಲೆಯವರೆಗೆ ಶಿಕ್ಷಣಕ್ಕೆ ಅನುಕೂಲವಿದೆ. ಆದರೆ ಕಾಲೇಜ್, ಸಂಸ್ಕೃತ ಪಾಠಶಾಲೆ, ಕೃಷಿಗೆ ಸಂಬಂಧಿಸಿದ ಕಾಲೇಜುಗಳು ಸ್ಥಾಪನೆಯಾದರೆ ಕುರುವತ್ತಿಯ ಬೆಳವಣಿಗೆಗೆ ಸಾಧ್ಯವಾಗುತ್ತದೆ.

ಆ. ಹಂಪಿ

ವಿಜಯನಗರ ಸಾಮ್ರಾಜ್ಯಕ್ಕೆ ನಿರ್ಮಾತೃ ಗುರುಗಳಾದ ವಿದ್ಯಾರಣ್ಯರು ಧರ್ಮ ಹಾಗೂ ಶಿಕ್ಷಣ ಪ್ರಸಾರವನ್ನೇ ಉದ್ದೇಶವಾಗಿಟ್ಟುಕೊಂಡು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿರುವುದು ವೈಶಿಷ್ಟ್ಯವಾಗಿದೆ.

ಗುರುಗಳಾದ ವಿದ್ಯಾರಣ್ಯರ ಉದ್ದೇಶಕ್ಕನುಗುಣವಾಗಿಯೇ ಆಳಿದ ಎಲ್ಲಾ ಮನೆತನದ ಪ್ರತಿಯೊಬ್ಬ ಅರಸರು ಧರ್ಮ ಹಾಗೂ ಶಿಕ್ಷಣ ಪ್ರಸಾರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದಾರೆ.

ವಿಜಯನಗರ ಅರಸರ ಕಾಲದಲ್ಲಿ ವಿದ್ಯಾಭ್ಯಾಸವು ಬಹಳ ಪ್ರಮುಖವಾದ ಸ್ಥಾನವನ್ನು ಪಡೆದಿತ್ತು. ವೀರಶೈವ ಮಠಗಳು, ಬ್ರಾಹ್ಮಣರ ಅಗ್ರಹಾರಗಳು ಮತ್ತು ಜೈನರ ಬಸದಿಗಳು ಪ್ರಮುಖ ವಿದ್ಯಾಕೇಂದ್ರಗಳಾಗಿವೆ. ಈ ವೇಳೆಗೆ ವಿದ್ಯಾಕ್ರಮ ಹಾಗೂ ಪಠ್ಯ ವಿಷಯಗಳಲ್ಲಿಯೂ ಬೆಳವಣಿಗೆಯಾಗಿತ್ತು. ಶಾಸ್ತ್ರಗಳು ವಿಪುಲವಾಗಿ ಬೆಳೆದಿದ್ದವು. ಅವುಗಳ ವ್ಯಾಸಂಗಕ್ಕೆ ಅನುಕೂಲವಾಗುವಂತಹ ವಿದ್ಯಾಭ್ಯಾಸ ಕ್ರಮವು ನಿರ್ಮಾಣವಾಗಿದ್ದಿತು. "ಮಾಧವ, ಸಾಯಣ, ವೇದಾಂತ ದೇಶಿಕ, ಡಿಂಡಿಮ ಕವಿ, ತಾತಾಚಾರ್ಯ ಮೊದಲಾದ ಮಹಾಪಂಡಿತರು ಕಲ್ಲು ಮಠದ ಪ್ರಭುದೇವನಂತಹ ವ್ಯಾಖ್ಯಾನಕಾರರು ಈ ಕಾಲದಲ್ಲಿ ಆಗಿ ಹೋದರು"[೨] (ತಿಪ್ಪೇರುದ್ರಸ್ವಾಮಿ, ಕ.ಸಂ. ಸಮೀಕ್ಷೆ, ಪು. ೨೩೧).

ಪ್ರಾಥಮಿಕ ವಿದ್ಯಾಭ್ಯಾಸವನ್ನು ಕುರಿತ ಅಂಶಗಳು ವಿಜಯನಗರ ಕಾಲದ ಶಾಸನಗಳಲ್ಲಿ ಮತ್ತು ಕಾವ್ಯಗಳಲ್ಲಿ ಅಲ್ಲಲ್ಲಿ ಸುಳಿಯುತ್ತವೆ. "ಹಲಗೆ ಬಳಪವ ಇಡಿಯದೊಂದಗ್ಗಳಿಕೆ" ಎಂದು ಕುಮಾರವ್ಯಾಸ ಹೇಳಿರುವುದನ್ನು ಗಮನಿಸಿದರೆ ಅವುಗಳ ಬಳಕೆ ವಿದ್ಯಾಭ್ಯಾಸ ಕ್ರಮದಲ್ಲಿತ್ತೆಂದು ತಿಳಿದು ಬರುತ್ತದೆ. ಇಮ್ಮಡಿ ಪ್ರೌಢದೇವರಾಯನ ಕಾಲದಲ್ಲಿ ವೀರಶೈವ, ಜೈನ ಮಠಗಳು ವಿದ್ಯಾಭ್ಯಾಸ ಕೇಂದ್ರಗಳಾಗಿ ಮುಂದುವರಿದಿದ್ದವು. ಈತನ ದಂಡನಾಯಕರಾದ ಜಕ್ಕಣ್ಣ ಮತ್ತು ಲಕ್ಕಣ್ಣ ದಂಡೇಶರವರ ನೇತೃತ್ವದಲ್ಲಿ ವಿದ್ಯಾಭ್ಯಾಸ ಕೇಂದ್ರಗಳು ಪುನರುಜ್ಜೀವನದ ಯುಗವನ್ನೇ ಕಂಡವು.

ಪ್ರಸ್ತುತ ಸಂದರ್ಭದಲ್ಲಿ ಹಂಪಿಯ ಪರಿಸರದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವಿದ್ದು ಹಂಪಿ ಕನ್ನಡ ವಿಶ್ವವಿದ್ಯಾಲಯವು ಸಮಗ್ರ ನಾಡಿನ ಏಳಿಗೆಗಾಗಿ ಸಂಶೋಧನೆ, ವಿಮರ್ಶೆ, ಚರಿತ್ರೆ, ರಾಜಕೀಯ, ಸಂಗೀತ, ಚಿತ್ರಕಲೆ, ಜಾನಪದ ಇತ್ಯಾದಿ ಆಯಾಮಗಳನ್ನು ಸಂಶೋಧನಾತ್ಮಕ ನೆಲೆಯಲ್ಲಿ ಗುರುತಿಸಿ ತನ್ನದೇ ಆದಂತಹ ಕೊಡುಗೆಯನ್ನು ಈ ನಾಡಿಗೆ ಸಲ್ಲಿಸುತ್ತಿದೆ.

೨. ತುಂಗಭದ್ರಾ ನದಿ ಪರಿಸರದ ಸಾಹಿತ್ಯ

ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು ಪ್ರಾಚೀನ ಕಾಲದಿಂದಲೂ ಮಾನವ ಸಂಸ್ಕೃತಿಯ ವಿಕಾಸದಲ್ಲಿ ಮಹತ್ವದ ಪಾತ್ರವಹಿಸಿವೆ. ಈ ಧಾರ್ಮಿಕ ನೆಲೆಗಳು ಮಾನವನ ಬದುಕಿಗೆ ನೆಮ್ಮದಿಯನ್ನು ಮೂಡಿಸಿವೆ. ನೈತಿಕ ಮೌಲ್ಯಗಳು, ಶಿಕ್ಷಣ ಪ್ರಸಾರ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಕುರುವತ್ತಿ, ಮೈಲಾರ, ಹಂಪಿ ಇತ್ಯಾದಿ ಧಾರ್ಮಿಕ ಕ್ಷೇತ್ರಗಳು ಮಹತ್ವದ ಸ್ಥಾನ ಪಡೆದಿವೆ. ಪ್ರಸ್ತುತ ಅಧ್ಯಾಯದಲ್ಲಿ ಮೇಲೆ ತಿಳಿಸಿದ ಧಾರ್ಮಿಕ ಕ್ಷೇತ್ರಗಳಲ್ಲಿ ರಚನೆಯಾದ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗಿದೆ.

ಈ ನದಿ ಪರಿಸರದ ಪ್ರಮುಖ ಧಾರ್ಮಿಕ ಕೇಂದ್ರವಾದ ಕುರುವತ್ತಿಯು ವಿಮರ್ಶಕರ, ಸಂಶೋಧಕರ, ಕೃತಿರಚನೆಕಾರರ ಗಮನ ಸೆಳೆದಿದೆ. ಕುರುವತ್ತಿ ಇತಿಹಾಸವನ್ನು ಕುರಿತು ಹಲವಾರು ಗ್ರಂಥಗಳು ಪ್ರಾಚೀನ ಕಾಲದಲ್ಲಿ ರಚನೆಯಾಗಿವೆ. ಕುರುವತ್ತಿಯ ಹಿರೇಮಠದಲ್ಲಿಯ ಗುರು ಪರಂಪರೆಯವರು ಜ್ಞಾನಿಗಳು, ಶಿಕ್ಷಣ ಪ್ರೇಮಿಗಳೂ ಹಾಗೂ ಸಾಹಿತ್ಯಾಸಕ್ತರಾಗಿದ್ದರೆಂದು ತಿಳಿದು ಬರುತ್ತದೆ. ಈಗಲೂ ಈ ಮಠದ ಕಪಾಟಿನಲ್ಲಿ ಅಪಾರವಾದ ಹಳೆಯ ಕಾಲದ ಕೈ ಬರವಣಿಗೆಯ ಅನೇಕ ಗ್ರಂಥಗಳು ಇವೆ. ಪುರಾಣ ಪುಸ್ತಕಗಳಿವೆ. ಈ ಮಠದ ಸದಸ್ಯರಾದ ಶ್ರೀಮತಿ ಚೆನ್ನಮ್ಮರೊಡನೆ ಸಂಪರ್ಕಿಸಿದಾಗ ಆ ಕೃತಿಗಳನ್ನು ಅಧ್ಯಯನಕ್ಕೆ ಒದಗಿಸಿದರು.

ಕ್ರಿ.ಶ.ಸು. ೧೬೫೦ರಲ್ಲಿದ್ದ ಕುರುವತ್ತಿಯ ಕವಿ ಅಲ್ಲಮ ಅಥವಾ ಕುರುವತ್ತಿಯ ಗುರುಸಿದ್ಧನಂಜೇಶರು ಸಿಂಹಾಸನಧೀಶರಾಗಿದ್ದು ಅವರ ಶಿಷ್ಯನೇ ಅಲ್ಲಮಕವಿ. ಈ ಕವಿ ತನ್ನ ಸಿದ್ಧನಂಜೇಶನ ಕರುಣೆಯಿಂದ 'ಕಮಳಾಮಾಯಿ' - 'ದುಂದುಮೆ' ಇತ್ಯಾದಿ ಕಾವ್ಯಗಳನ್ನು ರಚಿಸಿದ್ದಾನೆ. ಇದರಿಂದ ಕುರುವತ್ತಿಯಲ್ಲಿ ಕವಿ ಪುಂಗವರಿದ್ದರೆಂದು ತಿಳಿಯಬಹುದಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಕುರುವತ್ತಿಯನ್ನು ಕುರಿತ ಶ್ರೀ ಕುರುವತ್ತಿ ಬಸವೇಶ್ವರ ಕ್ಷೇತ್ರದರ್ಶನ, ಶ್ರೀಮತಿ ಟಿ. ಗಿರಿಜಾ, ಇತ್ಯಾದಿ ಸಂಶೋಧನಾತ್ಮಕ ಲೇಖನಗಳು ಸೃಷ್ಠಿಯಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಕುರುವತ್ತಿಯು ತನ್ನದೇ ಆದ ಕೊಡುಗೆಯನ್ನು ನೀಡಿದೆ.

ಅ. ಮೈಲಾರ

ಧಾರ್ಮಿಕ ಕ್ಷೇತ್ರವಾದ ಮೈಲಾರವು ಸಾಹಿತ್ಯ ಚಟುವಟಿಕೆಯ ಕೇಂದ್ರವಾಗಿದೆ. 'ಮೈಲಾರ" ಹಾಗೂ 'ತುಂಗಭದ್ರೆ', 'ಲಿಂಗೇಶ್ವರ' ಈ ವಿಷಯವನ್ನೊಳಗೊಂಡ ಅನೇಕ ಗ್ರಂಥಗಳು, ಸಂಶೋಧನಾತ್ಮಕ ಲೇಖನಗಳು, ಕತೆ ಕವನಗಳಲ್ಲಿ ಕೊಂಡಾಡಿದ್ದಾರೆ. ಜಾನಪದ ಸಾಹಿತ್ಯದಲ್ಲಿಯೂ ಶ್ರೀ ಮೈಲಾರಲಿಂಗನ ಮಹಿಮೆಯನ್ನು ಹಾಡಿದ್ದಾರೆ. ಒಟ್ಟಿನಲ್ಲಿ ಮೈಲಾರಲಿಂಗೇಶ್ವರನನ್ನು ಕುರಿತು ನಿರ್ಮಿತಿಗೊಂಡ ಸಾಹಿತ್ಯದಿಂದ ಇಂದಿನ ಓದುಗರಿಗೆ ಚಾರಿತ್ರಿಕ, ಧಾರ್ಮಿಕ, ಐತಿಹಾಸಿಕ ಹಾಗೂ ಜನಜೀವನದ ರೀತಿ ನೀತಿಗಳು ತಿಳಿದು ಬರುತ್ತವೆ. 'ಮೈಲಾರಲಿಂಗ'ನನ್ನು ಕುರಿತ ಅಕಾಡೆಮಿಕ್ ಅಧ್ಯಯನಗಳು ನಡೆದಿವೆ. ಎಂ.ಬಿ. ನೇಗಿನಹಾಳ, ಎಸ್.ಎಸ್. ಹಿರೇಮಠ, ಮಂಜುನಾಥ ಬೇವಿನಕಟ್ಟಿ ಮುಂತಾದವರು ಕಾವ್ಯಗಳನ್ನು ಸಂಗ್ರಹಿಸಿದ್ದಾರೆ. ವಿಶ್ಲೇಷಣಾತ್ಮಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಡಾ.ನಿಂಗಪ್ಪ ಮುದೇನೂರು, ಡಾ.ಎಸ್.ಎಮ್. ಮುತ್ತಯ್ಯ ಮುಂತಾದವರು ಸಾಂಸ್ಕೃತಿಕ ನಾಯಕರನ್ನು ಕುರಿತು ಮಾಡಿದ ಸಂಶೋಧನೆಯಲ್ಲಿ ಮೈಲಾರಲಿಂಗನ ಮೇಲೆ ಹೊಸ ನಿಲುವು ತಳೆದಿದ್ದಾರೆ.

ಆ. ಹಂಪಿ

ತುಂಗಭದ್ರಾ ನದಿ ಪರಿಸರದಲ್ಲಿಯ ವಿಜಯನಗರ ಅರಸರ ಕಾಲದಲ್ಲಿ ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲಿಯೂ ವಿಪುಲವಾದ ಸಾಹಿತ್ಯ ಬೆಳವಣಿಗೆಯಾಗಿದೆ. ಸಾಹಿತ್ಯಕ್ಕೆ ವಿಜಯನಗರ ಸಾಮ್ರಾಜ್ಯದ

ಕೊಡುಗೆಯು ಅಪಾರವಾಗಿದೆ. "ವಿಜಯನಗರದ ಅರಸರ ಸಾಹಿತ್ಯ ಪ್ರಗತಿಯ ಕಾಲವನ್ನು 'ಕ್ಲಾಸಿಕಲ್ ಯುಗ' ಎಂದು ಇತಿಹಾಸಕಾರರು ಗುರುತಿಸಿದ್ದಾರೆ. ಈ ಕಾಲವನ್ನು ರೋಮ್‌ನ ಅಗಸ್ಟ್‌ಸೀಸರ್ ಮತ್ತು ಇಂಗ್ಲೆಂಡ್‌ನ ಎಲಿಜಬೆತ್‌ಳ ಕಾಲಕ್ಕೆ ಹೋಲಿಸಲಾಗಿದೆ."[5] ವಿಜಯನಗರ ಅರಸರ ಕಾಲದಲ್ಲಿ ಸಂಸ್ಕೃತ, ತೆಲುಗು ಮತ್ತು ಕನ್ನಡ ಸಾಹಿತ್ಯಗಳು ವಿಪುಲವಾಗಿ ಸೃಷ್ಟಿಯಾಗಿವೆ. ಅವುಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ತಿಳಿಸಲಾಗಿದೆ.

ಸಂಸ್ಕೃತ ಸಾಹಿತ್ಯ

ಸಂಸ್ಕೃತ ಸಾಹಿತ್ಯವು ಸಾಮಾನ್ಯವಾಗಿ ಧಾರ್ಮಿಕ ವಿಷಯವನ್ನೊಳಗೊಂಡಿತ್ತು. ಧಾರ್ಮಿಕ ಗುರುಗಳಾದ ವಿದ್ಯಾಶಂಕರ, ವಿದ್ಯಾರಣ್ಯ, ನಯನಾಚಾರ್ಯ, ಮಾಧ್ವರು, ಹಲವು ಕೃತಿಗಳನ್ನು ರಚಿಸಿದ್ದಾರೆ. ನಯನಾಚಾರ್ಯರ 'ವೇದಾಂತ ಪ್ರಕಾಶ'ವು ಅತ್ಯಂತ ಶ್ರೇಷ್ಠ ಕೃತಿಯಾಗಿದೆ. ಇದಲ್ಲದೆ 'ಯಜ್ಞ ತಂತ್ರ', 'ಸುಧಾನಿಧಿ' 'ಪ್ರಾಯಶ್ಚಿತ್ಯ ಸುಧಾನಿಧಿ' ಮತ್ತು 'ಪುರುಷಾರ್ಥ ಸುಧಾನಿಧಿ' ಕೃತಿಗಳನ್ನು ರಚಿಸಿದ್ದಾರೆ. ವಿದ್ಯಾರಣ್ಯರು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ 'ಪರಾಸರೆ ಮಾದರಿಯ' 'ಶಂಕರ ವಿಜಯ' ಮತ್ತು 'ರಾಜಕಲಾನಿರ್ಣಯ', ಮಾಧವ ಮಂತ್ರಿಯ 'ತಾತ್ಪರ್ಯ ದೀಪಿಕೆ' ಎಂಬ ವ್ಯಾಖ್ಯಾನವನ್ನು ಪದ್ಮಪುರಾಣದ ಸೂತ ಸಂಹಿತೆಯ ಮೇಲೆ ರಚಿಸಿದರು. ಕುಮಾರಕಂಪಣನ ಹೆಂಡತಿ ಗಂಗಾಂಬಿಕೆಯು ತನ್ನ ಗಂಡನ ದಿಗ್ವಿಜಯಗಳನ್ನು ಕುರಿತು 'ವೀರಕಂಪಣರಾಯ ಚರಿತ' ಅಥವಾ 'ಮಧುರಾ ವಿಜಯಂ' ಎಂಬ ಕಾವ್ಯವನ್ನು ರಚಿಸಿದ್ದಾಳೆ. ಕೃಷ್ಣದೇವರಾಯನು 'ಜಾಂಬುವತಿ ಪರಿಣಯ'ವನ್ನು ಮತ್ತು ಆತನ ಆಮುಕ್ತಮೌಲ್ಯದ ಪ್ರಕಾರ 'ಮಾದಲಸ ಚರಿತೆ' 'ಸತ್ಯವಧುಶಾಂತವನ' 'ಸಕಲ ಕಥಾಸಾರ ಸಂಗ್ರಹ' 'ರಸಮಂಜರಿ' ಮತ್ತು 'ಜ್ಞಾನ ಚಿಂತಾಮಣಿ'ಯನ್ನು ರಚಿಸಿದ್ದಾನೆ.

ಸಂಸ್ಕೃತದ ಲೌಕಿಕ ವಿಷಯದಲ್ಲಿಯ ಕೃತಿಗಳಾವುವೆಂದರೆ ಸಂಗೀತ, ಪ್ರಣಯ, ಔಷಧಿ ಮತ್ತು ಖಗೋಳಶಾಸ್ತ್ರ, ನಯನಾಚಾರ್ಯರ 'ಆಯುರ್ವೇದ-ಸುಧಾನಿಧಿ', ಲಕ್ಷ್ಮಣ ಪಂಡಿತನ 'ವೈದ್ಯ ರಾಜವಲ್ಲಭ' ಎಂಬ ಉತ್ಕೃಷ್ಟ ಕೃತಿಗಳು ವಿಜಯನಗರ ಕಾಲದ ಸಂಸ್ಕೃತ ಸಾಹಿತ್ಯಕ್ಕೆ ಹಿಡಿದ ಕನ್ನಡಿಯಾಗಿವೆ.

ತೆಲುಗು ಸಾಹಿತ್ಯ

ಶ್ರೀಕೃಷ್ಣದೇವರಾಯನ ಕಾಲದಲ್ಲಿ ತೆಲುಗು ಸಾಹಿತ್ಯವು ಉನ್ನತ ಮಟ್ಟವನ್ನು ತಲುಪಿತ್ತು. ಈತನೇ ಸ್ವತಃ ಕವಿಯಾಗಿದ್ದು 'ಆಮುಕ್ತಮೌಲ್ಯದ' ಎಂಬ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಯು ಅಂದಿನ ರಾಜಕೀಯ ಪದ್ಧತಿಯನ್ನು ಇಂದಿಗೂ ತಿಳಿಸುತ್ತದೆ. ಈತನ ಆಸ್ಥಾನದಲ್ಲಿ 'ಅಷ್ಟದಿಗ್ಗಜ'ರೆಂಬ ಎಂಟು ಜನ ಪ್ರಸಿದ್ಧ ತೆಲುಗು ಕವಿಗಳಿರುವುದು ಕೃಷ್ಣದೇವರಾಯನ ಸಾಹಿತ್ಯ ಪ್ರೇಮವನ್ನು ವ್ಯಕ್ತಪಡಿಸುತ್ತದೆ.

ಕನ್ನಡ ಸಾಹಿತ್ಯ

ವಿಜಯನಗರ ಅರಸರ ಕಾಲದ ಕನ್ನಡ ಸಾಹಿತ್ಯವು ವೈಭವದ ತುತ್ತತುದಿಯನ್ನು ಮುಟ್ಟಿದೆ. ವಿದ್ವಾಂಸರು ವಿಜಯನಗರ ಕಾಲದ ಕನ್ನಡ ಸಾಹಿತ್ಯವನ್ನು ಜೈನ, ವೀರಶೈವ ಮತ್ತು ಬ್ರಾಹ್ಮಣ ಸಾಹಿತ್ಯವೆಂದು ಅನುಕೂಲಕ್ಕೆ ತಕ್ಕಂತೆ ವರ್ಗೀಕರಿಸಿದ್ದಾರೆ. ಜೈನರ ಪ್ರಮುಖ ಸಾಹಿತಿಗಳೆಂದರೆ ಬಾಹುಬಲಿ ಮತ್ತು ಮಧುರಾ ಇವರು ಚಂಪೂ ಶೈಲಿಯಲ್ಲಿ ೨೪ ತೀರ್ಥಂಕರರನ್ನು ಕುರಿತು ಮಹಾಕಾವ್ಯಗಳನ್ನು ರಚಿಸಿದ್ದಾರೆ. ರತ್ನಾಕರವರ್ಣಿಯ `ಭರತೇಶವೈಭವ`, ಭಟ್ಟಾಕಳಂಕನ `ಶಬ್ದಾನುಶಾಸನ` ಪ್ರಮುಖ ಕೃತಿಗಳಾಗಿವೆ.

ವೀರಶೈವ ಕವಿಗಳಲ್ಲಿ ಲಕ್ಕಣ್ಣದಂಡೇಶನು ಷಟ್ಪದಿಯಲ್ಲಿ ವೀರಶೈವ ಶರಣರನ್ನು ಕುರಿತು ಬರೆದಿದ್ದಾನೆ. ಚಾಮರಸನ `ಪ್ರಭುಲಿಂಗಲೀಲೆ`, ವಿರೂಪಾಕ್ಷ ಪಂಡಿತನ `ಚೆನ್ನಬಸವ ಪುರಾಣ`. ನಂಜುಂಡ ಕವಿಯ `ಕುಮಾರರಾಮನ ಕತೆ`, ಭೀಮ ಕವಿಯ `ಬಸವ ಪುರಾಣ` ಇತ್ಯಾದಿ ಪ್ರಸಿದ್ಧ ಸಾಹಿತ್ಯ ಕೃತಿಗಳು ರಚಿತವಾಗಿವೆ.

ಬ್ರಾಹ್ಮಣ ಕವಿಗಳಾದ ಕುಮಾರವ್ಯಾಸನ `ಗದುಗಿನ ಭಾರತ`, ನರಹರಿಯ `ತೊರವೆ ರಾಮಾಯಣ`, ಲಕ್ಷ್ಮೀಶನ 'ಜೈಮಿನಿ ಭಾರತ' ಇತ್ಯಾದಿ ಸಾಹಿತ್ಯ ಕೃತಿಗಳು ಕನ್ನಡ ಸಾಹಿತ್ಯದ ಖಜಾನೆಗಳಂತಿವೆ. ಇದಲ್ಲದೆ ಕನಕದಾಸರು `ಮೋಹನತರಂಗಿಣಿ`, `ನಳಚರಿತ್ರೆ`, `ಹರಿಭಕ್ತಸಾರ` ರಚಿಸಿದ್ದಾರೆ. ಶ್ರೀಪಾದರಾಯರು, ಕನಕದಾಸರೂ ಸಹ ಕೀರ್ತನೆಗಳನ್ನು ಕನ್ನಡದಲ್ಲಿ ರಚಿಸಿರುವರು. ಪ್ರೌಢದೇವರಾಯನ ಕಾಲವು ಸಾಹಿತ್ಯದ ಉತ್ತುಂಗದ ಕಾಲವಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಕಾಲದಲ್ಲಿ ಅನೇಕ ಕವಿಗಳು, ಸಂಶೋಧಕರು, ವಿಮರ್ಶಕರು, ಬರಹಗಾರರು ತುಂಗಭದ್ರಾ ನದಿ ಪರಿಸರ ಹಾಗೂ ವಿಜಯನಗರವನ್ನು ಕುರಿತು ರಾಶಿ ರಾಶಿ ಸಾಹಿತ್ಯ ಕೃತಿಗಳು ರಚಿತವಾಗಿವೆ.

೩. ತುಂಗಭದ್ರಾ ಪರಿಸರದ ಆರ್ಥಿಕ ಮತ್ತು ಸಾಮಾಜಿಕ ಕೊಡುಗೆಗಳು

ಅ. ಕೈಗಾರಿಕೆ

ತುಂಗಭದ್ರಾ ನದಿ ತೀರದಲ್ಲಿ ನಗರೀಕರಣದೊಂದಿಗೆ ಕೈಗಾರಿಕೆಯ ಬೆಳವಣಿಗೆ ಹೊಂದಿರುವುದು. ಸ್ಪಷ್ಟವಾಗಿ ಗೋಚರಿಸುತ್ತದೆ. ಭದ್ರಾ ನದಿ ದಂಡೆಯ ಮೇಲಿರುವ ಭದ್ರಾವತಿಯು ಈ ನದಿಯ ನೈಸರ್ಗಿಕ ಸಂಪನ್ಮೂಲಗಳೊಂದಿಗೆ ಕೈಗಾರಿಕಾ ಕ್ಷೇತ್ರದಲ್ಲಿ ತನ್ನನ್ನು ತಾನು ಗುರುತಿಸಿಕೊಂಡಿದೆ. ಇಲ್ಲಿನ ಕಬ್ಬಿಣ ಕಾರ್ಖಾನೆಯ ಕುಲುಮೆಗಳಲ್ಲಿ ವರ್ಷಕ್ಕೆ ಸುಮಾರು ೭೦ ರಿಂದ ೮೦ ಸಾವಿರ ಟನ್ನುಗಳಷ್ಟು ಬೀಡು ಕಬ್ಬಿಣ ತಯಾರಿಸಲಾಗುತ್ತದೆಂಬುದು ಗಮನಾರ್ಹವಾದ ಅಂಶವಾಗಿದೆ.

೧೯೨೩ರಲ್ಲಿ ಭದ್ರಾವತಿಯ ಬಳಿ ಭದ್ರಾನದಿಯ ದಂಡೆಯ ಮೇಲೆ ರಾಜ್ಯದ ಕಬ್ಬಿಣದ ಅದಿರು ಮತ್ತು ಅರಣ್ಯ ಸಂಪನ್ಮೂಲಗಳ ಸದುಪಯೋಗದ ದೃಷ್ಟಿಯಿಂದ ಸ್ಥಾಪಿತವಾದುದು ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಾಗಿದೆ. ಭದ್ರಾವತಿಯ ವಿ.ಐ.ಎಸ್.ಎಲ್. ಮತ್ತು ಎಂ.ಪಿ.ಎಂ. ಕಾರ್ಖಾನೆಗಳು. ಭದ್ರಾನದಿಯ ತಟದಲ್ಲಿದ್ದು ನದಿ ನೀರನ್ನು ಸಂಪೂರ್ಣವಾಗಿ ಆಶ್ರಯಿಸಿಕೊಂಡು ಬಂದಿದೆ.

*** ಕಾಗದ ಕೈಗಾರಿಕೆ**

ಕರ್ನಾಟಕದಲ್ಲಿ ಕಾಗದದ ಕೈಗಾರಿಕೆಗೆ ಮುಖ್ಯವಾಗಿ ಬಿದಿರು, ಮೃದುಕಟ್ಟಿಗೆ ಮತ್ತು ನೀಲಗಿರಿ ಕಟ್ಟಿಗೆಗಳನ್ನು ಉಪಯೋಗಿಸಲಾಗುತ್ತದೆ. ಕಾಗದದ ಕೈಗಾರಿಕೆಗಳು. ಅರಣ್ಯಗಳನ್ನು ಆಧರಿಸಿದ್ದು ಅರಣ್ಯ ಪ್ರದೇಶಗಳಲ್ಲಿ ಸ್ಥಾಪಿತವಾಗಿವೆ. ಮೈಸೂರು ಪೇಪರ್ ಲಿಮಿಟೆಡ್ ಸರ್ಕಾರದ ನೆರವಿನಿಂದ ೧೯೩೬ರಲ್ಲಿ ಭದ್ರಾವತಿಯಲ್ಲಿ ಸ್ಥಾಪನೆಗೊಂಡಿತು. ಇಂದಿಗೂ ಭದ್ರಾ ನದಿಯ ನೀರನ್ನು ಈ ಕಾರ್ಖಾನೆಗೆ ಬಳಸಿಕೊಳ್ಳಲಾಗುತ್ತದೆ.

ಹರಿಹರದ ಸಮೀಪ "ರಾಣಿಬೆನ್ನೂರು ತಾಲೂಕು ಕುಮಾರಪಟ್ಟಣಂ ಬಳಿಯಲ್ಲಿ ೧೯೭೩ರಲ್ಲಿ ಹರಿಹರದ ಫಾಲಿಫೈಬರ್ಸ್ ಕಾರ್ಖಾನೆಯು ಪ್ರಾರಂಭವಾಯಿತು".[೪] ಪ್ರತಿಷ್ಠಿತ ಬಿರ್ಲಾ ಸಮೂಹವು ಇಲ್ಲಿ ರಾಷ್ಟ್ರೀಯ ಹೆದ್ದಾರಿ ರೈಲು ಸಂಪರ್ಕ ಹಾಗೂ ತುಂಗಭದ್ರೆಯ ನೀರಿನ ಲಭ್ಯತೆಯನ್ನು ಗಮನದಲ್ಲಿರಿಸಿಕೊಂಡು ಕಾರ್ಖಾನೆಯನ್ನು ಸ್ಥಾಪಿಸಿತು. ಇದರಲ್ಲಿ ಬಟ್ಟೆ ತಯಾರಿಕೆಗೆ ಬೇಕಾದ ದಾರದ ಕಚ್ಚಾವಸ್ತುವಾದ 'ಪಲ್ಪ್'ನ್ನು ಉತ್ಪಾದಿಸಲಾಗುತ್ತದೆ. ಇದರ ತಯಾರಿಕೆಗೆ ನೀಲಗಿರಿ ಕಟ್ಟಿಗೆ ಅವಶ್ಯಕವಾಗಿರುತ್ತದೆ. 'ಪಲ್ಪ್' ತಯಾರಿಕೆಯ ಹಂತದಲ್ಲಿ ಸಮೃದ್ಧ ನೀರಿನ ಪೂರೈಕೆ ಇರಬೇಕಾಗುತ್ತದೆ. ಇಲ್ಲಿ ತುಂಗಭದ್ರಾ ನದಿಯು ಈ ಅವಶ್ಯಕತೆಯನ್ನು ಪೂರೈಸುತ್ತದೆ. ಇಲ್ಲಿನ ಹರಿಹರದ ಫಾಲಿಫೈಬರ್ಸ್ ಮತ್ತು ಗ್ರಾಸಲಿನ್ ಎಂಬ ಎರಡೂ ಘಟಕಗಳಲ್ಲಿ ನಾಲ್ಕು ಸಾವಿರಕ್ಕೂ ಅಧಿಕ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.

*** ಸಕ್ಕರೆ ಕೈಗಾರಿಕೆ**

ತುಂಗಭದ್ರಾ ನದಿ ದಂಡೆಯ ಮೇಲೆ ಕಬ್ಬಿನ ಉತ್ಪಾದನೆಯು ಕೇಂದ್ರೀಕೃತವಾಗಿರುವುದರಿಂದ ಸಕ್ಕರೆ ಕೈಗಾರಿಕೆಗಳು ಸ್ಥಾಪಿತವಾಗಿವೆ. ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳಲ್ಲಿ ಸಾಕಷ್ಟು ಸಕ್ಕರೆ ಕಾರ್ಖಾನೆಗಳಿವೆ. ಬಳ್ಳಾರಿ ಜಿಲ್ಲೆಯ ತುಂಗಭದ್ರಾ ನದಿ ತೀರದಲ್ಲಿ ಹೊಸಪೇಟೆ, ಕಂಪ್ಲಿ, ಶಿರುಗುಪ್ಪ, ಮುನಿರಾಬಾದ್, ಗಂಗಾವತಿಗಳಲ್ಲಿ ಸಕ್ಕರೆ ಕಾರ್ಖಾನೆಗಳು ನಿರ್ಮಾಣಗೊಂಡು ಕರ್ನಾಟಕದಲ್ಲಿ ಸಕ್ಕರೆ ಉದ್ದಿಮೆ ಬೆಳೆಯಲು ಸಹಾಯಕವಾಗಿವೆ.

*** ತುಂಗಭದ್ರಾ ಉಕ್ಕಿನ ಕಾರ್ಖಾನೆ (ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್)**

'ತುಂಗಭದ್ರಾ ಉಕ್ಕಿನ ಕಾರ್ಖಾನೆಯು ೧೯೪೭ರಲ್ಲಿ ತುಂಗಭದ್ರಾ ಯೋಜನೆಯು ಕಾರ್ಯಗತಗೊಳ್ಳುವ ಜೊತೆ ಜೊತೆಗೆ ಯೋಜನೆಗೆ ಅವಶ್ಯವಿದ್ದ ವಿವಿಧ ಯಂತ್ರೋಪಕರಣಗಳ ಬಿಡಿ ಭಾಗಗಳನ್ನು ನಿರ್ಮಿಸಿ ಪೂರೈಸುವ ಸಲುವಾಗಿ ಯೋಜನೆಯ ಅಂಗ ಉದ್ದಿಮೆಯಾಗಿ, ವರ್ಕ್‌ಶಾಪ್ ಮಾದರಿಯಲ್ಲಿ ಅಸ್ತಿತ್ವಕ್ಕೆ ಬಂದಿತು. ಮುಂದೆ ಆಣೆಕಟ್ಟಿನ ತೂಬಿನ ಅವಶ್ಯಕತೆ ಒದಗಿಬಂದಾಗ ಅಂದಿನ ಮದ್ರಾಸ್ ಸರ್ಕಾರವು ಅದೇ ಸ್ಥಳದಲ್ಲಿ ಜರ್ಮನ್ ಯಂತ್ರೋಪಕರಣಗಳೊಂದಿಗೆ 'ಶಟರ್ ಮ್ಯಾನುಫ್ಯಾಕ್ಚರಿಂಗ್ - ಫ್ಯಾಕ್ಟರಿ' ಸ್ಥಾಪಿಸಿತು. ಇದು ೧೯೫೨ರಲ್ಲಿ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಜವಾಹಾರ್‌ಲಾಲ್ ನೆಹರೂ ಅವರಿಂದ ಉದ್ಘಾಟನೆಗೊಂಡಿತು. ೧೯೬೦ರಲ್ಲಿ ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಹಾಗೂ ಆಂಧ್ರ ಸರ್ಕಾರಗಳ ಪಾಲು ಬಂಡವಾಳದೊಂದಿಗೆ ಇದು ಪುನಃ ಸಂಘಟಿತವಾಯಿತು'' ಆಗ ''ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ಸ್' ಎಂಬ ಹೆಸರಾಯಿತು.

ಈ ಕಾರ್ಖಾನೆಯಿಂದ ತುಂಗಭದ್ರಾ ಯೋಜನೆಗೆ ಅವಶ್ಯಕವಾದ 'ಸ್ಟೀಲ್ ವೇ ಗೇಟ್', 'ಸ್ಲೈಸ್ ಗೇಟ್', ಕೆನಾಲ್ ಗೇಟ್ ನೀರು ಮೇಲಕ್ಕೆ ಚಿಮ್ಮಿಸುವ ಯಂತ್ರ, ಚಲಿಸುವ ಕ್ರೇನ್ ಮುಂತಾದ ಯಂತ್ರೋಪಕರಣಗಳನ್ನು ತಯಾರಿಸಿ ಪೂರೈಸುತ್ತಿದೆ. ಇತರೆಡೆಯ ನೀರಾವರಿ ಯೋಜನೆಗಳಿಗೂ ಇಲ್ಲಿ ಗೇಟ್‌ಗಳನ್ನು ತಯಾರಿಸಿ ಸರಬರಾಜು ಮಾಡಲಾಗುತ್ತಿದೆ.

*** ಹೊಸಪೇಟೆ ತಾಲೂಕು : ವ್ಯಾಸನಕೆರೆ ಮ್ಯಾಂಗನೀಸ್ ತಯಾರಿಕೆ**

ತುಂಗಭದ್ರಾ ನದಿ ಬಲದಂಡೆಯ ಮೇಲೆ ಈ ಕಾರ್ಖಾನೆಯು ಪ್ರಾರಂಭಗೊಂಡಿದೆ. ಈ ಪರಿಸರದಲ್ಲಿಯ ಕಬ್ಬಿಣದ ಅದಿರು. ಮಾನವ ಸಂಪನ್ಮೂಲ ಹಾಗೂ ತುಂಗಭದ್ರೆಯ ನೀರನ್ನು ಉಪಯೋಗಿಸಿಕೊಂಡು ಇಂದು ಬೃಹತ್ ಕೈಗಾರಿಕೆಯಾಗಿ ಬೆಳೆದು ನಿಂತಿದೆ. ಇದಕ್ಕೆ ಪೂರಕವಾಗಿ ಸಣ್ಣ ಕೈಗಾರಿಕೆಗಳು, ಸಾರಿಗೆ, ಶಾಲಾ ಕಾಲೇಜುಗಳು ಬೆಳೆದು ನಾಡಿನ ಅಭ್ಯುದಯಕ್ಕೆ ಸಹಕಾರಿಯಾಗಿದೆ. ಇದರ ಜೊತೆಗೆ ಹೊಸಪೇಟೆಯ ಸುತ್ತಮುತ್ತ ತಲೆಯೆತ್ತಿರುವ ಜಿಂದಾಲ್, ಮುಕುಂದ್, ಕಿರ್ಲೋಸ್ಕರ್, ಕಲ್ಯಾಣಿ, ಮುಂತಾದ ಬೃಹತ್ ಉಕ್ಕಿನ ಕಾರ್ಖಾನೆಗಳಿಗೆ ಹಾಗೂ ಅವಲಂಬಿಸಿದ ಸಣ್ಣಪುಟ್ಟ ಉದ್ದಿಮೆಗಳೂ ಸೇರಿದಂತೆ ಎಲ್ಲವೂ ನೀರನ್ನು ಅವಲಂಬಿಸಿದ ಉದ್ದಿಮೆಗಳಾಗಿರುವುದರಿಂದ ತುಂಗಭದ್ರಾ ನದಿಯಿಂದಲೇ ಸುಮಾರು ೧೦-೧೫ ಟಿ.ಎಂ.ಸಿ. ನೀರನ್ನು ಪಡೆಯುತ್ತಿವೆ.

ತುಂಗಭದ್ರಾ ಅಣೆಕಟ್ಟಿನಲ್ಲಿ ಹೂಳು ತುಂಬಿಕೊಂಡಿದ್ದು ರೈತರಿಗೆ ಸುಮಾರು ೪೦-೪೫ ಟಿ.ಎಂ.ಸಿ. ನೀರು ಕಡಿಮೆಯಾಗಿದೆ. ಇದುವರೆಗೂ ರೈತರ ಒತ್ತಡದಿಂದಾಗಲಿ, ನೀರಿನ ಸಂರಕ್ಷಣೆಯ ಹಿತದೃಷ್ಟಿಯಿಂದಾಗಲಿ ಸರ್ಕಾರ ಹೂಳು ತೆಗೆಸುವ ಬಗ್ಗೆ ಗಂಭೀರವಾಗಿ ಆಲೋಚನೆ ನಡೆಸಿಲ್ಲ. ಈ ನದಿ ಪರಿಸರದಲ್ಲಿಯ ಭೂಮಿಯಲ್ಲಿ ವರ್ಷದ ಎರಡನೇ ಬೆಳೆಗೆ ನೀರು ಇಲ್ಲದಂತಾಗಿ ರೈತರು ಭತ್ತದ ಬೆಳೆಯನ್ನು ನಿಲ್ಲಿಸಿದರೆ

ಕೂಲಿಕಾರರಿಗೆ ವಿಪರೀತ ತೊಂದರೆಯಾಗುತ್ತದೆ. ಈ ನದಿ ಪರಿಸರದ ತಾಲೂಕುಗಳಿಂದಲೂ ಜನರು ಗುಳೇ ಹೋಗುವುದು ಆರಂಭಗೊಳ್ಳುತ್ತದೆ. ತುಂಗಭದ್ರಾ ನದಿಯ ಮಹತ್ವದ ಬಗೆಗೆ ಮುಂದಿನ ಜನಾಂಗಕ್ಕೆ ತಿಳಿಯಪಡಿಸಬೇಕು. ಪಠ್ಯಗಳಲ್ಲಿ ನೀರಿನ ಬಗೆಗೆ, ನೀರಿನ ಸದ್ಬಳಕೆ. ಜವಾಬ್ದಾರಿ ಬಗೆಗಿನ ಮಾಹಿತಿಗಳನ್ನು ಅಳವಡಿಸಬೇಕು.

ತುಂಗಭದ್ರಾ ನದಿ ತೀರದಲ್ಲಿ ಪ್ರಸಿದ್ಧಿ ಧಾರ್ಮಿಕ ಕ್ಷೇತ್ರಗಳು. ದೇಗುಲಗಳು, ನಗರಗಳು, ಕೈಗಾರಿಕೆ, ಅರಣ್ಯಗಳಿವೆ. ಇವೆಲ್ಲವುಗಳಿಗೂ ತುಂಗಭದ್ರಾ ನದಿಯು ಆಸರೆಯಾಗಿದ್ದು, ಜನಜೀವನದ ಸಾವಯವ ಸಂಬಂಧದ ಬಗ್ಗೆ ಅರಿವು ಮೂಡಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಆ. ಉದ್ಯಮಗಳ ಕೊಡುಗೆ

*** ಮೀನಿನ ಉದ್ಯಮ**

ಕರ್ನಾಟಕ ಸಂಪನ್ಮೂಲಗಳಲ್ಲಿ ಮತ್ಸ್ಯ ಸಂಪನ್ಮೂಲವು ಪ್ರಮುಖವಾಗಿದೆ. ತುಂಗಭದ್ರಾ ಹಾಗೂ ಉಪನದಿಗಳು ಮೀನುಗಾರಿಕೆಗೆ ಸಹಾಯಕವಾಗಿವೆ. ಈ ನದಿಯ ಸಮೃದ್ಧ ಜಲ ಸಂಪನ್ಮೂಲ ಮೀನುಗಾರಿಕೆಯ ದೊಡ್ಡ ಉದ್ಯಮವನ್ನೇ ಅಭಿವೃದ್ಧಿಪಡಿಸಿದೆ. ಅಧ್ಯಯನಕಾರರು ಗುರುತಿಸುವಂತೆ ಈ ನದಿಯ ಪರಿಸರದಲ್ಲಿ ಹಲವು ಜಾತಿಯ ಮತ್ಸ್ಯ ಸಂಪತ್ತಿದೆ ಎಂದು ಅಧ್ಯಯನದಿಂದ ತಿಳಿದು ಬಂದಿದೆ.

ಮತ್ಸ್ಯ ಸಂಪನ್ಮೂಲವು ಮಾನವನಿಗೆ ಅಗತ್ಯವಾದ ಪ್ರಾಣಿಜನ್ಯ ಪೌಷ್ಟಿಕಾಂಶದ ಆಹಾರವನ್ನು ಒದಗಿಸುತ್ತದೆ. ವಿಟಮಿನ್ ಬಿ.ಸಿ, ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳನ್ನು ನೀಡುವ, ಪೌಷ್ಟಿಕತ್ವವನ್ನು ಹೊಂದುವ ಮೀನು ಉತ್ತಮ ಆಹಾರವೆನಿಸಿದೆ. ಮತ್ಸ್ಯ ಸಂಪತ್ತು ಸಮಾಜದ ಆರ್ಥಿಕ ಸ್ಥಿತಿಯನ್ನು ಪ್ರಭಾವಿಸಿದೆ. ಈ ಉದ್ಯಮದ ಆರ್ಥಿಕ ಸಂಪನ್ಮೂಲವಾಗಿ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸಿಕೊಟ್ಟಿದೆ. ಕೈಗಾರಿಕೆಗೆ ಬೇಕಾದ ಕಚ್ಚಾವಸ್ತುವನ್ನು ಒದಗಿಸಿವೆ. ಆರೋಗ್ಯವನ್ನು ಕಾಪಾಡುವಲ್ಲಿ ಔಷಧಿಯಾಗಿ ಬಳಕೆಯಾಗಿದೆ. ಇವು ರಸಗೊಬ್ಬರಗಳಲ್ಲಿಯೂ ಬಳಕೆಯಾಗುತ್ತವೆ. ಇತ್ತೀಚಿನ ದಿನಗಳಲ್ಲಿ ಮೀನಿನ ಎಣ್ಣೆಗೆ ಸಾಕಷ್ಟು ಬೇಡಿಕೆ ಇದೆ.

ತುಂಗಭದ್ರಾ ನದಿಯ ಹರಿಹರ, ಮದಲಗಟ್ಟೆ, ಹಂಪೆ, ಶಿರುಗುಪ್ಪಾ, ಇತ್ಯಾದಿ ಸ್ಥಳಗಳಲ್ಲಿ ಸಣ್ಣ ಹಾಗೂ ದೊಡ್ಡ ಉದ್ಯಮಗಳು ಬೆಳೆದು ನಿಂತಿವೆ. ಸ್ಥಳೀಯ ಮೀನುಗಾರರು ಈ ನದಿಯೊಡನೆ ಅವಿನಾಭಾವ ಸಂಬಂಧ ಹೊಂದಿದ್ದು, ನದಿ ತಟದಲ್ಲಿಯೇ ಹುಟ್ಟಿ ಬೆಳೆದವರಾದುದರಿಂದ ಅದರಲ್ಲಾಗುವ ಬದಲಾವಣೆಗಳು ತಕ್ಷಣ ಅವರಿಗೆ ಗೋಚರವಾಗುತ್ತವೆ.

ಆದರೆ ಮೀನುಗಾರರಲ್ಲಿ ನದಿಯ ದಂಡೆಯಲ್ಲಿ ವಿಸ್ತಾರಗೊಳ್ಳುತ್ತಿರುವ ನಗರಗಳ ಬಗೆಗೆ, ಅದರ ತ್ಯಾಜ್ಯ ವಸ್ತುಗಳ ಬಗ್ಗೆ ಗೊಂದಲ, ಆತಂಕಗಳು ಇಂದಿಗೂ ಕಂಡು ಬರುತ್ತವೆ. ಉದಾ : ಹರಿಹರದ

ಕಾರ್ಖಾನೆಗಳು ತುಂಗಭದ್ರಾ ನದಿಗೆ ತ್ಯಾಜ್ಯ ವಸ್ತುಗಳನ್ನು ಸೇರಿಸುತ್ತಿರುವುದು ಜ್ವಲಂತ ಸಮಸ್ಯೆಯಾಗಿದೆ. ಮೀನುಗಾರರಲ್ಲಿ ಭವಿಷ್ಯದ ಬಗೆಗೆ ಅತಂತ್ರತೆಯಿದ್ದರೂ ಸಹ ತುಂಗಭದ್ರಾ ನದಿಯು ಮೀನಿನ ಉದ್ಯಮಕ್ಕೆ ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದೆ.

*** ಮರಳು ಉದ್ಯಮ**

ತುಂಗಭದ್ರಾ ನದಿಯ ಪ್ರಾರಂಭದಿಂದ ಅಂತ್ಯದವರೆಗೆ ಸಾಕಷ್ಟು ಮರಳಿನ ಉದ್ಯಮಗಳು ಬೆಳೆಯುವುದಕ್ಕೆ ಈ ನದಿಯು ಸಹಕಾರಿಯಾಗಿದೆ. ಈ ಉದ್ಯಮದಿಂದ ದಿನನಿತ್ಯವೂ ದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ. ಇಂದು ಅಕ್ರಮವಾಗಿ ಮರಳು ಉದ್ಯಮ ನಡೆಯುತ್ತಿದೆ. ಇದರಿಂದಾಗಿ ಒಟ್ಟು ನದಿ ಪರಿಸರದ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುತ್ತಿದೆ. ಈ ಬಗ್ಗೆ ಸರ್ಕಾರ ಮೌನವಾಗಿರುವುದು ವಿಪರ್ಯಾಸ.

*** ಪ್ರವಾಸೋದ್ಯಮ**

ತುಂಗಭದ್ರಾ ನದಿ ಹಾಗೂ ಈ ಪರಿಸರದಲ್ಲಿಯ ಕುರುವತ್ತಿ, ಮೈಲಾರ, ಹಂಪಿಯಂತಹ ಪ್ರಸಿದ್ಧ ತಾಣಗಳು ಸಹಜವಾಗಿಯೇ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಇದರಿಂದ ಪ್ರವಾಸೋದ್ಯಮವು ಬೆಳೆಯಲು ಸಹಾಯಕಾರಿಯಾಗಿದೆ. ಹಂಪಿಯ ಸುಂದರ ಪರಿಸರ, ತುಂಗಭದ್ರೆಯು ತುಂಬಿ ತುಳುಕುವಾಗ ಉಕ್ಕೇರುವ ಸಮುದ್ರದಂತೆ ಕಾಣುವುದು. ಒಂದು ದೊಡ್ಡ ಪ್ರವಾಸಿ ಆಕರ್ಷಣೆಯೇ ಎನ್ನಬಹುದು. ಜಲಾಶಯದಲ್ಲಿ ವಿಹರಿಸಲು ರಾಜ್ಯ ಪ್ರವಾಸೋದ್ಯಮ ಇಲಾಖೆಯು ಮೋಟಾರ್ ದೋಣಿಗಳನ್ನು ವ್ಯವಸ್ಥೆ ಮಾಡಿದೆ. ನಾಲೆಗಳಿಂದ ಮಾಡಿರುವ ಮಡುಗಳಲ್ಲಿ ಗಾಳ ಹಾಕಿ ಮೀನು ಹಿಡಿಯುವ ಹವ್ಯಾಸಿಗಳಿಗೆ ಬೇಕಾದ ಸೌಕರ್ಯಗಳೂ ಇಲ್ಲಿ ಲಭ್ಯವಾಗುತ್ತವೆ.

ಮಹಿಳೆಯರು, ಮಕ್ಕಳೊಡನೆ ವಿಹರಿಸಲು ಅಂದವಾದ ಜಪಾನ್ ಮಾದರಿಯ ಬೃಹತ್ ಉದ್ಯಾನವು ಕೈಬೀಸಿ ಕರೆಯುತ್ತದೆ. ಪ್ರವಾಸಿಗರ ವಾಸ್ತವ್ಯಕ್ಕೆ ಪ್ರವಾಸೋದ್ಯಮ ಇಲಾಖೆಯ ಹೋಟೆಲ್ 'ಮಯೂರ ವಿಜಯನಗರ' ಸಿದ್ಧವಾಗಿದೆ. ಜೊತೆಗೆ ತುಂಗಭದ್ರಾ ಮಂಡಳಿಯ ಅಥಿತಿ ಗೃಹಗಳಾದ 'ವೈಕುಂಠ' ಮತ್ತು 'ಇಂದ್ರಭವನ'ಗಳೂ ಪ್ರವಾಸಿಗಳಿಗೆ ಲಭ್ಯ. ಇಲ್ಲಿಂದ ಜಲಾಶಯದ ನಯನ ಮನೋಹರ ದೃಶ್ಯವನ್ನು ಕಾಣುವುದೇ ಕಣ್ಣಿಗೆ ಹಬ್ಬವೆನ್ನಬಹುದು. ತುಂಗಭದ್ರಾ ನದಿ ಪರಿಸರವು ಸೊಬಗಿನ, ಮೋಜಿನ ತಾಣವಾಗಿರದೆ, ಜ್ಞಾನೋದಯವಾದ, ಜ್ಞಾನೋದಯಗಳಾಗುವ ಸಾಧ್ಯತೆಯಿಂದ ಈ ನದಿ ಪರಿಸರವನ್ನು ಬಳಸಿಕೊಳ್ಳಬಹುದಾಗಿದೆ.

'ಹಂಪಿ' ಯುನೆಸ್ಕೋದ ಪಟ್ಟಿಯಲ್ಲಿ ಇರುವುದು ಗಮನಾರ್ಹ. ಹಾಗಾಗಿ ಜಗತ್ತಿನ ಗಮನ ಸೆಳೆಯಲು ಕಾರಣವಾಗಿದೆ. ಜಗತ್ತಿನ ಪ್ರಮುಖ ಪ್ರವಾಸಿ ತಾಣಗಳಲ್ಲಿ ಹಂಪಿಗೆ ವಿಶೇಷ ಸ್ಥಾನವಿದೆ.

ಇಂತಹ ಹಂಪಿ ತುಂಗಭದ್ರ ತಟದಲ್ಲಿರುವುದು ವರಪ್ರಸಾದವೂ ಹೌದು. ಹಂಪಿಯು ಕರ್ನಾಟಕ ಪ್ರವಾಸೋದ್ಯಮದಲ್ಲಿಯೂ ಪ್ರಮುಖ ಸ್ಥಳವಾಗಿದೆ. ಇಲ್ಲಿಯ ಅಭಿವೃದ್ಧಿಗಾಗಿ ಯುನೆಸ್ಕೊ ಕೋಟಿಗಟ್ಟಲೆ ಹಣ ಬಿಡುಗಡೆ ಮಾಡುತ್ತಿದೆ. ಆದರೆ ಅದರ ಸಮರ್ಪಕ ಬಳಕೆ ಆಗದೆ ಇರುವುದು ವಿಷಾದನೀಯ. ಪ್ರವಾಸಿಗರನ್ನು ಸೆಳೆಯಲು ಕರ್ನಾಟಕ ಸರ್ಕಾರ ಪ್ರತಿ ನವೆಂಬರ್‌ನಲ್ಲಿ ನಡೆಸುವ 'ಹಂಪಿ ಉತ್ಸವ'ವೂ ಪ್ರಮುಖ ಬೆಳವಣಿಗೆಯಾಗಿದೆ.

* ಜಲವಿದ್ಯುತ್ ಯೋಜನೆ

ತುಂಗಭದ್ರಾ ಯೋಜನೆಯು ನೀರಾವರಿಗಾಗಿಯೇ ಅಲ್ಲದೆ ವಿದ್ಯುತ್ ಉತ್ಪಾದನೆ ಹಾಗೂ ಇತರ ಉಪಯೋಗಗಳಿಗೆ ಸಹಾಯಕಾರಿಯಾಗಿದೆ. ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲವಾದ ಜಲಶಕ್ತಿಯು ಪ್ರಾದೇಶಿಕ, ರಾಜ್ಯ, ರಾಷ್ಟ್ರದ ಆರ್ಥಿಕ, ಸಾಮಾಜಿಕ, ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದೆ. ತುಂಗಭದ್ರಾ ನದಿಯ ಸಂಪನ್ಮೂಲವು ವಿದ್ಯುಚ್ಛಕ್ತಿ ಉತ್ಪಾದನೆಗೂ ಬಳಕೆಯಾಗಿದೆ. ಹೊಸಪೇಟೆಯ ತುಂಗಭದ್ರಾ ಜಲವಿದ್ಯುತ್ ಕೇಂದ್ರ ಕರ್ನಾಟಕ ಜಲವಿದ್ಯುತ್ ಕ್ಷೇತ್ರಕ್ಕೆ ಗಣನೀಯ ಕೊಡುಗೆಯನ್ನು ನೀಡಿದೆ.

ತುಂಗಭದ್ರಾ ಜಲವಿದ್ಯುತ್ ಯೋಜನೆಯಲ್ಲಿ ವಿದ್ಯುತ್ ಉತ್ಪಾದನೆಯ ಮೂರು ಘಟಕಗಳಿವೆ. ಮೊದಲನೆಯದು ಆಣೆಕಟ್ಟಿನ ಬುಡದಲ್ಲಿ, ಬಲದಂಡೆಯ ಮೇಲಿದ್ದು ೬೬ ಮೆಗಾವ್ಯಾಟ್ ಸಾಮರ್ಥ್ಯವನ್ನು ಹೊಂದಿದೆ. ಎರಡನೆಯದು ಆಣೆಕಟ್ಟಿನ ಬುಡದಲ್ಲಿ ಎಡದಂಡೆಯ ಮೇಲಿದ್ದು ೨೭ ಮೆಗಾವ್ಯಾಟ್ ಸಾಮರ್ಥ್ಯ ಹೊಂದಿದೆ. ಮೂರನೆಯದು ಹಂಪಿಯ ಸಮೀಪ ಪವರ್ ಕಾರ್ಖಾನೆಯಿಂದ ೨೨ ಕಿ.ಮೀ. ದೂರದಲ್ಲಿದ್ದು ೬೬ ಮೆಗಾವ್ಯಾಟ್ ಸಾಮರ್ಥ್ಯ ಹೊಂದಿದೆ. ಎಡದಂಡೆಯಲ್ಲಿರುವ ಘಟಕವು ಕರ್ನಾಟಕ ಸರ್ಕಾರದ ವಿದ್ಯುತ್ ನಿಗಮ ನಿಯಮಿತದ ನಿರ್ವಹಣೆಗೆ ಒಳಪಟ್ಟಿದೆ. ತುಂಗಭದ್ರಾ ಬೋರ್ಡ್ ಬಲದಂಡೆಯ ಮೇಲಿನ ಎರಡು ಘಟಕಗಳ ನಿರ್ವಹಣೆಯನ್ನು ನಿರ್ವಹಿಸುತ್ತಿದೆ.

ತುಂಗಭದ್ರಾ ಆಣೆಕಟ್ಟು ನಾಡಿನ ನೀರಾವರಿ ಕ್ಷೇತ್ರಕ್ಕೆ ಸಹಾಯಕಾರಿಯಾಗಿರುವುದಲ್ಲದೆ ರಾಜ್ಯದ ವಿದ್ಯುತ್ ಕ್ಷೇತ್ರಕ್ಕೆ ತುಂಗಭದ್ರಾ ನದಿ ಪರಿಸರದ ವಿದ್ಯುತ್ ಯೋಜನೆಗಳು ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್‌ನ್ನು ಉತ್ಪಾದಿಸಿ, ಕನ್ನಡ ನಾಡಿನ ಜನತೆಗೆ ಉಪಕರಿಸಿವೆ.

೩. ಸಾಂಸ್ಕೃತಿಕ ಕೊಡುಗೆಗಳು

* ಸಂತೆ

ಕರ್ನಾಟಕವು ಹಳ್ಳಿಗಳಿಂದ ಕೂಡಿದ ಪ್ರದೇಶವಾಗಿದೆ. ಹಳ್ಳಿಯ ಜನರ ದಿನನಿತ್ಯದ ಬದುಕು ಹಾಗೂ ಚಟುವಟಿಕೆಗಳಿಗಾಗಿ ನಿಗದಿತ ಸ್ಥಳದಲ್ಲಿ ವ್ಯಾಪಾರ ವಹಿವಾಟಿಗೋಸ್ಕರ, ಕೊಡುಕೊಳ್ಳುವಿಕೆಗೋಸ್ಕರ

ವಾರಕ್ಕೊಮ್ಮೆ ಸೇರುವ ಜನಜಂಗುಳಿಯೇ ಸಂತೆಯಾಗಿದೆ. ಈ ಸಂತೆಯಲ್ಲಿ ಜನರು ತಮ್ಮ ಜೀವನಾವಶ್ಯಕ ಪದಾರ್ಥಗಳಾದ ಹಣ್ಣು, ತರಕಾರಿ, ಮರದ ಸಾಮಾನುಗಳು, ಕುರಿ, ಕೋಳಿ, ದನಕರು ಇತ್ಯಾದಿ ಅಂಶಗಳು ವಾರಕ್ಕೊಮ್ಮೆ ವಿನಿಯಮವಾಗುತ್ತವೆ. ಕುರುವತ್ತಿ ಹಾಗೂ ಮೈಲಾರವನ್ನು ಹೊಂದಿಸಿ ಹೇಳುವುದಾದರೆ, ವಾರದಲ್ಲಿಯ ಪ್ರತಿ ಬುಧವಾರ ಸಂತೆಯು ನಡೆಯುತ್ತಿದ್ದು, ಈ ಸಂತೆಯಲ್ಲಿ ಜಾತಿ, ಮತ, ಭೇದವಿಲ್ಲದೆ ತಮ್ಮ ಬದುಕಿಗೆ ಬೇಕಾದ ಪದಾರ್ಥಗಳನ್ನು ಕೊಂಡುಕೊಳ್ಳುವುದು ವಾಡಿಕೆಯಾಗಿದೆ.

ವಿಜಯನಗರ ಅರಸರ ಕಾಲದಲ್ಲಿಯೂ ಕೂಡ ವಿಶೇಷವಾಗಿ ಸಂತೆ ನಡೆಯುತ್ತಿದ್ದಿತು. ಈ ಸಂತೆಯಲ್ಲಿ ದಿನನಿತ್ಯದ ಪದಾರ್ಥಗಳ ಜೊತೆಗೆ ಮುತ್ತುರತ್ನದ ವಹಿವಾಟು ನಡೆಯುತ್ತಿತ್ತೆಂದೂ ಸಾಕಷ್ಟು ಪುರಾವೆಗಳಿವೆ. ಒಟ್ಟಿನಲ್ಲಿ ಸಂತೆಯು ಆ ಪರಿಸರದಲ್ಲಿಯ ಜನರೊಂದಿಗೆ ಹಾಸುಹೊಕ್ಕಾಗಿ ಬೆರೆತು. ಒಂದು ಸಾಂಸ್ಕೃತಿಕ ಹಾಗೂ ಸಮನ್ವಯದ ವಾತಾವರಣ ನಿರ್ಮಾಣಗೊಳಿಸುವುದರಲ್ಲಿ ವಿಶಿಷ್ಟ ಪಾತ್ರವನ್ನು ವಹಿಸುತ್ತದೆ.

* ಹಬ್ಬಗಳು

ತುಂಗಭದ್ರಾ ನದಿಯು ಸಾಗಿದೆಡೆಯೆಲ್ಲಾ ಉಗಮದಿಂದ ಸಂಗಮದತನಕದ ಪ್ರದೇಶದಲ್ಲಿ ನೆಲೆಗೊಂಡ ವಿವಿಧ ಕ್ಷೇತ್ರದಲ್ಲಿ ವರ್ಷದ ಬಹುಭಾಗದಲ್ಲಿ ಒಂದಲ್ಲ ಒಂದು ರೀತಿಯ ಹಬ್ಬ-ದೇವತಾರಾಧನೆ, ವಿಜೃಂಭಣೆಯ ಉತ್ಸವಗಳು ನಡೆಯುತ್ತಲೇ ಇರುತ್ತವೆ. ತುಂಗಭದ್ರಾ ನದಿ ಪರಿಸರದಲ್ಲಿಯ ಧಾರ್ಮಿಕ ಕ್ಷೇತ್ರದಲ್ಲಿ ಅನೇಕ ರೀತಿಯ ಹಬ್ಬ ಹರಿದಿನಗಳು ಪ್ರಚಲಿತದಲ್ಲಿರುವುದನ್ನು ಕಾಣಬಹುದಾಗಿದೆ. ಎಲ್ಲಾ ಹಬ್ಬಗಳಿಗೂ ಸಾಮಾನ್ಯವಾಗಿ ಒಂದಿಲ್ಲೊಂದು ಐತಿಹ್ಯವಿರುತ್ತದೆ. ಹಬ್ಬವನ್ನು ಸಾಮೂಹಿಕವಾಗಿ ಮನೆಗಳಲ್ಲಿ ಪ್ರತ್ಯೇಕವಾಗಿ ಆಚರಿಸಿ ಸಂತುಷ್ಟಿಗಳಾಗುತ್ತಾರೆ. ಈ ಭಾಗದಲ್ಲಿ ವ್ಯವಸಾಯ ಸಂಬಂಧೀ ಹಬ್ಬಗಳು ನಡೆಯುತ್ತವೆ. ಯುಗಾದಿ ಹಬ್ಬ, ಬಸವನ ಹಬ್ಬ, ನಾಗರಪಂಚಮಿ, ಕಾರಹಬ್ಬ, ಹಟ್ಟಿ ಹಬ್ಬ, ಇತ್ಯಾದಿ ಹಬ್ಬಗಳು ಅಪ್ಪಟ ಜನಪದೀಯವಾದ ವ್ಯವಸಾಯ ಸಂಬಂಧಿಯಾದ ಹಬ್ಬಗಳಾಗಿವೆ.

ಹಬ್ಬಗಳು ಜನಸಾಮಾನ್ಯರ ಬದುಕಿಗೆ ಸ್ಫೂರ್ತಿಯಾಗಿವೆ. ಅಂತೆಯೇ ಕ್ರಿಯಾಶೀಲರನ್ನಾಗಿ ಮಾಡುವಲ್ಲಿ ಹಬ್ಬಗಳ ಪಾತ್ರವು ತುಂಬಾ ಮಹತ್ವದ್ದಾಗಿದೆ. "ವಿಜಯನಗರದಲ್ಲಿ ವರ್ಷದಲ್ಲಿ ಮೂರು ದೊಡ್ಡ ಹಬ್ಬಗಳನ್ನು ಆಚರಿಸುತ್ತಿದ್ದರು. ಒಂದು ಹಬ್ಬದಲ್ಲಿ ಸ್ತ್ರೀ-ಪುರುಷರಾದಿಯಾಗಿ ನದಿ ಅಥವಾ ಸಮುದ್ರದಲ್ಲಿ ಸ್ನಾನಮಾಡಿ ಹೊಸ ಬಟ್ಟೆಗಳನ್ನು ಉಟ್ಟು ಮೂರು ದಿವಸ ನೃತ್ಯ, ಗಾಯನ ಮತ್ತು ಭೋಜನದಲ್ಲಿ ಕಳೆಯುತ್ತಾರೆ. ಇದು ಕನ್ನಡಿಗರ ಯುಗಾದಿಯಿರಬೇಕು. ಡೊಮಿಂಗೊ ಫಯಾಸ್‌ನು ಈ ಹಬ್ಬ ಅಕ್ಟೋಬರ್ ೧ಂನೇ ತಾರೀಖಿನಂದು ನಡೆಯುತ್ತದೆಂದು ಹೇಳುತ್ತಾನೆ."[೬]

"ಇನ್ನೊಂದು ಹಬ್ಬದಲ್ಲಿ ದೇವಸ್ಥಾನಗಳಲ್ಲಿಯೂ ಮನೆಯ ಮೇಲ್ಛಾವಣಿಯ ಮೇಲೆ ಹಗಲೂ ರಾತ್ರಿ 'ನುಸಿಮನ್ನಿ' ಎಣ್ಣೆಯ ಅಸಂಖ್ಯಾತ ದೀಪಗಳನ್ನು ಉರಿಸುತ್ತಾರೆ. ಬಹುಶಃ ದೀಪಾವಳಿ

ಹಬ್ಬವಿರಬಹುದೆಂದು ಹೇಳಬಹುದು. ಇನ್ನೊಂದು ಒಂಭತ್ತು ದಿನಗಳ ಹಬ್ಬ ಈ ಹಬ್ಬದಲ್ಲಿ ದೊಡ್ಡ ಬೀದಿಗಳಲ್ಲಿ ಹಡಗಿನ ಪಟಸ್ತಂಭದಂತಹ ಸ್ತಂಭವನ್ನು ನೆಟ್ಟು ಬಹು ಸುಂದರವಾದ ಜರತಾರೀ ಬಟ್ಟೆಯ ಚೂರುಗಳನ್ನು ಮೇಲ್ಗಡೆ ಸಿಕ್ಕಿಸುತ್ತಾರೆ. ಸ್ತಂಭದ ತುದಿಯಲ್ಲಿ ದಿನವೂ ದೇವರಲ್ಲಿ ಅಪಾರವಾದ ಭಕ್ತಿಯುಳ್ಳ ಮತ್ತು ಎಂತಹ ಕಷ್ಟವನ್ನಾದರೂ ಸ್ಥಿರ ಮನಸ್ಸಿನಿಂದ ಸಹಿಸಬಲ್ಲ ಒಬ್ಬನನ್ನು ಕುಳ್ಳಿರಿಸುತ್ತಾರೆ. ಇವನ ಕಡೆಗೆ ಕಿತ್ತಾಳೆ, ಬಾಳೆ, ನಿಂಬೆ, ಮುಂತಾದ ಮುಂತಾದ ಹಣ್ಣುಗಳನ್ನು ಎಸೆಯುತ್ತಾರೆ. ಬಹುಶಃ ಇದು ನವರಾತ್ರಿ ಹಬ್ಬವಿರಬಹುದು.

ಇದಲ್ಲದೆ ಮೂರು ದಿನಗಳ ಹಬ್ಬವೊಂದಿದೆ. "ಈ ಹಬ್ಬದಲ್ಲಿ ಎಲ್ಲರ ಮೇಲೂ ರಾಜರಾಣಿಯರನ್ನೂ ಬಿಡದೆ ಓಕಳಿ ನೀರನ್ನು ಎರಚುತ್ತಾರೆ. ಈ ಓಕಳಿ ನೀರನ್ನು ಈ ಉದ್ದೇಶಕ್ಕಾಗಿಯೇ ವಿಜಯನಗರದಲ್ಲಿಯ ರಸ್ತೆಗಳ ಪಕ್ಕದಲ್ಲಿ ಇಟ್ಟಿರುತ್ತಾರೆ. ಓಕಳಿ ಎರಚಿದರೂ ಎಲ್ಲರೂ ನಗುನಗುತ್ತಲೇ ಇರುತ್ತಾರೆ"[೨] (ವಿವೇಕ ರೈ., ಪ್ರವಾಸಿ ಕಂಡ ವಿಜಯನಗರ, ಪು. ೫). ಇದು 'ಹೋಳಿ ಹಬ್ಬ'ವಿರಬಹುದೆಂದು ಕಾಣುತ್ತದೆ. ಹಂಪಿಯಲ್ಲಿ ಬೇರೆ ಬೇರೆ ರೀತಿಯ ಕಾಲಾನುಸಾರವಾಗಿ ಬರುವ ಆಚರಣೆಗಳಿವೆ. ಪ್ರಸ್ತುತ ಅಧ್ಯಯನಕ್ಕೆ ಪ್ರಮುಖವಾದ ಕೆಲವು ಈ ಕೆಳಗಿನಂತಿವೆ.

ಮೊಹರಂ ಹಬ್ಬ ಅಥವಾ ಪೀರಲ ಹಬ್ಬ

ವಿಜಯನಗರ ಸಂಸ್ಥಾನವು ಮುಸ್ಲಿಂರ ಆಕ್ರಮಣದಿಂದ ನಾಶವಾಯಿತು ಎಂದು ಇತಿಹಾಸ ಹೇಳುತ್ತದೆ. ಲಿಖಿತ ಇತಿಹಾಸದ ಈ ನಿಲುವಿಗೆ ಜನಪದ ಸಾಹಿತ್ಯ ಹೇಗೆ ಪ್ರತಿಕ್ರಿಯಿಸಿದೆ ಎಂದು ಅವಲೋಕಿಸಿದಾಗ ಭಿನ್ನ ಚರಿತ್ರೆಯೇ ದೊರಕುತ್ತದೆ. ಹಂಪಿಯ ಪರಿಸರದಲ್ಲಿ ಹಿಂದೂ ಮುಸ್ಲಿಂ ಸಾಮರಸ್ಯ ತಾನೇ ತಾನಾಗಿ ಕ್ರಿಯಾಶೀಲವಾಗಿದೆ. ಜನಪದರಲ್ಲಿ ಸಾಮರಸ್ಯದ ಬಗೆಗೆ ಅನೇಕ ನಂಬಿಕೆ ಮತ್ತು ಆಚರಣೆಗಳಿವೆ. ಮೊಹರಂ ಅಥವಾ ಪೀರಲ ಹಬ್ಬವು ಹಂಪಿ ಪರಿಸರದಲ್ಲಿ ಪ್ರಚಲಿತದಲ್ಲಿರುವ ಹಿಂದೂ-ಮುಸ್ಲಿಂ ಸಾಮರಸ್ಯಕ್ಕೆ ಒಳ್ಳೆಯ ಉದಾಹರಣೆಯಾಗಿದೆ.

ಮುಸಲ್ಮಾನರ ಕಾಲದ ಕಲ್ಪನೆಯಲ್ಲಿ ಮೊಹರಂ ಮೊದಲ ತಿಂಗಳಿನ ಹೆಸರು. ಈ ತಿಂಗಳಲ್ಲಿ ನಡೆಯುವ ಹಬ್ಬವಾದುದರಿಂದ ಇದಕ್ಕೆ ಮೊಹರಂ ಹಬ್ಬ ಎಂಬ ಹೆಸರು ಬಂತೆಂದು ಹೇಳಲಾಗಿದೆ. ಇದರ ಜೊತೆಗೆ ಈ ಹಬ್ಬಕ್ಕೆ ಅಲಾವಿ ಹಬ್ಬ, ಪೀರ್ಲಹಬ್ಬ, ರಮಾಲಪ್ಪನ ಹಬ್ಬ, ಅಲ್ಲಾಸಾಬ, ಅಲಾಯಪ್ಪ ಬಾಬಯ್ಯನ ಹಬ್ಬ ಎಂಬಿತ್ಯಾದಿ ಹೆಸರುಗಳೂ ಹಂಪಿಯ ಪರಿಸರದಲ್ಲಿ ಪ್ರಚಲಿತದಲ್ಲಿವೆ.

ಈ ಮೊಹರಂ ದೇವರ ಆಚರಣೆಯಲ್ಲಿ ದಲಿತರು, ಬೇಡರು, ಅಗಸರು, ಆಯಗಾರರು ಹೆಚ್ಚು ಸಕ್ರಿಯವಾಗಿ ಭಾಗವಹಿಸುತ್ತಾರೆ. ಇವರೆಲ್ಲ ಹುಲಿವೇಷ ಧರಿಸಿ, ಮನೆ ಮನೆ ತಿರುಗಿ, ಹಣ-ದವಸ-ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಪೀರ್ಲ ದೇವರಿಗೆ ಹರಕೆ ಒಪ್ಪಿಸುವರು. ಹಲಿಗೆ ಬಡಿಯುತ್ತ ಹುಸೇನರ ಸ್ಮರಣೆ ಮಾಡುತ್ತಾರೆ. ಹೊಳೆ ಬದಿಯಲ್ಲಿ ಮಾಡುವ ಆಚರಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.

ದೇವರು ನೀರಿಗೆ ಬೀಳುವ ಕೊನೆ ದಿನದ ಆಚರಣೆಯಲ್ಲಿ ನದಿ ಪ್ರದೇಶ ಪ್ರಮುಖವಾಗಿದೆ. ಹೀಗಾಗಿ ತುಂಗಭದ್ರ ನದಿ ಪ್ರದೇಶ ಹಿಂದು ಮುಸ್ಲಿಂ ಭಾವೈಕ್ಯತೆಗೆ ನಾಂದಿಯಾಗಿದೆ. ಹೀಗೆ ಹಂಪಿ ಪರಿಸರದ ಮೊಹರಂ ಹಬ್ಬವು ಹಿಂದು-ಮುಸ್ಲಿಂರ ಭಾವೈಕ್ಯತೆಯನ್ನು ಸೊಗಸಾಗಿ ಪ್ರತಿನಿಧಿಸುತ್ತದೆ.

ಹೋಳಿ ಹುಣ್ಣಿಮೆ

ವಿಜಯನಗರದ ಜನಸಾಮಾನ್ಯರಲ್ಲಿ ಕಾಮನ ಹಬ್ಬಕ್ಕೆ ಸಂಬಂಧಿಸಿದಂತೆ ಅನೇಕ ಕತೆಗಳು ಇವೆ. ಇದಕ್ಕೆ ಹೋಳಿ ಹಬ್ಬವೆಂತಲೂ, ಹೋಳಿ ಹುಣ್ಣಿಮೆ ಎಂಬ ಪರ್ಯಾಯ ಹೆಸರುಗಳಿವೆ. ಕಾಮನ ಹುಣ್ಣಿಮೆಯ ದಿನದಂದು ಮಕ್ಕಳೆಲ್ಲ ಒಟ್ಟು ಸೇರಿ, ಹಲಗೆಯನ್ನು ಬಾರಿಸುತ್ತ ಓಣಿ ಓಣಿ ಸುತ್ತುತ್ತಾರೆ. 'ಹೊಯ್ಕಂಡ ಬಾಯಿಗೆ ಹೋಳಿಗೆ ತುಪ್ಪ' ಎಂಬ ಮಾತನ್ನಾಡುತ್ತಾ ಅಶ್ಲೀಲವಾಗಿ ಬೈದಾಡುತ್ತ ಇಡೀ ಊರು ಸುತ್ತುತ್ತಾರೆ. ಊರ ಗೌಡರ ಮನೆಯ ಮುಂದೆ ನಿಂತು ಇನ್ನಷ್ಟು ಅಶ್ಲೀಲವಾಗಿ ಬೈಯ್ಯುತ್ತಾರೆ. ಬೇರೆ ಬೇರೆ ಜನಗಳ ಅನೈತಿಕ ಸಂಬಂಧದ ಬಗ್ಗೆ ಗಟ್ಟಿಯಾಗಿ ಕೂಗಿ ಹೇಳುತ್ತಾರೆ. ಇಂಥ ಬೈಗುಳಗಳಿಗೆ ಯಾರೂ ಪ್ರತಿ ನುಡಿಯುವುದಿಲ್ಲ. ಕೊನೆಗೆ ಕಟ್ಟಿಗೆ ಸೇರಿಸಿ, ಬೆಂಕಿ ಹಚ್ಚಿ ಕುಣಿದು, ಬಣ್ಣದ ನೀರೆರಚಿ ಸಂಭ್ರಮಿಸುತ್ತಾರೆ. ಮಕ್ಕಳು ಸುಟ್ಟ ಕಟ್ಟಿಗೆಯ ಬೂದಿಯನ್ನು ಕಬ್ಬಿನ ಹೊಲಕ್ಕೆ ಸಿಂಪಡಿಸಿದರೆ, ಕಬ್ಬು ಫಲವತ್ತಾಗಿ ಬೆಳೆಯುತ್ತದೆ ಎಂಬ ನಂಬಿಕೆ ಹಂಪಿಯ ಪರಿಸರದಲ್ಲಿ ಸಾರ್ವತ್ರಿಕವಾಗಿದೆ.

ಬನ್ನಿ ಹಬ್ಬ

ವಿಜಯನಗರ ಅರಸರ ಆಳ್ವಿಕೆಯ ಕಾಲಘಟ್ಟದಲ್ಲಿ ಬನ್ನಿ ಹಬ್ಬವು ವೈಭವದ ಉತ್ತುಂಗಕ್ಕೇರಿದೆ. ಈ ಹಬ್ಬವನ್ನು ನವರಾತ್ರಿ, ನವಮಿಹಬ್ಬ, ದಸರಾಹಬ್ಬ, ನಾಡಹಬ್ಬ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಹಂಪಿಯಲ್ಲಿರುವ ಮಹಾನವಮಿದಿಬ್ಬ ಮತ್ತು ಕಲ್ಲುಮಂಟಪಗಳಲ್ಲಿ ಬನ್ನಿ ಹಬ್ಬವನ್ನು ವೈಭವದಿಂದ ಆಚರಿಸಲಾಗುತ್ತದೆ. ಈ ಹಬ್ಬವನ್ನು ನೋಡಲು ನೆರೆಯ ರಾಜ್ಯದ ದೊರೆಗಳು, ಬೇರೆ ದೇಶದ ಅರಸರುಗಳು ಬರುತ್ತಿದ್ದರು ಎಂದು ಜನ ನಂಬುತ್ತಾರೆ. ಬಂದವರಿಗೆ ಬನ್ನಿ ಮುಟ್ಟಿಸುವ ಕೆಲಸ ನಡೆಯುತ್ತಿತ್ತಂತೆ. ಹಂಪಿ ಪರಿಸರದಾದ್ಯಂತ ಬನ್ನಿಯಮ್ಮ, ಬನ್ನಿ ಕಾಳಮ್ಮ, ಬನ್ನಿ ಮಾಕಾಳಿ ಇತ್ಯಾದಿ ಹೆಸರುಗಳಿರುವ ಬನ್ನಿಮರದ ಕಟ್ಟೆಗಳಿವೆ. ಕೆಲವಡೆಗಳಲ್ಲಿ ಬನ್ನಿ ಮರಕ್ಕೆ ಹಸಿರು ಬಳೆತೊಡಿಸಿ, ಹೊಸ ಸೀರೆ ಉಡಿಸುವ ಸಂಪ್ರದಾಯವಿದೆ.

ಈ ಮೇಲೆ ಹೇಳಿದ ಪ್ರಮುಖ ಹಬ್ಬಗಳಲ್ಲದೆ ಇತರ ಅನೇಕ ಜನಪದ ಹಬ್ಬಗಳು ಹಂಪಿ ಪರಿಸರದಲ್ಲಿ ನಡೆಯುತ್ತವೆ. ನವರಾತ್ರಿ ಆಚರಣೆಯ ಅನಂತರ ಭರಮದೇವನನ್ನು ಪೂಜಿಸುವ ಹಟ್ಟಿ ಹಬ್ಬ ನಡೆಯುತ್ತದೆ. ಆ ದಿನ ಗೋವುಗಳನ್ನು ಸಿಂಗರಿಸುತ್ತಾರೆ. ಹೊಸ ವರ್ಷದ ಆರಂಭ ದಿನ 'ಬೇವಿನ ಹಬ್ಬ' ಅಥವಾ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ. ಇತ್ಯಾದಿ ಹಬ್ಬಗಳನ್ನು ಹಂಪಿ ಪರಿಸರದಲ್ಲಿ ಇಂದಿಗೂ ಆಚರಣೆಗೊಳ್ಳುತ್ತಿವೆ.

ವಿಜಯನಗರ ಅರಸರ ಕಾಲದಲ್ಲಿ ದಸರಾ, ದೀಪಾವಳಿ ಮತ್ತು ಹೋಳಿ ಹಬ್ಬಗಳನ್ನು ಸಾರ್ವಜನಿಕವಾಗಿ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ದಸರಾ ಹಬ್ಬವನ್ನು ವಿಜಯನಗರದ ಅರಸರು ರಾಷ್ಟ್ರೀಯ ಹಬ್ಬವೆಂದು ಆಚರಿಸುತ್ತಿದ್ದರು. ಈ ಮೇಲ್ಕಾಣಿಸಿದ ಹಬ್ಬಗಳನ್ನು ಚಾರಿತ್ರಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದಾಗ ಭಾವೈಕ್ಯತೆ, ಧರ್ಮಸಮನ್ವಯ, ಸಾಮರಸ್ಯ, ಭಾವ ವೈವಿಧ್ಯ ಇತ್ಯಾದಿ ಅಂಶಗಳು ಹಬ್ಬಗಳಿಂದ ಜನಸಾಮಾನ್ಯರಿಗೆ ಕೊಡುಗೆಯಾಗಿವೆ.

* ಜಾತ್ರೆಗಳು

'ಜಾತ್ರೆ' ಭಾರತೀಯ ಸಂಸ್ಕೃತಿಯ ವಿಶಿಷ್ಟ ಸಮಾಜೋಧ್ಯಾರ್ಮಿಕ ಪ್ರಕ್ರಿಯೆಯಾಗಿದೆ. 'ಜಾತ್ರೆ' ಎಂದಾಕ್ಷಣ ಎಲ್ಲರಿಗೂ ಆಕರ್ಷಣೆ ಪ್ರಾಚೀನ ಕಾಲದಿಂದಲೂ ಜನರು ನಂಬಿಕೊಂಡಿರುವ ದೇವ ದೇವತೆಗಳನ್ನು ಭಯ ಭಕ್ತಯಿಂದ ಗುಂಪಾಗಿ ಪೂಜಿಸಿ ಪ್ರಾರ್ಥಿಸಿದ ಜನಸಮೂಹವೇ 'ಜಾತ್ರೆ' ಎಂದಾಗಿದೆ. ಜಾತ್ರೆ ಜಾತಿ-ವರ್ಗಗಳ, ಮೇಲು-ಕೀಳು, ಮಡಿ-ಮೈಲಿಗೆಯನ್ನು ಮೀರಿ, ಜನಸಮುದಾಯ ಮತೀಯ ವಿಧಿ ಆಚರಣೆಯ ನೆಪದಲ್ಲಿ ದೈವವೊಂದರ ಸುತ್ತ ನಿರ್ದಿಷ್ಟ ದಿನಗಳಂದು ನೆರೆಯುವುದನ್ನು ಜಾತ್ರೆ ಎನ್ನಬಹುದು. ಬಹುತೇಕ ವಾರ್ಷಿಕ ಆವರ್ತನೆಯಲ್ಲಿರುವ ಜಾತ್ರೆಗಳು ಸಾರ್ವಜನಿಕ ಸ್ವರೂಪದವಾಗಿವೆ. ತುಂಗಭದ್ರಾ ನದಿ ಪರಿಸರದಲ್ಲಿ ಬರುವ ಕುರುವತ್ತಿ, ಮೈಲಾರ, ಹೊಸೂರು, ಹಂಪಿಯಲ್ಲಿ ಜಾತ್ರೆಗಳು ವಿಶೇಷವಾಗಿ ನಡೆಯುತ್ತವೆ. ಈ ಎಲ್ಲಾ ಧಾರ್ಮಿಕ ಕ್ಷೇತ್ರಗಳ ಕೊಡುಗೆಗಳನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗಿದೆ.

ಧಾರ್ಮಿಕ ಸ್ವರೂಪದ ಹಿನ್ನೆಲೆಯಲ್ಲಿ ಹುಟ್ಟಿಕೊಂಡು ಬಂದ ಯಾವುದೇ ಜಾತ್ರೆಯಲ್ಲಿ ಗಂಡು-ಹೆಣ್ಣು, ಬಡವ-ಬಲ್ಲಿದ, ಊರು-ಕೇರಿ, ಜಾತಿ ಬೇಧವಿಲ್ಲದೆ ಜನರು ಕೂಡುವುದರಿಂದ ಜಾತ್ರೆಗಳು ಸಾಮಾಜಿಕ ಭಾವೈಕ್ಯತೆಯ ಸಂಕೇತವಾಗಿವೆ. ಗ್ರಾಮದ ಒಂದು ಸಮುದಾಯದ ಜನರು ಮಾತ್ರವಲ್ಲದೆ ಎಲ್ಲಾ ಜಾತಿ ಜನಾಂಗದ ಜನರು ಒಂದೆಡೆ ಬೆರೆತು ನಡೆಸುವ ಜಾತ್ರೆಗಳು ಕೋಮು ಸೌಹಾರ್ದತೆಯ ಪ್ರತೀಕಗಳಾಗಿವೆ.

ಜಾತ್ರೆಗಳಲ್ಲಿ ಹಲವು ಹತ್ತಾರು ಅಭಿರುಚಿಯುಳ್ಳ ಜನರು ನೆರೆದಿರುವುದರಿಂದ ಅವರನ್ನೆಲ್ಲಾ ಆನಂದಪಡಿಸಲು ಧಾರ್ಮಿಕ ಉಪನ್ಯಾಸ, ಕೀರ್ತನೆ, ಪುರಾಣಗಳ ಜೊತೆಗೆ ಮನೋರಂಜನೆಯ ಸಂಗೀತ, ನೃತ್ಯಕಲೆಗಳ ಪ್ರದರ್ಶನಗಳನ್ನು ಏರ್ಪಡಿಸಿ, ಆ ಮೂಲಕ ಕಲಾವಿದರನ್ನು ಸನ್ಮಾನಿಸುತ್ತಾರೆ. ಜಾತ್ರೆಗಳ ಅಂಗವಾಗಿ ದೇವಸ್ಥಾನದಲ್ಲಿ ಜರುಗುವ ವಿದ್ವಜ್ಜನರ ಉಪನ್ಯಾಸ ಹಾಗೂ ಕಲಾವಿದರ ಪ್ರದರ್ಶನಗಳು ಭಾವುಕರ ಮನಗಳನ್ನು ತಣಿಸಿದರೆ, ದೇವಸ್ಥಾನದ ಹೊರಗಿರುವ ಅಂಗಡಿಗಳ ನಾನಾ ಬಗೆಯ ವಸ್ತುಗಳು ಎಲ್ಲರ ಮನಸ್ಸಿನಲ್ಲಿ ಆಸೆ ಹುಟ್ಟಿಸಿ ಅವರ ನಾಲಗೆಯ ಮೇಲೆ ನೀರೂರುವಂತೆ ಮಾಡುತ್ತವೆ. ಪಾತ್ರೆ ಅಂಗಡಿ, ಬಟ್ಟೆ ಅಂಗಡಿ, ಹೂವು, ಹಣ್ಣು ಕಾಯಿ ಅಂಗಡಿಗಳು, ಬೆಂಡು ಬೆತ್ತಾಸ ಇತ್ಯಾದಿ ಅಂಗಡಿಯ ಸಾಲುಗಳು ದಾರಿಹೋಕರಾದ ಭಕ್ತರನ್ನು ಕೈಬೀಸಿ ಕರೆಯುತ್ತವೆ.

ಆಟ-ಪಾಠ ವಿನೋದಗಳ ಜೊತೆಗೆ ಹಳ್ಳಿಗರಿಗೆ ವರ್ಷಕ್ಕೊಮ್ಮೆ ಮನೋರಂಜನೆ ಒದಗಿಸುವ ನಾಟಕ ಬಯಲಾಟಗಳಲ್ಲದೆ ಕೋತಿ ಕುಣಿಸುವುದು. ಮೋಡಿಯಾಟ, ಕರಡಿಯಾಡಿಸುವುದು, ಕೆಂಡ ಹಾಯುವುದು, ಚಾಟಿಯಿಂದ ಹೊಡೆದುಕೊಳ್ಳುವುದು. ನಾಲಿಗೆ ಮತ್ತು ಗಲ್ಲಗಳ ಮೇಲೆ ತಾಮ್ರದ ಸರಿಗೆ ಹಾಕಿಕೊಳ್ಳುವುದು, ಮುಳ್ಳಿನ ಗದ್ದಿಗೆ ಸೇವೆ, ಇತ್ಯಾದಿ ಜನಪದ ಕಲೆಗಳ ಪ್ರದರ್ಶನ, ಜನಪದ ವಾದ್ಯಗಳಾದ ಡೊಳ್ಳು, ತಮ್ಮಟೆ ಬಡಿತ - ಕೋಳಿಪಂದ್ಯ, ಜೂಜಾಟಗಳನ್ನು ಜಾತ್ರೆಗಳಲ್ಲಿ ಕಾಣುತ್ತೇವೆ.

ಜಾತ್ರೆಯ ಸಮಯದಲ್ಲಿ ರೈತರು-ರೈತ ಕಾರ್ಮಿಕರು ಹಾಗೂ ಊರಿನ ಎತ್ತುಗಳಿಗೆ ವಿಶ್ರಾಂತಿ ದೊರೆಯುತ್ತದೆ. ಇದರಿಂದ ಜನರಲ್ಲಿ ಹೊಸ ಚೈತನ್ಯ ಉಂಟಾಗಿ ಉತ್ಸಾಹದಿಂದ ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗಲು ಜಾತ್ರೆಗಳು ಸಹಾಯಕವಾಗುತ್ತವೆ. ದೇವರು ಧರ್ಮದ ವಾರ್ಷಿಕೋತ್ಸವಗಳಾದ ಜಾತ್ರೆಗಳಲ್ಲಿ ಆಚರಿಸುವ ಪೂಜಾ ದಿನಗಳು ಬಹಳ ಮುಖ್ಯವಾಗಿರುತ್ತಿದ್ದವು. ಪ್ರಸ್ತುತ ಅಧ್ಯಾಯದಲ್ಲಿ ಜನಸಾಮಾನ್ಯರ ಬದುಕಿಗೆ ಜಾತ್ರೆಗಳ ಕೊಡುಗೆಯನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಶುಚಿತನ

ಜಾತ್ರೆ ಸಮೀಪಿಸುತ್ತಲೇ ಊರಿನ ಜನ ತಮ್ಮ ಮನೆಗಳನ್ನು ಸುಣ್ಣ-ಬಣ್ಣಗಳಿಂದ ಸಿಂಗರಿಸುತ್ತಾರೆ. ಈ ಕ್ರಿಯೆಯಿಂದ ದೇಹದ ಆರೋಗ್ಯವು ರಕ್ಷಿಸಲ್ಪಟ್ಟು ಕ್ರಿಮಿಕೀಟಗಳು ನಾಶವಾಗುತ್ತವೆ. ಇಡೀ ಊರಿಗೆ ಊರೇ ಶುದ್ಧಿಯಾಗುತ್ತದೆ. ಅಂತೆಯೇ ಪ್ರತಿ ಹಬ್ಬದ ಒಂದು ಬಗೆಯ ಶುಚಿತ್ವವನ್ನು ಮಾಡುತ್ತವೆ. ಧಾರ್ಮಿಕವಾಗಿ ಒಂದು ಬಗೆಯ ಶುಚಿತ್ವವನ್ನು ಕಾಣಬಹುದಾಗಿದೆ. ಈ ಶುಚಿತ್ವಕ್ಕೆ ತುಂಗಭದ್ರಾ ನದಿ ಪರಿಸರ ಪ್ರಮುಖವಾಗಿದೆ.

ವ್ಯಾಪಾರ

ರಥೋತ್ಸವದ ಜಾತ್ರೆಯಲ್ಲಿ ಖರೀದಿ ಮಾಡಿದ್ದು ಪವಿತ್ರವೆಂದು ತಿಳಿದು ತಮ್ಮ ಬದುಕಿಗೆ ಬೇಕಾದ ಸಾಮಾನುಗಳನ್ನು ಖರೀದಿಸುವುದು ಸಾಮಾನ್ಯ ಪದ್ಧತಿಯಾಗಿದೆ. ಜಾತ್ರೆಯ ದಿನ ಹೊಸಬಟ್ಟೆ ಧರಿಸುವುದು ಶುಭವೆಂದು ಭಾವಿಸಿ ವರ್ಷದುದ್ದಕ್ಕೂ ಬೇಕಾಗುವ ಬಟ್ಟೆಗಳನ್ನು ಜಾತ್ರೆಯ ಸಂದರ್ಭದಲ್ಲಿ ಖರೀದಿ ಮಾಡುತ್ತಾರೆ.

ತುಂಗಭದ್ರಾ ನದಿ ಪರಿಸರದಲ್ಲಿಯ ಧಾರ್ಮಿಕ ಕ್ಷೇತ್ರವಾದ ಕುರುವತ್ತಿಯ ಬಸವಣ್ಣನ ಜಾತ್ರೆಯಲ್ಲಿ ದನಗಳ ಜಾತ್ರೆ ವಿಶೇಷವಾದುದು. ಎತ್ತುಗಳನ್ನು, ಹಸುಗಳನ್ನು ಕೊಳ್ಳುವವರು, ಮಾರಾಟ ಮಾಡುವವರು ದೊಡ್ಡ ಪ್ರಮಾಣದಲ್ಲಿಯೇ ನೆರೆದು ವ್ಯಾಪಾರ ವಹಿವಾಟನ್ನು ನಡೆಸುತ್ತಾರೆ. 'ಕುರುವತ್ತಿ ಜಾತ್ರ್ಯಾಗ ಚಲೋ - ಎತ್ತು ಖರೀದಿ ಮಾಡಿದೆ' ಎಂದು ರೈತರು ಹೆಮ್ಮೆಯಿಂದ ಹೇಳುತ್ತಾ, ತಾವು ಕೊಂಡ ದನಗಳನ್ನು ಬಸವಣ್ಣ ದೇವರ ಬಳಿಗೆ ಕರೆದೊಯ್ದು ಪೂಜೆ ಮಾಡಿಸಿಕೊಂಡು ಮನೆ ತುಂಬಿಸಿಕೊಳ್ಳುವ ಸನ್ನಿವೇಶವನ್ನು ಇಂದಿಗೂ ಕಾಣಬಹುದು.

ರಕ್ತಸಂಬಂಧ

ಜಾತ್ರೆಗಳು ಎಲ್ಲಾ ಜನರ ಸಂಗಮವಿದ್ದಂತೆ. ಜಾತ್ರೆಗೆ ಬಂಧು-ಬಾಂಧವರು ಸೇರುತ್ತಿದ್ದುದರಿಂದ ಕನ್ಯೆ ಮತ್ತು ವರಗಳು ತಮಗೆ ಬೇಕಾದ ಮದುವೆ ಜೋಡಿಗಳನ್ನು ಇದೇ ಸಂದರ್ಭದಲ್ಲಿ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಇದೇ ಹೊತ್ತಿಗೆ ಕೊಡುಕೊಳ್ಳಿಯ ಮಾತುಕತೆಗಳು ನಡೆದು ಹೋಗಿ ವೈಶಾಖ ಮಾಸದಲ್ಲಿ ಮದುವೆಯ ದಿನಗಳನ್ನು ಗೊತ್ತು ಮಾಡುತ್ತಿದ್ದರು.

ಮಂಗಳ ಕಾರ್ಯಗಳು

ಜಾತ್ರೆಯ ದಿನಗಳು ಪವಿತ್ರವೆಂದು ತಿಳಿದು ಮಕ್ಕಳ ಜವಳ ತೆಗೆಸುವುದು, ಮಕ್ಕಳನ್ನು ತೊಟ್ಟಿಲಲ್ಲಿ ಹಾಕಿ ನಾಮಕರಣ ಮಾಡುವುದು. ಇಂತಹ ಶುಭ ಸಂದರ್ಭದಲ್ಲಿಯೇ ಹೊಲ, ಮನೆ ಖರೀದಿ ಮಾಡುವುದು. ಹೀಗೆ ಅನೇಕ ರೀತಿಯ ಮಂಗಳಕಾರ್ಯಗಳು ಇಂತಹ ದಿನಗಳಲ್ಲಿ ನಡೆದು ಯಶಸ್ವಿಯಾಗುವವು ಎಂಬ ನಂಬಿಕೆ ಜನರದ್ದಾಗಿದೆ.

ವರ್ಷ ಭವಿಷ್ಯ

ಜಾತ್ರೆಗಳಲ್ಲಿ ತೇರುಬಂಡಿಗಳು ಪಶ್ಚಿಮ ದಿಕ್ಕಿನಿಂದ, ಪೂರ್ವ ದಿಕ್ಕಿನ ಕಡೆಗೆ ಬಂದರೆ ಶುಭವೆಂದೂ, ದಕ್ಷಿಣ ದಿಕ್ಕಿನ ಕಡೆಗೆ ಬಂದರೆ ಅಶುಭವೆಂದೂ, ಜನರು ಭಾವಿಸುತ್ತಿದ್ದರು. ಆ ದೇವತೆಯ ಪೂಜಾರಿಗಳು ವರ್ಷದ ಮಳೆ-ಬೆಳೆಯ ಭವಿಷ್ಯವನ್ನು ಜನ-ದನಗಳ ಸುಖದ ವಿಚಾರಗಳನ್ನು ಮಾರುದೊಳ್ಳಿನ ಮೇಲೆ ನಿಂತು ಹಕಾರಿ ಹೊಡೆದು ಒಂದೇ ಒಂದು ಮಾತಿನ ಹೇಳಿಕೆಯಿಂದ ಹೇಳುವರು.

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಮೈಲಾರ ಜಾತ್ರೆಯು ಪ್ರಸಿದ್ಧವಾದುದು. ಮೈಲಾರದ ಡೆಂಕನ ಮರಡಿಯಲ್ಲಿ ಪ್ರತಿ ವರ್ಷ ನಡೆಯುವ ಪ್ರಸಿದ್ಧ ಕಾರ್ಣಿಕೋತ್ಸವ ಮುಂದಿನ ಇಡೀ ವರ್ಷ ನಡೆಯುವ ಆಗುಹೋಗುಗಳ ವಾಣಿಯಾಗುತ್ತದೆ. ಜಾತ್ರೆಯಲ್ಲಿ ನಡೆಯುವ ಪ್ರತಿ ಕಾರ್ಯಗಳಲ್ಲಿ ಧಾರ್ಮಿಕ ಸ್ವರೂಪವಿರುವುದರಿಂದ ಜನರೆಲ್ಲಾ ಭಾವುಕರಾಗಿ, ಶ್ರದ್ಧಾಳುಗಳು ಆಚರಿಸುತ್ತಾರೆ. ಜಾತ್ರೆಯನ್ನು ಇಡೀ ಜನ ಸೇರಿ ಆಚರಿಸುವುದರಿಂದ ಇಲ್ಲಿ ನಾವು ಸಹಬಾಳ್ವೆ, ಸಹಜೀವನ ಕಾಣುತ್ತೇವೆ. ಇಡೀ ಊರಿನ ಜನರೆಲ್ಲಾ ಭಾವೈಕ್ಯ ಬಂಧುತ್ವವನ್ನು ಹುಟ್ಟಿಸುತ್ತದೆ.

ಕುಟುಂಬ ಭಾವನೆ

ಜಾತ್ರೆಗಳು ಕುಟುಂಬ ಭಾವನೆಯನ್ನು ತಂದುಕೊಡುತ್ತವೆ. ಎಲ್ಲರೂ ಒಂದೇ ಮನೆತನದವರು ಎಂಬ ಭಾವನೆ ತರುತ್ತವೆ. ದೇವರ ಪಲ್ಲಕ್ಕಿ ಹೋರುವಾಗ, ರಥ ಎಳೆಯುವಾಗ, ಪೂಜೆ ಮಾಡುವಾಗ ಎಲ್ಲರೂ ಸೇರಿ ಆಚರಿಸುವಂತೆ ಒಬ್ಬರಿಗೊಬ್ಬರು ಸಹಕಾರ ನೀಡುವಂತೆ ಮುಂದಿನ ದಿನಗಳು ಹೀಗೆ ಇರಬೇಕೆಂಬ ಪ್ರೇರಣೆಯನ್ನು ಜಾತ್ರೆಗಳು ನೀಡುತ್ತವೆ.

ಇತಿಹಾಸ ಪ್ರಸಿದ್ಧ ಜಾತ್ರೆಯಾದ ಮೈಲಾರದಲ್ಲಿ ಗ್ವಾರಪ್ಪ, ಗ್ವಾರಮ್ಮರಾಗುವುದೆಂದರೇನೇ ಸಾಮಾಜಿಕ ಅಸಮಾನತೆಗಳನ್ನು ಮೀರಲೆಂದು ಅವರು ಕಂಡುಕೊಂಡಿರುವುದಾಗಿದೆ. ಈ ಮಾರ್ಗ ನಮ್ಮ ವಿಚಾರಕ್ಕೆ ವಿರೋಧವಿದ್ದರೂ ಆ ಧಾರ್ಮಿಕ ಪ್ರಪಂಚದ ನಂಬಿಕೆಯ ಸ್ವಾತಂತ್ರ್ಯವನ್ನು ಅಷ್ಟು ಬೇಗನೆ ಹೊಡೆದುರುಳಿಸಲು ಸಾಧ್ಯವಿಲ್ಲ. ಇಲ್ಲಿ ಗ್ವಾರಪ್ಪಗಳ ಜಾತಿ ವಿರೋಧಿಯ ಪರಂಪರೆ ನಮ್ಮೆಲ್ಲರಿಗೂ ಆದರ್ಶವಾಗುವಂತಿದೆ. ಹೀಗೆ ಜಾತ್ರೆಗಳು ಈ ಹಿಂದೆ ಓದು - ವಿದ್ಯೆಯಿಲ್ಲದ ಕಾಲದಲ್ಲಿ ಜನಜೀವನವನ್ನು ರೂಪಿಸುವಲ್ಲಿ ಮಹತ್ವದ ಕೊಡುಗೆಯನ್ನು ನೀಡಿವೆ ಇತ್ಯಾದಿ.

(ತುಂಗಭದ್ರಾ ಅಣೆಕಟ್ಟು, ಜಲಾಶಯಕ್ಕಾಗಿ ಚಳವಳಿ, ತುಂಗಾ ತಿರುವು, ಸಿಂಗಟಾಲೂರು ಯೋಜನೆ)

ಈ. ನದಿ ಪರಿಸರದ ಸಾಮಾಜಿಕ ಚಳುವಳಿಗಳು

*** ತುಂಗಭದ್ರಾ ಅಣೆಕಟ್ಟು**

ವಿಜಯನಗರದ ಅರಸರು ರಾಜಧಾನಿಯನ್ನು ಗಮನದಲ್ಲಿರಿಸಿಕೊಂಡು ತುಂಗಭದ್ರಾ ನದಿಗೆ ಅಡ್ಡಲಾಗಿ ತುರ್ತು ಅಣೆಕಟ್ಟನ್ನು ಕಟ್ಟಲಾಗಿದೆ. ಬಳ್ಳಾರಿ ಜಿಲ್ಲೆಯೊಂದರಲ್ಲಿ ಈ ನದಿಗೆ ಅಡ್ಡಲಾಗಿ ೧೨ ಅಣೆಕಟ್ಟುಗಳನ್ನು ನಿರ್ಮಿಸಲಾಯಿತು. ಐತಿಹ್ಯಗಳ ಪ್ರಕಾರ ವಿಜಯನಗರದ ಆಸುಪಾಸಿನ ನದಿ ನೀರಾವರಿ ಕಾರ್ಯಗಳಿಗೆ ಮುದ್ದ-ದಂಡನಾಯಕ (ದಣನಾಯಕ) ಎಂಬ ಅಧಿಕಾರಿಯಿಂದ ನಿರ್ಮಾಣಗೊಂಡವು. ತುಂಗಭದ್ರೆಗೆ ಅಡ್ಡಲಾಗಿ ಅನೇಕ ಅಣೆಕಟ್ಟುಗಳನ್ನು ಈತನು ನಿರ್ಮಿಸಿದನು.

ಹೈದರಾಬಾದ್ ಮತ್ತು ಮದ್ರಾಸ್ ಪ್ರಾಂತೀಯ ಸರ್ಕಾರಗಳು ಕೂಡಿ ೧೯೪೫ರಲ್ಲಿ ತುಂಗಭದ್ರಾ ಯೋಜನೆಯನ್ನು ಪ್ರಾರಂಭಿಸಿದವು. ಹೊಸಪೇಟೆಯ ಸಮೀಪ ಮೂರು ಕಿ.ಮೀ. ದೂರದಲ್ಲಿರುವ ಮಲ್ಲಾಪುರದಲ್ಲಿ ಅಣೆಕಟ್ಟು ನಿರ್ಮಾಣಗೊಂಡಿದೆ. ಪ್ರತ್ಯೇಕವಾದ ಎರಡು ಸರ್ಕಾರಗಳು ನದಿಯ ವಿರುದ್ಧ ದಿಕ್ಕುಗಳಿಂದ ಜಂಟಿಯಾಗಿ ಅಣೆಕಟ್ಟನ್ನು ಕಟ್ಟಲು ಪ್ರಾರಂಭಿಸಿದ ಕೆಲಸ ೧೯೫೩ರಲ್ಲಿ ಮುಕ್ತಾಯವಾಯಿತು. ಈ ಅಣೆಕಟ್ಟು ೨೪೪೦ ಮೀ. ಉದ್ದವಿದೆ. ಅತಿ ಆಳದ ಅಸ್ತಿಭಾರದಿಂದ ೪೯ ಮೀ. ಎತ್ತರವಿದೆ. ೩೭೬೬ ದಶಲಕ್ಷ ಕಿ.ಮೀ. ನೀರನ್ನು ಶೇಖರಿಸುತ್ತದೆ.

*** ತುಂಗಭದ್ರಾ ಜಲಾಶಯಕ್ಕಾಗಿ ಚಳುವಳಿ**

ತುಂಗಭದ್ರಾ ನದಿ ನೀರಿನ ವಿವಾದವು ಏಕೀಕರಣದ ಸಂದರ್ಭದಲ್ಲಿ ಬಹುದೊಡ್ಡ ಸಮಸ್ಯೆಯಾಗಿತ್ತು. ಅಂದು ಬಳ್ಳಾರಿಯು ಬ್ರಿಟೀಷರ ಆಳ್ವಿಕೆಗೆ ಒಳಗಾಗಿ ಮದ್ರಾಸ್ ಅಧಿಪತ್ಯದಲ್ಲಿತ್ತು. ಈಗಿನ ಬಳ್ಳಾರಿ, ಅನಂತಪುರ, ಕರ್ನೂಲು ಮತ್ತು ಕಡಪಾ ಈ ಪ್ರದೇಶಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಬ್ರಿಟೀಷರು ಅಣೆಕಟ್ಟು ಕಟ್ಟಲು ನಿರ್ಧರಿಸಿದರು. ಇದಕ್ಕೆ ಮದ್ರಾಸ್ ಮತ್ತು ಹೈದ್ರಾಬಾದ್ ಸರ್ಕಾರಗಳ ಜಂಟಿ ಪ್ರಯತ್ನಗಳಿಂದ ೧೯೪೫ರಲ್ಲಿ ಯೋಜನೆಯನ್ನು ಆರಂಭಿಸಲಾಯಿತು. ೧೯೫೩ರಲ್ಲಿ ರಾಜ್ಯಗಳ ವಿಂಗಡಣೆಯಿಂದಾಗಿ ಆಂದ್ರಪ್ರದೇಶ ಮತ್ತು ಮೈಸೂರು ರಾಜ್ಯಗಳ ನಡುವೆ ವಿವಾದ ಏರ್ಪಟ್ಟಿತು.

ಮೊದಲು ಬಳ್ಳಾರಿ, ಅದೋನಿ, ರಾಯದುರ್ಗ, ತಾಲೂಕುಗಳ ಏಕೀಕರಣವಾದ ನಂತರ ಆಂಧ್ರಕ್ಕೆ ಸೇರಿದವು. "೧೯೫೨ರಲ್ಲಿ ಚುನಾವಣೆಗಳು ನಡೆದು ಬಳ್ಳಾರಿಯಲ್ಲಿ ತೆಲುಗರೇ ಜಯಗಳಿಸಿದಾಗ ತುಂಗಭದ್ರಾ ಜಲಾಶಯದ ಹೋರಾಟ ಉಗ್ರ ಸ್ವರೂಪಕ್ಕೆ ತಿರುಗಿತು. ಈ ಸಮಸ್ಯೆ ಪರಿಹರಿಸಲು 'ವಾಂಛು ಕಮಿಟಿ' ರಚನೆಯಾಯಿತು. 'ವಾಂಛು' ಅವರು ಬಳ್ಳಾರಿ ಪರಿಸ್ಥಿತಿಯನ್ನು ಸಮಗ್ರವಾಗಿ ಅರಿತು ವರದಿ ಸಿದ್ಧಪಡಿಸಿದರು. ಬಳ್ಳಾರಿಯ ಮೂರು ತಾಲೂಕುಗಳು ಆಂಧ್ರಕ್ಕೆ ಸೇರಬೇಕೆಂದಾಗ ಕನ್ನಡಿಗರು ವಿರೋಧಿಸಿದರು. ಈ ಸಮಯಕ್ಕೆ ಎರಡು ಸರ್ಕಾರಗಳು ಕೈಗೊಂಡಿದ್ದ ತುಂಗಭದ್ರಾ ಅಣೆಕಟ್ಟಿನ ಮುಗಿಯಬೇಕಾದ ಕೆಲಸ ಅದರ ಬಳಕೆಯ ಪಾಲುಗಳ ಬಗ್ಗೆ 'ವಾಂಛು' ಅವರು ಸ್ಪಷ್ಟವಾದ ತೀರ್ಪು ಕೊಡಲಾಗಲಿಲ್ಲ"[೮] ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗುವವರೆಗೆ ಬಳ್ಳಾರಿಯನ್ನು ಆಂಧ್ರದೊಡನೆ ಸೇರಿಸುವ ನಿರ್ಧಾರವನ್ನು ಕನ್ನಡಿಗರು ಪ್ರಬಲವಾಗಿ ವಿರೋಧಿಸಿರುವುದು ಐತಿಹಾಸಿಕ ದಾಖಲೆಯಾಗಿದೆ.

ಕರ್ನಾಟಕದಲ್ಲಿಂದು ಜಲ ವಿವಾದಗಳ ಸ್ವರೂಪ ವಿವಿಧ ರೂಪದಲ್ಲಿ ವ್ಯಕ್ತಪಡುತ್ತದೆ. ಇಂತಹ ಘಟನೆಗಳು ಸಂಭವಿಸುತ್ತಲೇ ಬಂದಿವೆ. ಯಾವುದೇ ನಿರ್ದಿಷ್ಟ ತೀರ್ಮಾನ ಒಪ್ಪಂದಕ್ಕೆ ಬಾರದೆ ಸಮಸ್ಯೆಯಾಗಿಯೇ ಉಳಿದಿರುವುದು ಹೆಚ್ಚು. ಆಂತರಿಕ ಮತ್ತು ಅಂತರರಾಜ್ಯ ವಿವಾದಗಳೆರಡು ಪ್ರಚಲಿತ ಚಳುವಳಿಗಳಿಗೆ ಕಾರಣವಾಗಿವೆ.

*** ತುಂಗಾ ತಿರುವು**

ತುಂಗ ಮತ್ತು ಭದ್ರಾ ನದಿಗಳ ತಿರುವು ಯೋಜನೆಗಳ ಬಗ್ಗೆ ಸರ್ಕಾರ ಯೋಜನೆ ರೂಪಿಸಿತ್ತು. ಇದಕ್ಕೆ ೨೨೦೪ ಕೋಟಿ ತಗಲುವ ಅಂದಾಜಿದೆ. ಕಡೂರು, ಬೀರೂರು ತಾಲೂಕುಗಳ ಸುಮಾರು ೨ ಲಕ್ಷದ ೨೫ ಸಾವಿರ ಎಕರೆ ಭೂಮಿಗೆ ನೀರಾವರಿಯಾಗುವುದು. ಆದರೆ "ಎಂ.ಎಲ್.ಸಿ.ಯಾದ ಉಗ್ರಪ್ಪನವರು ರಾಜ್ಯದಲ್ಲಿ ಅತಿ ಕಡಿಮೆ ಮಳೆ ಬೀಳುವ ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಒತ್ತಾಯಿಸಿದರು. ಇದಕ್ಕೆ ಕಾಂಗ್ರೆಸ್‌ನ ವಿ.ಆರ್. ಸುದರ್ಶನ್, ಪಕ್ಷೇತರವಾದ ಕೆ.ಸಿ. ಪುಟ್ಟಸಿದ್ಧಶೆಟ್ಟಿ ಧ್ವನಿಗೂಡಿಸಿದರು. ರಾಜ್ಯ ಸರ್ಕಾರದ ತುಂಗಾ ತಿರುವನ್ನು ವಿರೋಧಿಸಿ ಇವರುಗಳು ಭದ್ರಾ ಮೇಲ್ದಂಡೆ ಯೋಜನೆಗೆ ಒತ್ತಾಯಿಸಿದರು. ಇದಕ್ಕೆ ಬೇಕಾಗುವ ೨೦ ಟಿ.ಎಂ.ಸಿ. ನೀರನ್ನು ಗೋದಾವರಿ ತಿರುವು ಯೋಜನೆಯಿಂದ ೮ ಟಿ.ಎಂ.ಸಿ. ಹಾಗೂ ಲಕ್ಕವಳ್ಳಿಯ ಭದ್ರಾ ಯೋಜನೆಯ ಕಾಲುವೆಗಳ ನವೀಕರಣದಿಂದ ೧೨ ಟಿ.ಎಂ.ಸಿ. ಪಡೆಯಲಾಗುತ್ತದೆ. ಬಚಾವತ್ ತೀರ್ಪಿಗೂ ಇದಕ್ಕೂ ಸಂಬಂಧವಿಲ್ಲ ಎನ್ನಲಾಗುವುದು. ಚಿಕ್ಕಮಗಳೂರಿನ ಮಲ್ಲಿಕಾರ್ಜುನ ಅವರು ಮಲೆನಾಡಿನಲ್ಲಿ ಮಳೆ ಪ್ರಭಾವವು ಕಡಿಮೆಯಾಗಿದೆ. ಹೀಗಾಗಿ ಭದ್ರಾ ಮೇಲ್ದಂಡೆ ಯೋಜನೆ ಕೈಗೊಳ್ಳುವುದರಲ್ಲಿ ಅರ್ಥವಿಲ್ಲ ಎಂದರು. ಇದರಿಂದ ಕೋಪಗೊಂಡ ಉಗ್ರಪ್ಪ ಮತ್ತು ಸುದರ್ಶನ್ ಅವರು ಸರ್ಕಾರದೊಂದಿಗೆ ವಾದಕ್ಕಿಳಿದು ಯೋಜನೆ ಕೈಗೊಳ್ಳುವ ಬಗ್ಗೆ ಒತ್ತಾಯಿಸಿ ಧರಣಿ ನಡೆಸಿದರು. ಮೇ ೧೯೯೯ರಲ್ಲಿ ಜೆ.ಎಚ್. ಪಟೇಲ್ ಅವರು 'ತುಂಗಾ ತಿರುವು' ಯೋಜನೆಯ ಸಮೀಕ್ಷೆಗೆ ಶಿಲಾನ್ಯಾಸ ನೆರವೇರಿಸಿದರು."[೯]

* ಸಿಂಗಟಾಲೂರು ಏತ ನೀರಾವರಿ ಯೋಜನೆ

ತುಂಗಭದ್ರಾ ನದಿಗೆ ನಿರ್ಮಿಸಲಾಗಿರುವ ಅಣೆಕಟ್ಟಿನ ನಿರ್ಮಾಣವು ಈಗಿರುವ ಪ್ರದೇಶಕ್ಕಿಂತಲೂ ಹಿಂಭಾಗದಲ್ಲಿ ನಡೆದಿದ್ದರೆ ಅದರಿಂದ ಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಗದಗ, ಕೊಪ್ಪಳ, ಮುಂಡರಗಿ ತಾಲೂಕುಗಳ ಜಮೀನುಗಳಿಗೆ ನೀರಿನ ಸೌಲಭ್ಯ ದೊರಕುತ್ತಿತ್ತು. ಹೀಗಾಗಿ ಆ ಕೊರತೆಯನ್ನು ತುಂಬಲು "ಸಿಂಗಟಾಲೂರು (ಹುಲಿಗುಡ್ಡ) ಏತ ನೀರಾವರಿಯನ್ನು ರೂಪಿಸಲಾಯಿತು. ಇದರಿಂದ ಹಡಗಲಿ ತಾಲೂಕಿನ ೨೫,೦೦೦, ಮುಂಡರಗಿ ತಾಲೂಕಿನ ೧೭೦೦೦, ಕೊಪ್ಪಳ ತಾಲೂಕಿನ ೩೦,೦೦೦ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವ ಯೋಜನೆಯಿತ್ತು. ಪ್ರಾರಂಭದಲ್ಲಿ ಇದರಲ್ಲಿನ ನೀರಿನ ಶೇಖರಣೆ ಸಾಮರ್ಥ್ಯ ೭.೬೪ ಟಿ.ಎಂ.ಸಿ. ಇದ್ದುದನ್ನು ೧೦ ಟಿ.ಎಂ.ಸಿ.ಗೆ ಹೆಚ್ಚಿಸಲು ಯೋಜಿಸಲಾಗಿತ್ತು."[೧೦] ಆದರೆ ಈ ಯೋಜನೆಗೆ ರಾಜಕೀಯ ಇಚ್ಛಾಶಕ್ತಿಯ ಕೊರತೆ, ತುಂಗಭದ್ರಾ ಜಲಾಶಯದ ನೀರಿನ ಫಲಾನುಭವಿಗಳ ವಿರೋಧಗಳು - ಹೀಗೆ ಹಲವಾರು ಅಂಶಗಳು ತೊಡಕಾಗಿ ಪರಿಣಮಿಸಿರುವುದರಿಂದ ಆ ಯೋಜನೆಯು ನೆನೆಗುದಿಗೆ ಬಿದ್ದಿದೆ.

ಟಿಪ್ಪಣಿಗಳು

೧. ಹೆಚ್. ತಿಪ್ಪೇರುದ್ರಸ್ವಾಮಿ, ಪ್ರ.ಪ. ೧೯೮೫, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಡಿ.ವಿ.ಕೆ. ಮೂರ್ತಿ, ಮೈಸೂರು, ಪು. ೨೮೦.

೨. ....ಅದೇ..... ಪು. ೨೩೧.

೩. ಎಚ್ಚಾರ್ಕೆ, ಕೆ.ಎನ್.ಎ. ೨೦೦೪, **ಇತಿಹಾಸ-೧**, ಸ್ವಪ್ನಬುಕ್ ಹೌಸ್, ಬೆಂಗಳೂರು, ಪು. ೨೭೦.

೪. ಸಂ. ಹಾ.ಮಾ.ನಾಯಕ, ೧೯೭೯, **ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ**, ಕ.ಅ.ಸಂ., ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು. ೧೫೭೨.

೫. **ತುಂಗ ಮತ್ತು ಭದ್ರಾ ನದಿಗಳ ಹುಟ್ಟು, ಪಾತ್ರ ಹಾಗೂ ಜಲಚರಗಳ ಕುರಿತ ಅಧ್ಯಯನ ವರದಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬, ಪು. ೧೪೬.

೬. ಸಂ. ಡಾ.ಬಿ.ಎ. ವಿವೇಕ ರೈ, ೨೦೦೫, **ಪ್ರವಾಸಿ ಕಂಡ ವಿಜಯನಗರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ ೫೮೩ ೨೭೬, ಪು. ೫ ಮತ್ತು ೮.

೭. ....ಅದೇ...... ಪು. ೫.

೮. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ೧೯೯೯, **ಜಲಸಂಬಂಧಿ ಚಳುವಳಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ ೫೮೩ ೨೭೬, ಪು. ೫೨-೫೩.

೯. ......ಅದೇ...... ಪು. ೭೭.

೧೦. ಶಿವಕುಮಾರ ಹಿರೇಹಡಗಲಿ, ೨೮.೧.೨೦೦೨, ಸಂಯುಕ್ತ ಕರ್ನಾಟಕ, **ಹೈದರಾಬಾದ್ ಕರ್ನಾಟಕ ವಿಶೇಷ ಪುರವಣಿ**, ಸಿಂಗಟಾಲೂರು ಏತ ನೀರಾವರಿ ಯೋಜನೆ.

* * * * *

ಅಧ್ಯಾಯ ೧೦

ಸಮಾರೋಪ

ಅಧ್ಯಾಯ ಹತ್ತು

ಸಮಾರೋಪ

ಪ್ರತಿ ಅಧ್ಯಯನವು ತನ್ನದೇ ಆದ ಫಲಿತಗಳನ್ನು ಕಂಡುಕೊಳ್ಳುತ್ತದೆ. ಈ ಫಲಿತಗಳು ಈ ಮುಂಚಿನ ಅಧ್ಯಯನಗಳ ಫಲಿತಕ್ಕಿಂತ ಭಿನ್ನವಾಗಿರುತ್ತವೆ. ಆದರೆ ಇವುಗಳೇ ಅಂತಿಮ ಅಲ್ಲ. ಇದೇ ವಿಷಯವನ್ನು ವ್ಯಾಪ್ತಿ ವಿಸ್ತರಿಸಿಕೊಂಡಾಗ, ಅಧ್ಯಯನದ ಶಿಸ್ತು ಬದಲಾದಾಗ, ಅಧ್ಯಯನದ ಧೋರಣೆ ಬದಲಾದಾಗ ಅದರ ಫಲಿತಗಳು ಬೇರೆ ಆಗುತ್ತವೆ. ಈ ಎಲ್ಲ ವಿಚಾರಗಳನ್ನು ಇಟ್ಟುಕೊಂಡು ಈ ಸಂಶೋಧನಾ ಸಂಪ್ರಬಂಧ ಕಂಡುಕೊಂಡ ಅಧ್ಯಯನದ ಫಲಿತಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ತುಂಗಭದ್ರಾ ನದಿ ವಿವಿಧ ಆಳರಸರ ಕಾಲಘಟ್ಟದಲ್ಲಿ ಚಾರಿತ್ರಿಕವಾಗಿ ಅತೀ ಮಹತ್ವ ಪಡೆದಿತ್ತು. ರಾಜ್ಯಗಳ ನಡುವಣ ಗಡಿಯಾಗಿ, ಯುದ್ಧ ಹೋರಾಟಗಳ ರಣರಂಗವಾಗಿ ಮಾರ್ಪಾಟಾಗಿತ್ತು. ಸ್ತ್ರೀಯರಿಗೆ ಆರಾಧನೆಯ ನದಿಯಾಗಿದ್ದು, ಪುರುಷರಿಗೆ ಕೃಷಿ, ನೀರಾವರಿಗೆ ಯೋಗ್ಯವಾದ ನದಿಯಾಗಿದೆ. ಹಾಗೆಯೇ ಮರಳು, ಆವು, ಮೀನು ಇತರ ನದಿಯ ಸಂಪತ್ತನ್ನು ಮಾರಾಟ ಮಾಡುವ ಜನರಿದ್ದಾರೆ. ನದಿಯ ಇಕ್ಕೆಲಗಳಲ್ಲಿ ಪ್ರಾಚೀನ ಕಾಲದಿಂದಲೂ ಅರಸರು ನಿರ್ಮಿಸಿದ ದೇವಾಲಯ, ಗುಡಿ, ಗೋಪುರ, ಶಿಲ್ಪ ಮಂದಿರಗಳು ನೀರ ಅಪಾಚ್ನೆಗೆ ಗುರಿಯಾಗಿವೆ. ಕೃಷಿ, ನೀರಾವರಿ, ಉದ್ದಿಮೆ, ಕೈಗಾರಿಕೆ, ಕುಡಿಯಲು ತುಂಗಭದ್ರಾ ನದಿ ಹಿಂದಿನಿಂದಲೂ ಸಹಕಾರಿಯಾಗಿದೆ. ಹಾಗೆಯೇ ಧಾರ್ಮಿಕವಾಗಿ ವಿವಿಧ ಧರ್ಮ, ಜನಸಮುದಾಯಗಳಿಗೆ ಆರಾಧನೆ ಕೇಂದ್ರಬಿಂದುವಾಗಿದೆ. ನದಿಯ ಇಕ್ಕೆಲಗಳಲ್ಲಿ ನಾಗರೀಕತೆ ಮತ್ತು ಸಂಸ್ಕೃತಿ ಬೆಳೆದು ಅನೇಕ ನಗರಗಳು ಜನ್ಮ ತಾಳಿದವು. ಇದು ಆಯಾ ಭಾಗದ ನದಿಬಯಲಿನ ಪ್ರದೇಶಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಕಾರಣವಾಯಿತು. ಈ ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ತುಂಗಭದ್ರಾ ನದಿಯು ವಿವಿಧ ರೀತಿಯಲ್ಲಿ ಸಹಕಾರಿಯಾಗಿದೆ.

೧. ಒಟ್ಟು ನದಿ ಪರಿಸರವನ್ನಿಟ್ಟುಕೊಂಡು ಅಧ್ಯಯನ ಮಾಡುವುದಕ್ಕೂ, ಅದೇ ನದಿ ಪರಿಸರವನ್ನು ಒಂದು ಜಿಲ್ಲೆಗೆ ಸೀಮಿತಗೊಳಿಸಿಕೊಳ್ಳುವುದಕ್ಕೂ ಮೂಲಭೂತ ವ್ಯತ್ಯಾಸಗಳಿವೆ. ಅಂತಹ ವ್ಯತ್ಯಾಸಗಳನ್ನು ಈ ಅಧ್ಯಯನದಲ್ಲಿ ಕಾಣಬಹುದು. ನದಿ ಚರಿತ್ರೆಯನ್ನು ಒಂದು ಜಿಲ್ಲೆಯ ಮೂಲಕ, ಒಂದು ಜಿಲ್ಲೆಯ ಚರಿತ್ರೆಯನ್ನು ನದಿಯ ಮೂಲಕ ನೋಡಬಹುದಾದ ಎರಡು ವಿಧಾನಗಳು ಈ ಅಧ್ಯಯನದಿಂದ ಸಾಧ್ಯವಾಗಿದೆ.

೨. ಒಂದು ನದಿ ಧಾರ್ಮಿಕ ಕ್ಷೇತ್ರಗಳ ಉಗಮಕ್ಕೆ ಹೇಗೆ ಕಾರಣವಾಗುತ್ತದೆ ಎನ್ನುವ ಚರ್ಚೆಯನ್ನು ಮಾಡಲಾಗಿದೆ. ಕನ್ನಡದಲ್ಲಿ ಗ್ರಾಮದೇವತೆಗಳು, ಮಠಮಾನ್ಯಗಳ ಕುರಿತ ವಿಶಾಲ ಹರವಿನ ಅಧ್ಯಯನದ ಫಲಿತಗಳಿಗಿಂತ ಭಿನ್ನವಾಗಿ ನದಿ ಪರಿಸರದ ಧಾರ್ಮಿಕ ಪರಿಸರದ ವಿಶಿಷ್ಟತೆಯನ್ನು ಕಂಡುಕೊಳ್ಳಲು ಈ ಅಧ್ಯಯನದಿಂದ ಸಾಧ್ಯವಾಗಿದೆ.

೩. ತುಂಗಭದ್ರ ನದಿ ಪರಿಸರದ ಧಾರ್ಮಿಕ ಕೇಂದ್ರಗಳ ಕುರಿತು ಚರಿತ್ರಾತ್ಮಕವಾಗಿ ಮಾಡಿದ ಮೊದಲ ಅಧ್ಯಯನ ಇದಾಗಿದೆ. ಈ ಅಧ್ಯಯನದಲ್ಲಿ ಮೌಖಿಕ ಚರಿತ್ರೆಯನ್ನು, ಸ್ಥಳೀಯ ಚರಿತ್ರೆಯನ್ನು ಕಟ್ಟುವ ವಿಧಾನಗಳ ಮೂಲಕ ಪ್ರಾಯೋಗಿಕ ಅಧ್ಯಯನದಂತೆ ನಡೆಸಲಾಗಿದೆ. ಈ ಎರಡು ಚರಿತ್ರೆಯ ಭಿನ್ನ ಅಧ್ಯಯನ ಶಿಸ್ತಿನ ಫಲಿತಗಳನ್ನು ಈ ಅಧ್ಯಯನದ ಮೂಲಕ ಪರಿಶೀಲಿಸಲು ಅವಕಾಶವಿದೆ.

೪. ಧಾರ್ಮಿಕ ಕ್ಷೇತ್ರಗಳಲ್ಲದೆ, ನದಿ ಪರಿಸರದ ಕೃಷಿ, ವಾಣಿಜ್ಯ, ಕೈಗಾರಿಕಾ ಕ್ಷೇತ್ರಗಳನ್ನು ಪರಿಶೀಲಿಸಲಾಗಿದೆ. ಒಂದು ನದಿಯ ಆರ್ಥಿಕ ಆಯಾಮಗಳು ಮತ್ತು ಬಳ್ಳಾರಿ ಜಿಲ್ಲೆಯ ಆರ್ಥಿಕತೆಯ ಜೊತೆಗೆ ಹೋಲಿಸಲಾಗಿದೆ. ಹಾಗಾಗಿ ನದಿಯನ್ನು ವರ್ತಮಾನದ ಜೊತೆ ನೋಡುವ ಮತ್ತು ನದಿ ಪರಿಸರದ ಸಮಕಾಲೀನ ಬಿಕ್ಕಟ್ಟುಗಳನ್ನು ದಾಖಲಿಸಲಾಗಿದೆ.

೫. ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳ ಭಿನ್ನ ಕೊಡುಗೆಗಳನ್ನು ದಾಖಲಿಸಲಾಗಿದೆ. ಈ ನದಿ ನೀರನ್ನು ಬಳಸಿಕೊಂಡು ಜಿಂದಾಲ್ (ವಿಜಯನಗರ ಉಕ್ಕಿನ ಕಾರ್ಖಾನೆ)ನಂತಹ ಬೃಹತ್ ಕಾರ್ಖಾನೆಗಳು ತಲೆಎತ್ತಿದೆ. ಆದರೆ ಈ ಕಾರ್ಖಾನೆಗಳು ಜಿಲ್ಲೆಯ ಆರ್ಥಿಕ ಸ್ಥಿತಿಗತಿಯ ಮೇಲೆ ಅಂತ ಪರಿಣಾಮವನ್ನೇನು ಬೀರಿಲ್ಲ. ಆದರೆ ಈ ಕಾರ್ಖಾನೆಯಲ್ಲಿ ಕೆಲಸ ಮಾಡುವವರು ಬಹುತೇಕ ಉತ್ತರ ಭಾರತದ ಕಾರ್ಮಿಕರು. ಹೀಗಾಗಿ ನದಿ ಪರಿಸರ ವಾಣಿಜ್ಯೋದ್ಯಮಿಗಳ, ರಾಜಕಾರಣಿಗಳ ಕೈಗೊಂಬೆಯಂತೆ ಬಳಕೆಯಾಗುತ್ತಿದೆ. ಹಾಗಾಗಿ 'ನದಿ' ಪರಿಸರ ಜನಸಾಮಾನ್ಯರ ಹಕ್ಕು ಎನ್ನುವ ಪರಿಕಲ್ಪನೆ ಬದಲಾಗುತ್ತಿರುವ ಆತಂಕ ಈ ಅಧ್ಯಯನದಲ್ಲಿ ವ್ಯಕ್ತವಾಗಿದೆ.

ಇಷ್ಟು ಫಲಿತಗಳ ಜೊತೆ ಮುಂದೆ ಮಾಡಬಹುದಾದ ಅಧ್ಯಯನದ ಸಾಧ್ಯತೆಗಳ ಬಗೆಗೆ ಒಂದು ನೋಟವನ್ನು ಕೊಡಬಹುದು. ನದಿ ನೀರು ಬಹುಪಾಲು ಖಾಸಗಿಯವರ ಸೊತ್ತಾಗಿ ಜನಸಾಮಾನ್ಯರು ತಮ್ಮ ಪಾರಂಪರಿಕ ಹಕ್ಕು ಕಳೆದುಕೊಳ್ಳುತ್ತಿದ್ದಾರೆ. ಮುಂದಿನ ಅಧ್ಯಯನಗಳು ಜನ ಕಳೆದುಕೊಳ್ಳುವ ಪಾರಂಪರಿಕ ಹಕ್ಕನ್ನು ಉಳಿಸಿಕೊಳ್ಳುವ ಅರ್ಥದಲ್ಲಿ ನಡೆಯಬೇಕಿದೆ. ನದಿಯ ಉಳಿವಿಗಾಗಿ ಜನರಲ್ಲಿ ಪ್ರಜ್ಞೆಯನ್ನು ಮೂಡಿಸುವ ಭಾಗವಾಗಿ ಅಧ್ಯಯನ ನಡೆಯಬೇಕಿದೆ. ನದಿ ಪರಿಸರದ ಸ್ವಚ್ಛತೆಗಾಗಿ ಸರ್ಕಾರ ಗಮನಹರಿಸುವಂತೆ ಪರಿಸರ ಕಲುಷಿತತೆ ಕುರಿತು ಅಧ್ಯಯನ ನಡೆಯಬೇಕಿದೆ. ನದಿಯನ್ನು ಕುರಿತು ಹುಟ್ಟಿದ ಮೌಖಿಕ ಚರಿತ್ರೆಯನ್ನು ಸಮಗ್ರವಾಗಿ ದಾಖಲಿಸುವ ನೆಲೆಯಲ್ಲಿಯೂ ಅಧ್ಯಯನಗಳು ನಡೆಯಬೇಕಿದೆ.

* * * * *

ಅನುಬಂಧ

೧. ವಕ್ಶ ವಿವರ

೨. ಗ್ರಂಥಋುಣ

೩. ಛಾಯಾಚಿತ್ರಗಳು

೧. ವಕ್ತೃ ವಿವರ

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಜಾತಿ	ಸ್ಥಳ
೧	ಅನ್ನಪೂರ್ಣ	೪೫	ತರಕಾರಿ ವ್ಯಾಪಾರ	ನಾಯಕರು	ಹೊಸಪೇಟೆ
೨	ಕರಿಯವ್ವ	೬೫	ಕೂಲಿ	ವಡ್ಡರು	ಮೈಲಾರ
೩	ಗವಿಸಿದ್ದಪ್ಪ	೪೫	ವ್ಯಾಪಾರ	ಹೂಗಾರ	ಗೊಂಡಬಾಳ
೪	ಗಿರೀಶ	೬೦	ವ್ಯವಸಾಯ	ಶೆಟ್ಟಬಣಜಿಗ	ಮೊಣಕಾಲ್ಮೂರು
೫	ಗುರುಪ್ರಸಾದ	೪೮	ಅರ್ಚಕ	ಬ್ರಾಹ್ಮಣ	ಹರಿಹರ
೬	ಗೌರಮ್ಮ	೧೮	ನೌಕರಿ	ನಾಯಕರು	ರಾಂಪುರ
೭	ಚಂದ್ರಗೌಡ	೭೨	ವ್ಯವಸಾಯ	ಲಿಂಗಾಯತರು	ನವಲಗುಂದ
೮	ಚನ್ನಯ್ಯನವರು	೪೬	ಅರ್ಚಕ	ವೀರಶೈವ	ಉಕ್ಕಡಗಾತ್ರಿ
೯	ತಿಪ್ಪೇಸ್ವಾಮಿ	೪೫	ಕೂಲಿ	ಹರಿಜನ	ನಾಯಕನಹಟ್ಟಿ
೧೦	ತಿಪ್ಪೇಸ್ವಾಮಿ .ಯು	೩೦	ವ್ಯಾಪಾರ	ನಾಯಕರು	ಹಿರಿಯೂರು
೧೧	ತಿಮ್ಮಪ್ಪ ಬಿ.	೫೦	ಕೂಲಿ	ನಾಯಕರು	ಜಿಗೇನಹಳ್ಳಿ
೧೨	ನಡುಮಯ್ಯ	೬೦	ವ್ಯವಸಾಯ	ನಾಯಕರು	ಮಲ್ಲಾರಹಳ್ಳಿ
೧೩	ನೂರುಲ್ಲಾ	೩೫	ವ್ಯವಸಾಯ	ಮುಸ್ಲಿಂರು	ಹಾವೇರಿ
೧೪	ಪರಸಪ್ಪ	೭೫	ವ್ಯವಸಾಯ	ತಳವಾರ	ಉಕ್ಕಡಗಾತ್ರಿ
೧೫	ಪಂಪಾಪತಿ	೬೦	ಲಾರಿಚಾಲಕ	ಮೇದಾರ	ತಾರಾನಗರ
೧೬	ಭೀಮನಾಯಕ್	೪೨	ವ್ಯವಸಾಯ	ಲಂಬಾಣಿ	ಮೋತಿಕಲ್ ತಾಂಡ
೧೭	ಮಲ್ಲಮ್ಮ	೬೫	ಕೂಲಿ	ನಾಯಕರು	ಕುರುವತ್ತಿ
೧೮	ಮಲ್ಹಾರಿರಾವ್	೫೦	ಅರ್ಚಕ	ಬ್ರಾಹ್ಮಣರು	ಹರಿಹರ
೧೯	ಯಲ್ಲವ್ವ	೫೦	ವ್ಯವಸಾಯ	ಕುರುಬರು	ಬಳ್ಳಾರಿ
೨೦	ಯಾಸ್ಮಿನ್‌ಬಾನು	೧೮	ಕೂಲಿ	ಮುಸ್ಲಿಂ	ಕೊಟ್ಟೂರು
೨೧	ರತ್ನಮ್ಮ	೪೦	ಕೂಲಿ	ಕುರುಬರು	ಬಳ್ಳಾರಿ
೨೨	ರತ್ನಮ್ಮ	೩೫	ವ್ಯವಸಾಯ	ಕೊರಚರು	ಮಧುಗಿರಿ
೨೩	ರಾಮಮೂರ್ತಿ	೪೮	ಅರ್ಚಕ	ಬ್ರಾಹ್ಮಣ	ಹಂಪೆ
೨೪	ಲಕ್ಷ್ಮಮ್ಮ	೬೦	ತರಕಾರಿ ವ್ಯಾಪಾರ	ನಾಯಕರು	ಹೊಸಪೇಟೆ
೨೫	ಶಿವಾನಂದ	೬೫	ಅಡುಗೆಯವರು	ಲಿಂಗಾಯತ	ಅಣಜಿ
೨೬	ಸರೋಜಮ್ಮ	೩೦	ಕೂಲಿ	ನಾಯಕರು	ರಾಯದುರ್ಗ
೨೭	ಸಲ್ಯಾನಾಯಕ	೪೫	ವ್ಯಾಪಾರ	ಲಂಬಾಣಿ	ಕಡ್ಡಿರಾಂಪುರ
೨೮	ಹನುಮಂತಪ್ಪ	೬೦	ವ್ಯವಸಾಯ	ಲಿಂಗಾಯತ	ಭೀಮಸಮುದ್ರ
೨೯	ಹನುಮಕ್ಕ	೧೯	ನೌಕರಿ	ಬಾರಿಕರು	ಹಲಗಾಪುರ

೨. ಗ್ರಂಥಋಣ

೧. ಅಯ್ಯನಗೌಡರ ಎಸ್.ವಿ., **ಮೈಲಾರ ಬಸವಲಿಂಗ ಶರಣರ ಸಮಗ್ರ ಸಾಹಿತ್ಯ**, ವೀರಶೈವ ಅಧ್ಯಯನ ಸಂಸ್ಥೆ, ಡಂಬಳ, ಗದಗ, ೧೯೮೪

೨. ಕುಂಬಾಸ, **ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ**, ಶ್ರೀ ಮಾಲತೇಶ ಪ್ರಕಾಶನ, ಕುಂಟೂರು, ೧೯೯೦

೩. ಗಿರಿಜಾ ಟಿ., **ಶ್ರೀ ಕುರುವತ್ತಿ ಬಸವೇಶ್ವರ ಕ್ಷೇತ್ರದರ್ಶನ**, ಬಸವಮಿತ್ರ ಬಳಗ, ದಾವಣಗೆರೆ, ೨೦೦೦

೪. ಗೋಪಾಲರಾವ್ ಹೆಚ್.ಎಸ್., **ಕರ್ನಾಟಕ ಏಕೀಕರಣ ಇತಿಹಾಸ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬

೫. ಚಲುವರಾಜು, **ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೬. ಚಂದ್ರಶೇಖರಯ್ಯ ಬಿ.ಎಂ., **ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ**, ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು, ೨೦೦೫

೭. ತಿಪ್ಪೇರುದ್ರಸ್ವಾಮಿ ಹೆಚ್., ಡಿ.ವಿ.ಕೆ. ಮೂರ್ತಿ, **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ಮೈಸೂರು, ೧೯೮೫

೮. **ತುಂಗಾ ಮತ್ತು ಭದ್ರಾ ನದಿಗಳ ಹುಟ್ಟು, ಪಾತ್ರ ಹಾಗೂ ಜಲಚರಗಳ ಕುರಿತ ವಿಶ್ಲೇಷಣಾತ್ಮಕ ಅಧ್ಯಯನ**, ಅಪ್ರಕಟಿತ ವರದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೯. ದೇವರಕೊಂಡಾರೆಡ್ಡಿ (ಸಂ.), **ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ನರಸಿಂಹಮೂರ್ತಿ ಎ.ವಿ., **ಕರ್ನಾಟಕದಲ್ಲಿ ವಿದೇಶಿ ನಾಣ್ಯಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೧೧. ನಾಯಕ ಡಿ.ಬಿ., **ದೇಸಿ ಸಂಸ್ಕೃತಿ**, ಬಂಜಾರ ಪ್ರಕಾಶನ, ಗುಲಬರ್ಗಾ, ೨೦೦೨

೧೨. ನಿಂಗಪ್ಪ ಮುದೇನೂರು, **ಸಂಸ್ಕೃತಿ ದರ್ಶನ**, ಸೂರ್ಯ ಪ್ರಕಾಶನ, ಮಲ್ಲಾಡಿಹಳ್ಳಿ, ೨೦೦೫

೧೩. ಪುರುಷೋತ್ತಮ ಬಿಳಿಮಲೆ, ಚಲುವರಾಜು, **ಹಂಪಿ ಜನಪದ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬

೧೪. ಪುರುಷೋತ್ತಮ ಬಿಳಿಮಲೆ, **ಹುಲಿಗೆಮ್ಮ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೫. **ಬಳ್ಳಾರಿ ಜಿಲ್ಲಾ ಗೆಜೆಟಿಯರ್**, ಮೈಸೂರು ಸರ್ಕಾರ, ೧೯೭೨

೧೬. ಭಗವತಿ ಎಸ್.ಎಸ್., ಹೆಚ್.ಎಸ್. ಮೇಲಿನಮನಿ, **ಕನ್ನಡ ಶಾಸನಗಳ ಅಧ್ಯಯನ**, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

೧೭. ಬೋರಲಿಂಗಯ್ಯ ಹಿ.ಚಿ.(ಸಂ.), **ಜನಪದ ಕಲೆಗಳ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೮. ಮಹದೇವ ಸಿ., ಸಿ.ಎಸ್. ವಾಸುದೇವನ್, ರಮೇಶನಾಯ್ಕ, **ಕರ್ನಾಟಕ ದೇವಾಲಯ ಕೋಶ, ಹಾವೇರಿ ಜಿಲ್ಲೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೯. ಮೋಹನ್‌ಕೃಷ್ಣ ರೈ ಕೆ., **ಪರಿಸರ ಚಳುವಳಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨೦. ಮೋಹನ್‌ಕೃಷ್ಣ ರೈ ಕೆ., **ಪ್ರಭುತ್ವ ಮತ್ತು ಜನತೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೨೧. ರಹಮತ್ ತರೀಕೆರೆ (ಸಂ.), ಮಾಧವ ಪೆರಾಜೆ, ವೆಂಕಟೇಶ ಇಂದ್ವಾಡಿ (ಸ.ಸಂ.), **ಧರ್ಮ (ವಿಶ್ವಕೋಶ)**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೨೨. ಲಕ್ಷ್ಮಣ್ ತೆಲಗಾವಿ (ಸಂ.), **ಸ್ಥಳೀಯ ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೨೩. ವಿಜಯ್ ಟಿ.ಪಿ. **ಚರಿತ್ರೆ ವಿಶ್ವಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೨೪. ವಿರೂಪಾಕ್ಷಿ ಪೂಜಾರಹಳ್ಳಿ, **ಚಿನ್ನಹಗರಿ ಸಿರಿ**, ಚಿನ್ನಹಗರಿ ಪ್ರಕಾಶನ, ಪೂಜಾರಾಹಳ್ಳಿ, ೨೦೦೬

೨೫. ವಿರೂಪಾಕ್ಷಿ ಪೂಜಾರಹಳ್ಳಿ, **ಜಲಸಂಬಂಧಿ ಚಳುವಳಿಗಳು**, ಸಂ.೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೨೬. ವಿವೇಕ ರೈ ಬಿ.ಎ. (ಸಂ.), **ಪ್ರವಾಸಿ ಕಂಡ ವಿಜಯನಗರ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೨೭. ಶಂಕರನಾರಾಯಣ ಭಟ್ ಕೆ., **ಶ್ರೀ ಕಾವೇರಿ ವೈಭವ**, ಎದುರ್ಕುಳ ಶ್ರೀ ರಾಮಕೃಷ್ಣ ಪ್ರಕಾಶನ, ಭಾಗಮಂಡಲ, ೧೯೮೭

೨೮. ಶಂಕರನಾರಾಯಣರಾವ್ ಎಚ್.ಎಂ., **ಶ್ರೀ ಹರಿಹರ ದೇವಾಲಯ**, ಶಾರದಾ ಮಂದಿರ, ಮೈಸೂರು, ೧೯೮೨

೨೯. ಶಾಂತವೀರಯ್ಯ ಹಿ.ಚಿ., **ಪವಾಡ ಪುರುಷ ಉಕ್ಕಡಗಾತ್ರಿ ಅಜ್ಜಯ್ಯ**, ಶ್ರೀ ಕರಿಬಸವೇಶ್ವರ ಗದ್ದಿಗೆ ಟ್ರಸ್ಟ್ ಕಮಿಟಿ, ಉಕ್ಕಡಗಾತ್ರಿ, ೨೦೦೫

೩೦. ಶ್ರೀನಿವಾಸ ರಿತ್ತಿ, **ಮೈಲಾರ ದೇವರು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦

೩೧. ಷೇಕ್‌ಅಲಿ, ಕೆ.ಎಸ್. ಶಿವಣ್ಣ (ಪ್ರ.ಸಂ.), **ಕರ್ನಾಟಕ ಚರಿತ್ರೆ**, ಸಂ.೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೩೨. ಸದಾನಂದ ಕನವಳ್ಳಿ (ಅನು), ರಾಬರ್ಟ್‌ಸಿವೆಲ್ (ಮೂಲ), **ಮರೆತುಹೋದ ಮಹಾಸಾಮ್ರಾಜ್ಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೩೩. ಸಿದ್ದಲಿಂಗೇಶ್ವರ ಸ್ವಾಮಿಗಳು, **ಶ್ರೀ ಪಂಪಾಮಹಾತ್ಮೆ**, ಶ್ರೀಗುರು ವೃಷಭಾಶ್ರಮ, ಹೊಳಗುಂದಿ, ೧೯೮೩

೩೪. ಸೀತಾರಾಮಯ್ಯ ವಿ., **ಪಂಪಾಯಾತ್ರೆ**, ವಿಶ್ವಕನ್ನಡ ಸಮ್ಮೇಳನ, ನೃಪತುಂಗ ರಸ್ತೆ, ಬೆಂಗಳೂರು, ೧೯೮೩

೩೫. ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಮಾಡಲಗೇರಿ ಕೊಟ್ರೇಶ, ಎಸ್.ವೈ. ಸೋಮಶೇಖರ, **ಕರ್ನಾಟಕ ದೇವಾಲಯ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩೬. ಹಾ.ಮಾ.ನಾ., **ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ**, ಮೈಸೂರು ವಿಶ್ವವಿದ್ಯಾನಿಲಯ, ೧೯೭೯

೩೭. ಹಿರೇಮಠ ಎಸ್.ಎಸ್., **ಜಾತ್ರೆಗಳು**, ಸಮತಾ ಪ್ರಕಾಶನ, ಹೊಸಪೇಟೆ, ೧೯೯೩

೩೮. ಹಿರೇಮಠ ಎಸ್.ಎಸ್., **ಜನಪದ ಸಮಾಜ ಸಂಸ್ಕೃತಿ**, ಸೂರ್ಯ ಪ್ರಕಾಶನ, ಮಲ್ಲಾಡಿಹಳ್ಳಿ, ೨೦೦೫

ಪತ್ರಿಕೆಗಳು


ಈ ನ್ಯೂಸ್ ದಿನಪತ್ರಿಕೆ

ಕನ್ನಡ ಪ್ರಭ

ಪ್ರಜಾವಾಣಿ

ಸಂಯುಕ್ತ ಕರ್ನಾಟಕ

* * * * *



ತುಂಗಭದ್ರಾ ನದಿಯ ಪ್ರವೇಶ ಮತ್ತು ಪರಿಸರ
ಬಳ್ಳಾರಿ ಜಿಲ್ಲೆ.



ಉಕ್ಕಡಗಾತ್ರಿಯ ಶ್ರೀ ಕರಿಬಸವೇಶ್ವರ ಜಾತ್ರೆ - ತುಂಗಭದ್ರಾ ನದಿಯಲ್ಲಿ ಭಕ್ತಾಧಿಗಳ ಪವಿತ್ರ ಸ್ನಾನ..



ಶ್ರೀ ಕರಿಬಸವೇಶ್ವರ ದೇವಸ್ಥಾನದ ಗರ್ಭಗುಡಿ







ಹರಿಹರದ ಸಮೀಪ ಹರಿಯುವ ತುಂಗಭದ್ರಾ ನದಿ



ತುಂಗಭದ್ರ ನದಿ ಸಂರಕ್ಷಣೆಗಾಗಿ ಶ್ರೀ. ಎಲ್.ಜಿ. ಹಾವನೂರು
ನೇತೃತ್ವದಲ್ಲಿ ಹೋರಾಟ, ಹರಿಹರ.



ಚಳುವಳಿಗಾರರೊಂದಿಗೆ ಎಲ್.ಜಿ. ಹಾವನೂರು.



ತುಂಗಭದ್ರಾ ನದಿದಂಡೆ ಮೇಲಿರುವ ಶ್ರೀಬಸವೇಶ್ವರ ದೇವಾಲಯ-ಕುರುವತ್ತಿ



ಕುರುವತ್ತಿ ಬಸವಣ್ಣ.



ಕುರುವತ್ತಿ ಬಸವಣ್ಣನ ರಥೋತ್ಸವ.



ಕುರುವತ್ತಿಯ ಹಿರೇಮಠದಲ್ಲಿರುವ ಚೌಡಿ ದೇವತೆ



ಮೈಲಾರಲಿಂಗೇಶ್ವರ ಉತ್ಸವ ಮೂರ್ತಿ.ಮೈಲಾರ





ಮೈಲಾರ ಲಿಂಗೇಶ್ವರ ದೇವಸ್ಥಾನದ ಪ್ರಾಂಗಣ



ಮೈಲಾರ ಲಿಂಗೇಶ್ವರ ದೇವಸ್ಥಾನ (ಉತ್ಸವ ಮೂರ್ತಿ)ಮೈಲಾರ







ಮೈಲಾರದಲ್ಲಿ ಭಕ್ತರ ಮಳೆಹೊಡೆಯುವ ಸೇವೆ.



ಮೈಲಾರದಲ್ಲಿ ಭಕ್ತರ ದೋಣಿ ಸೇವೆ.







ಮೈಲಾರದಲ್ಲಿ ಭಕ್ತರ ಸರಪಣಿ ಸೇವೆ



ಮೈಲಾರದಲ್ಲಿ ಭಕ್ತರ ಚಾವಟಿ ಸೇವೆ







ಮೈಲಾರ ಲಿಂಗೇಶ್ವರನ ಕಾರ್ಣಿಕೋತ್ಸವ, ಡೆಂಕನ ಮರಡಿ.

ದಿನಾಂಕ : 04-02-2007



ತುಂಗಭದ್ರಾ ಜಲಾಶಯದ ಹಿನ್ನೀರು - 13 - 07 - 07. --- ಪ್ರಜಾವಾಣಿ ಕೃಪೆ.



ತುಂಗಭದ್ರಾ ಜಲಾಶಯ ತುಂಬಿದ ಹಿನ್ನೆಲೆಯಲ್ಲಿ 14-07-2007, 20 ಕ್ರಸ್ಟ್ ಗೇಟಗಳ ಮೂಲಕ
ನೀರನ್ನು ಹೊರಬಿಟ್ಟಾಗ ಕಂಡ ದೃಶ್ಯ - ಪ್ರಜಾವಾಣಿ ಕೃಪೆ.




ಶ್ರೀ ವಿರೂಪಾಕ್ಷ ಸ್ವಾಮಿಯ ರಥೋತ್ಸವ, ಹಂಪೆ. ದಿ 02-04-2007




ಹಂಪಿ ಜಾತ್ರೆಯಲ್ಲಿ ಸೇರಿದ ಜನ ಸಮೂಹ







ತುಂಗಭದ್ರಾ ನದಿಯ ಬಲದಂಡೆ ಮೇಲಿರುವ ವಿಜಯ ವಿಠಲ ದೇವಸ್ಥಾನ



ಶ್ರೀ ರಾಘವೇಂದ್ರ ಸ್ವಾಮಿ, ಮಂತ್ರಾಲಯ.